ಸಂವಾದ

ಸೆಪ್ಟೆಂಬರ್ ೨೦೦೯ ರೂ. ೨೦



ಬಂಡವಾಳಶಾಹಿ ಉಣಬಡಿಸುವ ವಿಲಾಸಿತನಕ್ಕೆ

ಸಮಾಜವಾದ ಪರಿಹಾರವೇ?

- ಸಣ್ಣವರ ಕೈಯಲ್ಲಿ ದೊಡ್ಡವರ ಪ್ರತಿಮೆಗಳು

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೧೧
ಸೆಪ್ಟೆಂಬರ್ ೨೦೦೯

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 080-23480278,
9945264687
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

❑ ಪತ್ರಗಳು ೦೩
❑ ಹೊಸ ಪುಸ್ತಕ ೦೪
❑ ಅಂತರಂಗ ೦೫
❑ ಸಂಪಾದಕರೊಂದಿಗೆ ಸಂವಾದ:
○ ಶಿವಸುಂದರ್ ೦೬
○ ಜಿ.ರಾಜಶೇಖರ ೦೮
❑ ಸಣ್ಣವರ ಕೈಯಲ್ಲಿ ದೊಡ್ಡವರ ಪ್ರತಿಮೆಗಳು! ೧೦
○ ಶಿವಸುಂದರ್
❑ ಪರಿಭಾವಿತ ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ೧೨
○ ನಾ ದಿವಾಕರ
❑ ಸಪ್ಪಳವಿಲ್ಲದೆ ಕೆಲಸ ಮಾಡುವ ಸುರಕೋಡರು ೧೬
○ ಪ್ರೊ॥ ರಹಮತ್ ತರೀಕೆರೆ





❑ ಬಂಡವಾಳಶಾಹಿ ಉಣಬಡಿಸಿರುವ ವಿಲಾಸಿತನಕ್ಕೆ 'ಸಮಾಜವಾದ' ಪರಿಹಾರವೇ? ೨೦
○ ಮೂಲ: ಕಿಷನ್ ಪಟ್ನಾಯಕ್
ಅನು: ಕಿರಣ್. ಎಂ ಗಾಜನೂರು
❑ ಕಥೆ: ಮೈಲಿಗೆ ಬಾವಿ ೨೮
○ ಡಾ. ನಾ. ಡಿಸೋಜ
❑ ಇಂಗ್ಲಿಷ್ ಪಠ್ಯಕ್ರಮ: ಬರೀ ಬೌದ್ಧಿಕ ಬಡಿವಾರ! ೩೦
○ ಡಿ. ಎಸ್. ನಾಗಭೂಷಣ್
❑ ಪುಸ್ತಕ ಅವಲೋಕನ: ಖೈರ್ಲಾಂಜಿ: ದಲಿತ ಭಾರತದ ಕಥನ
○ ಎನ್. ಸತ್ಯ ೩೨
❑ ದಲಿತರ ದೌರ್ಜನ್ಯಗಳು: ಬದಲಾಗುತ್ತಿರುವ ಸ್ವರೂಪಗಳು
○ ನರಸಿಂಹ ಗುಂಜಹಳ್ಳಿ ೩೬
❑ ಧರೆ ಹತ್ತಿ ಉರಿದರೆ... ೧೪
ವಿಜಾಪುರ ಜಿಲ್ಲೆ ಅಭಿವೃದ್ಧಿಯ ಕಥೆ: ದುಸ್ಥಿತಿಯ ವ್ಯಥೆ
○ ಡಾ. ಟಿ. ಆರ್ ಚಂದ್ರಶೇಖರ್ ೪೦
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೪
❑ ಬುದ್ಧಾಯಣ ೫೦
○ ಸಿ. ಎಚ್. ರಾಜಶೇಖರ್



ಕವನಗಳು : ❑ ದಾರುಣ ೧೫
❑ ಒಡೆದ ಗುಮ್ಮಟದ ತುಂಬಾ ೪೮

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಅಸಂಗತ–ಸ್ಥೂಲ ಮತ್ತು ಅತಿ–'ವೈಜ್ಞಾನಿಕ' ತರ್ಕ

ಪ್ರೀತಿಯ ಸಂಪಾದಕರೇ,

1. ಸಂವಾದ'ದ ಮೇ–ಜೂನ್ ಸಂಚಿಕೆಯಲ್ಲಿ ಪ್ರಟಕವಾದ ಜೆ.ಸೋಮಶೇಖರರ 'ಜಾತಿ ವ್ಯವಸ್ಥೆ ಮತ್ತು ರಾಜಕಾರಣ' ಲೇಖನಕ್ಕೆ ಸಂತೋಷ್ ಹಾಗೂ ಪ್ರವೀಣ್ ಅವರು ಆಗಸ್ಟ್ ಸಂಚಿಕೆಯಲ್ಲಿ ಬರೆದಿರುವ ಪ್ರತಿಕ್ರಿಯೆಯನ್ನು ಓದಿದೆ. ಸೋಮಶೇಖರ ಅವರ ವಾದ ಬಹಳ ಕಡೆ ಸ್ಥೂಲವಾಗಿದೆ, ಭಾವನಾತ್ಮಕವಾಗಿದೆ ಮತ್ತು ಹಾಗಾಗಿ 'ದಲಿತ ಫೋಬಿಯಾ'ದಂತಹ ಅಸಂಗತವೆನಿಸುವ ಪರಿಕಲ್ಪನೆಗಳನ್ನು ಮುಂದೊಡ್ಡಿ ತನ್ನ ಸದುದ್ದೇಶವನ್ನೇ ಅನುಮಾನಾಸ್ಪದಗೊಳಿಸಿಕೊಂಡಿದೆ. ಆದರೆ ಸಂತೋಷ್–ಪ್ರವೀಣ್ ಅವರು ಅದನ್ನು ಖಂಡಿಸಲು ಬಳಸಿರುವ ತರ್ಕ ಮಾತ್ರ ಅತಿ–'ವೈಜ್ಞಾನಿಕ'ವಾಗಿದ್ದು, ಸಮಾಜಶಾಸ್ತ್ರೀಯ ಸತ್ಯಗಳೆಂಬುವೇ ಅನುಮಾನಾಸ್ಪದವಾದವು ಎಂಬ ನಂಬಿಕೆಯನ್ನು ಬಲಪಡಿಸುವಂತಿದೆ!

ಇವರು ಸಮಾಜವನ್ನು ಮತ್ತು ಅದರ ವಿದ್ಯಮಾನಗಳನ್ನು ಒಂದು ರಸಾಯನಶಾಸ್ತ್ರದ ಪ್ರಯೋಗಾಲಯದಲ್ಲಿನ ಗಾಜಿನ ಬುರುಡೆಯೊಳಗೆ ಪ್ರಯೋಗಕ್ಕೊಳಗಾಗಿರುವ ದ್ರಾವಣವೆಂಬಂತೆ ವೈಜ್ಞಾನಿಕ ತರ್ಕಕ್ಕೆ ಒಳಪಡಿಸಿದ್ದಾರೆ. ಅದು ಹಾಗಿದ್ದರೆ, ಇದು ಹೀಗಿರಬೇಕಿತ್ತಲ್ಲವೆ? ಅದು ಹಾಗಾಗಿದ್ದರೆ ಇದು ಹೀಗಾಗಿರಬೇಕಿತ್ತಲ್ಲವೆ? ಇದು ಕಡಿಮೆಯಾದಂತೆ ಅದು ಜಾಸ್ತಿಯಾಗಬೇಕಲ್ಲವೆ? ಅದು ಸರಿಯಾದರೆ ಇದು ತಪ್ಪಾಗಿರಬೇಕಲ್ಲವೇ? ಇತ್ಯಾದಿ ರೀತಿಯ ಗಣಿತೀಯ ತರ್ಕ(Mathematical Logic) ಬಳಸಿ ತಮ್ಮ ಖಂಡನೆಯನ್ನು ಸಮರ್ಥಿಸಿಕೊಂಡಿದ್ದಾರೆ. ಇದು ಭಾರತದಲ್ಲಿ 'ವೈಜ್ಞಾನಿಕತೆ'ಯ ಘೋಷಣೆಯೊಡನೆ ಹೊಸದಾಗಿ ಮೂಡುತ್ತಿರುವ 'ಹೊಸ ಸಮಾಜಶಾಸ್ತ್ರೀಯ ಅಧ್ಯಯನ'ಗಳ ಮಾದರಿಯ ಪರಿಯೇ ಆಗಿದೆ!

ಆದರೆ ಸಮಾಜ ಒಂದು ರಸಾಯನಿಕ ವಸ್ತುವೂ ಅಲ್ಲ, ಭೌತ ವಸ್ತುವೂ ಅಲ್ಲ, ಹೀಗೆ ಇವರ ವೈಜ್ಞಾನಿಕ (ಲೋಮ–ವಿಲೋಮ–ಪ್ರತಿಲೋಮ) ತರ್ಕದ ನಿಯಮಗಳಿಗನುಸಾರವಾಗಿ ವರ್ತಿಸಲು! ಸಮಾಜ ಎನ್ನುವುದು ಅದರನ್ನೊಳಗೊಂಡ ಮನುಷ್ಯನಂತೆಯೇ, ಈ ನಿಯಮಬದ್ಧ ವೈಚಾರಿಕತೆ ಅಥವಾ ವೈಜ್ಞಾನಿಕತೆಯ ತೆಕ್ಕೆಗೆ ಸಿಗದಂತಹ ಒಂದು ಸಂಕೀರ್ಣ ವಿದ್ಯಮಾನವಾಗಿದೆ. ಅದನ್ನು ತತ್ಕಾಲೀನ ಭಾವನೆಗಳ ಮತ್ತು ವರ್ತನೆಗಳ ವೈವಿಧ್ಯಮಯ ಅನುಸಂಧಾನಗಳ ಮೂಲಕ ತಲೆದೋರುವ ಸಾಮಾಜಿಕ ಆಂದೋಲನ ಹಾಗೂ ರಾಜಕಾರಣದ ಸ್ವರೂಪದ ನೆಲೆಯಲ್ಲಿ 'ಸಾಮಾನ್ಯ ಪರಿಜ್ಞಾನ'(Common sense)ದೊಂದಿಗೆ ಅಧ್ಯಯನ ಮಾಡಬಹುದೇ ಹೊರತು, ತನ್ನನ್ನು ಕಾಲ–ದೇಶಗಳಿಗೆ ನಿರಪೇಕ್ಷವಾದ ನಿಯಮಗಳ ಶಾಸ್ತ್ರ ಎಂದು ಕರೆದುಕೊಳ್ಳುವ ವಿಜ್ಞಾನದ 'ಅಹಂಕಾರ'ದ ಮೂಲಕ ಅಲ್ಲ. ಹಾಗೆ ನೋಡಿದರೆ ಈಗಾಗಲೇ ಸ್ವತಃ ವಿಜ್ಞಾನವೇ ತನ್ನ ಸಾರ್ವತ್ರಿಕ ನಿರಪೇಕ್ಷತೆಯನ್ನು ಅಲ್ಲಗಳೆದುಕೊಂಡಿದೆ ಎಂಬುದು ನಮಗೆ ನೆನಪಿರಬೇಕು.

ಪತ್ರಾಗಾರ

2. ಇದೇ ಸಂಚಿಕೆಯಲ್ಲಿ ಡಾ॥ಸಿ.ಜಿ. ಲಕ್ಷ್ಮೀಪತಿಯವರು ಮೈಕೆಲ್ ಜಾಕ್ಸನ್ ಬಗ್ಗೆ ಆಳದ ಕಾಳಜಿಯೊಂದಿಗೆ ಬರೆಯುತ್ತಾ, ಆತನನ್ನು ಆಧುನಿಕೋತ್ತರತೆಯ ರೂಪಕ ಎಂದು ಕರೆದಿದ್ದಾರಷ್ಟೇ ಅಲ್ಲ; ಹಾಗೆ ನಿರೂಪಿಸಿದ್ದಾರೆ ಕೂಡಾ. ಆದರೆ ನನ್ನ ಪ್ರಶ್ನೆ: ಮೈಕಲ್ ನಿಜವಾಗಿ ಇದ್ದುದ್ದು ಹಾಗೆಯೋ ಅಥವಾ ಲಕ್ಷ್ಮೀಪತಿಯವರ ಆಧುನಿಕೋತ್ತರತೆಯ ತಿಳವಳಿಕೆಯಿಂದಾಗಿ ಅವರಿಗೆ ಹಾಗೆ ಕಂಡಿದ್ದಾನೋ? ಏಕೆಂದರೆ, ಆಧುನಿಕೋತ್ತರತೆ ಎಂದರೇನು ಎಂಬುದನ್ನು ಸ್ವಲ್ಪ ಬಲ್ಲ ನನಗಾಗಲೀ ಅಥವಾ ಈ ಬಗ್ಗೆ ಏನೂ ತಿಳಿಯದ ನನ್ನ ಪತ್ನಿಗಾಗಲೀ–ನಾವಿಬ್ಬರೂ ಮೈಕೇಲ್‌ನ ಅಭಿಮಾನಿಗಳೇ–ಅವನು ಹಾಗೆ ಕಂಡಿಲ್ಲ. ನಮಗೆ ಅವನೊಬ್ಬ–ಸತ್ತ ಮೇಲಷ್ಟೇ ಅಲ್ಲ, ಅವನಿದ್ದಾಗಲೂ–ಆಧುನಿಕತೆಯ ಆಳದ ತಪ್ತತೆಗೆ ಸಿಕ್ಕಿ ತನ್ನನ್ನು ತಾನು ಸರಿಯಾಗಿ ಕಂಡು ಕೊಳ್ಳಲಾಗದ ದುರಂತ ನಾಯಕನಂತೆ ಕಂಡಿದ್ದಾನಷ್ಟೆ. ಇದನ್ನೇ ಆಧುನಿಕೋತ್ತರತೆ ಎಂದರೆ ನಮ್ಮದೇನೂ ಆಕ್ಷೇಪಣೆಯಿಲ್ಲ. ಆದರೆ ಅದು ಹಾಗೇನೂ ಅಲ್ಲ ಎಂದು ನನಗನ್ನಿಸುತ್ತಿದೆ. ಏಕೆಂದರೆ, ಪಶ್ಚಿಮದಲ್ಲಿ ಅರ್ಧ ಶತಮಾನದಷ್ಟು ಹಳೆಯದಾದ ಈ ಆಧುನಿಕೋತ್ತರತೆ ಈಗ ನಮ್ಮಲ್ಲಿ ಹುಟ್ಟು ಹಾಕಿರುವ ಚರ್ಚೆಗಳನ್ನು ನೋಡಿದರೆ, ಅದು ಅರ್ಧಶತಮಾನದ ಹಿಂದೆ ಗ್ರಹಿಕೆಯ ಅಪೂರ್ಣತೆಯ ಹೆಸರಿನಲ್ಲಿ ನಮ್ಮ ದಾರಿ ತಪ್ಪಿಸಿದ 'ನವ್ಯತೆ'ಯಂತೆಯೇ ಈಗ ನಮ್ಮ ಗ್ರಹಿಕೆಯ ನೆಲೆಗಳನ್ನು ಗೊಂದಲಗೊಳಿಸಲು 'ಬಂದಿದೆ'ಯೇನೋ ಎಂಬ ಆತಂಕ ನನ್ನದು.

ಡಿ.ಎಸ್.ನಾಗಭೂಷಣ, ಶಿವಮೊಗ್ಗ

'ಧರೆ ಹತ್ತಿ ಉರಿದರೆ'

ಮಾನ್ಯ ಸಂಪಾದಕರಿಗೆ,

'ಸಂವಾದ'ದಲ್ಲಿ ಬರುತ್ತಿರುವ 'ಧರೆ ಹತ್ತಿ ಉರಿದರೆ' ಅಂಕಣ ಚೆನ್ನಾಗಿ ಬರುತ್ತಿದೆ. ಚಂದ್ರಶೇಖರ್‌ರವರು ಇಷ್ಟೊಂದು ನಿರ್ಭೀತಿಯಿಂದ ಸರ್ಕಾರದ ಅವಾಂತರ, ಜನ ವಿರೋಧಿ ನಿಲುವುಗಳ ಕುರಿತು ಬರೆಯುತ್ತಿರುವುದು ನಿಜವಾಗಲು ಮೆಚ್ಚುವಂತಹದು. ಕಳೆದ ತಿಂಗಳ (ಆಗಸ್ಟ್ 09) ಸಂಚಿಕೆಯಲ್ಲಿ ಪ್ರಕಟವಾದ ಬಳ್ಳಾರಿ ಜಿಲ್ಲೆಯ ಕುರಿತ ಲೇಖನ ಓದಿದೆ. ಅಲ್ಲಿ ಮತ್ತು ಅಲ್ಲಿಯ ಜನರಿಗೆ ಗಣಿಗಾರಿಕೆಯಿಂದಾಗುತ್ತಿರುವ ಅನ್ಯಾಯ, ಅಕ್ರಮ ಕಂಡು ಬೇಸರವಾಯಿತು. ಜಿಲ್ಲೆಯ ಅಭಿವೃದ್ಧಿ ನೇತೃತ್ವ ವಹಿಸಿರುವವರಿಗೆ ಜನರ ಬದುಕು–ಬವಣೆ ಮುಖ್ಯವಾಗಿಲ್ಲವೆಂಬುದು ಇದರ ಮುಖಾಂತರ ಅರ್ಥವಾಗುತ್ತದೆ.

'ನಲವತ್ತೈದು ಕೋಟಿ ಬೆಲೆಯ ವಜ್ರದ ಕಿರೀಟವನ್ನು ದೇವರಿಗೆ ಕಾಣಿಕೆ ನೀಡುವುದಕ್ಕೆ ಪ್ರತಿಯಾಗಿ ಜಿಲ್ಲೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು, ಗ್ರಾಮೀಣ ಪ್ರದೇಶದಲ್ಲಿ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ, ಸಂಡೂರಿನ ಗಣಿಗಳಲ್ಲಿ ದಿನನಿತ್ಯವೂ ಸಾವು–ಬದುಕಿನ ನಡುವೆ ಹೋರಾಟ ಮಾಡುತ್ತಾ ಬದುಕು ಮಾಡುತ್ತಿರುವ ಕೂಲಿ ಹೆಣ್ಣು ಮಕ್ಕಳ ಬದುಕಿಗೆ ಆಸರೆಯಾಗುವಂತಹ ಕ್ರಮಗಳ ಬಗ್ಗೆ ದಾನಶೂರರು ಯೋಚಿಸಬಹುದಿತ್ತು' ಎಂಬ ಮಾತು ಸತ್ಯಕ್ಕೆ ಅನುಗುಣವಾಗಿದೆ.

ರಮ್ಯ ಜಿ, ಬೆಂಗಳೂರು

ಎರಡು ಶುಭ ಹಾರೈಕೆ ಪತ್ರಗಳು

ಮಾನ್ಯ ಸಂಪಾದಕರಿಗೆ,

'ಸಂವಾದ' ನಮ್ಮ ಕಾಲೇಜಿಗೆ ಬರುತ್ತಿದೆ. ಬಹಳ ಪ್ರಬುದ್ಧ ವೈಚಾರಿಕ ಹಾಗೂ ವಿಮರ್ಶಾತ್ಮಕ ಲೇಖನಗಳನ್ನು ತಾವು ಪ್ರಕಟಿಸುತ್ತಿರುವಿರಿ. ನಿಮಗೂ ನಿಮ್ಮ ಸಂಪಾದಕೀಯ ಬಳಗಕ್ಕೂ ಹಾರ್ದಿಕ ಅಭಿನಂದನೆಗಳು.

ಡಾ. ಸುಲೋಚನ,
ಮಂಗಳೂರು

ಮಾನ್ಯ ಸಂಪಾದಕರಿಗೆ,

'ಸುದ್ದಿ ಸಂಗಾತಿ'ಯ ಬಾಂಧವ್ಯ ಈ ಪರಿ 'ಸಂವಾದ'ವಾಗಿ ಮುಂದುವರಿಯುತ್ತಿರುವುದಕ್ಕೆ ಸಂತೋಷವಾಗುತ್ತದೆ! ನನಗೆ ಬಹಳ ಪ್ರಿಯವಾದ 'ಬುದ್ಧ ಬೆಳಕಿನ' ತಿರುಳನ್ನು ಈ ಪತ್ರಿಕೆಯ ಓದಿನಲ್ಲಿ ಸವಿದಿದ್ದೇನೆ.

ಜ್ಯೋತಿ ಗುರುಪ್ರಸಾದ್,
ಕಾರ್ಕಳ

ಚಂದಾ ವಿವರ

ಬಿಡಿ ಪ್ರತಿ ರೂ.೨೦/–

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/–	ರೂ.೫೦೦/–	ರೂ.೮೦೦/–
ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೪೦/–	ರೂ.೬೦೦/–	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/–	ರೂ.೧೫೦೦/–	ರೂ.೨೫೦೦/–

ಆಜೀವ ಚಂದಾ ರೂ.೫,೦೦೦/–
ಪೋಷಕ ಚಂದಾ ರೂ.೧೦,೦೦೦/–

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಅಗ್ನಿಗಾನ
ಶ್ರೀ ಶಿವಮೂರ್ತಿ ಮುರುಘಾಶರಣರು
ಬೆಲೆ: ರೂ.200/-

ಜೀವನವನ್ನು ತಮ್ಮದೇ ಆದ ದೃಷ್ಟಿಕೋನದಿಂದ ನೋಡುತ್ತಾ, ಅನುಭವಗಳನ್ನು ಅವಲೋಕಿಸಿ ಇಡೀ ಬದುಕನ್ನು ಆಸ್ವಾದಿಸುವ ವಿಶೇಷ ಪ್ರಯತ್ನ ಈ ಕೃತಿಯಲ್ಲಿದೆ. ತಾವು ಬದುಕು ರೂಪಿಸಿಕೊಂಡದ್ದೇ ಎದುರಿಸಿದ ಸವಾಲು ಮತ್ತು ಸಮಸ್ಯೆಗಳಿಂದ ಎನ್ನುವ ಲೇಖಕರು, ಪ್ರತಿಭಟನೆ ಮತ್ತು ಪ್ರತಿರೋಧಗಳೇ ಬದುಕು ರೂಪಿಸುವ ಪ್ರಯೋಗಶಾಲೆಗಳೆಂಬ ಸತ್ಯವನ್ನು ಸಮರ್ಥವಾಗಿ ದಾಖಲಿಸಿದ್ದಾರೆ. ಮುರುಘಾ ಶರಣರ ಈ ಜೀವನ ಕಥನ ವಿಶಿಷ್ಟವಾಗಿದೆ.

ಪ್ರಕಾಶನ: ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಬಸವಕೇಂದ್ರ, ಶ್ರೀ ಮುರುಘಾ ಮಠ, ಚಿತ್ರದುರ್ಗ



ರಾಜಕೀಯದ ಬಡತನ
ಲೇ: ಡಾ.ಎಂ. ಚಂದ್ರ ಪೂಜಾರಿ
ಬೆಲೆ: ರೂ. 160/-

ಕರ್ನಾಟಕದ ರಾಜಕೀಯವನ್ನು ವಿಮರ್ಶಿಸುವ ಪ್ರಯತ್ನವನ್ನು ಈ ಕೃತಿಯಲ್ಲಿ ಮಾಡಲಾಗಿದೆ. ಸಮಾಜದ ಬಹುತೇಕರು ನೆಮ್ಮದಿಯ ಬದುಕನ್ನು ನಡೆಸಲು ಪೂರಕವಾಗುವ ಸಾಮಾಜಿಕ-ಆರ್ಥಿಕ ಹಾಗೂ ರಾಜಕೀಯ ಸಂಬಂಧಗಳನ್ನು ವಾಸ್ತವದಲ್ಲಿ ರಾಜಕೀಯ ಸಮಷ್ಟಿಯ ಏಳಿಗೆಯನ್ನು ಸಾಧಿಸುವ ರೂಪದಲ್ಲಿ ಇದೆಯೇ? ಸಮಾಜದ ಬಹುತೇಕರ ಆಶಯಗಳನ್ನು ಯಾಕೆ ರಾಜಕೀಯಕ್ಕೆ ಪೂರೈಸಲಾಗುತ್ತಿಲ್ಲ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರಿಸಲು ಈ ಪುಸ್ತಕದಲ್ಲಿ ಪ್ರಯತ್ನಿಸಲಾಗಿದೆ.

ಪ್ರಕಾಶನ: ಸಿದ್ಧಾರ್ಥ ಪ್ರಕಾಶನ ಹೊಸಪೇಟೆ

ಹೊಸ ಪುಸ್ತಕ



ಕಂಡಹಾಗೆ
ಲೇ: ಗೌರಿ ಲಂಕೇಶ್
ಬೆಲೆ: ರೂ.125/-

ಲಂಕೇಶ್ ಸಾವಿನನಂತರ ಪತ್ರಿಕೆಯನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುತ್ತಿರುವ ಗೌರಿ ಅವರು ಬೇರೆ ಬೇರೆ ಸಂದರ್ಭದಲ್ಲಿ ಪತ್ರಿಕೆಗಾಗಿ ಬರೆದ ಸಂಪಾದಕೀಯ ಲೇಖನಗಳ ಸಂಗ್ರಹವಿದು. ಸಮಕಾಲೀನ ಸಮಸ್ಯೆಗಳ ಬಗ್ಗೆ ಬರೆದಿರುವ ಬರಹಗಳು ಇವುಗಳಾದ್ದರಿಂದ ವಿಶೇಷ ಅಧ್ಯಯನದ ಆಳ ಇಲ್ಲವೆನಿಸಿದರೂ ಅಂತಃಕರಣದಿಂದ ಸ್ಪಂದಿಸುವ ಪತ್ರಕರ್ತೆಯ ಮನಸ್ಸು ಇಲ್ಲಿ ಅಂತರ್ಗತವಾಗಿದೆ. ನಾಡಿನ ಬಹುತೇಕ ಎಲ್ಲ ಸಮಸ್ಯೆಗಳ ಬಗ್ಗೆಯೂ ಪ್ರಾಮಾಣಿಕವಾಗಿ ಲೇಖಕರು ಸ್ಪಂದಿಸಿರುವುದು, ಇಲ್ಲಿನ ಲೇಖನಗಳಲ್ಲಿ ಎದ್ದು ಕಾಣುತ್ತದೆ.

ಪ್ರಕಾಶನ: ಲಂಕೇಶ್ ಪ್ರಕಾಶನ ನಂ.9, ಪೂರ್ವ ಆಂಜನೇಯ ಗುಡಿರಸ್ತೆ, ಬಸವನಗುಡಿ, ಬೆಂಗಳೂರು-560 004

ಇಸ್ಲಾಂ: ಹುಟ್ಟು ಮತ್ತು ವಿಕಾಸ
ಕನ್ನಡಕ್ಕೆ: ಹಸನ್ ನಯೀಂ ರಕೋಡ
ಲೇ: ಅಲಿ ಇಂಜನಿಯರ್
ಬೆಲೆ: ರೂ.125/-

ಇಸ್ಲಾಂ ಒಂದು ಧರ್ಮವಾಗಿ ಉದಯಿಸಿತು ಎನ್ನುವುದಕ್ಕಿಂತ ಹೆಚ್ಚಾಗಿ ಅದೊಂದು ವೈಚಾರಿಕ ಆಂದೋಲನವಾಗಿ ಹೊರಹೊಮ್ಮಿತು ಎನುವುದಕ್ಕೆ ಲೇಖಕರು ಒತ್ತುಕೊಟ್ಟಿದ್ದಾರೆ. ಅವರು ಈ ಆಂದೋಲನದ ಏಳುಬೀಳುಗಳನ್ನು ಖಚಿತವಾಗಿ ಗುರುತಿಸಿದ್ದಾರೆ. ಇಸ್ಲಾಮಿನ ಹಿನ್ನೆಲೆ ಜೊತೆಗೆ ಇಸ್ಲಮಾವನ್ನು ಅಂಗೀಕರಿಸಿದ ಸಮಾಜಗಳ ಒಳಸೆಳೆತಗಳನ್ನು ಅನಾವರಣಗೊಳಿಸುವ ಈ ಗ್ರಂಥ ವೈಚಾರಿಕ ಸಾಹಿತ್ಯಕ್ಕೆ ಒಂದು ಅಮೂಲ್ಯ ಕೊಡುಗೆ ಎನ್ನಬಹುದಾಗಿದೆ.

ಪ್ರಕಾಶನ: ಲೋಹಿಯಾ ಪ್ರಕಾಶನ ಗಾಂಧಿನಗರ, ಬಳ್ಳಾರಿ-583103



ಬಹುಮುಖಿ ಜಾನಪದ
ಲೇ: ಡಾ॥ ಬಸವರಾಜ ಸಬರದ
ಬೆಲೆ: ರೂ. 140/-

ವಚನ ಸಂಸ್ಕೃತಿಯ ಜೀವಸೆಲೆ, ಬಂಡಾಯ ಸಂಸ್ಕೃತಿಯ ಪ್ರಜ್ವಲತೆಯ ಜೊತೆಗೆ ಸ್ಪಂದಿಸಿದ ಯಾರೂ ಜನಪದವನ್ನು ಬಿಟ್ಟು ದೂರ ನಿಲ್ಲಲು ಸಾಧ್ಯವೇ ಇಲ್ಲ. ಸಬರದ ಅವರು ಈ ಮೂರರೊಟ್ಟಿಗೆ ಮೈದಳೆದಿದ್ದಾರೆ. ಬಂಡವಾಳಶಾಹಿಯ ವಿಕೃತ ರೂಪಗಳನ್ನು ಚೆನ್ನಾಗಿ ಬಲ್ಲ ಲೇಖಕರು ತಮ್ಮ ಈ"ಬಹುಮುಖಿ" ಕೃತಿಯ ಮೂಲಕ ಜಾನಪದ ಜೀವಕೋಶದ ಅಣು-ಕಣಗಳನ್ನು ಅರಿವಿಗೆ ಹಚ್ಚಿದ್ದಾರೆ. ಅಷ್ಟೇ ಲಲಿತವಾಗಿ ಜಾನಪದ ಜೀವನದ ಸರಸ ಸಲ್ಲಾಪವನ್ನು ಸವಿನೋಡಿದ್ದಾರೆ. ಇದು ಹುಟ್ಟಿನ ಗುಣವನ್ನು ದಿಟ್ಟಿಸಿ ಮಾಡುವ ಕಾಯಕವಾಗಿದೆ.

ಪ್ರಕಾಶನ: ಪಲ್ಲವಿ ಪ್ರಕಾಶನ ಗುಲಬರ್ಗಾ





ಪರಿಭಾಷೆ
ಲೇ: ಡಾ.ಮಾಧವ ಪೆರಾಜೆ
ಬೆಲೆ: ರೂ. 350/-

ಪಿಜಿನ್, ಕ್ರಿಯೋಲ್ ಕುರಿತ ಬರೆಹ ಕನ್ನಡದ ಭಾಷಾ ಅಧ್ಯಯನಕ್ಕೆ ಹೊಸ ಸೇರ್ಪಡೆ. ಅಂತಹ ಸಂಕಥನಗಳಲ್ಲಿ ಲೇಖಕರು ಮಂಡಿಸುವ ವಾದ, ತೋರಿದ ನಿಲುವು ಖಚಿತವಾಗಿದೆ. ವಿಮರ್ಶೆಯ ನೂತನ ಪರಿಭಾಷೆಗಳು ನಿಚ್ಚಳವಾಗಿ, ಸಾಹಿತ್ಯ ಕೃತಿ-ಅಧ್ಯಯನದ ಚಲನಶೀಲತೆ ಇವುಗಳ ಮೂಲಕ ಅಧ್ಯಯನದ ಗ್ರಹೀತಗಳು ಬದಲಾಗುತ್ತವೆ ಎಂಬ ಆಶಯ ಈ ಬರಹದ ಹಿಂದಿರುವ ತರ್ಕವಾಗಿದೆ. ಕೃತಿಯ ಉದ್ದಕ್ಕೂ ಹೊಸ ಸೂಚನೆಗಳಿವೆ, ಹೊಸ ಮಾತುಗಳಿವೆ. ಓದುಗರ ಅರಿವಿನ ಎಲ್ಲೆಯನ್ನು ವಿಸ್ತರಿಸುವ ಈ ಕೃತಿ ಕನ್ನಡ ಅಧ್ಯಯನದಲ್ಲಿ ಚಿಂತನೆಗೆ ಅರ್ಹವಾಗಿದೆ.

ಪ್ರಕಾಶನ: ಸಿದ್ಧಾರ್ಥ ಪ್ರಕಾಶನ ಹೊಸಪೇಟೆ

ಸಂಪಾದಕೀಯ

ಅಂತರಂಗ

ಹಂದಿಜ್ವರ ಎಂಬ ಸಮೂಹ ಸನ್ನಿ!

ಮೊನ್ನೆ ನನ್ನ ಗೆಳೆಯನೊಬ್ಬ ಫೋನ್ ಮಾಡಿ ಕೂಡಲೇ 'ಆಸ್ತಾ' ಟಿವಿ ಚಾನಲ್ ನೋಡುವಂತೆ ಒತ್ತಾಯಿಸಿದ. ಯಾವಾಗಲಾದರೂ ಒಮ್ಮೆ 'ಓಷೋ'ಗಾಗಿ 'ಆಸ್ತಾ' ಚಾನಲ್ ನೋಡುವ ನಾನು ಗೆಳೆಯನ ಒತ್ತಾಯಕ್ಕೆ ಮಣಿದು 'ಆಸ್ತಾ'ಗೆ ಹೋದೆ. ಬಾಬಾ ರಾಂದೇವ್ ತಮ್ಮ ಎಂದಿನ ಶೈಲಿಯಲ್ಲಿ ಏರಿದ ಧ್ವನಿಯಲ್ಲಿ ಮಾತಾಡುತ್ತಿದ್ದರು. ಅಲೋಪಥಿ ಔಷಧ ಕಂಪೆನಿಗಳ ಜನ್ಮ ಜಾಲಾಡುತ್ತಿದ್ದರು. 'ಹಂದಿ ಜ್ವರ ವಿದೇಶಿ ಔಷಧ ಕಂಪೆನಿಗಳು ಸೃಷ್ಟಿಸಿರುವ ಜಾಡ್ಯ. ಹಂದಿಜ್ವರಕ್ಕೆ ಅಲೋಪಥಿಯಲ್ಲಿ ಯಾವ ಔಷಧವೂ ಇಲ್ಲ. ಅದಕ್ಕೆ ಔಷಧ ಇರುವುದು ಆಯುರ್ವೇದದಲ್ಲಿ ಮಾತ್ರ, ಅದನ್ನು ನಾನು ಸಂಪೂರ್ಣ ಗುಣಪಡಿಸುತ್ತೇನೆ. ನನ್ನ ಕಷಾಯ ಕುಡಿದರೆ ಹಂದಿ ಜ್ವರ ತಲೆ ಕೂಡ ಹಾಕುವುದಿಲ್ಲ' ಎಂದು ಅಬ್ಬರಿಸುತ್ತಿದ್ದರು.

ನಾನು ಕೂಡಲೇ ನನ್ನ ಗೆಳೆಯನಿಗೆ ಫೋನ್ ಮಾಡಿ ಹೇಳಿದೆ 'ಬಾಬಾ ರಾಂದೇವ್‌ರಿಗೆ ವ್ಯವಹಾರಿಕ ಜ್ಞಾನ ತುಂಬಾ ಚೆನ್ನಾಗಿದೆ. ಈಗ ಅವರಿಗೆ ಒಳ್ಳೆ ಸೀಜನ್. ನಿಮ್ಮಂಥವರಿದ್ದರೆ ಅವರಿಗಿನ್ನೂ ಲಾಭ!' ನನ್ನ ಮಾತಿನಿಂದ ಗೆಳೆಯನಿಗೆ ಬೇಜಾರಾಯಿತು. ಮಾರನೇ ದಿನವೇ ಹೋಮಿಯೋಪಥಿ ವೈದ್ಯರೊಬ್ಬರು ಪತ್ರಿಕೆಯಲ್ಲಿ ಹೇಳಿಕೆ ನೀಡಿ ಹಂದಿಜ್ವರಕ್ಕೆ ಹೋಮಿಯೋಪಥಿ ಔಷಧವೇ 'ರಾಮ ಬಾಣ' ಎಂದು ತಿಳಿಸಿದ್ದರು. ಅವರು ಒಂದು ಹೆಜ್ಜೆ ಮುಂದೆ ಹೋಗಿ ಔಷಧಿಯ ಹೆಸರನ್ನೂ ಸೂಚಿಸಿದ್ದರು. ಅದೇ ಪತ್ರಿಕೆಯ ಮತ್ತೊಂದು ಪುಟದಲ್ಲಿ 'ಗೋಪಾಲಕ' ಸ್ವಾಮೀಜಿಯೊಬ್ಬರ ಶಿಷ್ಯನೊಬ್ಬ ಗೋವಿನ ಮೂತ್ರದಲ್ಲಿ H1N1 ವೈರಸ್‌ಗಳನ್ನು ಕೊಲ್ಲುವ ಶಕ್ತಿ ಇದೆ. ಹಾಗಾಗಿ ಜನರು ಭಯ ಪಡುವ ಅಗತ್ಯವಿಲ್ಲ. ಅಗತ್ಯ ಪ್ರಮಾಣದಲ್ಲಿ ಗೋಮೂತ್ರ ಸೇವಿಸುವ ಮೂಲಕ ಹಂದಿಜ್ವರದಿಂದ ಮುಕ್ತರಾಗಬಹುದೆಂಬ ಆಶ್ವಾಸನೆಯನ್ನು ನೀಡಿದ್ದ.

ಆದರೆ 'H1N1ಗೆ ಔಷಧವಿಲ್ಲ. ದೇಹವೇ ಸ್ವಶಕ್ತಿಯಿಂದ H1N1 ರೋಗಾಣುಗಳನ್ನು ನಿಷ್ಕ್ರಿಯಗೊಳಿಸುವುದರಿಂದ ಮಾತ್ರ ರೋಗ ತಡೆ ಸಾಧ್ಯ' ಎಂದು ಒಪ್ಪಿಕೊಳ್ಳುತ್ತಿರುವವರು ಅಲೋಪಥಿ ವೈದ್ಯರು ಮಾತ್ರ! ರೋಗದ ಅಡ್ಡ ಪರಿಣಾಮಗಳು ಭೀಕರವಾಗುವುದನ್ನು ತಪ್ಪಿಸಲು ಮಾತ್ರ ಅಲೋಪಥಿಯಲ್ಲಿ ಔಷಧಗಳಿವೆಯಂತೆ. ಹಂದಿಜ್ವರದ ಭೀಕರತೆಯನ್ನು ತಡೆಯಲು ಬಳಸುವ 'ತಮಿಫ್ಲೂ' ಅವುಗಳಲ್ಲಿ ಒಂದು. 'ತಮಿಫ್ಲೂ' ಹಂದಿಜ್ವರದಿಂದ ರೋಗಿಯನ್ನು ಪಾರು ಮಾಡುವುದಿಲ್ಲ. ಬದಲಾಗಿ ಆತ ರೋಗ ನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳಲು ಸಹಕರಿಸುತ್ತದೆಯಂತೆ. ಜ್ವರದ ತೀವ್ರತೆ ಹಾಗೂ ದೇಹದ ಇತರೆ ಭಾಗಗಳ ಮೇಲೆ ನಡೆಯುವ ಆಕ್ರಮಣಗಳ ತೀವ್ರತೆಯನ್ನು ತಡೆಯುವಲ್ಲಿ ಮಾತ್ರ ಅದು ಸಹಕಾರಿಯಾಗುತ್ತದೆಯಂತೆ. ಹಾಗಾಗಿ ಹಂದಿಜ್ವರ ಕಾಣಿಸಿಕೊಂಡ ಕೂಡಲೇ 'ತಮಿಫ್ಲೂ' ಮಾತ್ರೆಗಳನ್ನು ಸೇವಿಸಿದರೆ ಅಪಾಯದಿಂದ ಪಾರಾಗಬಹುದು ಎಂಬುದು ತಜ್ಞ ಅಲೋಪಥಿ ವೈದ್ಯರ ಅಭಿಪ್ರಾಯ.

ವೈದ್ಯರುಗಳ ನಡುವಿನ ಈ ವಿಭಿನ್ನ ಹೇಳಿಕೆಗಳಿಂದ ಸಾಮಾನ್ಯ ಜನರ ಸ್ಥಿತಿ ಏನಾಗಬಹುದು ನೀವೇ ಯೋಚಿಸಿ. ರಾಮದೇವರ ಕಷಾಯಕ್ಕಂತೂ ಈಗ ಎಲ್ಲಿಲ್ಲದ ನೂಕು ನುಗ್ಗಲು. ಅಲೋಪತಿ ಆಸ್ಪತ್ರೆಗಳ ಎದುರಿನ ಕ್ಯೂ ಕದಲುತ್ತಿಲ್ಲ. ಹೋಮಿಯೋಪಥಿ ಔಷಧದ ಕಥೆ ಏನಾಯಿತೆಂಬ ಕಡೆ ಮಾಧ್ಯಮಗಳೇಕೋ ತಲೆ ಕೆಡಿಸಿಕೊಂಡಿಲ್ಲ. ಸರ್ಕಾರ ಪರಿಸ್ಥಿತಿಯನ್ನು ನಿಭಾಯಿಸಲಾಗದೆ ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ. ಜನರ ಮುಖ ಗವುಸುಗಳನ್ನು ಹಾಕಿಕೊಂಡು ಒಬ್ಬರ ಮುಖ ಒಬ್ಬರು ಗುರುತಿಸದೆ ಅಪರಿಚಿತರಂತೆ ಓಡಾಡುತ್ತಿದ್ದಾರೆ. ಔಷಧಿ ಅಂಗಡಿಗಳಂತೂ ಕಾಳ ಸಂತೆಯ ಬಜಾರುಗಳಾಗಿವೆ. 5–10 ರೂಪಾಯಿಗಳ ಮುಖಗವುಸುಗಳನ್ನು ಇನ್ನೂರು ಮುನ್ನೂರು ರೂಪಾಯಿಗಳಿಗೆ ಮಾರಿ ಲೂಟಿ ಮಾಡುತ್ತಿದ್ದಾರೆ. ತಂದೆ ತಾಯಂದಿರು ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಿದ್ದಾರೆ. ಕೆಲವು ಶಾಲೆಗಳು ತಾತ್ಕಾಲಿಕ ರಜೆಯನ್ನು ಘೋಷಿಸಿವೆ.

'ಹಂದಿಜ್ವರ' ಉಂಟುಮಾಡುವ H1N1 ವೈರಸ್‌ಗಳು ಜಗತ್ತಿಗೇನೂ ಹೊಸದಲ್ಲ. ಇಂಥ ಹಲವಾರು ವೈರಸ್‌ಗಳು ಆಗಾಗ್ಗೆ ಬೇರೆ ಬೇರೆ ರೂಪದಲ್ಲಿ ಮನುಷ್ಯರ ಮೇಲೆ ದಾಳಿ ಮಾಡುತ್ತಿರುತ್ತವೆ. ಆದರೆ ಈ ವೈರಸ್‌ಗಳನ್ನು ನಿಯಂತ್ರಣದಲ್ಲಿಡುವ ದೈಹಿಕ ಶಕ್ತಿ ಹೊಂದಿರುವವರಿಗೆ ಇವುಗಳು ಏನೂ ಮಾಡಲಾರವು. ಆದರೆ ಅಶಕ್ತರಾಗಿರುವವರಿಗೆ, ಅದರಲ್ಲೂ ಈಗಾಗಲೇ ಬೇರೆ ಬೇರೆ ಖಾಯಿಲೆಗಳಿಂದ ನರಳುತ್ತಿರುವವರಿಗೆ ಇವು ಅಪಾಯಕಾರಿ. ಇದರಿಂದ ರಕ್ಷಣೆ ಪಡೆಯಬೇಕೆಂದರೆ ಅಗತ್ಯವಾಗಿ ಮಾಡಬೇಕಾಗಿರುವುದು ಸ್ವಚ್ಛತೆ. ಆ ಬಗ್ಗೆ ಸರ್ಕಾರ, ಸಮಾಜ ಹೆಚ್ಚು ಗಮನ ಹರಿಸಬೇಕೆಂಬುದು ವೈದ್ಯ ವಿಜ್ಞಾನಿಗಳು ಒತ್ತಿ ಹೇಳುವ ಮಾತು.

ವಿಚಿತ್ರ ಎಂದರೆ ನಮ್ಮ ಸರ್ಕಾರವಾಗಲೀ, ಸಮಾಜವಾಗಲಿ ಇಂಥ ಸ್ಥಿತಿಯನ್ನು ಎದುರಿಸಲು ಸಿದ್ಧವಿಲ್ಲದೆ ಇರುವುದು. ತಜ್ಞ ವೈದ್ಯರುಗಳು ಹೇಳುವ ಪ್ರಕಾರ ಹಂದಿಜ್ವರ ಎದುರಿಸಲು ಬೇಕಿರುವುದು ಕೇವಲ ಔಷಧ ಮಾತ್ರೆಗಳಲ್ಲ. ಮುಖಗವುಸುಗಳೂ ಅಲ್ಲ. ಬದಲಾಗಿ ಸ್ವಚ್ಛತೆಯಿಂದ ಇರುವುದು. ಆಗಾಗ್ಗೆ ಸಾಬೂನಿನಿಂದ ಕೈ ತೊಳೆದುಕೊಳ್ಳುವುದು. ಕೆಮ್ಮುವಾಗ, ಸೀನುವಾಗ ಕರವಸ್ತ್ರ ಅಡ್ಡಹಿಡಿಯುವುದು, ವಿಶ್ರಾಂತಿ ಪಡೆಯುವುದು, ಪೌಷ್ಟಿಕ ಆಹಾರ ಸೇವಿಸುವುದು, ಶುದ್ಧ ನೀರು ಕುಡಿಯುವುದು, ರೋಗ ಲಕ್ಷಣಗಳು ಕಾಣಿಸಿಕೊಂಡರೆ ಗುಣವಾಗುವವರೆಗೆ ಇತರ ಸಂಪರ್ಕಕ್ಕೆ ಬಾರದಂತೆ ಪ್ರತ್ಯೇಕವಾಗಿ ಇರುವುದು ಇತ್ಯಾದಿ.

ಈ ಸಲಹೆಗಳು ತುಂಬಾ ಸರಳವಾಗಿವೆ. ಆದರೆ ಇವುಗಳನ್ನು ಪಾಲಿಸಲು ಜನ ಸಿದ್ಧರಿದ್ದಾರೆಯೇ? ಜನರನ್ನು ಜಾಗೃತ ಗೊಳಿಸುವ ಕೆಲಸವನ್ನು ಮಾಡಲು ಸರ್ಕಾರ ಸಿದ್ಧವಾಗಿದೆಯೆ? ಹಂದಿಜ್ವರಕ್ಕೆ ಬಳಸುವ ಮುಖಗವುಸುಗಳ ಬಗ್ಗೆ ಗಂಟೆಗಟ್ಟಲೆ ಹುಸಿ ವ್ಯಾಖ್ಯಾನ ಮಾಡುವ ವಿದ್ಯುನ್ಮಾನ ಮಾಧ್ಯಮಗಳು ಸಿದ್ಧವಿದೆಯೆ? ಅಥವಾ ಗೋಮೂತ್ರ, ಕಷಾಯ ಮಾತ್ರ ಎಲ್ಲದಕ್ಕೂ ಉತ್ತರವೆನ್ನುವ ಬಾಬಾ–ಸ್ವಾಮಿಗಳು ಸಿದ್ಧರಿದ್ದಾರೆಯೆ? ಎಲ್ಲವನ್ನೂ ಮಾರುಕಟ್ಟೆ ಮೌಲ್ಯದಿಂದಲೇ ಅಳೆಯುವ ಇಂಥ ಜನಕ್ಕೆ ಕನಿಷ್ಟ ಮಾನವೀಯ ಕಾಳಜಿ, ಕಳಕಳಿ, ಔದಾರ್ಯ ಬರಲು ಸಾಧ್ಯವೇ ಇಲ್ಲವೆ?

ನಾವೆಂಥ ಸ್ಥಿತಿಯಲ್ಲಿದ್ದೇವೆಂದರೆ ದಿನಕ್ಕೆ ನಾಲ್ಕಾರು ಬಾರಿ ಕೈತೊಳೆದುಕೊಂಡು ಸ್ವಚ್ಛವಾಗಿರಿ ಎಂದು ಹೇಳುವ ಸ್ಥಿತಿಯಲ್ಲೂ ಇಲ್ಲ. ಯಾಕೆಂದರೆ ಎಷ್ಟೋ ಪ್ರದೇಶಗಳಲ್ಲಿ ಕುಡಿಯುವ ನೀರೂ ಇಲ್ಲ. ಕುಡಿಯಲೂ ನೀರಿಲ್ಲದ ಕಡೆ ಕೈತೊಳೆಯುವ ನೀರಾದರೂ ಎಲ್ಲಿ ಬರಬೇಕು? ಗ್ರಾಮೀಣ ಪ್ರದೇಶಗಳಲ್ಲಿ, ಕೊಳಗೇರಿಗಳಲ್ಲಿ ಕಕ್ಕಸ್ಸು ಮಾಡಿ ಕೈತೊಳೆಯಲು ಕೂಡ ನೀರಿಗೆ ಬರವಿದೆ! ಹಾಗಾಗಿಯೇ ಗ್ರಾಮೀಣ ಭಾರತ ಅತಿಹೆಚ್ಚು ರೋಗ ರುಜಿನಗಳಿಗೀಡಾಗಿದೆ. ಇನ್ನು ಪೌಷ್ಟಿಕ ಆಹಾರ, ಶುದ್ಧ ನೀರು ಎಲ್ಲಿ ಸಿಗಬೇಕು?

ಜನ ಇಂಥ ನಗ್ನ ಸತ್ಯಗಳನ್ನು ಅರಿತುಕೊಳ್ಳದಿದ್ದರೆ, ಜಾಗೃತವಾಗಿ ಪ್ರತಿಸ್ಪಂದಿಸದಿದ್ದರೆ, ಹಂದಿಜ್ವರ ಹೋಗಿ ಮತ್ತೊಂದು ಜ್ವರ ಬರುತ್ತದೆ. ಬಲಿಯಾಗುವವರು ಮಾತ್ರ ಸಾಮಾನ್ಯ ಜನ!

○ ಇಂದೂಧರ ಹೊನ್ನಾಪುರ

ಸಂಪಾದಕರೊಡನೆ ಸಂವಾದ

ಪ್ರಜಾತಂತ್ರದ ಸಿಪ್ಪೆ ಒಣಕಲಾಗಿದೆ- ಹಣ್ಣು ಕೊಳೆಯುತ್ತಿದೆ

ಶಿವಸುಂದರ್

ಮಾನ್ಯರೇ,

ಸಂವಾದದ ಜುಲೈ ಸಂಚಿಕೆಯಲ್ಲಿ ನಾನು ಬರೆದ "ಪ್ರಜಾತಂತ್ರವನ್ನೇ ಸೋಲಿಸುವ ಚುನಾವಣೆಗಳು" ಎಂಬ ಲೇಖನಕ್ಕೆ ಹಿರಿಯರಾದ ಡಿ.ಎಸ್. ನಾಗಭೂಷಣರವರು ಚುನಾವಣೆಗಳ "ವೈಫಲ್ಯ"ವನ್ನು ಹೀಗೆ ಅರ್ಥೈಸುವುದು "ತಪ್ಪು ವ್ಯಾಖ್ಯಾನ"ವೆಂದು ಪ್ರತಿಕ್ರಿಯಿಸಿದ್ದಾರೆ. ಆದರೆ ಅವರ ಪ್ರತಿಕ್ರಿಯೆಯನ್ನು ಗಂಭೀರವಾಗಿ ಓದಿದ ನಂತರವೂ ಈಗ ನಾವು ಒಪ್ಪಿಕೊಂಡಿರುವ ಚುನಾವಣಾ ಪದ್ಧತಿಗಳು ಹೇಗೆ ಪ್ರಜಾತಂತ್ರವನ್ನು ಗೆಲ್ಲಿಸುತ್ತಿದೆ ಎಂಬುದು ಅರ್ಥವಾಗುವುದಿಲ್ಲ.

ನಾನು ನೀಡಿರುವ ಅಂಕಿಅಂಶಗಳು ನಮ್ಮ "ಪ್ರಜಾತಂತ್ರದ ಪ್ರಾತಿನಿಧಿಕ ಗುಣವನ್ನು ನಗೆಪಾಟಲಿಗೀಡು ಮಾಡುವಂತಿದೆ ಎಂಬುದು ನಿಜ" ಎಂದು ಅವರು ಒಪ್ಪಿಕೊಳ್ಳುತ್ತಾರೆ. ಆದರೂ ಚುನಾವಣೆಯಲ್ಲಿ ಮತಹಾಕದ ಎಲ್ಲರೂ ವ್ಯವಸ್ಥೆಯ ಬಗ್ಗೆ ಪ್ರತಿಭಟನೆಯನ್ನು ಸೂಚಿಸುತ್ತಿದ್ದಾರೆಂದು ಊಹಿಸುವುದು ತಪ್ಪೆಂದೂ, ಮತದಾನಕ್ಕೆ ಗೈರುಹಾಜರು ಆಗುತ್ತಿರುವವರಲ್ಲಿ ದೊಡ್ಡಭಾಗ ಪ್ರಜಾತಂತ್ರದ ಲಾಭ ಪಡೆದು ಕೊಬ್ಬಿರುವವರೇ ಎಂದು ಸೂಚಿಸಿದ್ದಾರೆ. ಇಲ್ಲಿ ಅವರು ಉದಾಹರಿಸುತ್ತಿರುವುದು ಈ ದೇಶದ ಮೇಲ್‌ಮಧ್ಯಮ ವರ್ಗದವರೂ ಮತ್ತು ಶ್ರೀಮಂತ ವರ್ಗದವರನ್ನು. ಅವರು ಓಟು ಹಾಕದಿರುವುದು ಹೊಸ ವಿದ್ಯಮಾನವೇನಲ್ಲ. ಚುನಾವಣೆ ಪ್ರಜಾತಂತ್ರವನ್ನು ಸೋಲಿಸುತ್ತಿರುವುದು ಅವರು ಓಟು ಹಾಕದೇ ಇರುವ ಕಾರಣದಿಂದಲ್ಲ.

ಓಟು ಹಾಕಬಲ್ಲ ಜನಸಂಖ್ಯೆಯಲ್ಲಿ ಕೊಬ್ಬಿನ ಕಾರಣದಿಂದ ಓಟು ಹಾಕದ ಇಂಥವರ ಸಂಖ್ಯೆ ಶೇ.15 ನ್ನೂ ದಾಟುವುದಿಲ್ಲ. ನನ್ನ ಲೇಖನದಲ್ಲಿ ಸ್ಪಷ್ಟ ಪಡಿಸಿರುವಂತೆ ಶೇ.50ರಷ್ಟು ಜನ ಓಟು ಹಾಕುತ್ತಿಲ್ಲ. ಹೀಗಾಗಿ ನಾನು ಕೇಳುತ್ತಿರುವ ಪ್ರಶ್ನೆ ಈ ಸರ್ಕಾರಗಳಿಂದ ತಮ್ಮ ಬದುಕು ಸುಧಾರಿಸಬೇಕೆಂದು ಆಸೆ ಇಟ್ಟುಕೊಂಡು ಭ್ರಮನಿರಸನರಾದ ಉಳಿದ ಶೇ.35 ಜನರ ಬಗ್ಗೆ. ಅವರ ಹಾಕದಿರುವ ಓಟು ಏನನ್ನು ಸೂಚಿಸುತ್ತದೆ? ಮತ್ತು ಒಂದು ಪ್ರಜಾತಂತ್ರ ನಿಜಕ್ಕೂ ಪ್ರಾತಿನಿಧಿಕವಾಗಬೇಕೆಂದರೆ ಜನರ ಈ ಅಭಿಪ್ರಾಯವನ್ನೂ ಗಣನೆಗೆ ತೆಗೆದುಕೊಳ್ಳಬೇಕಲ್ಲವೇ?

ಸಮಾಜವಾದಿ ರಾಷ್ಟ್ರಗಳಲ್ಲಿರಲಿ ಇತ್ತೀಚೆಗೆ ಸಾಫ್ಟ್ ಕ್ಯಾಪಿಟಲಿಸ್ಟ್ ದೇಶಗಳಾದ ನಾರ್ವೆ, ಸ್ವೀಡನ್ಗಳಲ್ಲೂ ಇಂಥ ನಕಾರಾತ್ಮಕ ಓಟುಗಳನ್ನು ಗಣನೆಗೆ ತೆಗೆದುಕೊಳ್ಳುವ ಪ್ರಯತ್ನ ನಡೆದಿವೆ. ನಾಗಭೂಷಣರಂತೆ ದೇಶದ ಜನರ ಭವಿಷ್ಯವನ್ನು ಅಮೂರ್ತವಾದ ಪ್ರಜಾತಂತ್ರದ "ಲಯ"ದ ವಿಧಿಗೆ ಒಪ್ಪಿಸದೇ ಪ್ರಜಾತಂತ್ರವನ್ನು ಸುಧಾರಿಸುವ ಏನೆಲ್ಲಾ ಪ್ರಯತ್ನ ನಡೆದಿದೆ ಎಂದು ನಂತರದಲ್ಲಿ ನೋಡೋಣ.

ಈಗ ನಾಗಭೂಷಣರು ಮಾಡಿರುವ ಮತ್ತೆರಡು ಅಬ್ಸರ್ವೇಷನ್‌ಗಳನ್ನು ನೋಡೋಣ. 'ವಿಶಿಷ್ಟ' ರಾಜಕೀಯ ಕಾರಣಗಳಿಂದಾಗಿ ಕಾಶ್ಮೀರವನ್ನು ಹೊರತುಪಡಿಸಿದರೆ "ಸದ್ಯದ ವ್ಯವಸ್ಥೆಯ ಬಗ್ಗೆ ಸಕಾರಣವಾಗಿ ಅಸಮಾಧಾನ ಮತ್ತು ಸಿಟ್ಟು ಇರುವ ಬಹುತೇಕ ಜನ ಮತದಾನ ಮಾಡುತ್ತಿದ್ದಾರೆ." ಎಂದು ಅಭಿಪ್ರಾಯ ಪಡುತ್ತಾರೆ. ಬಹುಪಾಲು ಮೇಲ್‌ಮಧ್ಯಮವರ್ಗದವರು ಮತ್ತು ಶ್ರೀಮಂತರು ಓಟು ಹಾಕುತ್ತಿಲ್ಲ ಎಂದು ಈಗಾಗಲೇ ನೋಡಿದ್ದೇವೆ. ಅವರ ಸಂಖ್ಯೆ ಶೇ.15ರಷ್ಟನ್ನೂ ದಾಟುವುದಿಲ್ಲ.

ಹೀಗಾಗಿ ಓಟು ಹಾಕದ ಬಹುಪಾಲು ಮಂದಿ ಮತ್ತು ಓಟು ಹಾಕುತ್ತಿರುವ ಬಹುಪಾಲು ಮಂದಿ ಇಬ್ಬರೂ ಕೂಡಾ ಜನಸಾಮಾನ್ಯರೇ. ಆದರೆ ನನ್ನ ಲೇಖನದಲ್ಲಿ ನಾನು ಎತ್ತಿದ ಪ್ರಶ್ನೆ ಜನಸಾಮಾನ್ಯರು ದಿನೇದಿನೇ ಓಟಿನ ಬಗ್ಗೆ ಮತ್ತು ಅದಕ್ಕೆ ಆರೋಪಿಸಲಾಗಿರುವ ಮೌಲ್ಯಗಳ ಬಗ್ಗೆ ಏಕೆ ಭ್ರಮನಿರಸನಗೊಳಗಾಗುತ್ತಿದ್ದಾರೆ ಅಥವಾ ಅದರ ಬಗ್ಗೆ ವ್ಯಾವಹಾರಿಕವಾಗುತ್ತಿದ್ದಾರೆ ಎಂಬುದು. ಈ ದೇಶದ 60ವರ್ಷದ ಪ್ರಜಾತಂತ್ರ ಓಟಿನ 'ಪಾವಿತ್ರ್ಯ'ವನ್ನಾಗಲೀ, ಮೌಲ್ಯವನ್ನಾಗಲೀ ನಿರೀಕ್ಷೆಗಳನ್ನಾಗಲೀ ಉಳಿಸಿಕೊಳ್ಳುವಲ್ಲಿ ವಿಫಲವಾಗಿದೆ. ಆದ್ದರಿಂದಲೇ ಓಟುಹಾಕಿದ ಜನಕ್ಕೆ ಈ ದೇಶದ ಚುನಾವಣಾ ವ್ಯವಸ್ಥೆಯ ಬಗ್ಗೆಯಾಗಲೀ ಅಥವಾ ಇಂದು ಭಾರತದಲ್ಲಿ ಆಚರಣೆಯಲ್ಲಿರುವ ರೀತಿಯ ಪ್ರಜಾತಂತ್ರದ ಬಗ್ಗೆಯಾಗಲೀ ಅಭಿಮಾನ ಅಥವಾ ನಿರೀಕ್ಷೆಗಳಿವೆ ಎಂದು ಅರ್ಥಮಾಡಿಕೊಳ್ಳುವುದು ತಪ್ಪಾಗುತ್ತದೆ.

ಓಟಿನಲ್ಲಿ ಪಾಲ್ಗೊಳ್ಳುತ್ತಿರುವ ಬಹುಪಾಲು ಬಡಜನರು ಇಂದು ಚುನಾವಣೆಯನ್ನು ಕೇವಲ ಆ ಕ್ಷಣದ ವ್ಯಾವಹಾರಿಕ ದೃಷ್ಟಿಯಿಂದಷ್ಟೇ ನೋಡುತ್ತಿದ್ದಾರೆ ಅಥವಾ ತತ್‌ಕ್ಷಣದ ಕೆಲವು ಆರ್ಥಿಕ ಲಾಭಗಳ ದೃಷ್ಟಿಯಿಂದ ಮಾತ್ರ ಅತ್ಯಂತ ವ್ಯಾವಹಾರಿಕವಾಗಿ ಓಟು ಹಾಕುತ್ತಿದ್ದಾರೆ. ಇದೇ ವಾಸ್ತವ.

> **ಜನರಿಗೆ ಓಟನ್ನು ಮಾರಿಕೊಳ್ಳಬೇಡಿ ಎಂಬ ಕೂಗು ಅಸಂಬದ್ಧವಾಗಿ ಕಾಣಲು ಮುಖ್ಯ ಕಾರಣ ಅವರ ಓಟಿಗೆ ಕಳೆದ ಅರವತ್ತು ವರ್ಷಗಳಲ್ಲಿ ಬೇರೇ ಯಾವುದೇ ಕಿಮ್ಮತ್ತನ್ನು ಈ ಪ್ರಜಾತಂತ್ರ ಕಾಣಿಸಿಕೊಡದಿರುವುದೇ ಅಲ್ಲವೇ? ದಕ್ಷರು ಮತ್ತು ಜನಪರರು ಅಧಿಕಾರಕ್ಕೆ ಬರುವುದಾಗಲೀ, ತಮ್ಮ ಓಟಿನಿಂದ ಗೆದ್ದು ಬಂದವರು ತಮ್ಮ ಪರವಾಗಿ ಇಲ್ಲದಿರುವುದೂ ಮತ್ತು ತಮ್ಮಂಥವರು ಎಂದಿಗೂ ಅಧಿಕಾರದ ನೆರಳಿನ ಸಮೀಪವೂ ಹೋಗದಂತೆ ಆಗಿರುವುದರಿಂದಲೇ ತಮ್ಮ ಓಟಿಗೆ ಕಿಮ್ಮತ್ತು ಚುನಾವಣೆಯ ಸಮಯದಲ್ಲಿ ಮಾತ್ರ ದಕ್ಕುವುದೆಂದು ಜನರು ಅರ್ಥಮಾಡಿಕೊಳ್ಳುವಂತಾಗಿದೆ. ಇದಕ್ಕೆ ಮತ್ತೆ "ದುಡ್ಡು ಮತ್ತು ಹೆಂಡಕ್ಕೆ ಓಟು ಮಾರಿಕೊಳ್ಳುವ ಜನರ"ನ್ನೇ ದೂರುವುದು ಹಸಿವಿನ ಸಾವಿಗೆ ಬಡತನವನ್ನು ದೂರಿದಂತಾಗುತ್ತದೆ.**

ಜನರಿಗೆ ಓಟನ್ನು ಮಾರಿಕೊಳ್ಳಬೇಡಿ ಎಂಬ ಕೂಗು ಅಸಂಬದ್ಧವಾಗಿ ಕಾಣಲು ಮುಖ್ಯ ಕಾರಣ ಅವರ ಓಟಿಗೆ ಕಳೆದ ಅರವತ್ತು ವರ್ಷಗಳಲ್ಲಿ ಬೇರೇ ಯಾವುದೇ ಕಿಮ್ಮತ್ತನ್ನು ಈ ಪ್ರಜಾತಂತ್ರ ಕಾಣಿಸಿಕೊಡದಿರುವುದೇ ಅಲ್ಲವೇ? ದಕ್ಷರು ಮತ್ತು ಜನಪರರು ಅಧಿಕಾರಕ್ಕೆ ಬರುವುದಾಗಲೀ, ತಮ್ಮ ಓಟಿನಿಂದ ಗೆದ್ದು ಬಂದವರು ತಮ್ಮ ಪರವಾಗಿ ಇಲ್ಲದಿರುವುದೂ ಮತ್ತು ತಮ್ಮಂಥವರು ಎಂದಿಗೂ ಅಧಿಕಾರದ ನೆರಳಿನ ಸಮೀಪವೂ ಹೋಗದಂತೆ ಆಗಿರುವುದರಿಂದಲೇ ತಮ್ಮ ಓಟಿಗೆ ಕಿಮ್ಮತ್ತು ಚುನಾವಣೆಯ ಸಮಯದಲ್ಲಿ ಮಾತ್ರ ದಕ್ಕುವುದೆಂದು ಜನರು ಅರ್ಥಮಾಡಿಕೊಳ್ಳುವಂತಾಗಿದೆ.

ಇದಕ್ಕೆ ಮತ್ತೆ "ದುಡ್ಡು ಮತ್ತು ಹೆಂಡಕ್ಕೆ ಓಟು ಮಾರಿಕೊಳ್ಳುವ ಜನರ"ನ್ನೇ ದೂರುವುದು ಹಸಿವಿನ ಸಾವಿಗೆ ಬಡತನವನ್ನು ದೂರಿದಂತಾಗುತ್ತದೆ. ಅಷ್ಟೇ. ವಾಸ್ತವವಾಗಿ 60 ವರ್ಷಗಳಾದರೂ ಈ ಚುನಾವಣೆಗಳು ಪ್ರಜೆಗಳನ್ನು ನಿಜವಾದ ಪ್ರಭುಗಳನ್ನಾಗಿ ಮಾಡಲಿಲ್ಲ. ಬದಲಿಗೆ ಅವರನ್ನು ಶಾಶ್ವತ ದೈನೇಸಿ ಸ್ಥಿತಿಯಲ್ಲಿಡಲಾಗಿದೆ. ಆದ್ದರಿಂದಲೇ ಚುನಾವಣಾ ಸಂದರ್ಭದಲ್ಲಿ ಪ್ರಜಾತಂತ್ರದ ಶೀಲವೇ ಮಾರಾಟವಾಗುತ್ತದೆ. ಈ ಪರಿಸ್ಥಿತಿ ಪ್ರಜಾತಂತ್ರದ ವೈಫಲ್ಯವಲ್ಲವೇ? ಪ್ರಜಾತಂತ್ರದ ಯಾವ "ಲಯ" ನಮ್ಮ ದೇಶದ ಪ್ರಜಾತಂತ್ರವನ್ನು ಇಷ್ಟು ಹೀನಾಯ ಸ್ಥಿತಿಗೆ ತಂದಿಳಿಸಿತು ಎಂದು ಅರ್ಥಮಾಡಿಕೊಂಡು ಅದನ್ನು ಬದಲಿಸಲು ಪ್ರಜ್ಞಾಪೂರ್ವಕ ಪಡದೇ ಅದು ತನ್ನಂತೆತಾನೇ ಬದಲಾಗುವುದೇ?

"ಬಹುಮುಖ ಸ್ಪರ್ಧೆ" ಇರುವಾಗ "ಬಹುಮತ ಎಂದರೆ ಅರ್ಧಕ್ಕಿಂತ ಜಾಸ್ತಿ ಎಂದು ಮಾತ್ರ ಅರ್ಥೈಸುವುದು ಪ್ರಜಾಪ್ರಭುತ್ವವನ್ನು ನಮ್ಮ ಸೈದ್ಧಾಂತಿಕ ನಂಬಿಕೆಗನುಸಾರ ಸಂಕುಚಿತಗೊಳಿಸುವ ಪ್ರಯತ್ನವೇ ಆಗುತ್ತದೆ" ಎಂದು ನಾಗಭೂಷಣರು ವಾದಿಸುತ್ತಾರೆ. ಇಬ್ಬರು ಸ್ಪರ್ಧೆಗೆ ನಿಂತಾಗ ಅರ್ಧಕ್ಕಿಂತ ಜಾಸ್ತಿ ಇದ್ದರೆ ಮಾತ್ರ ಬಹುಮತ, ಮೂವರು ನಿಂತಿದ್ದರೆ ಅರ್ಧಕ್ಕಿಂತ ಕಡಿಮೆ ಇದ್ದರೂ ಮೂವರಲ್ಲಿ ಯಾರಿಗೆ ಹೆಚ್ಚು ಬಿದ್ದಿದೆಯೋ ಅದೇ ಬಹುಮತ ಎಂಬ ಸರಳ ಗಣಿತ ಲೆಕ್ಕಾಚಾರವನ್ನು ಅವರು ರಾಜಕೀಯಕ್ಕೆ ಅನ್ವಯಿಸುತ್ತಿದ್ದಾರೆ. ಆದರೆ ನಮ್ಮ ದೇಶದ

ರಾಜಕೀಯ ಗಣಿತ ಮಾತ್ರವಲ್ಲ. ಅದು ಪ್ರಬಲರ, ಕುಲೀನರ ತಂತ್ರ ಕುತಂತ್ರಗಳ ರಣರಂಗ. ಪ್ರಜಾತಂತ್ರ ನೀಡಿರುವ ಈ ಅವಕಾಶವನ್ನೇ ಬಳಸಿಕೊಂಡು ಸಬಲರು ತಾವು ಬಹುಮತ ಪಡೆಯಲಾಗದ ಸಂದರ್ಭದಲ್ಲಿ ಒಂದೇ ಕ್ಷೇತ್ರದಲ್ಲಿ ಬೇಕೆಂದೇ ಜಾತಿ, ಭಾಷೆಯ ಹೆಸರಲ್ಲಿ ಹಲವರನ್ನು ನಿಲ್ಲಿಸಿ, ಮತಗಳು ಒಡೆಯುವಂತೆ ಮಾಡಿ ಬಹುಜನರಿಗೆ ಸಲ್ಲದ ವ್ಯಕ್ತಿಯೇ ಗೆಲ್ಲುವಂಥಾ ಚುನಾವಣಾ ತಂತ್ರವನ್ನು ಬಲಾಢ್ಯರು ರಚಿಸುತ್ತಿಲ್ಲವೇ? ಈ ಚುನಾವಣಾ ತಂತ್ರ ನೈಜ ಪ್ರಜಾತಂತ್ರವನ್ನು ಸೋಲಿಸುತ್ತಿಲ್ಲವೇ?

ನಾಗಭೂಷಣರ ಪ್ರಕಾರ ಪ್ರಜಾತಂತ್ರದ ಅಮೂರ್ತ ಲಯದಲ್ಲಿ ಕ್ರಮೇಣ ಧ್ರುವೀಕರಣ ಸಂಭವಿಸಿ ಈ ಅಪಾಯ ತಪ್ಪಬಹುದು. ಅಥವಾ ಜೆಪಿ ಚಳವಳಿಯ ಕಾಲದಲ್ಲಾದಂತೆ ಇಂಥಾ ಬಹುಮುಖೀ ಸ್ಪರ್ಧೆಗಳಿಂದಾಗಿ ಜನಸಾಮಾನ್ಯರೂ ಗೆಲ್ಲುವಂತಾಗಬಹುದು. ಅವರ ಆಶಾವಾದಕ್ಕೆ ಸಮಕಾಲೀನ ರಾಜಕಾರಣ ಯಾವುದೇ ಬುನಾದಿಯನ್ನು ಒದಗಿಸುವುದಿಲ್ಲ. ಪ್ರಜಾತಂತ್ರವನ್ನು ಗಣಿತದಂತೆ ನೋಡಿದರೆ ಮಾತ್ರ ಇದು ಪರಿಹಾರದಂತೆ ಕಾಣಿಸಬಹುದಷ್ಟೆ.

ಏಕೆಂದರೆ ನಾವು ಕೇಳಬೇಕಿರುವ ಅಸಲಿ ಪ್ರಶ್ನೆ ಈ ಬಹುಮುಖೀ ಸ್ಪರ್ಧೆ ಅಥವಾ ಧ್ರುವೀಕೃತ ಸ್ಪರ್ಧೆ ಸಾಮಾನ್ಯ ಜನರನ್ನು ಕೂಡಾ ಪ್ರಭುಗಳನ್ನಾಗಿ ಮಾಡುವಂತಿದೆಯೇ ಎಂಬುದು? ಮೂಲಭೂತ ಪ್ರಶ್ನೆ ಕಣದಲ್ಲಿ ಇರುವ ಮುಖಗಳು "ಬಹುಮುಖಗಳೇ"? ಜನಸಾಮಾನ್ಯರ ಮುಖಗಳೇ? ಗೆದ್ದ ನಂತರ ಈ "ಮುಖಗಳು" ಏನಾದವು? ಜೆಪಿ ಕಾಲದಲ್ಲಿ ಗೆದ್ದ ಆ ತಥಾಕಥಿತ ಸಾಮಾನ್ಯರಾದ ಫರ್ನಾಂಡೀಸ್‌ಗಳು, ಚರಣ್‌ಸಿಂಗ್‌ಗಳು ಅವರ ಮಕ್ಕಳು ಅಥವಾ ಆ ಇಡೀ ಜನತಾ ಪರಿವಾರ ಈಗ ನಿಜಕ್ಕೂ ಜನಸಾಮಾನ್ಯರ ಮುಖಗಳಾಗಿ ಉಳಿದಿವೆಯೇ? ಗೆದ್ದವರನ್ನು ಜನರ ಸೇವಕರನ್ನಾಗಿಯೇ ಉಳಿಸಿಕೊಳ್ಳುವಷ್ಟು ಜನರನ್ನು ರಾಜಕೀಯವಾಗಿ ಸಬಲೀಕರಿಸಲು ನಮ್ಮ ಪ್ರಜಾತಂತ್ರ ಏಕೆ ಸಫಲವಾಗಿಲ್ಲ? ವ್ಯವಸ್ಥೆಯಲ್ಲಿ ಅಂಥಾ ಯಾವುದೇ ಸಾಂಸ್ಥಿಕ ರಚನೆಗಳೇಕಿಲ್ಲ? ಚುನಾವಣೆಗಳು ಅಂಥ ಸಬಲೀಕರಣದ ಮಾರ್ಗಗಳಾಗುವ ಬದಲು 'ಉಳ್ಳವರ ಕಣ್ಣ ಸನ್ನೆಗೆ ಅವರ ಕಾವಲು ನಾಯಿ'ಗಳಾಗುತ್ತಿರುವುದೇಕೆ?

ಮತ್ತು ಪ್ರಜಾತಂತ್ರವಾದಿಗಳಾದ ನಾಗಭೂಷಣರಿಗೆ ಈ ಪ್ರಶ್ನೆಗಳೇ ಬರುವುದಿಲ್ಲವೇಕೆ? ಇದೇ ಎಲ್ಲಕ್ಕಿಂತ ಮುಖ್ಯವಾದ ಪ್ರಶ್ನೆ!!

ಜನರನ್ನು ನೈಜ ಪ್ರಭುಗಳನ್ನಾಗಿ ಮಾಡುವಲ್ಲಿ ಪ್ರಜಾತಂತ್ರ ಎಂಬುದು 19ನೇ ಶತಮಾನದ ಒಂದು ಅವಿಷ್ಕಾರ. ಸಾಮಾನ್ಯ ಜನರ, ದುಡಿಯುವ ಜನರ ಮತ್ತು ರೈತ ಹೋರಾಟಗಳ ರಕ್ತಸಿಕ್ತ ಕ್ರಾಂತಿಯ ಫಲವಾಗಿಯೇ ಪ್ರಜಾಪ್ರಭುತ್ವವೆಂಬ ಆಡಳಿತ ವ್ಯವಸ್ಥೆ ಸೃಷ್ಟಿಯಾಯಿತು. ಅದರ ಸೃಷ್ಟಿಯಲ್ಲೇ ಜನರ ಪಾತ್ರವನ್ನು ನೆಪಮಾತ್ರಗೊಳಿಸುವ ಹುನ್ನಾರಗಳಿದ್ದೇ ಇತ್ತು. ಹೀಗಾಗಿಯೇ ಅದು ಸಾಮಾನ್ಯ ಜನರ ಸತತ ಹೋರಾಟಗಳಿಂದಾಗಿ ಅನಿವಾರ್ಯತೆಯಿಂದ ನೈಜ ಪ್ರಜಾಪ್ರಭುತ್ವವಾಗುವ ದಿಕ್ಕಿನಲ್ಲಿ ನಡೆದಿದೆಯೇ ಹೊರತು ಅದರ "ಸಹಜ ಲಯದಿಂದ" ತಾನೇ ತಾನಾಗಿ ಬದಲಾಗಿಲ್ಲ.

ಇಂದು ನಮ್ಮ ದೇಶದಲ್ಲಿ ಅನುಸರಿಸುತ್ತಿರುವ ಇಂಗ್ಲೆಂಡಿನ ವೆಸ್ಟ್‌ಮಿನಿಸ್ಟರ್ ಮಾದರಿ ಪಾರ್ಲಿಮೆಂಟರಿ ವ್ಯವಸ್ಥೆಯನ್ನು ಪ್ರಜಾತಂತ್ರದ ಅತ್ಯುತ್ತಮ ಮಾದರಿಯೆಂದು ಐರೋಪ್ಯ ದೇಶಗಳೇ ಒಪ್ಪಿಕೊಳ್ಳುವುದಿಲ್ಲ. ಹಲವಾರು ಐರೋಪ್ಯ ದೇಶಗಳಲ್ಲಿ "ಚಲಾಯಿಸಿದ ಮತಗಳಲ್ಲಿ ಹೆಚ್ಚು ಬಹುಮತ ಪಡೆದವರು –ಫಸ್ಟ್ ಪಾಸ್ಟ್ ದ ಪೋಸ್ಟ್ ಸಿಸ್ಟಂ– ಗೆಲ್ಲುತ್ತಾರೆ" ಎಂಬ ಪದ್ಧತಿಯನ್ನು ಅನುಸರಿಸುವುದಿಲ್ಲ. ಬದಲಿಗೆ ಒಂದು ಪಕ್ಷಕ್ಕೆ ದೇಶಾದ್ಯಂತ ಒಟ್ಟು ಎಷ್ಟು ಮತಗಳು ದಕ್ಕುತ್ತದೆಯೋ ಅದನ್ನು ಆಧರಿಸಿ ಸದನದಲ್ಲಿ ಅವರ ಪ್ರಾತಿನಿಧ್ಯದ ಪ್ರಮಾಣ ನಿಗದಿಯಾಗುತ್ತದೆ. ಇದು ಚಲಾಯಿಸಿದ ಮತಗಳ ಅಭಿಪ್ರಾಯವನ್ನು ಸರಿಯಾದ ರೀತಿಯಲ್ಲಿ ಪ್ರತಿನಿಧಿಸುವ ಒಂದು ವ್ಯವಸ್ಥೆಯಲ್ಲವೇ? ನಾಗಭೂಷಣರು ಭಾರತದಲ್ಲಿ ಇದನ್ನು ಆಚರಿಸುವುದು ಅಕಾಲಿಕ ಎನ್ನುತ್ತಾರೆ. ಆದರೆ ಪಕ್ಕದ ಶ್ರೀಲಂಕಾ ಹಾಗೂ ನೇಪಾಳದಲ್ಲಿ ಸಹ ಇದೇ ವ್ಯವಸ್ಥೆ ಇದೆ.

ನೇಪಾಳ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮತಗಳಾನುಸಾರ ಪಕ್ಷದ ಪ್ರಾತಿನಿಧ್ಯಕ್ಕೆ ಮಾತ್ರ ಸೀಮಿತವಾಗದೆ ಪಕ್ಷವು ಸದನಕ್ಕೆ ಮಾಡುವ ನೇಮಕಾತಿಯಲ್ಲಿ ಜಾತಿ, ಲಿಂಗ, ವರ್ಗ, ಪ್ರದೇಶಗಳ ಪ್ರಮಾಣಾತ್ಮಕ ಪ್ರಾತಿನಿಧ್ಯವನ್ನು ಖಾತರಿಗೊಳಿಸಬೇಕೆಂದು ಸಂವಿಧಾನಾತ್ಮಕವಾಗಿ ಶಾಸನ ಮಾಡಿದೆ. ಭಾರತದ ಪ್ರಜಾತಂತ್ರದ ಲಯ ಪ್ರಜಾತಂತ್ರದ ಹಿನ್ನೆಲೆಯೇ ಇಲ್ಲದ ನೇಪಾಳಕ್ಕಿಂತಲೂ ಹೀನಾಯವಾಗಿದೆಯೇ? ಅದೇ ರೀತಿ ಇರಾನ್‌ನಲ್ಲಿ ಅಧ್ಯಕ್ಷ ಚುನಾವಣೆಯಲ್ಲಿ ಇಬ್ಬರಿಗಿಂತ ಜಾಸ್ತಿ ಪ್ರತಿನಿಧಿಗಳಿದ್ದೂ ಯಾರಿಗೂ ಶೇ.50ಕ್ಕಿಂತ ಜಾಸ್ತಿ ಮತದಾನ ಆಗದಿದ್ದರೆ, ಮೊದಲೆರಡ ಸ್ಥಾನ ಪಡೆದ ಅಭ್ಯರ್ಥಿಗಳ ನಡುವೆ ಮತ್ತೆ ಚುನಾವಣೆ ಏರ್ಪಡಿಸಿ ಅವರಲ್ಲಿ ಯಾರಿಗೆ ಶೇ.50ಕ್ಕಿಂತ ಹೆಚ್ಚಿನ ಮತಗಳು ಸಿಗುತ್ತವೆಯೋ ಅವರನ್ನು ಗೆದ್ದ ಅಭ್ಯರ್ಥಿಯೆಂದು ಘೋಷಿಸಲಾಗುತ್ತದೆ.

ಭಾರತದ ಪ್ರಜಾತಂತ್ರದ ಲಯ ಇರಾನ್‌ಗಿಂತಲೂ ಹಿಂದಿದೆಯೇ? ಅವೆಲ್ಲಾ ಇರಲಿ. ಸಂವಿಧಾನ ತಿದ್ದುಪಡಿಗೆ ರಚಿಸಲಾಗಿದ್ದ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ನೇತೃತ್ವದ ಕರಡು ಸಮಿತಿಯೇ 2002ರಲ್ಲಿ ನೀಡಿದ ಶಿಫಾ ರಸ್ಸುಗಳಲ್ಲಿ ನಮ್ಮ ಶಾಸನ ಸಭೆಗಳ ಪ್ರಾತಿನಿಧಿಕತ್ವ ಕುಸಿಯುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿತ್ತು. ಮತ್ತು ಇರಾನ್ ರೀತಿ ಮೊದಲೆರಡು ಸ್ಥಾನಗಳನ್ನು ಪಡೆದ ಅಭ್ಯರ್ಥಿಗಳ ನಡುವೆ ಮತ್ತೆ ಸ್ಪರ್ಧೆಯನ್ನು ಏರ್ಪಡಿಸಿ ಅವರಲ್ಲಿ ಶೇ.51 ರಷ್ಟು ಮತ ಪಡೆದವರನ್ನು ಮಾತ್ರ ಗೆದ್ದವರೆಂದು ಘೋಷಿಸಬೇಕೆಂದು ಸಲಹೆ ಮಾಡಿತ್ತು! ಅವರಿಗೆ ಪ್ರಜಾತಂತ್ರದ ಲಯ ಗೊತ್ತಿರಲಿಲ್ಲವೇ?

ಅಷ್ಟು ಮಾತ್ರವಲ್ಲ. ನಕಾರಾತ್ಮಕ ವೋಟಿನ ಹಕ್ಕಿನ ಬಗ್ಗೆ ನಾಗಭೂಷಣರು ಏನು ಹೇಳುತ್ತಾರೋ ತಿಳಿದಿಲ್ಲವಾದರೂ ಸಂಸದೀಯ ಪರ್ಜಾತಂತ್ರದ ತಾಯ್ನೆಲದಲ್ಲೇ ಅಂಥಾ ಮತಗಳಿಗೆ ಇನ್ನೂ ಹೆಚ್ಚು ಮಾನ್ಯತೆ ನೀಡುವ ಪ್ರಕ್ರಿಯೆ ಚಲಾವಣೆಯಲ್ಲಿದೆ. ಕಣದಲ್ಲಿರುವ ಯಾವ ಅಭ್ಯರ್ಥಿಯೂ ತನ್ನ ಆಯ್ಕೆಯಲ್ಲ– None Of The Above - NOTA- ಎಂಬ ಆಯ್ಕೆಯನ್ನು ಎಲೆಕ್ಟ್ರಾನಿಕ್ ಓಟಿಂಗ್ ಮೆಷೀನ್‌ನಲ್ಲೇ ಸೇರಿಸಬೇಕೆಂದು ಚುನಾವಣಾ ಆಯೋಗವೂ ಸಲಹೆ ಮಾಡಿದೆ. ನಾರ್ವೆಯಲ್ಲಿ ಇಂಥ NOTA-ಓಟುಗಳು ಅರ್ಧಕ್ಕಿಂತ ಜಾಸ್ತಿಯಾದರೆ ಅಂಥ ಕ್ಷೇತ್ರಗಳಲ್ಲಿ ಚುನಾವಣೆಯನ್ನೇ ರದ್ದುಗೊಳಿಸುವ ಪ್ರಸ್ತಾಪವಿದೆ. ಮತ್ತು ಹೊಸದಾಗಿ ನಡೆಯುವ ಚುನಾವಣೆಯಲ್ಲಿ ಹಳೆಯ ಅಭ್ಯರ್ಥಿಗಳು ಸ್ಪರ್ಧಿಸಲು ನಿಷೇಧ ಹೇರಲಾಗುತ್ತಿದೆ.

ಇವೆಲ್ಲವೂ ಜನರ ಸಕಾರಾತ್ಮಕ ಓಟಿರಲಿ ನಕಾರಾತ್ಮಕ ಓಟಿಗೂ ಇನ್ನೂ ಹೆಚ್ಚಿನ ಕಿಮ್ಮತ್ತನ್ನು ವ್ಯವಸ್ಥಿತವಾಗಿ ಒದಗಿಸುವ ಪ್ರಯತ್ನವಲ್ಲವೇ? ಇದರರ್ಥ ಆ ದೇಶಗಳಲ್ಲಿ ನಿಜಕ್ಕೂ ವ್ಯವಸ್ಥೆ ಶ್ರೀ ಸಾಮಾನ್ಯನ ಪರವಾಗಿದೆ ಎಂದಲ್ಲ. ಆದರೂ ಜನರ ಹೋರಾಟಗಳಿಂದಾಗಿ ಆ ದೇಶಗಳಲ್ಲಿ ಜನರ ಓಟಿಗೆ ನಮ್ಮ ದೇಶಕ್ಕಿಂತ ಹೆಚ್ಚಿನ ಕಿಮ್ಮತ್ತನ್ನಂತೂ ಸಾಧಿಸಿಕೊಳ್ಳಲಾಗಿದೆ. ವ್ಯವಸ್ಥೆಯನ್ನು ಇರುವ ಚೌಕಟ್ಟಿನಲ್ಲೇ ಇನ್ನಷ್ಟು ಜನಪರಗೊಳಿಸಬಹುದಾದ ಸಾಧ್ಯತೆಯನ್ನು ಸಹ ನಮ್ಮ ದೇಶದಲ್ಲಿ "ಪ್ರಜಾತಂತ್ರದ ಲಯ"ವೆಂಬ ವಿಧಿಗೆ ಬಿಟ್ಟು ಕೂರುವುದು ಎಷ್ಟು ಸರಿ?

ಇಂದು ನಮ್ಮ ಲೋಕಸಭೆ ಮತ್ತು ವಿಧಾನಸಭೆಗಳು ಕೋಟ್ಯಾಧೀಶರ ಅಸೆಂಬ್ಲಿಯಾಗಿದೆಯೇ ವಿನಃ ಶ್ರೀಸಾಮಾನ್ಯರ ಪ್ರತಿನಿಧಿಯಾಗುಳಿದಿಲ್ಲ. ಪ್ರಸ್ತುತ ನಾವು ಅನುಸರಿಸುತ್ತಿರುವ ಚುನಾವಣಾ ಮತ್ತು ಪ್ರಜಾತಂತ್ರದ ಮಾದರಿಗಳೇ ಜನಸಾಮಾನ್ಯರನ್ನು ಅಧಿಕಾರದಿಂದ ಇನ್ನಷ್ಟು ಮತ್ತಷ್ಟು ದೂರಗೊಳಿಸುತ್ತಿದೆ. ಈ ಲಯದಲ್ಲೇ ಈ ದೇಶದ ಪ್ರಜಾತಂತ್ರ ಮುಂದುವರೆದಲ್ಲಿ ಈಗಿರುವ ಅಲ್ಪಸ್ವಲ್ಪ ಪ್ರಜಾತಂತ್ರವೂ ಲಯವಾಗಿಬಿಡುವ ಅಪಾಯವಿಲ್ಲವೇ?

(9ನೇ ಪುಟಕ್ಕೆ)

ಜನರನ್ನು ನೈಜ ಪ್ರಭುಗಳನ್ನಾಗಿ ಮಾಡುವಲ್ಲಿ ಪ್ರಜಾತಂತ್ರ ಎಂಬುದು 19ನೇ ಶತಮಾನದ ಒಂದು ಅವಿಷ್ಕಾರ. ಸಾಮಾನ್ಯ ಜನರ, ದುಡಿಯುವ ಜನರ ಮತ್ತು ರೈತ ಹೋರಾಟಗಳ ರಕ್ತಸಿಕ್ತ ಕ್ರಾಂತಿಯ ಫಲವಾಗಿಯೇ ಪ್ರಜಾ ಪ್ರಭುತ್ವವೆಂಬ ಆಡಳಿತ ವ್ಯವಸ್ಥೆ ಸೃಷ್ಟಿಯಾಯಿತು. ಅದರ ಸೃಷ್ಟಿಯಲ್ಲೇ ಜನರ ಪಾತ್ರವನ್ನು ನೆಪಮಾತ್ರಗೊಳಿಸುವ ಹುನ್ನಾರಗಳಿದ್ದೇ ಇತ್ತು. ಹೀಗಾಗಿಯೇ ಅದು ಸಾಮಾನ್ಯ ಜನರ ಸತತ ಹೋರಾಟಗಳಿಂದಾಗಿ ಅನಿವಾರ್ಯತೆಯಿಂದ ನೈಜ ಪ್ರಜಾಪ್ರಭುತ್ವವಾಗುವ ದಿಕ್ಕಿನಲ್ಲಿ ನಡೆದಿದೆಯೇ ಹೊರತು ಅದರ "ಸಹಜ ಲಯದಿಂದ" ತಾನೇ ತಾನಾಗಿ ಬದಲಾಗಿಲ್ಲ. ಇಂದು ನಮ್ಮ ದೇಶದಲ್ಲಿ ಅನುಸರಿಸುತ್ತಿರುವ ಇಂಗ್ಲೆಂಡಿನ ವೆಸ್ಟ್‌ಮಿನಿಸ್ಟರ್ ಮಾದರಿ ಪಾರ್ಲಿಮೆಂಟರಿ ವ್ಯವಸ್ಥೆಯನ್ನು ಪ್ರಜಾತಂತ್ರದ ಅತ್ಯುತ್ತಮ ಮಾದರಿಯೆಂದು ಐರೋಪ್ಯ ದೇಶಗಳೇ ಒಪ್ಪಿಕೊಳ್ಳುವುದಿಲ್ಲ. ಹಲವಾರು ಐರೋಪ್ಯ ದೇಶಗಳಲ್ಲಿ "ಚಲಾಯಿಸಿದ ಮತಗಳಲ್ಲಿ ಹೆಚ್ಚು ಬಹುಮತ ಪಡೆದವರು –ಫಸ್ಟ್ ಪಾಸ್ಟ್ ದ ಪೋಸ್ಟ್ ಸಿಸ್ಟಂ– ಗೆಲ್ಲುತ್ತಾರೆ" ಎಂಬ ಪದ್ಧತಿಯನ್ನು ಅನುಸರಿಸುವುದಿಲ್ಲ.

ಕೊಂಕಣಿಗಳು: ಒಂದಷ್ಟು ಪೂರಕ ಸಂಗತಿ

ಸಂಪಾದಕರೊಡನೆ ಸಂವಾದ

ಜಿ. ರಾಜಶೇಖರ

ಮಾನ್ಯ ಸಂಪಾದಕರೇ,

'ಸಂವಾದ'ದ ಜುಲೈ ಮತ್ತು ಆಗಸ್ಟ್ ಸಂಚಿಕೆಗಳಲ್ಲಿ ಪ್ರಕಟವಾಗಿರುವ "ಕೊಂಕಣಿಗಳು ಮತ್ತು ಸಂಘನಿಷ್ಠೆ" ಲೇಖನಕ್ಕಾಗಿ ನಿಮಗೂ, ಲೇಖಕ ಗುರು ಬಾಳಿಗರಿಗೂ ಅಭಿನಂದನೆಗಳು. ಆ ಲೇಖನಕ್ಕೆ ಪೂರಕವಾಗಿ ಕೆಲವು ಸಂಗತಿಗಳನ್ನು ಓದುಗರ ಗಮನಕ್ಕೆ ತರ ಬಯಸುತ್ತೇನೆ.

1) ಕೊಂಕಣಿ ಎಂಬ ಹೆಸರು ಭಾಷಿಕ ಸಮುದಾಯವನ್ನು ಸೂಚಿಸಿದರೂ ತನ್ನ ಲೇಖನವನ್ನು ಬಾಳಿಗರು ಗೌಡ ಸಾರಸ್ವತ ಸಮುದಾಯಕ್ಕೆ ಮಾತ್ರ ಸೀಮಿತಗೊಳಿಸಿದ್ದಾರೆ; ಹಾಗೆಂದು ಲೇಖನದಲ್ಲಿ ಕಾಣಿಸಿದ್ದಾರೆ ಕೂಡ. ಆದರೆ ಕೊಂಕಣಿ ಎಂಬ ಭಾಷಿಕ ಸಮುದಾಯ ಕರ್ನಾಟಕದಲ್ಲಿ ಗೌಡ ಸಾರಸ್ವತ, ಸಾರಸ್ವತ, ಚಿತ್ಪಾವನ, ರಾಜಾಪುರ, ಕುಡಾಲ್ ದೇಶಸ್ಥ ಮುಂತಾದ ಕೊಂಕಣಿ ಮಾತನಾಡುವ ಬ್ರಾಹ್ಮಣ ಪಂಗಡಗಳು, ಕುಂದಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಖಾರ್ವಿ ಎಂಬ ಹಿಂದುಳಿದ ಜಾತಿಯ ಬೆಸ್ತಸಮುದಾಯಗಳನ್ನು ಒಳಗೊಳ್ಳುತ್ತದೆ.

ದ.ಕ.ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕ್ಯಾಥೋಲಿಕ್ ಕ್ರೈಸ್ತ ಮತ್ತು ಭಟ್ಕಳ ಮೂಲದ ನವಾಯತ್ ಮುಸ್ಲಿಮರೂ ಕೂಡ ಕೊಂಕಣಿಗಳೇ. ಇನ್ನು ಗೌಡ ಸಾರಸ್ವತರು ಮತ್ತು ಸಾರಸ್ವತರ ಮಾತಿಗೆ ಬಂದರೆ, ನಾನಾಧ್ವನಿ ಪ್ರಭೇದಗಳುಳ್ಳ ಕೊಂಕಣಿ ಮಾತನಾಡುವ ಈ ಜಾತಿಯವರು ಮಹಾರಾಷ್ಟ್ರದಿಂದ ಹಿಡಿದು ಕೇರಳದ ಈ ತುದಿಯವರೆಗೆ ಅರಬ್ಬೀ ಸಮುದ್ರದ ಕರಾವಳಿಯ ಉದ್ದಕ್ಕೂ ನೆಲೆಸಿದ್ದಾರೆ. ಭಾಷೆ, ಜಾತಿ, ಧರ್ಮ ಅಥವಾ ಪ್ರದೇಶದ ಗುರುತು ಚಹರೆಗಳ ರಾಜಕೀಯ ಮಾಡುವ ಚಳುವಳಿಗಳು ಈ ಗುರುತುಗಳು ಸ್ಥಿರವೂ, ಅಖಂಡವೂ, ಏಕೈಕವೂ ಆಗಿವೆ ಎಂದು ಜನರನ್ನು ನಂಬಿಸುತ್ತವೆ. ಆದರೆ ವಾಸ್ತವದಲ್ಲಿ ಜನಸಮುದಾಯಗಳ ಗುರುತು ಚಹರೆಗಳು ಬಹುರೂಪಿಯೂ, ಬೆರಕೆಯೂ, ಸದಾಬದಲಾಗುತ್ತಿರುವಂತಹದ್ದೂ ಆಗಿದ್ದು, ಗುರುತು ಚಹರೆಗಳ ರಾಜಕೀಯವ್ಯರ್ಥ ಹಿಂಸೆಗೆ ಮಾತ್ರ ಕಾರಣವಾಗುತ್ತದೆ.

ಕೊಂಕಣಿ ಎಂಬ ಸಣ್ಣ ಸಮುದಾಯವೊಂದನ್ನು ಹೆಸರಸಲು ಕೂಡ ಎಷ್ಟು ತೊಡಕುಗಳಿವೆ! ಮನುಷ್ಯಮಾತ್ರರನ್ನು ಮೊದಲಿಗೆ ಪ್ರಜೆ, ನಂತರ ಕೊಂಕಣಿ, ಕನ್ನಡಿಗ ಹಿಂದು ಭಾರತೀಯ ಎಂದು ಮುಂತಾಗಿ ಗುರುತಿಸುವುದರಲ್ಲಿ ಅದರ ನೂರುಪಟ್ಟು ತೊಡಕುಗಳಿವೆ. ಭಾರತ ಉಪಖಂಡದಲ್ಲಿ ಅಂದರೆ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ನೇಪಾಳ ಮತ್ತು ಶ್ರೀಲಂಕಗಳಲ್ಲಿ ಈ ಬಗೆಯ ಗುರುತು ಚಹರೆಗಳ ತೊಡಕಿನಿಂದಾಗಿ ಸಂಭವಿಸಿದ ಮನುಷ್ಯರ ಕಗ್ಗೊಲೆಗಳನ್ನು ಕೋಟಿಗಳಲ್ಲೇ ಎಣಿಸಬೇಕಾಗಿದೆ.

2) ಗುರು ಬಾಳಿಗ ತಮ್ಮ ಲೇಖನದಲ್ಲಿ ಕರಾವಳಿ ಗೌಡ ಸಾರಸ್ವತ ಸಮುದಾಯದ ವ್ಯಾಪಾರೀ ಹಿನ್ನೆಲೆ ಮತ್ತು ಆಧುನಿಕ ರಾಜಕೀಯ ಒಲವುಗಳನ್ನು ಪ್ರಸ್ತಾಪಿಸಿದ್ದಾರೆ; ಅವರು ಗೌಡ ಸಾರಸ್ವತ ಹಾಗೂ ಸಾರಸ್ವತ ಸಮುದಾಯದ ಬುದ್ಧಿಜೀವಿಗಳ ಉದಾಹರಣೆಯನ್ನು ಕೊಡಬಹುದಾಗಿತ್ತು. ಈ ಸಮುದಾಯದಲ್ಲಿ ಸಂಘಪರಿವಾರಕ್ಕೆ ನಿಷ್ಠೆ ಇರುವ ಅಥವಾ ಆ ಸಿದ್ಧಾಂತದ ವಕ್ತಾರನಾಗಿರುವ ಒಬ್ಬ ಬುದ್ಧಿಜೀವಿಯೂ ಇಲ್ಲ. ಈ ಮಾತಿಗೆ ಪ್ರಾಯಶಃ ಇತಿಹಾಸಜ್ಞ ಡಾ॥ ಸೂರ್ಯನಾಥ ಕಾಮತ್ ಏಕ ಮಾತ್ರ ಅಪವಾದವಾಗಿರಬಹುದು.

ಗುರು ಬಾಳಿಗ ತಮ್ಮ ಲೇಖನದಲ್ಲಿ ಕರಾವಳಿ ಗೌಡ ಸಾರಸ್ವತ ಸಮುದಾಯದ ವ್ಯಾಪಾರೀ ಹಿನ್ನೆಲೆ ಮತ್ತು ಆಧುನಿಕ ರಾಜಕೀಯ ಒಲವುಗಳನ್ನು ಪ್ರಸ್ತಾಪಿಸಿದ್ದಾರೆ; ಅವರು ಗೌಡ ಸಾರಸ್ವತ ಹಾಗೂ ಸಾರಸ್ವತ ಸಮುದಾಯದ ಬುದ್ಧಿಜೀವಿಗಳ ಉದಾಹರಣೆಯನ್ನು ಕೊಡಬಹುದಾಗಿತ್ತು. ಈ ಸಮುದಾಯದಲ್ಲಿ ಸಂಘಪರಿವಾರಕ್ಕೆ ನಿಷ್ಠೆ ಇರುವ ಅಥವಾ ಆ ಸಿದ್ಧಾಂತದ ವಕ್ತಾರನಾಗಿರುವ ಒಬ್ಬ ಬುದ್ಧಿಜೀವಿಯೂ ಇಲ್ಲ. ಈ ಮಾತಿಗೆ ಪ್ರಾಯಶಃ ಇತಿಹಾಸಜ್ಞ ಡಾ॥ ಸೂರ್ಯನಾಥ ಕಾಮತ್ ಏಕ ಮಾತ್ರ ಅಪವಾದವಾಗಿರಬಹುದು. 20ನೇಯ ಶತಮಾನದ ಆರಂಭದಿಂದಲೂ ಈ ಸಮುದಾಯದಿಂದ ಬಂದ ಪ್ರಮುಖ ಬುದ್ಧಿಜೀವಿಗಳೆಲ್ಲರೂ, ಆಧುನಿಕ ಹಾಗೂ ಧರ್ಮ ನಿರಪೇಕ್ಷ ಮನೋಭಾವದವರು.

20ನೇಯ ಶತಮಾನದ ಆರಂಭದಿಂದಲೂ ಈ ಸಮುದಾಯದಿಂದ ಬಂದ ಪ್ರಮುಖ ಬುದ್ಧಿಜೀವಿಗಳೆಲ್ಲರೂ, ಆಧುನಿಕ ಹಾಗೂ ಧರ್ಮ ನಿರಪೇಕ್ಷ ಮನೋಭಾವದವರು. ಕನ್ನಡದ ಪ್ರಪಥಮ ಕಾದಂಬರಿಗಳಲ್ಲಿ ಒಂದಾಗಿರುವ, "ಇಂದಿರಾ ಬಾಯಿ"ಯ ಲೇಖಕ ಗುಲ್ವಾಡಿ ವೆಂಕಟರಾಯರು ಸಾರಸ್ವತ ಸಮುದಾಯದವರು. ತನ್ನ ಕಾದಂಬರಿಯಲ್ಲಿ ಅವರು ಹಿಂದು ಧರ್ಮ ಮತ್ತು ಪರಂಪರಾಗತ ಸಮಾಜಗಳ ಕುರಿತು ಮಾಡಿದ ಕಟುಟೀಕೆ ಇವತ್ತಿನ ಹಿಂದುತ್ವ ವಾದಿಗಳನ್ನು ನಾಚಿಸಬಹುದು.

ಕಳೆದ ಶತಮಾನದ ಮೊದಲ ದಶಕಗಳಲ್ಲಿಯೇ, ಹಿಂದು ಆಚರಣೆಗಳ ಕಟು ವಿಮರ್ಶಕಿಯಾಗಿ ನಂತರ ಕ್ರೈಸ್ತ ಮತಕ್ಕೆ ಸ್ವಂತ ಇಚ್ಛೆಯಿಂದ ಮತಾಂತರಗೊಂಡ ಧೀಮಂತ ಮಹಿಳೆ ಪಂಡಿತಾರಮಾಬಾಯಿ, ಚಿತ್ಪಾವನ ಬ್ರಾಹ್ಮಣ ಸಮುದಾಯದವರು. ಮಂಜೇಶ್ವರ ಗೋವಿಂದ ಪೈಗಳ ಸಂಶೋಧನೆ ಕನ್ನಡದ ಪ್ರಾಚೀನ ಸಂಸ್ಕೃತಿಯ ವಿಶ್ವಾತ್ಮಕ ನೆಲೆಗಳನ್ನು ಅರಸುವಂತಹದ್ದಾಗಿತ್ತು. ಒಬ್ಬ ಸನಾತನಿ ಹಿಂದು ಹಾಗೂ ಗೌಡ ಸಾರಸ್ವತ ನಾನಿದ್ದುಕೊಂಡೇ ಅವರು "ಗೊಲ್ಗೊಥಾ ಬಂಡಕಾವ್ಯ"ವನ್ನು ಬರೆದರು.

ಹಿಂದಿ ಚಲನಚಿತ್ರರಂಗದ ಮಹಾನ್ ನಿರ್ದೇಶಕ/ನಟ ಗುರುದತ್, ಮಂಗಳೂರು ಮೂಲದ ಸಾರಸ್ವತ ಕುಟುಂಬವೊಂದರಲ್ಲಿ ಹುಟ್ಟಿದವರು. ಗುರುದತ್ ಓರ್ವ ಶ್ರೇಷ್ಠ ಕಲಾವಿದನಾಗಿದ್ದುದರ ಜೊತೆಗೆ ಸಮಾಜವಾದಿಯೂ ಆಗಿದ್ದರು. ಗುರುದತ್‌ರ ಬಾಲ್ಯಯೌವ್ವನಗಳನ್ನು ನಿರೂಪಿಸುವ ಅವರ ತಾಯಿ ವಾಸಂತಿ ಪಡುಕೋಣೆಯವರ ಅಪೂರ್ವ ಕೃತಿ "ನನ್ನ ಮಗ ಗುರುದತ್ತ" (ಮನೋಹರ ಗ್ರಂಥ ಮಾಲಾ) ಕಳೆದ ಶತಮಾನದ ಸಾರಸ್ವತ ಸಮುದಾಯದ ಒಂದು ಹೃದಯಸ್ಪರ್ಶಿ ಚಿತ್ರವನ್ನು ಕೊಡುತ್ತದೆ. ಅದರಲ್ಲಿ ಸಾರಸ್ವತ ಸಮುದಾಯದ ಇತರ ಪೂರ್ವಗ್ರಹಗಳು ಏನೇ ಇರಲಿ, ಸಂಘಪರಿವಾರದ ಸಿದ್ಧಾಂತಗಳಿಗಿಂತಲೂ ಜಾಗತಿಕರಿಲ್ಲ.

ಗುಲ್ವಾಡಿ ವೆಂಕಟರಾಯರು, ಮಂ.ಗೋವಿಂದ ಪೈಗಳು, ಎಂ.ಜೆ.ಮಂಗೇಶರಾಯರು, ಬೆನೆಗಲ್ ಕುಟುಂಬ, ಚಿತ್ತಾಲ ಸೋದರರು, ಗಿರೀಶ್ ಕಾರ್ನಡ್, ಗೌರೀಶ್ ಕಾಯ್ಕಿಣಿ ಮತ್ತು ಅವರ ಮಗ ಜಯಂತ, ವಿವೇಕ ಶ್ಯಾನಭಾಗ-ಕರ್ನಾಟಕದ ಈ ಗೌಡ ಸಾರಸ್ವತ, ಸಾರಸ್ವತ ಬುದ್ಧಿ ಜೀವಿಗಳನ್ನು ಅವರ ಜಾತಿ ಮುಖಾಂತರ ಗುರುತು ಹಚ್ಚುವುದು ಕೂಡ, ಅವರ ಸಾಧನೆಗೆ ಮಾಡಿದ ಅಪರಾಧವಾಗುತ್ತದೆ. ಇದೇ ಮಾತನ್ನು ನಾವು ಕರಾವಳಿಯ ಕೆನರಾ ಕಾರ್ಪೋರೇಷನ್ ಮತ್ತು ಸಿಂಡಿಕೇಟ್ ಬ್ಯಾಂಕ್‌ಗಳನ್ನು ಸ್ಥಾಪಿಸಿದ ಗೌಡ ಸಾರಸ್ವತ ಕುಟುಂಬಗಳಿಗೂ ಹೇಳಬಹುದಾಗಿದೆ.

3) ಗುರು ಬಾಳಿಗ ತಮ್ಮ ಅಭಿಪ್ರಾಯಗಳನ್ನು ಓದುಗರ ಮುಂದೆ ಸಾದರಪಡಿಸಿದ ಶೈಲಿ, ನನ್ನನ್ನು ಚಕಿತಗೊಳಿಸಿತು. ಕನ್ನಡದಲ್ಲಿ ಕೋಮುವಾದದಂತಹ ವಿಷಯಗಳ ಬಗ್ಗೆ, "ನನ್ನ ಅನಿಸಿಕೆ ನನ್ನ ಭಾವನೆ, ನಾನು ನೋಡಿದ ಪ್ರಕಾರ ಅಥವಾ ಎಲ್ಲೋ ಓದಿದ ನೆನಪು..."ಈ ಬಗೆಯ ವ್ಯಕ್ತಿಗತ ಸಮಜಾಯಿಗಳನ್ನೇ ವಸ್ತುನಿಷ್ಠ ಸಾಕ್ಷಾಧಾರ ಎಂಬಂತೆ ಬರೆಯಲಾಗುತ್ತದೆ. ಇಂತಹ ಬರವಣಿಗೆಯಲ್ಲಿ ಜನಜನಿತ ಪೂರ್ವಗ್ರಹಗಳು ಖಚಿತ ಮಾಹಿತಿಯ ವೇಷ ತೊಟ್ಟು ನಮಗೆ ಎದುರಾಗುತ್ತವೆ.

ಕನ್ನಡದಲ್ಲಿ ಈಗ ಇಂತಹ ಹಲವು ಪೂರ್ವ ಗ್ರಹಗಳು ಚಲಾವಣೆಯಲ್ಲಿವೆ. ಉದಾಹರಣೆ ಯಾವ ಸಾಕ್ಷಾಧಾರವನ್ನೂ ಕೊಡದೆ ಕರ್ನಾಟಕದಲ್ಲಿ ಹಿಂದೂ ಮತೀಯವಾದದಷ್ಟೇ ಅಪಾಯಕಾರಿಯಾದ ಮುಸ್ಲಿಮ್ ಮತೀಯವಾದವಿದೆ ಎಂದು ಅನೇಕ ಬುದ್ಧಿಜೀವಿಗಳು-ಕೆಲವು "ಎಡಪಂಥೀಯರು" ಸಹ ಈಗ ಪ್ರತಿವಾದಿಸುತ್ತಿದ್ದಾರೆ. ಕರ್ನಾಟಕದ ಮುಸ್ಲಿಮರು ಮತ್ತು ಕ್ರೈಸ್ತರ ವಿರುದ್ಧ ಹಿಂದು ಮತೀಯ ವಾದಿಗಳು ನಡೆಸುತ್ತಿರುವ ಅಪಪ್ರಚಾರ ಮತ್ತು

ಹಿಂಸಾಚಾರ ಎರಡಕ್ಕೂ ಸಾಕೋ ಸಾಕು ಎನ್ನುವಷ್ಟು ಉದಾಹರಣೆಗಳಿವೆ. ಆದರೆ ಹಿಂದುಗಳ ವಿರುದ್ಧ ದ್ವೇಷ ಅಪಪ್ರಚಾರ ಮತ್ತು ಹಿಂಸೆಗಳನ್ನು ಯಾವ ಇಸ್ಲಾಮಿಕ್ ಅಥವಾ ಕ್ರೈಸ್ತ ಸಂಘಟನೆ ಕರ್ನಾಟಕದಲ್ಲಿ ಯಾವಾಗ, ಎಲ್ಲಿ ನಡೆಸಿದೆ? ಸಂಘಪರಿವಾರ ತನ್ನ ದ್ವೇಷಪೂರಿತ ಅಪಪ್ರಚಾರಕ್ಕೆ ಇಡೀ ಮುಸ್ಲಿಮ್ ಮತ್ತು ಇಡೀ ಕ್ರೈಸ್ತ ಸಮುದಾಯಗಳನ್ನು ಟಾರ್ಗೆಟ್ ಮಾಡಿಕೊಂಡಿದೆ.

ಯಾವ ಇಸ್ಲಾಮಿಕ್ ಅಥವಾ ಕ್ರೈಸ್ತ ಸಂಘಟನೆಯೂ ಇಡೀ ಹಿಂದೂ ಸಮುದಾಯವನ್ನು ಆ ರೀತಿ ಅಪರಾಧಿ ಸ್ಥಾನದಲ್ಲಿ ಎಂದೂ ನಿಲ್ಲಿಸಿಲ್ಲ. ಹಿಂದೂ ಮತೀಯ ಊಟದ ಜೊತೆಗೆ ಮುಸ್ಲಿಮ್ ಮತೀಯವಾದವನ್ನೂ ಸೇರಿಸಿಕೊಂಡು ಮಾತನಾಡದಿದ್ದರೆ ಜನ ತಮ್ಮನ್ನು ನಂಬುವುದಿಲ್ಲ ಎಂಬ ಒಂದೇ ಒಂದು ಕಾರಣಕ್ಕೆ ನಮ್ಮ ತಥಾಗಥಿತ ಎಡಪಂಥೀಯರು ಉಭಯ ಮತೀಯ ವಾದಗಳ ತಮ್ಮ ತಕ್ಕಡಿಯನ್ನು ಸರಿದೂಗಿಸುವ ಪ್ರಯತ್ನ ನಡೆಸಿದ್ದಾರೆ.

ಈ ಬಗೆಯ ಹುಸಿನ್ಯಾಯ ಪರತೆ ಕನ್ನಡದ ಬೌದ್ಧಿಕತೆಗೇ ಅಂಟಿಕೊಂಡ ರೋಗವಾಗಿದೆ. ಗುರು ಬಾಳಿಗರ ಲೇಖನ ಈ ದೃಷ್ಟಿಯಿಂದ, ಕನ್ನಡದ ಜಾಯಮಾನಕ್ಕೆ ಹೊರತ್ತಾಗಿ ನಿಲ್ಲುತ್ತದೆ. ಇಲ್ಲಿ ಕುರಿ ತೋಟದ ಪಂಡಿತರು ಇರುವ ಹಾಗೆ, ತಮ್ಮ ಅನಿಸಿಕೆಗಳನ್ನೇ ಸತ್ಯಸ್ಯಸತ್ಯ ಎಂದು ಘೋಷಿಸಿಕೊಳ್ಳುವ ಮಾರ್ಕ್ಸ್‌ವಾದಿಗಳು, ತಮ್ಮ ಸೂಕ್ಷ್ಮಜ್ಞತೆ ಮತ್ತು ನ್ಯಾಯ ಏಕತೆಗಳ ಬಗ್ಗೆ ಇತರರಿಂಗಿಂತ ಅವರಿಗೇ ಹೆಚ್ಚು ವಿಶ್ವಾಸವಿರುವ ಸಮಾಜವಾದಿಗಳು ಹಾಗೂ ಗಾಂಧಿವಾದಿಗಳು ಇದ್ದಾರೆ. ತಮ್ಮ ವಾದಗಳಿಗೆ ಸೂಕ್ತ ಸಮರ್ಥನೆಗಳನ್ನು ಸಾಕ್ಷ್ಯಾಧಾರಗಳನ್ನು ಕೊಡುವ ಜವಾಬ್ದಾರಿಯಿಂದ ಇವರಿಗೆಲ್ಲ ಸಂಪೂರ್ಣ ವಿನಾಯಿತಿ! ಕೋಮುವಾದ ಕರ್ನಾಟಕದ ಕಳೆದ ಎರಡು ದಶಕಗಳ ಅತಿ ದೊಡ್ಡ ರಾಜಕೀಯ, ಸಾಂಸ್ಕೃತಿಕ ವಿದ್ಯಮಾನ. ಆದರೆ ಆ ಕುರಿತು ಕನ್ನಡದಲ್ಲಿ ಒಂದು ಒಳ್ಳೆಯ ಕೃತಿ ಹೋಗಲಿ, ಲೇಖನ ಕೂಡ ಇಲ್ಲ.

ಅದ್ವಾನಿಯವರ ರಥಯಾತ್ರೆಯ ನಂತರ ಭಾರತದ ಇತರ ಎಡೆಗಳಂತೆ ಕರ್ನಾಟಕದಲ್ಲೂ ಅನೇಕ ಊರುಗಳಲ್ಲಿ ಮುಸ್ಲಿಮರ ಮೇಲೆ ಭಾರೀ ಹಿಂಸಾಚಾರ ನಡೆಯಿತು. ಉದಾ: ದಾವಣಗೆರೆ, ಮಲೆಬೆನ್ನೂರು, ಸುರತ್ಕಲ್. ಈ ಹಿಂಸಾಚಾರದ ಅಧ್ಯಯನವನ್ನೂ ಯಾರೂ ಮಾಡಿಲ್ಲ. ಸಮಾಜವಾದಿಗಳ ನೆಲೆಯಾಗಿದ್ದ ಶಿವಮೊಗ್ಗ, ಕಮ್ಯೂನಿಸ್ಟ್ ಚಳುವಳಿಯ ಕೇಂದ್ರವಾಗಿದ್ದ ದಾವಣಗೆರೆ, ಉತ್ತರ ಕರ್ನಾಟಕದಲ್ಲಿ ಆಧುನಿಕತೆಯ ಹೆಬ್ಬಾಗಿಲಾಗಿದ್ದ ಹುಬ್ಬಳ್ಳಿ ನಗರಗಳು ಹಿಂದುತ್ವದ ಕಡೆ ಸರಿದದ್ದರ ಹಿನ್ನೆಲೆ ಏನು? ಯಾರಿಗೂ ಗೊತ್ತಿಲ್ಲ. ಹಾಗೆಂದು ಆಧುನಿಕ, ಆಧುನಿಕೋತ್ತರ ಕನ್ನಡ ಸಂಸ್ಕೃತಿಯ ಬಗ್ಗೆ ಮಾತನಾಡುವವರೇನೂ ಕಡಿಮೆ ಸಂಖ್ಯೆಯಲ್ಲಿ ಇಲ್ಲ.

ಸಮಕಾಲೀನ ರಾಜಕೀಯ ಬೆಳವಣಿಗೆಗಳ ಬಗೆಗಿನ ನಮ್ಮ ಅಭಿಪ್ರಾಯಗಳಿಗೆ ಎಲ್ಲಿಯವರೆಗೆ ವಿವರಗಳ ಶರೀರ ಮತ್ತು ಸೂಕ್ತ ಸಾಕ್ಷ್ಯಾಧಾರಗಳ ನೆಲೆಗಟ್ಟು ಇರುವುದಿಲ್ಲವೋ ಅಲ್ಲಿಯವರೆಗೆ ಅವು ಗಾಂಧಿವಾದಿ, ಮಾರ್ಕ್ಸ್‌ವಾದಿ, ಲೋಹಿಯಾವಾದಿ ಅವು ಏನೇ ಆಗಿರಲಿ–ನಮ್ಮ ಶರೀರದ ಇನ್ನೊಂದು ತುದಿಯ ಬದಲು ಬಾಯಿಯ ಮುಖಾಂತರ ಹೊರಬರುವ ಗ್ಯಾಸ್. ಗುರು ಬಾಳಿಗರ ಲೇಖನ ಈ ದುರ್ನಾತದ ನಡುವೆ ಅಕಾಸ್ಮಾತ್ತಾಗಿ ಬೀಸಿಬಂದ ಸ್ವಚ್ಛ ಗಾಳಿಯ ಹಾಗೆ ಅನ್ನಿಸಿತು. □

ಪ್ರಜಾತಂತ್ರದ ಸಿಪ್ಪೆ ಒಣಕಲಾಗಿದೆ- ಹಣ್ಣು ಕೊಳೆಯುತ್ತಿದೆ

(7ನೇ ಪುಟದಿಂದ)

ಉದಾರವಾದಿ ಪ್ರಜಾಪ್ರಭುತ್ವವನ್ನು ಅಂಬೇಡ್ಕರ್‌ರವರೇ ಪ್ರತಿಪಾದಿಸಿದ್ದು ನಿಜ. ಆದರೆ ಅದರ ಅಪಾಯಗಳ ಬಗ್ಗೆ ಅವರಿಗಿದ್ದಷ್ಟು ಸ್ಪಷ್ಟವಾದ ಅರಿವು ಈಗಿನ ಬುದ್ಧಿಜೀವಿಗಳಿಗೂ ಇಲ್ಲ. ಉದಾರವಾದಿಯ ರೀತಿ ಅವರು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸಮಾನ ಹರಿಕಾರರಾಗಿ ಕಂಡರೂ "ಸಮಾನತೆಯ ತಳಹದಿಯಿಲ್ಲದ ಸ್ವಾತಂತ್ರ್ಯ ಉಳ್ಳವರಿಗೆ ಮಾತ್ರ ಅನುಕೂಲ ಮಾಡಿಕೊಡುತ್ತದೆ" ಎಂದು ಸ್ಪಷ್ಟವಾಗಿ ಘೋಷಿಸಿದ್ದರು. ಅದೇ ರೀತಿ ಅವರೇ ನೀಡಿದ ಈ ಉದಾರವಾದಿ ಸಂವಿಧಾನ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯೆಡೆಗೆ ಸಾಗುವಂತಾಗದಿದ್ದರೆ "ಜನರೇ ಈ ಸಂವಿಧಾನಕ್ಕೆ ಬೆಂಕಿಹಚ್ಚುತ್ತಾರೆ" ಎಂದೂ ಭವಿಷ್ಯ ನುಡಿದಿದ್ದರು. ಅಂದರೆ ಸಾರಾಂಶದಲ್ಲಿ ಅವರ ಕನಸಿನ ಪ್ರಜಾಪ್ರಭುತ್ವ ಕೇವಲ ಐರೋಪ್ಯ ಮಾದರಿ ಉದಾರವಾದಿ ನೆಲೆಯಲ್ಲಿ ಮಾತ್ರ ಇರಲಿಲ್ಲ.

ಆದ್ದರಿಂದಲೇ ನೈಜ ಪ್ರಜಾಪ್ರಭುತವಾದಿಗಳು ಕೇಳಬೇಕಾದ ಪ್ರಶ್ನೆ ಪ್ರಜಾತಂತ್ರದ ಸಿಪ್ಪೆಯ ಬಗ್ಗೆಯಲ್ಲ. ಕೊಳೆಯುತ್ತಿರುವ ಅದರ ಹೂರಣದ ಬಗ್ಗೆ. ಮಜಾವಾದಿಗಳಿಗೆ ಇದೊಂದು ಪ್ರಶ್ನೆಯಲ್ಲ. ಆದರೆ ನಾಗಭೂಷಣರಂಥ ನಿಜವಾದ ಪ್ರಜಾತಂತ್ರವಾದಿಗಳಿಗೆ ಮಾತ್ರ ಇದೊಂದು ಗಂಭೀರ ಪ್ರಶ್ನೆಯಾಗಲೇಬೇಕು. ಆದ್ದರಿಂದಲೇ ಲೇವಡಿಯ ಧಾಟಿಯಲ್ಲಿ ಅವರು ಮಾವೋ ಮತ್ತು ಪ್ರಚಂಡ ಎಂಬ ವ್ಯಕ್ತಿಗಳ ಬಗ್ಗೆ ಬರೆದಿರುವುದು ಗಂಭೀರ ಚರ್ಚೆಗೂ ಅನರ್ಹ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ಮನೆ ಮಠ ತೊರೆದು ಬದಲಾವಣೆಗೆ ಹೋರಾಟ ಮಾಡಿದ ಸಮಾಜವಾದಿಗಳು ಅಧಿಕಾರ ಸಿಕ್ಕ ನಂತರ ಮಜಾವಾದಿಗಳಾಗಿಬಿಟ್ಟಿದ್ದು, ಪ್ರಾಣದ ಹಂಗು ತೊರೆದು ಕ್ರಾಂತಿಯನ್ನು ಮಾಡಿದ ಕ್ರಾಂತಿಕಾರಿ ಕಮ್ಯುನಿಷ್ಟರು ಅಧಿಕಾರಕ್ಕೇರಿದ ನಂತರ ಬೂರ್ಜ್ವಾಗಳೇ ಆಗಿಬಿಡುವುದು ಇವೆಲ್ಲಾ ಅತ್ಯಂತ ಗಂಭೀರವಾದ ಚಾರಿತ್ರಿಕ ಸವಾಲುಗಳು.

ಹೀಗಾಗಿ ಮಾವೋ ಅಥವಾ ಪ್ರಚಂಡ ಎಂಬ ವ್ಯಕ್ತಿಗಳು ಮಜಾವಾದಿಗಳಾಗಿದ್ದರೋ ಇಲ್ಲವೋ ಎಂಬ ವಾದ ನನ್ನ ಮಟ್ಟಿಗೆ ತೌಡು ಕುಟ್ಟುವಷ್ಟೇ ನಿರರ್ಥಕ. ಆದರೆ ಇವೆಲ್ಲದರಿಂದ ಪಾಠ ಕಲಿತು ಇತಿಹಾಸದಲ್ಲಿ ಪ್ರಭುತ್ವ, ಅಧಿಕಾರಗಳಿಗೆ ಸೋಲುತ್ತಿರುವ ಸಮಾಜವಾದೀ ಆಶಯವನ್ನು ಹೇಗೆ ಶಾಶ್ವತ ಗೆಲುವಿನೆಡೆಗೆ ಕೊಂಡೊಯ್ಯಬಹುದೆಂಬುದೇ ನಿಜವಾದ ಸಮಾಜವಾದಿಗಳೆಲ್ಲರ ಮುಂದಿನ ಪ್ರಶ್ನೆ.ಇದು ಒಂದು ಐತಿಹಾಸಿಕ ವಿದ್ಯಮಾನದ ಪ್ರಶ್ನೆ ಮತ್ತು ಇಡೀ ಜಗತ್ತಿನ ಎಲ್ಲಾ ಬಗೆಯ ಸಮಾಜವಾದಿಗಳು ಎದುರಿಸುತ್ತಿರುವ ಪ್ರಶ್ನೆ. ಸಮಾಜವಾದದ ಭವಿಷ್ಯದ ಪ್ರಶ್ನೆ. ಅದನ್ನು ಲೇವಡಿಯ ಮನಸ್ಥಿತಿಯಲ್ಲಿ ಗ್ರಹಿಸಲೂ ಸಾಧ್ಯವಿಲ್ಲ. ಚರ್ಚಿಸಲೂ ಸಾಧ್ಯವಿಲ್ಲ.

ಇದು ವ್ಯಂಗ್ಯವನ್ನೇ ಕ್ರಾಂತಿ ಯೆಂದು ಭಾವಿಸುವ ಕರ್ನಾಟಕದ ಒಂದು ಬ್ರಾಂಡಿನ ಸಮಾಜವಾದಿಗಳ ಅತ್ಯಂತ ದೊಡ್ಡ ಮಿತಿಯೂ ಕೂಡಾ ಆಗಿದೆ. ಆದ್ದರಿಂದಲೇ ಕನ್ನಡದ ವಿದ್ವತ್ ಲೋಕದ ವಿಚಾರ ಮಂಥನದಲ್ಲಿ ಅಮೃತಕ್ಕಿಂತ ಹಾಲಾಹಲದ ಉತ್ಪಾದನೆಯೇ ಹೆಚ್ಚಾಗಿದೆ. □

ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಸಣ್ಣವರ ಕೈಯಲ್ಲಿ ದೊಡ್ಡವರ ಪ್ರತಿಮೆಗಳು!

ಶಿವಸುಂದರ್

ಕಟ್ಟಲೂ ಬಿಡಲು ಶಿವ ಬಟ್ಟಲವ ಕದ್ದನೇ
ಕಟ್ಟಲೂ ಬೇಡ ಬಿಡಲೂ ಬೇಡ
ಕಣ್ಣು ಮನ ನಟ್ಟರೆ ಸಾಕು ಸರ್ವಜ್ಞ

ಸರ್ವಜ್ಞನ ಈ ವಚನದ ತಾತ್ಪರ್ಯ ಯಡಿಯೂರಪ್ಪನಿಗೂ ಗೊತ್ತಿಲ್ಲ. ಕನ್ನಡ ಸಂಘದ ನಾರಾಯಣ ಗೌಡರಿಗಂತೂ ಮೊಟ್ಟಮೊದಲೇ ಗೊತ್ತಿಲ್ಲ. ಹಾಲಿ ಕರ್ನಾಟಕದಲ್ಲಿ ಹೊಗೆಯಿಲ್ಲದೆ ಉರಿಯುತ್ತಿರುವ ತಿರುವಳ್ಳುವರ್ ಮತ್ತು ಸರ್ವಜ್ಞ ಪ್ರತಿಮೆ ಅನಾವರಣ ವಿವಾದದಲ್ಲಿ ಅತಿದೊಡ್ಡ ಐತಿಹಾಸಿಕ ವ್ಯಂಗ್ಯವೊಂದಿದೆ. ಅಪ್ರತಿಮ ಮಾನವತಾವಾದಿ ತಿರುವಳ್ಳುವರ್ ಪ್ರತಿಮೆಯ ಅನಾವರಣಕ್ಕೆ ಮುಂದಾಗಿರುವ ಯಡಿಯೂರಪ್ಪನವರ ಬಿಜೆಪಿ ಸರ್ಕಾರ ಕನ್ನಡ ನಾಡು ಕಂಡ ಅತ್ಯಂತ ಕೋಮುವಾದಿ ಸರ್ಕಾರ. ಮತ್ತಿದು ಬರೀ ಕೋಮುವಾದಿ ಸರ್ಕಾರವೂ ಅಲ್ಲ. ನಾಡಿನ ಸಂಪನ್ಮೂಲವನ್ನೆಲಾ ಲೂಟಿ ಹೊಡೆದು ತಮ್ಮ ತಿಜೋರಿ ತುಂಬಿಕೊಂಡು ಜನತೆಯನ್ನು ಬೀದಿಪಾಲು ಮಾಡಿದ ಸರ್ಕಾರ. ಜನತೆಯನ್ನು ಈ ರೀತಿ ಬೇಡುವ ಭಿಕಾರಿಗಳನ್ನಾಗಿಸುವ ಆಳುವ ದೊರೆಗಳನ್ನಿರಲಿ ಸೃಷ್ಟಿಕರ್ತನನ್ನೇ ಧಿಕ್ಕರಿಸಿದ ಮಹಾನ್ ಕವಿ ತಿರುವಳ್ಳುವರ್. ಆದ್ದರಿಂದಲೇ ಜಗತ್ತಿನ ಬಡತನವನ್ನು ಕಂಡು ತಿರುವಳ್ಳುವರ್ ದೇವನಿಗೇ ಹೀಗೆ ಶಾಪ ಹಾಕುತ್ತಾರೆ.

"ಬೇಡುತ್ತಲೇ ಬದುಕಲೆಂದು ಮನುಜರ ಸೃಷ್ಟಿಸಿದರೆ
ಆ ಜಗದೊಡೆಯ ಬೇಡುತ್ತಾ ಅಲೆದಲೆದು ಹಾಳಾಗಲಿ"

ಇಂಥ ಮಹಾಮಹಿಮನ ಪ್ರತಿಮೆಯನ್ನು ಜನವಿರೋಧಿ ಯಡಿಯೂರಪ್ಪ ಅನಾವರಣ ಮಾಡುತ್ತಿರುವುದೇ ಒಂದು ದೊಡ್ಡ ವ್ಯಂಗ್ಯವಾಗಿದ್ದರೆ 16ನೇ ಶತಮಾನದ ಶೂದ್ರ ತಪಸ್ವಿಯಂಥ ರೈತ ಕವಿ ಸರ್ವಜ್ಞನನ ಗುತ್ತಿಗೆಯನ್ನು ನಾರಾಯಣಗೌಡರಂಥ ಭ್ರಷ್ಟಾತಿಭ್ರಷ್ಟರೂ, ಚಿದಾನಂದಮೂರ್ತಿಗಳಂತ ಲಿಂಗದ ಮುಸುಕಿನ ಬ್ರಾಹ್ಮಣ ವಾದಿಗಳು ವಹಿಸಿಕೊಂಡಿರುವುದು ಮತ್ತೊಂದು ಕ್ರೂರ ವ್ಯಂಗ್ಯವಾಗಿದೆ.

"ಕನ್ನಡವೇ ಜಾತಿ, ಕನ್ನಡವೇ ಧರ್ಮ" ಎಂದು ಅರ್ಥವಿಲ್ಲದೆ ಹಾರಾಡುವ ನಾರಾಯಣಗೌಡರಿಗೆ ಸರ್ವಜ್ಞ ತನ್ನ ಜೀವಿತ ಕಾಲದಲ್ಲಿ ಕನ್ನಡ ರೈತಾಪಿಯ ಬದುಕನ್ನು ಹಿಂಡಿ ಹೀರುತ್ತಿದ್ದ ಕನ್ನಡಿಗ ಪುರೋಹಿತಶಾಹಿ ಬ್ರಾಹ್ಮಣ್ಯದ ವಿರುದ್ಧ ಹೋರಾಡುತ್ತಲೇ ಬಂದರೆಂಬುದು ಗೊತ್ತೇ? ಗೊತ್ತಿದ್ದರೂ ಅರ್ಥವಾಗುವುದೇ? ಅಂದಾಗಲೀ ಇಂದಾಗಲೀ ಕನ್ನಡಿಗರು ಒಂದೇ ಜಾತಿಯೂ ಆಗಿಲ್ಲ. ಒಂದೇ ಧರ್ಮವೂ ಆಗುಳಿದಿಲ್ಲ. ದುಡಿಯುವ ಮತ್ತು ದಮನಕ್ಕೊಳಗಾದ ಕನ್ನಡಿಗರ ಬದುಕನ್ನು ಕನ್ನಡಿಗರೇ ಆದ ಪುರೋಹಿತಶಾಹಿ ಮತ್ತು ಭೂ ಮಾಲೀಕ ವರ್ಗಗಳು ಸುಲಿಯುತ್ತಲೇ ಬಂದಿವೆ.

ದಲಿತ ಕನ್ನಡಿಗನನ್ನು ಬ್ರಾಹ್ಮಣ ಅಥವಾ ಲಿಂಗಾಯತ/ಒಕ್ಕಲಿಗ ಕನ್ನಡಿಗ ಹಾಡುಹಗಲಲ್ಲೇ ಕಂಬಾಲಪಲ್ಲಿಗಳಲ್ಲಿ, ಬೆಂಡಿಗೇರಿ-ತತ್ತೂರುಗಳಲ್ಲಿ ಕೊಂದು-ಸುಟ್ಟುಹಾಕುತ್ತಿರುವಾಗ 'ಕನ್ನಡವೇ ಜಾತಿ'ಯಾಗಲು ಸಾಧ್ಯವಿಲ್ಲ. ಅದೇ ರೀತಿ ಕನ್ನಡ ಮಾತಾಡುವ ಭಜರಂಗಿ ಚಡ್ಡಿಗಳು ದ.ಕನ್ನಡದಲ್ಲಿ ಕನ್ನಡ ಮಾತಾಡುವ ಮುಸ್ಲಿಮರ ಮೇಲೆ ದಾಳಿ ಮಾಡುತಿರುವಾಗ, ಕನ್ನಡ ನಾಡಿನಾದ್ಯಂತ ಚರ್ಚುಗಳನ್ನು ಕೆಡವಿ ಹಾಕುತ್ತಿರುವಾಗ 'ಕನ್ನಡವೇ ಧರ್ಮ'ವಾಗಲು ಸಾಧ್ಯವಿಲ್ಲ. ಬದುಕಿನ ಕಠೋರ ವಾಸ್ತವತೆಗಳು ವರ್ಗ, ಜಾತಿ, ಲಿಂಗ ಮತ್ತು ಭಾಷಾ ದಮನದ ರೂಪದಲ್ಲಿ ವ್ಯಕ್ತವಾಗುತ್ತಿರುವಾಗ ಕೇವಲ ಭಾಷೆಗೆ ಮಾತ್ರ ಎಲ್ಲವನ್ನು ಮರೆಸಿ ಒಂದುಗೂಡಿಸಲು ಸಾಧ್ಯವಿಲ್ಲ.

ಅದೇ ರೀತಿ ನಾರಾಯಣ ಗೌಡರು ಎಷ್ಟೇ ಹಾರಾಡಿದರೂ, ದಮನಿತ ಸಮುದಾಯಗಳಿಗೆ ತಮ್ಮಂತೆ ಇತರ ಭಾಷಿಕ ಸಮುದಾಯಗಳಲ್ಲಿ ತಮ್ಮ ಜನರಿಂದಲೇ ಶೋಷಣೆಗೊಳಗಾಗಿರುವ ಸಮುದಾಯಗಳನ್ನು ಸಹೋದರರಂತೆ ಭಾವಿಸದಿರಲೂ ಸಾಧ್ಯವಿಲ್ಲ. ಏಕೆಂದರೆ ಶೋಷಿತ ಸಮುದಾಯದ ನೋವು-ನರಕಗಳ ಭಾಷೆ ಒಂದೇ. ಅದು ಲಿಪಿಕ ಭಾಷೆಯಲ್ಲ. ಅನುಭಾವಿಕ ಭಾಷೆ. ಸೌಹಾರ್ದ ಮತ್ತು ವಿಮೋಚನೆಯ ಭಾಷೆ. ತಿರುವಳ್ಳುವರ್ ಮತ್ತು ಸರ್ವಜ್ಞ ದನಿಯಾದದ್ದು ಈ ಆರ್ತತೆಗಳಿಗೆ. ಸೌಹಾರ್ದ ಮತ್ತು ವಿಮೋಚನೆಯ ಕನಸುಗಳಿಗೆ.

ಅವರು ಹುಟ್ಟಿಬೆಳೆದ ಸಮುದಾಯ ಮತ್ತು ಬಳಸಿದ ಭಾಷೆ ಚಾರಿತ್ರಿಕ ಅಕಸ್ಮಿಕ. ಆದರೆ ವ್ಯಕ್ತಪಡಿಸಿದ ಆಶಯ ಸಾರ್ವಕಾಲಿಕ, ಸಾರ್ವತ್ರಿಕ. ಹೀಗಾಗಿಯೇ ಸರ್ವಜ್ಞ, ತಿರುವಳ್ಳುವರ್, ಬುದ್ಧ, ಬಸವ, ಅಂಬೇಡ್ಕರ್‌ರಂಥಾ ಮಾನವ ತಾವಾದಿಗಳನ್ನು ಭಾಷಿಕ ಪರಿಸರದಲ್ಲಿ ಕಟ್ಟಿಹಾಕಿ ತಮ್ಮ ಜಾತಿವಾದಿ, ಅವಕಾಶವಾದಿ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿರುವುದೇ ಸಮಕಾಲೀನ ಸಮಾಜ ಸಾರ್ವತ್ರಿಕ ಅಧಃಪತನವನ್ನು

ನಾರಾಯಣ ಗೌಡರು ಎಷ್ಟೇ ಹಾರಾಡಿದರೂ, ದಮನಿತ ಸಮುದಾಯಗಳಿಗೆ ತಮ್ಮಂತೆ ಇತರ ಭಾಷಿಕ ಸಮುದಾಯಗಳಲ್ಲಿ ತಮ್ಮ ಜನರಿಂದಲೇ ಶೋಷಣೆಗೊಳಗಾಗಿರುವ ಸಮುದಾಯಗಳನ್ನು ಸಹೋದರರಂತೆ ಭಾವಿಸದಿರಲೂ ಸಾಧ್ಯವಿಲ್ಲ. ಏಕೆಂದರೆ ಶೋಷಿತ ಸಮುದಾಯದ ನೋವು-ನರಕಗಳ ಭಾಷೆ ಒಂದೇ. ಅದು ಲಿಪಿಕ ಭಾಷೆಯಲ್ಲ. ಅನುಭಾವಿಕ ಭಾಷೆ. ಸೌಹಾರ್ದ ಮತ್ತು ವಿಮೋಚನೆಯ ಭಾಷೆ. ತಿರುವಳ್ಳುವರ್ ಮತ್ತು ಸರ್ವಜ್ಞ ದನಿಯಾದದ್ದು ಈ ಆರ್ತತೆಗಳಿಗೆ. ಸೌಹಾರ್ದ ಮತ್ತು ವಿಮೋಚನೆಯ ಕನಸುಗಳಿಗೆ. ಅವರು ಹುಟ್ಟಿಬೆಳೆದ ಸಮುದಾಯ ಮತ್ತು ಬಳಸಿದ ಭಾಷೆ ಚಾರಿತ್ರಿಕ ಅಕಸ್ಮಿಕ. ಆದರೆ ವ್ಯಕ್ತಪಡಿಸಿದ ಆಶಯ ಸಾರ್ವಕಾಲಿಕ, ಸಾರ್ವತ್ರಿಕ.





ಎತ್ತಿತೋರಿಸುತ್ತಿದೆ.

ಹೀಗಾಗಿಯೇ ಹದಿನೆಂಟು ವರ್ಷಗಳ ಹಿಂದೆ ತಿರುವಳ್ಳುವರ್ ಪ್ರತಿಮೆಯ ಸ್ಥಾಪನೆಯ ವಿರೋಧದ ಹಿಂದೆ ನಡೆದ ರಾಜಕೀಯ ಕೇವಲ ಭಾಷಾ ರಾಜಕೀಯ ಮಾತ್ರವಾಗಿರಲಿಲ್ಲ. ತಿರುವಳ್ಳುವರ್ ಪ್ರತಿಮೆ ಸ್ಥಾಪನೆಯನ್ನು ಆಗ ವಿರೋಧಿಸಿದವರಲ್ಲಿ ಮುಂಚೂಣಿಯಲ್ಲಿ ಇದ್ದದ್ದು ಕನ್ನಡದ ದೌರ್ಭಾಗ್ಯವಾದ ಚಿದಾನಂದ ಮೂರ್ತಿಗಳು. ಆಗ ಅವರು ಮುಂದಿಟ್ಟ ವಾದ ಕೇವಲ ಕನ್ನಡ ಭಾಷೆಯ ಹಿತಚಿಂತನೆಯಿಂದ ಮಾತ್ರ ಮೂಡಿಬಂದದ್ದೇನೂ ಆಗಿರಲಿಲ್ಲ.

ಆಗ ತಾನೆ ಸಾವಿರಾರು ತಮಿಳು ಕೂಲಿಗಳನ್ನು ಕರ್ನಾಟಕದಿಂದ ಉಟ್ಟಬಟ್ಟೆಯಲ್ಲಿ ಗಡಿಪಾರು ಮಾಡುವಲ್ಲಿ ಯಶಸ್ವಿಯಾಗಿದ್ದ ಒಂದು ಬಗೆಯ ಕನ್ನಡ ಹೋರಾಟದ ನೇತೃತ್ವ ವಹಿಸಿದ್ದ ಅವರಲ್ಲಿ ಕೇವಲ ಉಗ್ರ ಕನ್ನಡಾಭಿಮಾನ ಮಾತ್ರ ಇತ್ತೆಂದು ತಿಳಿದರೆ ತಪ್ಪಾದೀತು. ಆಗ ಅವರು ತಿರುವಳ್ಳುವರ್ ಪ್ರತಿಮೆಯ ಸ್ಥಾಪನೆಯ ವಿರೋಧಕ್ಕೆ ಸೂಚಿಸಿದ ಕಾರಣ ಕರ್ನಾಟಕದ ಕೆಜಿಎಫ್‌ನಲ್ಲಿ ಪೆರಿಯಾರ್ ಪ್ರತಿಮೆ ಇರುವುದು ಮತ್ತು ಆ ಬಗೆಯಲ್ಲಿ ಕೇವಲ 'ತಮಿಳು ನಾಯಕರ' ಪ್ರತಿಮೆಗಳು ಮಾತ್ರ ಕೆಜಿಎಫ್ ಉದ್ದಗಲಕ್ಕೂ ಸ್ಥಾಪನೆಯಾಗುತ್ತಿರುವುದು. ಅಲ್ಲದೆ ಅದೇ ಸಮಯದಲ್ಲಿ ಯಾವನೋ ಒಬ್ಬ ಮತಿಗೆಟ್ಟ ತಮಿಳು ಬರಹಗಾರ ಕೆಜಿಎಫ್ ಅನ್ನು ಕೇಂದ್ರಾಡಳಿತ ಪ್ರದೇಶ ಮಾಡಬೇಕೆಂದು ಹೇಳಿದ್ದು ಪತ್ರಿಕೆಗಳಲ್ಲಿ ಸುದ್ದಿಯಾಗಿದ್ದೂ ಸಹ ಅವರ ಆಕ್ರೋಶಕ್ಕೆ ಕಾರಣವಾಗಿತ್ತು. ಇದು ಕೇವಲ ಶುದ್ಧ ಕನ್ನಡ ಭಾಷಾ ಪ್ರೇಮದಿಂದ ಹುಟ್ಟಿಕೊಂಡ ನಿಲುವಾಗಿತ್ತೇ?

ಉದಾಹರಣೆಗೆ ಚಿದಾನಂದ ಮೂರ್ತಿಗಳು ತಮ್ಮ ಜೀವಿತದುದ್ದಕ್ಕೂ ಯಾವುದೇ ತಮಿಳರ ಹೆಸರನ್ನೂ, ಯಾವುದೇ ತಮಿಳರ ಮೂರ್ತಿಗಳ ಸ್ಥಾಪನೆಯನ್ನೂ ವಿರೋಧಿಸುತ್ತಾ ಬಂದಿದ್ದಾರೆಯೇ? ಖಂಡಿತಾ ಇಲ್ಲ. ಇಂದು ಬೆಂಗಳೂರಿನ ಮುಖ್ಯ ಬಡಾವಣೆಯೊಂದರ ಹೆಸರು "ರಾಜಾಜಿ ನಗರ". ಈ ರಾಜಾಜಿ ಯಾರು? ಇವರು ಸ್ವಾತಂತ್ರ್ಯ ಹೋರಾಟಗಾರರು ಹೌದು. ತಮಿಳರೂ ಹೌದು. ಮಾತ್ರವಲ್ಲ. ಚಿದಾನಂದ ಮೂರ್ತಿಗಳು ಪ್ರತಿನಿಧಿಸುವ ಮೇಲ್ಜಾತಿಗೆ ಸೇರಿದವರೂ ಹೌದು. ಆದರೆ ಅವರು 1960ರ ದಶಕದಲ್ಲಿ ಕನ್ನಡದ ಬಗ್ಗೆ ಕೆಲವು ತುಚ್ಛ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದಾಗ ಕೆಲವು ಶೂದ್ರ ಕನ್ನಡವಾದಿಗಳು ರಾಜಾಜಿ ಹೆಸರನ್ನು ಬದಲಾಯಿಸಬೇಕೆಂದು ಹೋರಾಟ ನಡೆಸಿದ್ದರು. ಆಗ ಚಿದಾನಂದ ಮೂರ್ತಿಗಳು ಏನು ಮಾಡುತ್ತಿದ್ದರು ಎಂದು ಕೇಳುವುದು ಅಸಂಬದ್ಧವಾದರೂ ಒಂದು ಪ್ರಶ್ನೆಯನ್ನು ಕೇಳಲೇ ಬೇಕಾಗಿದೆ.

ತಮ್ಮ ಮನೆಯಿರುವ ಆರ್‌ಪಿಸಿ ಲೇಔಟ್ ಬಡಾವಣೆಯ ಹೆಸರನ್ನು ಅವರು ಇತ್ತೀಚೆಗೆ "ಹಂಪಿ ನಗರ"ವೆಂದು ನಾಮಕರಣ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮಾತ್ರವಲ್ಲ. ಹೈದರಾಬಾದ್ ಕರ್ನಾಟಕವನ್ನು "ಕಲ್ಯಾಣ ಕರ್ನಾಟಕ" ವೆಂದು ಕರೆಯಬೇಕೆಂದೂ ಆಗ್ರಹಿಸುತ್ತಿದ್ದಾರೆ. ಆದರೆ ಈವರೆಗೂ 'ರಾಜಾಜಿ' ನಗರದ ಹೆಸರಿನ ಬದಲಾವಣೆ ಮಾಡಬೇಕೆಂದೂ ಮಾತ್ರ ಯಾವತ್ತೂ ಕೇಳಲಿಲ್ಲ. ರಾಜಾಜಿನಗರದ ಹೆಸರನ್ನು ಬದಲಾಯಿಸಬೇಕೆಂಬುದು ಈ ಅಂಕಣಕಾರನ ಆಗ್ರಹವಲ್ಲವಾದರೂ ಚಿಮೂಗಳ 'ಕನ್ನಡ ಪ್ರೇಮದ' ಜಾತಿವರ್ಗ ಸ್ವಭಾವಗಳನ್ನು ಅರ್ಥಮಾಡಿಕೊಳ್ಳಲು ಈ ಪ್ರಶ್ನೆಗಳನ್ನು ಕೇಳಬೇಕಿರುವುದು ಅತ್ಯಗತ್ಯ.

ಅಷ್ಟು ಮಾತ್ರವಲ್ಲ. ಈವರೆಗೆ ಚಿದಾನಂದ ಮೂರ್ತಿಗಳು ಎತ್ತಿಹಿಡಿಯುತ್ತಾ ಬಂದಿರುವ ಕನ್ನಡದ ಇತಿಹಾಸ ಪುರುಷರಲ್ಲಿ ದುಡಿಯುವ ವರ್ಗದ ಮತ್ತು ದಮನಿತ ಜನತೆಯ ಆಶೋತ್ತರಗಳನ್ನು ಪ್ರತಿನಿಧಿಸಿದ ಕನ್ನಡದ ಕಣ್ಮಣಿಗಳೆಷ್ಟು? ಕನ್ನಡ ಸಮಾಜದಲ್ಲಿ ಪರಂಪರಾನುಗತ ಬ್ರಾಹ್ಮಣೀಯ ಶ್ಯಾನುಭೋಗಿಕೆ ಮತ್ತು ಪಟೇಲಿಕೆಯನ್ನು ರದ್ದುಪಡಿಸಿ ದಲಿತ-ಶೂದ್ರ ಸಮುದಾಯಕ್ಕೆ ಘನತೆಯ ಬದುಕನ್ನು ಕಲ್ಪಿಸಿಕೊಟ್ಟ ಕನ್ನಡಿಗ ಟಿಪ್ಪೂವನ್ನು ಕಂಡರೆ ಅವರಿಗೇಕೆ ದ್ವೇಷ?



ದೂರದರ್ಶನದಲ್ಲಿ ಕನ್ನಡ ಸಮುದಾಯದಲ್ಲಿ ಶೇ. 0.001ರಷ್ಟು ಜನರಿಗೂ ಅರ್ಥವಾಗದ ಸಂಸ್ಕೃತ ವಾರ್ತೆ ಪ್ರಸಾರವಾಗುತ್ತಿದ್ದರೂ ಯಾವತ್ತಿಗೂ ಚಕಾರವೆತ್ತದ ಮಾನ್ಯ ಚಿ.ಮೂಗಳು ಕರ್ನಾಟಕದಲ್ಲಿ ವಾಸ ಮಾಡುವ ಶೇ.12 ರಷ್ಟು ಜನರಿಗೆ ಅರ್ಥವಾಗುವ ಉರ್ದು ವಾರ್ತೆಯನ್ನು ಪ್ರಸಾರ ಮಾಡುವ ನಿರ್ಧಾರದ ವಿರುದ್ಧ 'ಮಿಲಿ ಟೆಂಟ್' ಹೋರಾಟ ನಡೆಸಿ, ಹಲವಾರು ಮುಸ್ಲಿಮರನ್ನು ಬಲಿತೆಗೆದುಕೊಂಡದ್ದನ್ನು ಯಾವ ಬಗೆಯ ಕನ್ನಡ ಪ್ರೇಮವೆಂದು ಅರ್ಥ ಮಾಡಿಕೊಳ್ಳಬೇಕು?

ದೂರದರ್ಶನದಲ್ಲಿ ಕನ್ನಡ ಸಮುದಾಯದಲ್ಲಿ ಶೇ. 0.001ರಷ್ಟು ಜನರಿಗೂ ಅರ್ಥವಾಗದ ಸಂಸ್ಕೃತ ವಾರ್ತೆ ಪ್ರಸಾರವಾಗುತ್ತಿದ್ದರೂ ಯಾವತ್ತಿಗೂ ಚಕಾರವೆತ್ತದ ಮಾನ್ಯ ಚಿ.ಮೂಗಳು ಕರ್ನಾಟಕದಲ್ಲಿ ವಾಸ ಮಾಡುವ ಶೇ.12 ರಷ್ಟು ಜನರಿಗೆ ಅರ್ಥವಾಗುವ ಉರ್ದು ವಾರ್ತೆಯನ್ನು ಪ್ರಸಾರ ಮಾಡುವ ನಿರ್ಧಾರದ ವಿರುದ್ಧ 'ಮಿಲಿ ಟೆಂಟ್' ಹೋರಾಟ ನಡೆಸಿ, ಹಲವಾರು ಮುಸ್ಲಿಮರನ್ನು ಬಲಿತೆಗೆದುಕೊಂಡದ್ದನ್ನು ಯಾವ ಬಗೆಯ ಕನ್ನಡ ಪ್ರೇಮವೆಂದು ಅರ್ಥಮಾಡಿಕೊಳ್ಳಬೇಕು? ಕನ್ನಡದ ಕೆಲವೇ ಸಾಕಷ್ಟಿರುವಾಗ ಕನ್ನಡ ಜನತೆಯ ಹಣದಲ್ಲಿ ಸತ್ತ ಭಾಷೆ ಸಂಸ್ಕೃತಕ್ಕೆ ಒಂದು ವಿವಿಯನ್ನೇ ಮಾಡುತ್ತಿರುವ ಬಿಜೆಪಿ ಸರ್ಕಾರದ ನಿಲುವನ್ನು ಕಿಂಚಿತ್ತೂ ವಿಮರ್ಶಿಸದ ಚಿಮೂ ಕನ್ನಡದ ಸೋದರ ಭಾಷೆಯಾದ ಬ್ಯಾರಿ ಭಾಷೆಗೆ ಅಕಾಡೆಮಿ ಸ್ಥಾಪಿಸಲು ವಿರೋಧಿಸುತ್ತಿರುವುದರ ಹಿಂದೆ ಇರುವುದು ಕನ್ನಡ ಪ್ರೇಮವೋ? ಪರಮತ ದ್ವೇಷವೋ? ಕನ್ನಡಾಭಿಮಾನವೋ? ಮೇಲ್ಜಾತಿ ದುರಭಿಮಾನವೋ?

ಉತ್ತರ ಸ್ಪಷ್ಟ. ಚಿಮೂಗಳದ್ದು ಕನ್ನಡವಾದವಲ್ಲ. ಹಿಂದೂತ್ವವಾದ. ಅಂದರೆ ಬ್ರಾಹ್ಮಣವಾದ. ಪರಮತ ದ್ವೇಷ. ಹಿಂದೂತ್ವವಾದ. ಅವರು ತಿರುವಳ್ಳುವರ್ ಅನ್ನು, ಪೆರಿಯಾರ್ ಅನ್ನು ವಿರೋಧಿಸಲು ಮತ್ತು ತಮಿಳರೇ ಆದರೂ ರಾಜಾಜಿ ಮುಂತಾದವರಿಗೆ ಮೌನ ಬೆಂಬಲ ನೀಡಲು ಪ್ರಧಾನಕಾರಣ ಕನ್ನಡಾಭಿಮಾನವಲ್ಲ. ಜಾತಿ ಪದ್ಧತಿಯನ್ನು ಎತ್ತಿಹಿಡಿಯುವ ಬ್ರಾಹ್ಮಣ್ಯಾಭಿಮಾನ! ಆದರೆ ಇಂದು ಅದೇ ಹಿಂದೂತ್ವವಾದಿ ಚಿಮೂಗಳೇ ತಿರುವಳ್ಳುವರ್ ಪ್ರತಿಮೆಯ ಅನಾವರಣಕ್ಕೆ ಮುಂದಾಗಿರುವುದು ಸಂದರ್ಭದ ದುರಂತ. ಇದರ ಹಿಂದೆ ಹಿಂದೂತ್ವವಾದಿ ಬಿಜೆಪಿ ಸರ್ಕಾರದ ಬುಡವನ್ನು ಮತಭದ್ರಗೊಳಿಸುವ ಹುನ್ನಾರವಿದೆಯೇ ವಿನಃ ತಿರುವಳ್ಳುವರ್‌ನ ಆಶಯಗಳನ್ನು ಪ್ರಚಾರ ಮಾಡುವ ಆಶಯವಿಲ್ಲ. ತಮ್ಮ ನಿಲುವಿನ ಬಗ್ಗೆ ಯಾರೂ ಯಾವುದೇ ಊಹಾಪೋಹಗಳನ್ನು ಮಾಡದಷ್ಟು ಸ್ಪಷ್ಟವಾಗಿ ಅವರು ತಮ್ಮ ನಿಲುವನ್ನು ಮಾಧ್ಯಮಗಳಲ್ಲಿ ಸ್ಪಷ್ಟಪಡಿಸಿದ್ದಾರೆ. "ತಿರುವಳ್ಳುವರ್ ಪ್ರತಿಮೆ ಹೆಚ್ಚೂ ಕಡಿಮೆ ಸ್ಥಾಪನೆಯಾಗಿಬಿಟ್ಟಿದೆ. ಅದನ್ನು ಈಗ ಉರುಳಿಸಲು ಸಾಧ್ಯವಿಲ್ಲ.

ನಮ್ಮ ಕಾಲದಲ್ಲಲ್ಲದಿದ್ದರೂ ಮುಂದೆ ಎಂದಾದರೂ ಅದರ ಅನಾವರಣ ಆಗಿಯೇ ತೀರುತ್ತದೆ. ಹೀಗಾಗಿ ಅದನ್ನು ತಡೆಹಿಡಿಯಲು ಸಾಧ್ಯವಿಲ್ಲ. ಅದರ ಅನಾವರಣ ಅನಿವಾರ್ಯ." ಹೀಗೆ ತಿರುವಳ್ಳೂವರ್ ಅವರಿಗೆ ಅನಿವಾರ್ಯ ಕರ್ಮವೇ ವಿನಃ ಆಯ್ಕೆಯಲ್ಲ. ಅಲ್ಲದೇ ಈಗ ಬಿಜೆಪಿ ಸರ್ಕಾರವೇ ಅನಾವರಣ ಮಾಡಿದರೆ ಅದರ ಕ್ರೆಡಿಟ್ಟೂ ಬಿಜೆಪಿಗೇ ಸಿಕ್ಕಿ ಬರಲಿರುವ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ತಮಿಳರ ಓಟು ಸಿಗುತ್ತದೆ. ಇದು ಸಂಶೋಧಕ ಚಿಮೂರವರ ಬೆಂಬಲಕ್ಕೆ ಕಾರಣ. ಹೀಗಾಗಿ ಬಿಜೆಪಿ ಸರ್ಕಾರ ತಿರುವಳ್ಳುವರ್‌ನ ಜೀವ ತೆಗೆದು ಆತನ ಕಳೇಬರವನ್ನಷ್ಟೇ ಅನಾವರಣ ಮಾಡುತ್ತಿದೆ. ಇದರಲ್ಲಿ ತಮಿಳರಾಗಲೀ ಕನ್ನಡಿಗರಾಗಲೀ ಖುಷಿ ಪಡುವ ಸಂಗತಿ

(19ನೇ ಪುಟಕ್ಕೆ)

ಪರಿಭಾವಿತ ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ

ನಾ ದಿವಾಕರ

ಯುಪಿಎ ಸರ್ಕಾರದ ಮಾನವ ಸಂಪನ್ಮೂಲ ಮಂತ್ರಿ ಕಪಿಲ್ ಸಿಬ್ಬಾಲ್ ಅಧಿಕಾರ ವಹಿಸಿಕೊಂಡ ಕೂಡಲೇ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕವಾದ ಬದಲಾವಣೆಗಳನ್ನು ಜಾರಿಗೊಳಿಸಲು ನಿರ್ಧರಿಸಿದ್ದು, 100 ದಿನಗಳ ಕಾರ್ಯಕ್ರಮದ ಮೂಲಕ ದೇಶದ ವಿಶ್ವವಿದ್ಯಾಲಯಗಳನ್ನು (ವಿವಿ) ಪುನಾರಚಿಸಲು ನಿರ್ಧರಿಸಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಿಸುವ ನಿಟ್ಟಿನಲ್ಲಿ ಶಿಕ್ಷಣ ಹಕ್ಕು ಮಸೂದೆಯನ್ನು ಜಾರಿಗೊಳಿಸುವ ಮೂಲಕ ಹದಿನಾಲ್ಕು ವಯಸ್ಸಿನವರೆಗಿನ ಮಕ್ಕಳಿಗೆ ಉಚಿತ, ಕಡ್ಡಾಯ ಶಿಕ್ಷಣ ನೀಡಲು ಸರ್ಕಾರ ಸಜ್ಜಾಗಿದೆ. ಈ ಮಸೂದೆಯ ಸಾಫಲ್ಯ ವೈಫಲ್ಯಗಳು ಪ್ರಭುತ್ವದ ಶಿಕ್ಷಣ ನೀತಿ ಮತ್ತು ಸಾಮುದಾಯಿಕ ಪರಿಕಲ್ಪನೆಗಳನ್ನು ಆಧರಿಸಿರುತ್ತದೆ. ಈಗಾಗಲೇ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಪ್ರಧಾನ ಭೂಮಿಕೆ ನಿರ್ವಹಿಸುತ್ತಿದ್ದು ಗ್ರಾಮೀಣ ಮಕ್ಕಳೂ ಪರ ಊರುಗಳಲ್ಲಿನ ಖಾಸಗಿ ಶಾಲೆಗಳಿಗೆ ಹೋಗುವುದು ವಾಡಿಕೆಯಾಗಿದೆ. ನಗರ ಪ್ರದೇಶದ ಮಧ್ಯಮವರ್ಗಗಳಿಗೆ ಸರ್ಕಾರಿ ಶಾಲೆಗಳು ಅಲರ್ಜಿಯಾಗಿದ್ದು ಸರ್ಕಾರಿ ಶಿಕ್ಷಕರ ಮಕ್ಕಳೂ ಖಾಸಗಿ ಶಾಲೆಗೆ ಹೋಗುವುದು ಸಾಮಾನ್ಯವಾಗಿದೆ. ಉಚಿತ, ಕಡ್ಡಾಯ ಶಿಕ್ಷಣದ ಪರಿಕಲ್ಪನೆ ಉನ್ನತ ಚಿಂತನೆಯಾದರೂ ಖಾಸಗೀಕರಣ ಪ್ರಕ್ರಿಯೆ ಈ ಚಿಂತನೆಯ ಮೂಲ ಉದ್ದೇಶವನ್ನೇ ಹಿಮ್ಮೆಟ್ಟಿಸುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ. ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣದ ಮೂಲಕ ಮಾತ್ರ ಸಾರ್ವತ್ರಿಕ ಶಿಕ್ಷಣವನ್ನು ಜಾರಿಗೊಳಿಸಲು ಸಾಧ್ಯವಾಗುತ್ತದೆ.

ಏತನ್ಮಧ್ಯೆ ಜಾಗತೀಕರಣದ ಪರಿಣಾಮವಾಗಿ ಭಾರತದ ಉನ್ನತ ಶಿಕ್ಷಣ ಕ್ಷೇತ್ರ ತೀವ್ರತೆರನಾದ ಬದಲಾವಣೆಗಳಿಗೆ ಒಳಗಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಮಧ್ಯಮವರ್ಗಗಳ ಪಾಲಿಗೆ ಉನ್ನತ ಶಿಕ್ಷಣ ಗಗನ ಕುಸುಮವಾಗಿದ್ದು ಹತ್ತನೆ ತರಗತಿ ಪೂರೈಸಿದವರಲ್ಲಿ ಶೇ 10ರಷ್ಟು ವಿದ್ಯಾರ್ಥಿಗಳೂ ಉನ್ನತ ಶಿಕ್ಷಣದ ಹಂತ ತಲುಪದಿರುವುದು ಚಿಂತನಾರ್ಹ ವಿಷಯವಾಗಿದೆ. ಯುಜಿಸಿ ಕಾಯ್ದೆಯಡಿಯಲ್ಲಿ ದೇಶಾದ್ಯಂತ ಮುಕ್ತವಾಗಿ ಪರಿಭಾವಿತ ವಿಶ್ವವಿದ್ಯಾಲಯಗಳನ್ನು(Deemed Universities) ಪ್ರಾರಂಭಿಸಿರುವುದು ಉನ್ನತ ಶಿಕ್ಷಣ ಕ್ಷೇತ್ರದ ಬಿಕ್ಕಟ್ಟಿಗೆ ಮೂಲ ಕಾರಣವಾಗಿದೆ. ಈ ನಿಟ್ಟಿನಲ್ಲಿ ಯುಪಿಎ ಸರ್ಕಾರ ರಚಿಸಿದ್ದ "ಉನ್ನತ ಶಿಕ್ಷಣದ ಪುನಾರಚನೆ ಹಾಗು ಪುನರ್ನಿರ್ಮಾಣದ ಸಲಹಾ ಸಮಿತಿ" ಖ್ಯಾತ ಭೌತಶಾಸ್ತ್ರಜ್ಞ ಹಾಗೂ ಮಾಜಿ ಯುಜಿಸಿ ಅಧ್ಯಕ್ಷ ಪ್ರೊ. ಯಶ್‌ಪಾಲ್ ಅವರ ನೇತೃತ್ವದಲ್ಲಿ ಇದೀಗ ತನ್ನ ಅಂತಿಮ ವರದಿಯನ್ನು ಬಿಡುಗಡೆ ಮಾಡಿದ್ದು ಉನ್ನತ ಶಿಕ್ಷಣ ವ್ಯವಸ್ಥೆಯ ಸಂಪೂರ್ಣ ಪರಿಶೀಲನೆ ಹಾಗು ಪುನರ್ನಿರ್ಮಾಣಕ್ಕೆ ಶಿಫಾರಸ್ಸು ಮಾಡಿದೆ.

ಯಶಪಾಲ್ ಸಮಿತಿಯ ಶಿಫಾರಸ್ಸುಗಳು

ಯಶಪಾಲ್ ವರದಿಯಲ್ಲಿ ಪ್ರಮುಖವಾಗಿ ಭಾರತೀಯ ವಿವಿಗಳ ಕಾರ್ಯವೈಖರಿಯನ್ನು ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಸಲಹೆಗಳನ್ನು ನೀಡಲಾಗಿದೆ. ತೀವ್ರವಾದ ಗಂಭೀರ ಸವಾಲುಗಳನ್ನು ಎದುರಿಸುತ್ತಿರುವ ಉನ್ನತ ಶಿಕ್ಷಣ ವ್ಯವಸ್ಥೆಗೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯದ ಪರಿಕಲ್ಪನೆಯೇ ಅಪಾಯಕ್ಕೀಡಾಗಿರುವುದನ್ನು ಸಮಿತಿ ಸೂಚಿಸಿದೆ. ಸಮಾಜದಲ್ಲಿ ಜ್ಞಾನಾರ್ಜನೆಯನ್ನು ಹೆಚ್ಚಿಸಲು ಮತ್ತು ಹೆಚ್ಚಿನ ಜ್ಞಾನಭಂಡಾರವನ್ನು ಬೆಳೆಸಲು ವಿವಿಗಳು ವಿಫಲವಾಗಿರುವುದನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಯುಜಿಸಿ ಕಾರ್ಯವೈಖರಿ, ಪರಿಭಾವಿತ ವಿವಿಗಳ ಸ್ಥಾಪನೆ, ಇತರ ಶೈಕ್ಷಣಿಕ ಸಂಸ್ಥೆಗಳ ಕಾರ್ಯದಕ್ಷತೆಯನ್ನೂ ವಿಮರ್ಶಿಸಲಾಗಿದೆ. ವಿವಿಗಳ ಪ್ರಾಮುಖ್ಯತೆ ಕ್ಷೀಣಿಸುತ್ತಿರುವುದು, ಸ್ವಾಯತ್ತತೆ ಕಳೆದುಕೊಂಡಿರುವುದು, ಪದವಿ ಹಂತದಲ್ಲಿನ ಶಿಕ್ಷಣದ ನಿರ್ಲಕ್ಷ್ಯ, ವಿವಿಧ ಜ್ಞಾನ ಮೂಲಗಳ ನಡುವೆ ಹೆಚ್ಚುತ್ತಿರುವ ಕಂದರ, ವಾಸ್ತವ ಜಗತ್ತಿನಿಂದ ವಿವಿಗಳು ದೂರವಾಗಿರುವುದು,

ಜಾಗತೀಕರಣದ ಪರಿಣಾಮವಾಗಿ ಭಾರತದ ಉನ್ನತ ಶಿಕ್ಷಣ ಕ್ಷೇತ್ರ ತೀವ್ರತೆರನಾದ ಬದಲಾವಣೆಗಳಿಗೆ ಒಳಗಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಮಧ್ಯಮವರ್ಗಗಳ ಪಾಲಿಗೆ ಉನ್ನತ ಶಿಕ್ಷಣ ಗಗನ ಕುಸುಮವಾಗಿದ್ದು ಹತ್ತನೆ ತರಗತಿ ಪೂರೈಸಿದವರಲ್ಲಿ ಶೇ. ೧೦ರಷ್ಟು ವಿದ್ಯಾರ್ಥಿಗಳೂ ಉನ್ನತ ಶಿಕ್ಷಣದ ಹಂತ ತಲುಪದಿರುವುದು ಚಿಂತನಾರ್ಹ ವಿಷಯವಾಗಿದೆ. ಯುಜಿಸಿ ಕಾಯ್ದೆಯಡಿಯಲ್ಲಿ ದೇಶಾದ್ಯಂತ ಮುಕ್ತವಾಗಿ ಪರಿಭಾವಿತ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಿರುವುದು ಉನ್ನತ ಶಿಕ್ಷಣ ಕ್ಷೇತ್ರದ ಬಿಕ್ಕಟ್ಟಿಗೆ ಮೂಲ ಕಾರಣವಾಗಿದೆ.

ಶಿಕ್ಷಣದ ವಾಣಿಜ್ಯೀಕರಣ ಇವೇ ಮುಂತಾದುವನ್ನು ಭಾರತೀಯ ಉನ್ನತ ಶಿಕ್ಷಣದ ಪ್ರಮುಖ ಸಮಸ್ಯೆ ಮತ್ತು ಸವಾಲುಗಳೆಂದು ಸಮಿತಿ ಪರಿಗಣಿಸುತ್ತದೆ.

ಈ ಸಂದರ್ಭದಲ್ಲಿ ಸಮಿತಿಯು ನಾಯಿಕೊಡೆಗಳಂತೆ ಹುಟ್ಟಿ ಕೊಳ್ಳುತ್ತಿರುವ ಅನಿಯಂತ್ರಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಬಗ್ಗೆ ಗಂಭೀರ ಚಿಂತನೆ ನಡೆಸಿದೆ. ಲಾಭಗಳಿಕೆಯ ದೃಷ್ಟಿಯಿಂದ ಪದವಿ ಪ್ರಮಾಣ ಪತ್ರಗಳನ್ನು ಬಿಕರಿ ಮಾಡುವ ಹಕ್ಕುಗಳನ್ನು ಪಡೆಯಲು ಅನೇಕ ಖಾಸಗಿ ಸಂಸ್ಥೆಗಳು ಪರಿಭಾವಿತ ವಿವಿ ಸ್ಥಾನಕ್ಕಾಗಿ ಶ್ರಮಿಸುತ್ತಿವೆ. ಹಲವು ವರ್ಷಗಳಿಂದ ಸರ್ಕಾರಗಳು ಉನ್ನತ ಶಿಕ್ಷಣ ಕ್ಷೇತ್ರ ದಲ್ಲಿ ಹೆಚ್ಚಿನ ಬಂಡವಾಳ ಹೂಡದಿರುವುದರಿಂದ ಈ ಖಾಸಗಿ ಸಂಸ್ಥೆಗಳು ಅತಿಕ್ರಮ ಪ್ರವೇಶ ಮಾಡಿರುವುದು ಸ್ಪಷ್ಟವಾಗಿದೆ. ಆದರೆ ಈ ಖಾಸಗಿ ಸಂಸ್ಥೆಗಳ ಶೈಕ್ಷಣಿಕ ಸಾಮರ್ಥ್ಯವನ್ನಾಗಲೀ, ಸಾಮಾಜಿಕ ಕಾಳಜಿಯನ್ನಾಗಲೀ ಪರಿಶೀಲಿಸದೆ ಪರವಾನಗಿ ನೀಡುತ್ತಿರುವುದು ಪ್ರಸ್ತುತ ಸಮಸ್ಯೆಗೆ ಕಾರಣವಾಗಿದೆ. ಉನ್ನತ ಶಿಕ್ಷಣ ಹೊಂದುವವರ ಸಂಖ್ಯೆಯನ್ನು ಹೆಚ್ಚಿಸಲು ಖಾಸಗಿ ಸಂಸ್ಥೆಗಳ ಅವಶ್ಯಕತೆ ಇರುವುದನ್ನು ಸಮಿತಿ ಸಮರ್ಥಿಸಿದರೂ, ಪ್ರಭುತ್ವ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವುದನ್ನು ಸ್ಪಷ್ಟವಾಗಿ ಖಂಡಿಸುತ್ತದೆ.

ಖಾಸಗಿ ಸಂಸ್ಥೆಗಳ ಕುಟುಂಬ ಕೇಂದ್ರಿತ ಆಡಳಿತ, ರಾಜಕೀಯ ಹಾಗು ಉದ್ದಿಮೆಗಳಿಂದ ಬರುವ ಸಂಪತ್ತಿನ ಬಳಕೆ, ಕ್ಯಾಪಿ ಟೇಷನ್ ಶುಲ್ಕ, ನಿಗದಿತ ಮಿತಿಗಿಂತಲೂ ಹೆಚ್ಚಿನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದು, ದುಬಾರಿ ಶುಲ್ಕ, ಅಧ್ಯಾಪಕರಿಗೆ ಕಡಿಮೆ ಸಂಬಳ, ವಿದ್ಯಾರ್ಥಿಗಳಿಗೆ ಶ್ರೇಣಿಗಳನ್ನು ನೀಡುವಲ್ಲಿ ನಡೆಯುವ ಅಕ್ರಮಗಳು ಇವೇ ಮು ತಾದ ಗಂಭೀರ ಸಮಸ್ಯೆಗಳನ್ನು ನಿವಾರಿಸಲು ಸಮಿತಿ ಸಲಹೆ ನೀಡುತ್ತದೆ. ಹೊಸತಾಗಿ ನೊಂದಣಿಯಾಗಿರುವ ಅನೇಕ ಪರಿಭಾವಿತ ವಿವಿಗಳು ಶೈಕ್ಷಣಿಕ ಉದ್ದೇಶವನ್ನೇ ಹೊಂದಿಲ್ಲದಿರುವುದನ್ನು ಗಮನಿಸಿರುವ ಸಮಿತಿಯು ಈ ಅಕ್ರಮಗಳನ್ನು ನಿಯಂತ್ರಿಸುವಲ್ಲಿ ಸರ್ಕಾರಗಳ ವೈಫಲ್ಯವನ್ನು ತೀವ್ರವಾಗಿ ಖಂಡಿಸುತ್ತದೆ. ಈ ನಿಟ್ಟಿನಲ್ಲಿ ಕೂಡಲೇ ಪರಿಭಾವಿತ ವಿವಿಗಳಿಗೆ ಪರವಾನಗಿ ನೀಡುವುದುನ್ನು ನಿಲ್ಲಿಸಲು ಸೂಚಿಸುವುದರೊಂದಿಗೇ ಎಲ್ಲಾ ಸ್ಥಾಪಿತ ವಿವಿಗಳೂ ಹೊಸದಾಗಿ ರೂಪಿಸಲಾಗಿರುವ ಧೃಡೀಕರಣ ನಿಯಮಗಳಿಗೆ (Accredition norms) ಅನುಗುಣವಾಗಿ ಅರ್ಜಿ ಸಲ್ಲಿಸುವಂತೆ ಸಮಿತಿ ಸೂಚಿಸಿದೆ.

ಭಾರತದಲ್ಲಿ ವಿದೇಶಿ ವಿವಿಗಳ ಸ್ಥಾಪನೆಗೆ ಅನುಮತಿ ನೀಡುವ ಸರ್ಕಾರದ ಚಿಂತನೆಯನ್ನೇ ಪ್ರಶ್ನಿಸುವ ಯಶಪಾಲ್ ಸಮಿತಿ ಇದರಿಂದ ಭಾರತೀಯ ವಿದ್ಯಾರ್ಥಿಗಳು ಹೊರರಾಷ್ಟ್ರಗಳೊಡನೆ ಜ್ಞಾನವನ್ನು ಹಂಚಿಕೊಳ್ಳುವುದು ಸಾಧ್ಯವೇ ಎಂದು ಅನುಮಾನ ವ್ಯಕ್ತಪಡಿಸುತ್ತದೆ. ವಿದೇಶಿ ಹಣೆಪಟ್ಟಿ ಇರುವ ಎಲ್ಲ ವಿವಿಗಳಿಗೂ ಭಾರತದಲ್ಲಿ ಕಾಲೇಜುಗಳನ್ನು ಸ್ಥಾಪಿಸಲು ಅವಕಾಶ ನೀಡುವ ಮೂಲಕ, ತಮ್ಮ ಮೂಲ ದೇಶಗಳಲ್ಲೇ ಅಸ್ತಿತ್ವವಿಲ್ಲದ ಸಂಸ್ಥೆಗಳೂ ಭಾರತೀಯ ಶಿಕ್ಷಣ ಕ್ಷೇತ್ರಕ್ಕೆ ಲಗ್ಗೆ ಇಟ್ಟು ಇಲ್ಲಿ ಗಳಿಸಿದ ಲಾಭವನ್ನು ಹೊರದೇಶಕ್ಕೆ ರವಾನಿಸುತ್ತವೆ ಎಂಬ ಆತಂಕ ವರದಿಯಲ್ಲಿ ವ್ಯಕ್ತವಾಗಿದೆ. ವಿಶ್ವವಿದ್ಯಾಲಯಗಳ ಮೂಲ ಪರಿಕಲ್ಪನೆ ಸಮಗ್ರ ಶೈಕ್ಷಣಿಕ ಅಭಿವೃದ್ಧಿ ಮತ್ತು ಜ್ಞಾನಾರ್ಜನೆಯಾಗಿದ್ದು,

ಭಾರತದಲ್ಲಿ ವಿದೇಶಿ ವಿವಿಗಳ ಸ್ಥಾಪನೆಗೆ ಅನುಮತಿ ನೀಡುವ ಸರ್ಕಾರದ ಚಿಂತನೆಯನ್ನೇ ಪ್ರಶ್ನಿಸುವ ಯಶಪಾಲ್ ಸಮಿತಿ ಇದರಿಂದ ಭಾರತೀಯ ವಿದ್ಯಾರ್ಥಿಗಳು ಹೊರರಾಷ್ಟ್ರಗಳೊಡನೆ ಜ್ಞಾನವನ್ನು ಹಂಚಿಕೊಳ್ಳುವುದು ಸಾಧ್ಯವೇ ಎಂದು ಅನುಮಾನ ವ್ಯಕ್ತಪಡಿಸುತ್ತದೆ. ವಿದೇಶಿ ಹಣೆಪಟ್ಟಿ ಇರುವ ಎಲ್ಲ ವಿವಿಗಳಿಗೂ ಭಾರತದಲ್ಲಿ ಕಾಲೇಜುಗಳನ್ನು ಸ್ಥಾಪಿಸಲು ಅವಕಾಶ ನೀಡುವ ಮೂಲಕ, ತಮ್ಮ ಮೂಲ ದೇಶಗಳಲ್ಲೇ ಅಸ್ತಿತ್ವವಿಲ್ಲದ ಸಂಸ್ಥೆಗಳೂ ಭಾರತೀಯ ಶಿಕ್ಷಣ ಕ್ಷೇತ್ರಕ್ಕೆ ಲಗ್ಗೆ ಇಟ್ಟು ಇಲ್ಲಿ ಗಳಿಸಿದ ಲಾಭವನ್ನು ಹೊರದೇಶಕ್ಕೆ ರವಾನಿಸುತ್ತವೆ ಎಂಬ ಆತಂಕ ವರದಿಯಲ್ಲಿ ವ್ಯಕ್ತವಾಗಿದೆ. ವಿಶ್ವವಿದ್ಯಾಲಯಗಳ ಮೂಲ ಪರಿಕಲ್ಪನೆ ಸಮಗ್ರ ಶೈಕ್ಷಣಿಕ ಅಭಿವೃದ್ಧಿ ಮತ್ತು ಜ್ಞಾನಾರ್ಜನೆಯಾಗಿದ್ದು, ದೇಶದ ಸಾಮಾಜಿಕ ಹಾಗು ಸಾಂಸ್ಕೃತಿಕ ಸಂವೇದನೆಗಳೊಡನೆ ಸ್ಪಂದಿಸುವುದು ಪ್ರಮುಖ ಧ್ಯೇಯವಾಗಿರುತ್ತದೆ.

ದೇಶದ ಸಾಮಾಜಿಕ ಹಾಗು ಸಾಂಸ್ಕೃತಿಕ ಸಂವೇದನೆಗಳೊಡನೆ ಸ್ಪಂದಿಸುವುದು ಪ್ರಮುಖ ಧ್ಯೇಯವಾಗಿರುತ್ತದೆ. ಈ ನಿಟ್ಟಿನಲ್ಲಿ ವೃತ್ತಿಪರ ಶಿಕ್ಷಣವನ್ನು ಸಾಮಾನ್ಯ ಶಿಕ್ಷಣದಿಂದ ಬೇರ್ಪಡಿಸದೆ ರಕ್ಷಿಸುವ ಅಗತ್ಯತೆಯನ್ನೂ ಸಮಿತಿ ಹೇಳುತ್ತದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಯಶಪಾಲ್ ಸಮಿತಿ ಉನ್ನತ ಶಿಕ್ಷಣ ವ್ಯವಸ್ಥೆಯ ಸಮಗ್ರ ಪುನಾರಚನೆಗಾಗಿ ಆಗ್ರಹಿಸುತ್ತದೆ. ವೈದ್ಯಕೀಯ, ಮೇನೇಜ್‌ಮೆಂಟ್, ಇಂಜಿನಿಯರಿಂಗ್, ಕೃಷಿ, ಕಾನೂನು ಹೀಗೆ ಎಲ್ಲ ಹಂತದ ಉನ್ನತ ಶಿಕ್ಷಣವನ್ನೂ ಉನ್ನತ ಶಿಕ್ಷಣ ಪ್ರಾಧಿಕಾರದ ನಿಯಂತ್ರಣಕ್ಕೊಳಪಡಿಸಲು ಸಮಿತಿ ಶಿಫಾರಸ್ಸು ಮಾಡಿದೆ.

ಪ್ರಸಕ್ತ ನಿಯಂತ್ರಣಾ ಸಂಸ್ಥೆಗಳು

ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಜ್ಞಾನಾರ್ಜನೆಯ ಪ್ರಕ್ರಿಯೆಯನ್ನು ಅತಿಯಾದ ಶಿಸ್ತೀಕರಣಕ್ಕೊಳಪಡಿಸಿರುವುದು ಸಮಸ್ಯೆಗೆ ಮೂಲ ಕಾರಣವಾಗಿದೆ. ವಿವಿಧ ಶಿಸ್ತುಗಳ ನಡುವೆ ಹೊಂದಾಣಿಕೆ-ಸ್ಪಂದನ ಪ್ರಕ್ರಿಯೆ ಇಲ್ಲದಿರುವುದು ನಿಯಂತ್ರಣಾ ಸಂಸ್ಥೆಗಳನ್ನೂ ಹೆಚ್ಚಿಸಿವೆ. ಒಟ್ಟಾರೆ ದೇಶದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 13 ನಿಯಂತ್ರಣಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ವಿವಿಧ ಕಾಯ್ದೆಗಳಡಿಯಲ್ಲಿ ಸ್ಥಾಪಿಸಲಾಗಿರುವ ಈ ಸಂಸ್ಥೆಗಳ ವಿಘಟನೆಯೇ ಶೈಕ್ಷಣಿಕ ಕ್ಷೇತ್ರದ ಸುಧಾರಣೆಗೆ ಕಂಟಕವಾಗಿದೆ. ಪ್ರತಿಯೊಂದು ನಿಯಂತ್ರಣಾ ನಿಯಮಗಳೂ ವಿಭಿನ್ನವಾಗಿರುವುದರಿಂದ ಯುಜಿಸಿಗೆ ವಹಿಸಿರುವ ಹೊಣೆಗಾರಿಕೆ ಸಂಪೂರ್ಣವಾಗಿ ಎಲ್ಲಾ ಸಂಸ್ಥೆಗಳಿಗೂ ಅನ್ವಯಿಸುವುದಿಲ್ಲ. ಹಾಗಾಗಿ ಒಂದೊಂದು ಸಂಸ್ಥೆಯೂ ತನ್ನದೇ ಆದ ನಿರ್ಣಯಗಳನ್ನು ಕೈಗೊಳ್ಳುವುದರಿಂದ ಸಮಾನ ಶಿಕ್ಷಣ ನೀತಿಯನ್ನು ರೂಪಿಸುವುದೇ ದುಸ್ಸಾಧ್ಯವಾಗುತ್ತದೆ. ನಿಯಂತ್ರಣಾ ಸಂಸ್ಥೆಗಳಿಂದ ತೀವ್ರವಾಗಿ ಪ್ರಭಾವಿತವಾಗಿರುವ ವಿವಿಗಳಲ್ಲಿ ತಮ್ಮದೇ ಆದ ಕಾರ್ಯಕ್ರಮಗಳನ್ನು ಕೈಗೊಳ್ಳುವುದೂ ಅಸಾಧ್ಯವಾಗುತ್ತದೆ.

ಉನ್ನತ ಶಿಕ್ಷಣದ ಪ್ರಮುಖ ಅಂಶವಾದ ಸಂಶೋಧನೆಯ ಕ್ಷೇತ್ರದಲ್ಲಿ ಸುಧಾರಣೆಗಳು ಕಂಡು ಬರುವುದಿಲ್ಲ ಎಂದು ಯಶಪಾಲ್ ಸಮಿತಿ ಸೂಚಿಸುತ್ತದೆ. ವಿದ್ಯಾರ್ಥಿಗಳಿಗೆ ಬೋಧನೆ ಮಾಡಿ ಪರೀಕ್ಷೆಗಳನ್ನು ನಡೆಸುವುದನ್ನೇ ಪ್ರಧಾನವಾಗಿ ಪರಿಗಣಿಸುವ ವಿವಿಗಳು ಮತ್ತು ಉನ್ನತ ಸಂಶೋಧನಾ ಸಂಸ್ಥೆಗಳ ನಡುವೆ ಪರಸ್ಪರ ಸ್ಪಂದಿಸುವ ಪರಂಪರೆಯೇ ಇಲ್ಲದಿರುವುದನ್ನು ಸಮಿತಿ ಗಂಭೀರವಾಗಿ ಪರಿಗಣಿಸುತ್ತದೆ. ಈ ನಿಟ್ಟಿನಲ್ಲಿ ಎಲ್ಲಾ ಸಂಶೋಧನಾ ಸಂಸ್ಥೆಗಳೂ ವಿವಿಗಳೊಡನೆ ಸಂಪರ್ಕ ಸಾಧಿಸಿ ಎಲ್ಲಾ ವಿವಿಗಳನ್ನು ಬೋಧಕ ಹಾಗು ಸಂಶೋಧಕ ಸಂಸ್ಥೆಗಳನ್ನಾಗಿ ಮಾಡಲು ಶಿಫಾರಸ್ಸು ಮಾಡುತ್ತದೆ. ಈ ಸಂಬಂಧ ರಾಷ್ಟ್ರೀಯ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಮಿತಿ (ಎನ್‌ಸಿಹೆಚ್‌ಇಆರ್) ಯನ್ನು ಸ್ಥಾಪಿಸಿ, ಅನ್ಯ ನಿಯಂತ್ರಣಾ ಸಂಸ್ಥೆಗಳನ್ನು ಈ ಸಂಸ್ಥೆಯ ಪರಿಧಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡುವ ಮೂಲಕ, ವಿವಿಗಳ ಶಿಕ್ಷಣ ಮಟ್ಟ ಸುಧಾರಿಸುವಂತೆ ಸಮಿತಿ ಕರೆ ನೀಡುತ್ತದೆ.

ಪರಿಭಾವಿತ ವಿಶ್ವವಿದ್ಯಾಲಯಗಳ ಹಾವಳಿ

ಪರಿಭಾವಿತ ವಿವಿಗಳ ಪರಿಕಲ್ಪನೆಯನ್ನು ಮಂಡಿಸಿದ್ದು 1948-49ರಲ್ಲಿ ವಿಶ್ವವಿದ್ಯಾಲಯ ಶಿಕ್ಷಣದ ಬಗ್ಗೆ ನೇಮಿಸಲಾಗಿದ್ದ ರಾಧಾಕೃಷ್ಣನ್ ಸಮಿತಿ. ಈ ಯೋಜನೆಯನ್ನು ಯುಜಿಸಿ ಕಾಯ್ದೆಯಲ್ಲಿ ಅಳವಡಿಸಿ "ಯಾವುದೇ ಚಾರಿತ್ರಿಕ ಕಾರಣಗಳಿಗಾಗಿ ಅಥವಾ ಮತ್ತಾವುದೇ ಸನ್ನಿವೇಶಗಳ ಪರಿಣಾಮವಾಗಿ, ಒಂದು ಶಿಕ್ಷಣ ಸಂಸ್ಥೆಯು ವಿಶ್ವವಿದ್ಯಾಲಯದ ಸ್ಥಾನ ಪಡೆಯದಿದ್ದಲ್ಲಿ ಹಾಗು ಈ ಸಂಸ್ಥೆಗಳು ಇತರ ವಿಶ್ವವಿದ್ಯಾಲಯಗಳಿಗೆ ಹೋಲಿಸಿದಾಗ ಉನ್ನತ ಮಟ್ಟದ ವ್ಯಾಸಂಗ ಮತ್ತು ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದಲ್ಲಿ, ವಿಶ್ವವಿದ್ಯಾಲಯದ ಸ್ಥಾನ ನೀಡುವ ಮೂಲಕ ಈ ಸಂಸ್ಥೆಗಳು ಇನ್ನೂ ಹೆಚ್ಚಿನ ಕೊಡುಗೆ ನೀಡುವ ಸಂಭವವಿದ್ದಲ್ಲಿ" ಅಂತಹ ಸಂಸ್ಥೆಗಳಿಗೆ ಪರಿಭಾವಿತ ವಿವಿಗಳ ಸ್ಥಾನವನ್ನು ನೀಡಲು ಈ ಸಮಿತಿಯಲ್ಲಿ ಸೂಚಿಸಲಾಗಿತ್ತು. ಇದಕ್ಕೂ ಮುನ್ನ ವಿವಿಗಳನ್ನು ಸ್ಥಾಪಿಸಲು ಶಾಸನಬದ್ಧ ಅಂಗೀಕಾರ ಪಡೆಯುವುದು ಕಡ್ಡಾಯವಾಗಿತ್ತು. ಆದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅನೇಕ ಸಮಾಜ ಸೇವಕರ ಸಹಾಯದಿಂದ ಕೆಲವು ಶೈಕ್ಷಣಿಕ ಸಂಸ್ಥೆಗಳೂ ಪ್ರಾರಂಭವಾಗಿದ್ದವು.

ಈ ಸಂಸ್ಥೆಗಳಿಗೆ ವಿವಿಗಳ ಸ್ಥಾನ ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಗಂಭೀರ ಚರ್ಚೆಗಳು ನಡೆದಿದ್ದವು. 1956ರಲ್ಲಿ ಸಮಿತಿಯ ವರದಿಯನ್ನು ಸರ್ಕಾರ

ಅಂಗೀಕರಿಸಿ 1958ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಗಳಿಗೆ ಪರಿಭಾವಿತ ವಿವಿಗಳ ಸ್ಥಾನ ಲಭಿಸಿತ್ತು. ನಂತರ 1960ರಲ್ಲಿ ಹರಿದ್ವಾರದ ಗುರುಕುಲ ಕಂಗ್ರಿ ವಿಶ್ವವಿದ್ಯಾಲಯ, ಅಹ ಮದಾಬಾದ್‌ನ ಗುಜರಾತ್ ವಿದ್ಯಾಪೀಠ, ಮುಂಬೈನ ಟಾಟಾ ಸಮಾಜ ವಿಜ್ಞಾನ ಸಂಸ್ಥೆ, ಪಿಲಾನಿಯಲ್ಲಿದ್ದ ಬಿರ್ಲಾ ತಂತ್ರಜ್ಞಾನ ಮತ್ತು ವಿಜ್ಞಾನ ಸಂಸ್ಥೆ ಹಾಗು ಧನಬಾದ್‌ನ ಭಾರತೀಯ ಗಣಿಗಾರಿಕೆಯ ಸಂಸ್ಥೆಗಳಿಗೆ ಈ ಸ್ಥಾನವನ್ನು ಕಲ್ಪಿಸಲಾಗಿತ್ತು.

1956ರಿಂದ 1995 ರವರೆಗಿನ ಅವಧಿಯಲ್ಲಿ ಕೇವಲ 36 ಪರಿಭಾವಿತ ವಿವಿಗಳು ಅಂಗೀಕಾರ ಪಡೆದಿದ್ದವು. 1995-2008ರ ಅವಧಿಯಲ್ಲಿ 400ಕ್ಕೂ ಹೆಚ್ಚು ಅರ್ಜಿಗಳನ್ನು ಸಲ್ಲಿಸಲಾಗಿತ್ತು. 2009ರ ವೇಳೆಗೆ ಪರಿಭಾವಿತ ವಿವಿಗಳ ಸಂಖ್ಯೆ 127ರಷ್ಟಾಗಿತ್ತು. ತಮಿಳುನಾಡು 29, ಮಹಾರಾಷ್ಟ್ರ 21 ಮತ್ತು ಕರ್ನಾಟಕ 15 ವಿವಿಗಳನ್ನು ಹೊಂದಿದ್ದು, ಈ ಪೈಕಿ ಬಹುತೇಕ ಸಂಸ್ಥೆಗಳು ವಿವಿಗಳ ಮೂಲ ಕಲ್ಪನೆಗಳನ್ನು ಸಾಕಾರಗೊಳಿಸುವಲ್ಲಿ ವಿಫಲವಾಗಿರುವುದು ಸ್ಪಷ್ಟ. ಈ ಸಂದರ್ಭದಲ್ಲಿ ಎನ್‌ಡಿಎ ಸರ್ಕಾರದ ನೀತಿಗಳೂ ಪರಾಮರ್ಶೆಗೊಳಗಾಗಬೇಕಾಗುತ್ತದೆ. ಪರಿಭಾವಿತ ವಿವಿಗಳ ಸಂಖ್ಯೆ ಹೆಚ್ಚಿಸುವ ದೃಷ್ಟಿಯಿಂದ ಹಾಗು ಶೈಕ್ಷಣಿಕ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ನಿಟ್ಟಿನಲ್ಲಿ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಯುಜಿಸಿ ಕಾಯ್ದೆಗೇ ಹಲವು ತಿದ್ದುಪಡಿಗಳನ್ನು ತರಲಾಯಿತು.

ತತ್ಪರಿಣಾಮವಾಗಿ 2000-2005ರ ಅವಧಿಯಲ್ಲಿ 40 ಸಂಸ್ಥೆಗಳಿಗೆ ಪರಿಭಾವಿತ ವಿವಿ ಸ್ಥಾನವನ್ನು ಕಲ್ಪಿಸಲಾಗಿತ್ತು. ಇವುಗಳಲ್ಲಿ ಅನೇಕ ಸಂಸ್ಥೆಗಳ ಶೈಕ್ಷಣಿಕ ಧ್ಯೇಯೋದ್ದೇಶಗಳು ಮತ್ತು ಸಾಧನೆಗಳು ಅಪೇಕ್ಷಿತ ಮಟ್ಟದಲ್ಲಿ ಇರಲಿಲ್ಲ. ಪ್ರಸ್ತುತ ದೇಶದಲ್ಲಿ 479 ವಿವಿಗಳಿದ್ದು, 275 ಸರ್ಕಾರ ಸ್ವಾಮ್ಯದಲ್ಲಿವೆ. 127 ಪರಿಭಾವಿತ ವಿವಿಗಳ ಪೈಕಿ 41 ಸರ್ಕಾರಿ ಹಾಗು 86 ಖಾಸಗಿ ಸ್ವಾಮ್ಯದಲ್ಲಿವೆ. ಖಾಸಗಿ ವಿವಿಗಳ ಸಂಖ್ಯೆ 39 ರಷ್ಟಿವೆ.

ಈ ಖಾಸಗಿ ಪರಿಭಾವಿತ ವಿವಿಗಳಲ್ಲಿ ಬಹುತೇಕ ಸಂಸ್ಥೆಗಳಿಗೆ ಶೈಕ್ಷಣಿಕ ಧ್ಯೇಯೋದ್ದೇಶಗಳೇ ಇರುವುದಿಲ್ಲ ಎಂದು ಯಶಪಾಲ್ ವ್ಯಥೆ ಪಡುತ್ತಾರೆ. ಯುಜಿಸಿ ಸಮಿತಿಯಲ್ಲೇ ಎರಡು-ಮೂರು ಸದಸ್ಯರು ಈ ಸಂಸ್ಥೆಗಳನ್ನು ಪ್ರತಿನಿಧಿಸುತ್ತಾರೆ. ಈ ಸದಸ್ಯರು ಪ್ರತಿಯೊಂದು ಯುಜಿಸಿ ಸಮಿತಿ ಸಭೆಯಲ್ಲೂ ಹೊಸ ಅರ್ಜಿಗಳನ್ನು ಸಲ್ಲಿಸುವುದು ಸಾಮಾನ್ಯವಾಗಿದ್ದು, ಮಾಜಿ ಕೇಂದ್ರ ಮಾನವಸಂಪನ್ಮೂಲಮಂತ್ರಿ ಅರ್ಜುನ್ ಸಿಂಗ್ ಅವರ ಅವಧಿಯಲ್ಲೇ 59 ಪರಿಭಾವಿತ ವಿವಿಗಳಿಗೆ ಪರವಾನಗಿ ನೀಡಿರುವುದು ಇಡೀ ಪ್ರಕ್ರಿಯೆಯ ಹಿಂದಿನ ರಾಜಕೀಯ ಪ್ರಭಾವವನ್ನು ಸೂಚಿಸುತ್ತದೆ.

ಪರಿಭಾವಿತ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವಲ್ಲಿ ಕರ್ನಾಟಕ, ತಮಿಳುನಾಡು ಮತ್ತು ಮಹಾರಾಷ್ಟ್ರ ಮುಂಚೂಣಿಯಲ್ಲಿವೆ. ಖಾಸಗಿ ಶಿಕ್ಷಣ ಸಂಸ್ಥೆಗಳ ತೊಟ್ಟಿಲು ಎಂದೇ ಪ್ರಸಿದ್ಧಿಯಾಗಿರುವ ಕರ್ನಾಟಕದಲ್ಲಿ ಈಗಾಗಲೇ 17 ಸಂಸ್ಥೆಗಳು ಪರಿಭಾವಿತ ವಿವಿ ಸ್ಥಾನಕ್ಕೆ ಕಾಯುತ್ತಿವೆ. 1990ರ ದಶಕದಲ್ಲಿ ಪ್ರಾರಂಭವಾದ ಅನೇಕ ಪರಿಭಾವಿತ ವಿವಿಗಳಲ್ಲಿ ಮೂಲಭೂತ ಸೌಲಭ್ಯಗಳೇ ಇಲ್ಲದಿರುವುದು ಕಂಡುಬಂದಿದೆ. ಕೆಲವು ಸಂಸ್ಥೆಗಳು ಉನ್ನತ ಶಿಕ್ಷಣದಲ್ಲಿ ಮಹತ್ತರ ಸಾಧನೆ ಮಾಡಿದ್ದರೂ, ಬಹುತೇಕ ಸಂಸ್ಥೆಗಳು ಧನಸಾರ್ಜನೆಯ ಕೇಂದ್ರಗಳಾಗಿದ್ದು ಶಿಕ್ಷಣ ವ್ಯವಸ್ಥೆಗೆ ಕಪ್ಪುಚುಕ್ಕಿಯಾಗಿ ಪರಿಣಮಿಸಿವೆ.

ಕರ್ನಾಟಕದ ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ದಂತವೈದ್ಯ ಕ್ಷೇತ್ರಗಳಲ್ಲಿನ ಪರಿಭಾವಿತ ಖಾಸಗಿ ವಿವಿಗಳು ವಿದ್ಯಾರ್ಥಿಗಳ ಸೇರ್ಪಡೆಯಲ್ಲಷ್ಟೇ ಅಲ್ಲದೆ ಅಧ್ಯಾಪಕರ ನೇಮಕಾತಿ, ಶುಲ್ಕ ನಿಗದಿ, ಪಠ್ಯಕ್ರಮ ನಿರ್ವಹಣೆ, ಪರೀಕ್ಷೆಗಳನ್ನು ನಡೆಸುವುದು, ಪ್ರಮಾಣ ಪತ್ರ ನೀಡುವುದು ಹೀಗೆ ಎಲ್ಲ ಹಂತಗಳಲ್ಲೂ ತಮ್ಮದೇ ಆದ ನೀತಿಗಳನ್ನು ಅನುಸರಿಸುತ್ತವೆ. ಕರ್ನಾಟಕದಲ್ಲಿ 15 ಪರಿಭಾವಿತ ವಿವಿಗಳಿದ್ದು 12 ಖಾಸಗಿಯವರ ಆಡಳಿತದಲ್ಲಿವೆ. ಸರ್ಕಾರ ಯಾವುದೇ ರೀತಿಯಲ್ಲಿ ಖಾಸಗಿ-ಪರಿಭಾವಿತ ವಿವಿಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ ಎಂದು ಹೇಳುವ ಆರ್.ಎಲ್.ಜಾಲಪ್ಪ ವಿದ್ಯಾರ್ಥಿಗಳನ್ನು ಪ್ರತಿಭೆಯ ಆಧಾರದ ಮೇಲೇ ವಿವಿಗಳೇ ಆಯ್ಕೆ ಮಾಡಿ ಉತ್ತಮ ಫಲಿತಾಂಶ ಒದಗಿಸಲು ಅವಕಾಶವೀಯಬೇಕೆಂದು ಆಗ್ರಹಿಸುತ್ತಾರೆ.

ನವ ಉದಾರೀಕರಣದ ಪ್ರಭಾವ

ಶಿಕ್ಷಣದ ಗುಣಮಟ್ಟ ತೀವ್ರವಾಗಿ ಕ್ಷೀಣಿಸುತ್ತಿದೆ. ಇದು ಸರ್ಕಾರಿ ಸಂಸ್ಥೆಗಳ ಪರಿಣಾಮವಾಗಿ ಅಲ್ಲದೆ ಖಾಸಗಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಪರಿಣಾಮವಾಗಿದೆ. ಜಾಗತಿಕ ಮಟ್ಟದಲ್ಲಿ ಕುಶಲ-ಶಿಕ್ಷಿತ ದುಡಿಮೆಗಾರರ ಬೇಡಿಕೆ ಹೆಚ್ಚಾಗಿರುವುದರಿಂದ ಈ ಬೇಡಿಕೆಯನ್ನು ಪೂರೈಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಜ್ಞಾನ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಖಾಸಗಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಲು ಆಯೋಜಿಸಿತ್ತು. ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಆಧಾರದಲ್ಲಿ ಈ ರೀತಿಯ ಸುಶಿಕ್ಷಿತ, ಕುಶಲ ಮತ್ತು ನಾಜೂಕಾದ ದುಡಿಯುವ ಗುಲಾಮರನ್ನು ತಯಾರಿಸಲು ಸಿದ್ಧವಾಗಿತ್ತು.

ಈ ತಯಾರಿಕಾ ಚಟುವಟಿಕೆ ಲೇಬರ್ ಮಾರುಕಟ್ಟೆ ನಿಯಮಗಳಿಗೆ ಬದ್ಧವಾಗಿದ್ದು ಜಾಗತೀಕರಣದ ಹಿನ್ನೆಲೆಯಲ್ಲಿ ದುಡಿಮೆಗಾರರಿಗೆ ಬೇಡಿಕೆ ಹೆಚ್ಚಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ನವ ಉದಾರವಾದಿ ಆಳ್ವಿಕೆಯಲ್ಲಿ ದೇಶದ ಹಳೆಯ ತತ್ವವಾದ ಬೇಡಿಕೆಯನ್ನಾಧರಿಸಿದ ಆರ್ಥಿಕತೆಯ ಸ್ಥಾನವನ್ನು ಸರಬರಾಜು ಪ್ರೇರಿತ ಆರ್ಥಿಕತೆ ಆಕ್ರಮಿಸಿತು. ಇದರ ಪರಿಣಾಮ ಸ್ಪಷ್ಟವಾಗಿದೆ. ಶೈಕ್ಷಣಿಕ ಕ್ಷೇತ್ರದಲ್ಲೂ ಇದೇ ರೀತಿಯ ಸರಬರಾಜು ಪ್ರೇರಿತ ನೀತಿಯ ಪರಿಣಾಮವಾಗಿ ಏರುತ್ತಿರುವ ಜಾಗತಿಕ ಬೇಡಿಕೆಯನ್ನು ಪೂರೈಸಲು ಸುಶಿಕ್ಷಿತ ದುಡಿಮೆಗಾರರನ್ನು ಒದಗಿಸುವ ನಿಟ್ಟಿನಲ್ಲಿ ಹೆಚ್ಚು ವಿಶ್ವವಿದ್ಯಾಲಯಗಳನ್ನು ಕಾರ್ಪೋರೇಟ್ ಉದ್ಯಮಿಗಳ ಆಡಳಿತದಲ್ಲಿ ಮಂಜೂರು ಮಾಡಲಾಯಿತು. ಶಿಕ್ಷಣ ಕ್ಷೇತ್ರದ ಔದ್ಯಮೀಕರಣ ಮತ್ತು ವಾಣಿಜ್ಯೀಕರಣ ಪ್ರಕ್ರಿಯೆಯನ್ನು ಕ್ಷೇತ್ರದ ಎಲ್ಲಾ ಸಮಸ್ಯೆಗಳಿಗೂ ಸಿದ್ಧೌಷಧವೆಂದು ಪರಿಗಣಿಸಲಾಯಿತು.

ಯಶಪಾಲ್ ಸಮಿತಿ ಈ ಧೋರಣೆಯನ್ನು ವಿರೋಧಿಸುತ್ತಿದೆ. ಈ ನಿಟ್ಟಿನಲ್ಲಿ ಯಾವುದೇ ಸ್ಪಷ್ಟ ಮಾರ್ಗವನ್ನು ಸೂಚಿಸದ ಸಮಿತಿಯ ವರದಿಯಲ್ಲಿ ಜ್ಞಾನದ ಸಮತೋಲನ, ಸರ್ವವ್ಯಾಪಿ ವೃದ್ಧಿಗೆ ಪೂರಕವಾಗುವಂತಹ ಉತ್ತಮ ಗುಣಮಟ್ಟದ ಶಿಕ್ಷಣ ವ್ಯವಸ್ಥೆಗಾಗಿ ಹಲವು ಶಿಫಾರಸ್ಸುಗಳನ್ನು ಮಾಡಲಾಗಿದೆ. ವಿಶ್ವವಿದ್ಯಾಲಯಗಳಿಗೆ ಪರಿಭಾವಿತ ಸ್ಥಾನ ನೀಡುವ ಪದ್ಧತಿಯನ್ನು ರದ್ದುಗೊಳಿಸಿ ಈಗಾಗಲೇ ನೀಡಲಾಗಿರುವ ಪ್ರಕರಣಗಳನ್ನು ಪುನರ್ ಪರಿಷ್ಕರಿಸಲು ಸಲಹೆ ನೀಡಿದೆ. ಕುತೂಹಲಕಾರಿ ಅಂಶವೆಂದರೆ ಈ ವರದಿಯಲ್ಲಿ "ಲಾಭಗಳಿಕೆಯ ದೃಷ್ಟಿಯಿಂದ ಕಾರ್ಯನಿರ್ವಹಿಸುವ ಯಾವುದೇ ಸಂಸ್ಥೆಯನ್ನೂ ವಿಶ್ವವಿದ್ಯಾಲಯ ಎಂದು ಪರಿಗಣಿಸಲಾಗುವುದಿಲ್ಲ" ಎಂದು ಹೇಳಲಾಗಿದೆ. ಹಾಗಾಗಿ ಮಾನವ ಸಂಪನ್ಮೂಲ ಮಂತ್ರಿಗಳ ವೆಬ್‌ತಾಣದಲ್ಲಿ ಪ್ರಕಟಿಸಲಾದ ಈ ವರದಿಯನ್ನು ಆತುರಾತುರವಾಗಿ ಹಿಂಪಡೆದದ್ದು ಅಚ್ಚರಿಯ ಅಂಶವೇನಲ್ಲ. ಈಗ ಈ ಸಮಿತಿಯ ಸ್ಥಾನವನ್ನು ಕೆಳಮಟ್ಟಕ್ಕಿಳಿಸಲಾಗಿದ್ದು ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ ಸಲಹೆ ನೀಡುವ ಅಧಿಕಾರವನ್ನು ಮಾತ್ರ ನೀಡಲಾಗಿದೆ.

ವಿಶ್ವವಿದ್ಯಾಲಯ ಉನ್ನತ ಶಿಕ್ಷಣದ ಬಗ್ಗೆ ಯಶಪಾಲ್ ಸಮಿತಿ ನೀಡಿರುವ ಸಲಹೆಗಳು ಮತ್ತು ಸಮಿತಿಯ ಪರಿಕಲ್ಪನೆಗಳು ಸರ್ಕಾರದ ಅಧಿಕೃತ ನೀತಿಗಳ ವಿರುದ್ಧವಾಗಿಯೇ ಇವೆ. ಸಮಿತಿ ಸೂಚಿಸಿರುವ ಉನ್ನತ ಶಿಕ್ಷಣದ ಸಮಗ್ರ ಏಕರೂಪಿ ನಿಯಂತ್ರಣಾ ವ್ಯವಸ್ಥೆಯನ್ನು ಜಾರಿಗೊಳಿಸಿ, ಪ್ರಸಕ್ತ ಯುಜಿಸಿ, ಎಐಸಿಟಿಇ ಮತ್ತಿತರ ಸಂಸ್ಥೆಗಳನ್ನು ಅನೂರ್ಜಿತಗೊಳಿಸುವ ಸಲಹೆ, ರಾಷ್ಟ್ರೀಯ ಜ್ಞಾನ ಸಮಿತಿಯ ಸಲಹೆಗಳಿಂದ ಭಿನ್ನವಾಗಿದೆ. ಆದರೆ ಈ ಎರಡೂ ಆಲೋಚನೆಗಳನ್ನು ಒಂದೇ ಎಂದು ಪ್ರತಿಪಾದಿಸುವ ಪ್ರಕ್ರಿಯೆ ಕಂಡುಬರುತ್ತಿದ್ದು ಸಂಸತ್ತಿನಲ್ಲಿ ರಾಷ್ಟ್ರಪತಿಗಳು

ಶಿಕ್ಷಣದ ಗುಣಮಟ್ಟ ತೀವ್ರವಾಗಿ ಕ್ಷೀಣಿಸುತ್ತಿದೆ. ಇದು ಸರ್ಕಾರಿ ಸಂಸ್ಥೆಗಳ ಪರಿಣಾಮವಾಗಿ ಅಲ್ಲದೆ ಖಾಸಗಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಪರಿಣಾಮವಾಗಿದೆ. ಜಾಗತಿಕ ಮಟ್ಟದಲ್ಲಿ ಕುಶಲ-ಶಿಕ್ಷಿತ ದುಡಿಮೆಗಾ ರರ ಬೇಡಿಕೆ ಹೆಚ್ಚಾಗಿರುವುದರಿಂದ ಈ ಬೇಡಿಕೆಯನ್ನು ಪೂರೈಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಜ್ಞಾನ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಖಾಸಗಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಲು ಆಯೋಜಿಸಿತ್ತು. ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಆಧಾರದಲ್ಲಿ ಈ ರೀತಿಯ ಸುಶಿಕ್ಷಿತ ಮತ್ತು ನಾಜೂಕಾದ ದುಡಿಯುವ ಗುಲಾಮರನ್ನು ತಯಾರಿಸಲು ಸಿದ್ಧವಾಗಿತ್ತು. ಈ ತಯಾರಿಕಾ ಚಟುವಟಿಕೆ ಲೇಬರ್ ಮಾರುಕಟ್ಟೆ ನಿಯಮಗಳಿಗೆ ಬದ್ಧವಾಗಿದ್ದು ಜಾಗತೀಕರಣದ ಹಿನ್ನೆಲೆಯಲ್ಲಿ ದುಡಿಮೆಗಾರರಿಗೆ ಬೇಡಿಕೆ ಹೆಚ್ಚಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು.

ಘೋಷಿಸಿದಂತೆ ಉನ್ನತ ಶಿಕ್ಷಣದ ರಾಷ್ಟ್ರೀಯ ಸಮಿತಿಯನ್ನು ಸ್ಥಾಪಿಸುವ ಯೋಜನ್ನೆ ಪ್ರಸ್ತಾಪಿಸಲಾಗುತ್ತಿದೆ. ಆದರೆ ಸರ್ಕಾರವು ಶಿಕ್ಷಣ ಕ್ಷೇತ್ರದ ಔದ್ಯಮೀಕರಣ ಮತ್ತು ವಾಣಿಜ್ಯೀಕರಣ ಪ್ರಕ್ರಿಯೆಯಿಂದ ಹಿಂದೆ ಸರಿಯುವ ಸಾಧ್ಯತೆಗಳು ಇಲ್ಲವೇ ಇಲ್ಲವೆಂದು ಹೇಳಬಹುದು.

ಮತ್ತೊಂದೆಡೆ ಆರ್ಥಿಕ ಹಿಂಜರಿತದಿಂದ ಉನ್ನತ ಶಿಕ್ಷಣದ ಮೇಲೆ ಉಂಟಾಗಿರುವ ಪರಿಣಾಮವನ್ನು ಪರಿಗಣಿಸದಿರುವುದೂ ಕಂಡುಬರುತ್ತದೆ. ಇಂದು ನಾವು ಕಾಣುತ್ತಿರುವ ಜಾಗತಿಕ ಆರ್ಥಿಕ ಹಿಂಜರಿತ ಸಾಮಾನ್ಯವಾದ ಬಿಕ್ಕಟ್ಟು ಎಂದು ಪರಿಗಣಿಸಲಾಗುವುದಿಲ್ಲ. ಆದರೂ ಸರ್ಕಾರವು ಈ ಬಿಕ್ಕಟ್ಟನ್ನು ಎದುರಿಸಲು ಗಂಭೀರ ಪ್ರಯತ್ನ ಮಾಡುತ್ತಿಲ್ಲ. ಈ ಹಿಂಜರಿತ ದೀರ್ಘಕಾಲ ಇರುವ ಸೂಚನೆಗಳಿದ್ದರೂ ಸರ್ಕಾರದ ವತಿಯಿಂದ ಯಾವುದೇ ರೀತಿಯ ಆಡಳಿತ ಸೂತ್ರಗಳನ್ನು ಆಯೋಜಿಸಿಲ್ಲ. ಮೇಲಾಗಿ ಸರ್ಕಾರದ ಶಿಕ್ಷಣ ನೀತಿಗಳು ಆರ್ಥಿಕ ಹಿಂಜರಿತವನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಪ್ರೋತ್ಸಾಹದಾಯಕವಾಗಿಲ್ಲ. ಸರ್ಕಾರದ ನೀತಿಗಳನ್ನು ರೂಪಿಸುವ ಯಾವುದೇ ಸಂಸ್ಥೆಗಳೂ, ರಾಷ್ಟ್ರೀಯ ಜ್ಞಾನ ಆಯೋಗವನ್ನೂ ಸೇರಿದಂತೆ, ಪ್ರಸ್ತುತ ಬಿಕ್ಕಟ್ಟನ್ನು ನಿವಾರಿಸಿ ಮುನ್ನಡೆಯುವಂತಹ ಯೋಜನೆಗಳನ್ನು ಪ್ರಸ್ತಾಪಿಸಿಲ್ಲ. ಪ್ರಸಕ್ತ ಶಿಕ್ಷಣ ನೀತಿಗಳಿಗೂ ವಾಸ್ತವ ಪರಿಸ್ಥಿತಿಗೂ ಸಾಮ್ಯತೆ ಇಲ್ಲದಿರುವುದು ವಿಪರ್ಯಾಸ.

ಮತ್ತೊಂದೆಡೆ ಮೆಕೆನ್ಸಿ ಅವರ ಪ್ರಕಾರ ಭಾರತದಲ್ಲಿನ ಶಿಕ್ಷಿತ ಸಮುದಾಯದಲ್ಲಿ, ವಿಶೇಷವಾಗಿ ಇಂಜಿನಿಯರುಗಳ ಪೈಕಿ, ಶೇ. 2.5ರಷ್ಟು ಮಾತ್ರ ಉದ್ಯೋಗ ಪಡೆಯಲು ಸಾಧ್ಯವಿದೆ. ಅಂತಾರಾಷ್ಟ್ರೀಯ ಮಟ್ಟಕ್ಕೆ ಹೋಲಿಸಿದರೆ ಇದು ಅತ್ಯಲ್ಪ ಪ್ರಮಾಣವಾಗುತ್ತದೆ. ಈ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ರಚಿಸಿರುವ ಸೂತ್ರಗಳೆಂದರೆ ಶಿಕ್ಷಣವನ್ನು ಹೆಚ್ಚು ನಿರ್ದಿಷ್ಟಗೊಳಿಸಿ ಕಾರ್ಪೋರೇಟ್ ಸಂಸ್ಥೆಗಳು ಅವರದೇ ಆದ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ, ತಾವೇ ರೂಪಿಸಿದ ಪಠ್ಯಕ್ರಮದ ಅನುಸಾರವಾಗಿ ದುಡಿಮೆಗಾರರನ್ನು ರೂಪಿಸಿಕೊಳ್ಳುವುದೇ ಆಗಿದೆ.

ಅಂತಿಮವಾಗಿ ಅನಿಲ್ ಸದಗೋಪಾಲ್ ಅವರ ಮಾತುಗಳಲ್ಲೇ ಹೇಳುವುದಾದರೆ "ಖಾಸಗೀಕೃತ ಉನ್ನತ ಶಿಕ್ಷಣದ ಬಗ್ಗೆ ಈ ಹಾಸ್ಯಮಯವಾದ ಭವಿಷ್ಯವನ್ನು ಸೂಚಿಸುವ ಆದರೆ ಭಯ ಹುಟ್ಟಿಸುವ ವಿವರಣೆಯನ್ನು ಉಲ್ಲೇಖಿಸಬಹುದು".

"ವರ್ಷ 2010. ದೆಹಲಿಯಲ್ಲಿ ಹೊಸದಾಗಿ ಪ್ರಾರಂಭವಾದ ಅತ್ಯಾಧುನಿಕ ಬಿಲ್ ಕ್ಲಿಂಟನ್ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯದ ಆವರಣ. ಇಬ್ಬರು ವಿದ್ಯಾರ್ಥಿನಿಯರು ಭೇಟಿಯಾಗುತ್ತಾರೆ. ಒಬ್ಬಳು ಮತ್ತೊಬ್ಬಳನ್ನು 'ಬಾ ಎಲ್ಲಾದರೂ ಹೋಗಿ ರಿಲಾಕ್ಸ್ ಮಾಡಿಕೊಳ್ಳೋಣ' ಎಂದು ಕರೆಯುತ್ತಾಳೆ. ಮತ್ತೊಬ್ಬಳು ಹೇಳುತ್ತಾಳೆ 'ನನಗೆ ದಿನವಿಡೀ ಬಿಡುವಿಲ್ಲದಷ್ಟು ಕೆಲಸವಿದೆ. ಮೊದಲನೆ ಪಿರಿಯಡ್ ಕೋಕಕೋಲ ಭೌತಶಾಸ್ತ್ರ ಪ್ರಯೋಗಾಲಯದಲ್ಲಿ ಯೂನಿಲಿವರ್ ಪ್ರಾಕ್ಟಿಕಲ್ಸ್ ಇದೆ, ಎರಡನೆ ಪಿರಿಯಡ್ ಪೆಪ್ಸಿ ಥಿಯೇಟರ್‌ನಲ್ಲಿ ಪಾಶ್ಚಿಮಾತ್ಯ ನೃತ್ಯದ ಬಗ್ಗೆ ಪ್ರಾಕ್ಟರ್ ಅಂಡ್ ಗ್ಯಾಂಬಲ್ ತರಗತಿ ಇದೆ, ತದನಂತರ ಮೈಕ್ರೋಸಾಫ್ಟ್ ಸಭಾಂಗಣದಲ್ಲಿ ಮಾಹಿತಿ ತಂತ್ರಜ್ಞಾನವನ್ನು ಕುರಿತ ಕಿರುಕುಕಿ ಉಪನ್ಯಾಸವಿದೆ ನಂತರವೇ ನನಗೆ ಬಿಡುವಾಗುತ್ತದೆ. ಯೂನಿಯನ್ ಕಾರ್ಬೈಡ್ ಚೌಕದಲ್ಲಿರುವ ಕೆಂಟುಕಿ ಚಿಕನ್ ಕ್ಯಾಂಟೀನಿನಲ್ಲಿ ಭೇಟಿಯಾಗೋಣ ಬಾ'" □

ದಾರುಣ



ನೀನು ನಿಂತಲ್ಲೆ ನಿಂತುಬಿಟ್ಟೆ
ಒಂದು ಹೆಜ್ಜೆ ಕೂಡ ಇಡದೆ
ನಿಂತಲ್ಲೆ ಕಲ್ಲಾಗಿ ಕುಳಿತುಬಿಟ್ಟೆ
ಎಲ್ಲ ಭಾವನೆಗಳ ಕಳಕೊಂಡು
ಎಂದೂ ಕೊನರದ ಮರವಾಗಿ ಬಿಟ್ಟೆ

ಸುತ್ತಲೂ ಇರಬಹುದು ಹಸಿರು ವನ
ಕೂಗುವ ಕೋಗಿಲೆಗಳ ಹಿಂಡು
ದುಂಬಿಗಾಗಿ ಕಾತರಿಸುವ ಹೂಗಳು
ನನ್ನಂತೆಯೇ ಕಂಗೊಳಿಸುವ ರೂಪಸಿಯರ ಸಾಲು
ಇಡೀ ಬಾನಿಗೇ ಬೆಳಕ ನುಗ್ಗಿಸಿ
ಕಾವುಟ್ಟಿಸುವ ಮಿಂಚ ಹೊನಲು!

ಇಡೀ ಬದುಕೇ ಜೀವ ಕಳಕೊಂಡಂತೆ
ನನ್ನತ್ತಲೇ ಕೆಕ್ಕರಿಸಿ ನೋಡುತಿದೆ
ನಿಂತಲ್ಲೆ ನಿಂತ ನಿನಗೆ
ನನ್ನೊಳಗಿನ ಗೊಂದಲವೇಕೆ ಅರ್ಥವಾಗುತ್ತಿಲ್ಲ
ಕಣ್ಣಗಲಿಸಿ ಕರೆದರೂ ನೀ ಬರುತಿಲ್ಲ!

ಉತ್ಸಾಹದ ದಟ್ಟ ಕಾನನದಲ್ಲಿ
ಬೇಸರದ ಮಿಗ ಸಂಕುಲ ವಾಸ
ಸಹಜ, ಎಲ್ಲವೂ ಈ ಜೀವನದಲ್ಲಿ
ನಕ್ಕ ಹಲ್ಲುಗಳೇ ಕಣ್ಣೀರು ಕೂಡ ಕುಡಿಯುತವೆ!

○ ಡಾ. ಪಿ. ಸತೀಶ್

ಸಪ್ಪಳವಿಲ್ಲದೆ ಕೆಲಸ ಮಾಡುವ ಸುರಕೋಡರು

ಪ್ರೊ॥ ರಹಮತ್ ತರೀಕೆರೆ

ಕನ್ನಡದ ಪ್ರಮುಖ ಅನುವಾದಕರಲ್ಲಿ ಒಬ್ಬರಾದ ಹಸನ ನಯೀಮ ಸುರಕೋಡ ಅವರು, ಒಮ್ಮೆ ಒಂದು ಸ್ವಾರಸ್ಯಕರ ಸಂಗತಿ ಹೇಳಿದರು: ಪಟ್ಟಣದಲ್ಲಿ ಬೆಳೆದ ಅವರಪ್ಪ ಉರ್ದುಭಾಷಿಕನಂತೆ; ಗ್ರಾಮೀಣ ಹಿನ್ನೆಲೆಯಿಂದ ಬಂದ ಅವರ ಅವ್ವ ಕನ್ನಡ ಭಾಷಿಕಳಂತೆ; ಹೀಗಿರುವಾಗ, ಸುರಕೋಡರ ಅವ್ವ-ತನ್ನ ಗಂಡ ಸರಿಯಾದ ವಿಚಾರಣೆ ಮಾಡದೆ ಯಾರೊ ಒಬ್ಬನಿಗೆ ಕೊಟ್ಟು, ಮಗಳ ಬಾಳು ಹಾಳು ಮಾಡಿದನೆಂದು-ಮಾತುಬಿಟ್ಟಳು. ಆಗ ಸುರಕೋಡರಿಗೆ ಅವ್ವನ ಮಾತನ್ನು ಅಪ್ಪನಿಗೂ ಅಪ್ಪನ ಮಾತನ್ನು ಅವ್ವನಿಗೂ ಅನುವಾದಿಸಿ ಹೇಳಬೇಕಾಗಿ ಬಂತು. ಇದುವೇ ಅವರಿಗೆ ಅನುವಾದದ ಪ್ರಥಮ ಪಾಠಗಳನ್ನು ಕಲಿಸಿತಂತೆ.

ಈ ಸನ್ನಿವೇಶವನ್ನು ವಿವರಿಸುವಾಗ ಸುರಕೋಡರಿಗೆ ಗಂಟಲು ತುಂಬಿಬಂದಿತ್ತು. ಈ ಎರಡು ಭಾಷೆಗಳ ನಡುವೆ ಅನುವಾದ ಮಾಡುವುದು ಸುಲಭ; ಮನಸ್ಸು ಮುರಿದುಕೊಂಡು ಮಾತುಬಿಟ್ಟ ಜೀವಗಳ ಭಾವನೆಗಳನ್ನು ಅನುವಾದಿಸುವುದು ಕಷ್ಟದ ಕೆಲಸ. ಸಾಹಿತ್ಯಕ ಶೈಕ್ಷಣಿಕವಾದ ಕೆಲಸವೆಂದು ಸಾಮಾನ್ಯವಾಗಿ ಭಾವಿಸಿರುವ ಕೆಲಸದ ಹಿಂದೆ ಏನೆಲ್ಲ ಪ್ರೇರಣೆ ಇದ್ದಾವೊ ಎಂದು ಸೋಜಿಗವಾಗುತ್ತದೆ. ಈ ಪ್ರಸಂಗವು ಅನುವಾದದಲ್ಲಿರುವ ವಿಚಿತ್ರವಾದ ಪರಿಕಲ್ಪನಾತ್ಮಕ ಸವಾಲು ಗಳನ್ನೂ ಸೂಚಿಸುತ್ತಿದೆ. ಬಹಳ ಜನ ಅಂದುಕೊಂಡಿರುವಂತೆ, ಅನುವಾದವೆಂಬುದು ಒಂದು ಭಾಷೆಯಲ್ಲಿರುವುದನ್ನು ಇನ್ನೊಂದು ಭಾಷೆಗೆ ತರುವ ಯಾಂತ್ರಿಕ ಕೆಲಸವಲ್ಲ. ಅದು ಎರಡು ಸಂಸ್ಕೃತಿಗಳ ನಡುವೆ ನಡೆಯುವ ವಿನಿಮಯ. ಜಗತ್ತಿನ ಯಾವುದೊ ಸಮುದಾಯದ ಅನುಭವವನ್ನು ತನ್ನ ಸಮುದಾಯಕ್ಕೆ, ಅದರ ಒಳ ಅಗತ್ಯಗಳನ್ನು ಪರಿಭಾವಿಸಿ ತಂದುಕೊಳ್ಳುವ ಕೆಲಸ. ಇದು ಒಂದು ಜೀವ ಪರಿಭಾವಿಸಿದ್ದನ್ನು ಹಲವು ಜೀವಗಳಿಗೂ, ಒಂದು ಭಾಷೆ ಅಭಿವ್ಯಕ್ತಿಸಿದ್ದನ್ನು ಇನ್ನೊಂದು ಭಾಷೆಯ ಜಾಯಮಾನಕ್ಕೂ ರೂಪಾಂತರಿಸುವ ಕೆಲಸ ಕೂಡ.

ಅದ್ಭುತ ಘಟಿಸುವುದು ಈ ರೂಪಾಂತರ ಪ್ರಕಿಯೆಯಲ್ಲೆ. ಅದರಲ್ಲೂ ಸೃಜನಶೀಲ ಮನಸ್ಸು ಈ ಕೆಲಸದಲ್ಲಿ ತೊಡಗಿರುವಾಗ, ಒಂದು ಕಡೆ ಇರುವುದು ಮತ್ತೊಂದೆಡೆಗೆ ಹಾಗೆ ಸರಳವಾಗಿ ತದ್ವತ್ತಾಗಿ ಬರುವುದಿಲ್ಲ. ಅದರಲ್ಲಿ ಯಾವುದೊ ಕೆಲವು ಪಲ್ಲಟಗಳು ಸಂಭವಿಸುತ್ತವೆ. ಕೊನೇಪಕ್ಷ ಅನುವಾದಿಸುವವರ ಮನದೊಳಗಿನ ಆಶೋತ್ತರಗಳು ಮತ್ತು ಅನುವಾದಕ್ಕೆ ಬಳಸುತ್ತಿರುವ ಭಾಷೆಯ ಜಾಯಮಾನದ ಅರ್ಥಗಳು ಹೇಗೋ ನುಸುಳಿ ಬಿಡುತ್ತವೆ. ಅನುವಾದ ಸೃಷ್ಟಿಕ್ರಿಯೆಯೂ ಆಗುವುದು ಹೀಗೆ. ನಿರ್ದಿಷ್ಟ ರೂಪದಲ್ಲಿರುವ ಒಂದನ್ನು ಮತ್ತೊಂದು ರೂಪಕ್ಕೆ ಬದಲಿಸುವುದನ್ನೆಲ್ಲ ವಿಶಾಲ ಅರ್ಥದಲ್ಲಿ ಅನುವಾದ ಎಂದು ಗ್ರಹಿಸುವುದಾದರೆ, ಅಕ್ಕಿ ಅನ್ನವಾಗುವುದು, ಅನುಭವವೊಂದು ಕಲೆಯಾಗಿ ಮಾರ್ಪಡುವುದು, ಶಿಷ್ಯನೊಬ್ಬ ಗುರುವಿನ ವಿದ್ಯೆ ಪಡೆದು ರೂಪುಗೊಳ್ಳುವುದು, ವೀರ್ಯಾಣು ಅಂಡಾಣುಗಳು ಕೂಡಿ ಕೂಸೆಂಬ ಕೃತಿಗೆ ಕಾರಣವಾಗುವುದು, ನೀರು ಮೋಡವಾಗುವುದು, ಮೋಡ ಮಳೆಯಾಗುವುದು. ಮಳೆಭೂಮಿ ಸೇರಿ ಪೈರು ಪಚ್ಚೆಯಾಗಿ ಮಾರ್ಪಡುವುದು- ಎಲ್ಲವೂ ಅನುವಾದದ ವಿಭಿನ್ನ ರೂಪಗಳಂತೆ ತೋರತೊಡಗುತ್ತವೆ. ನೋಡುತ್ತ ಹೋದರೆ, ಜಗತ್ತಿನ ಸರ್ವಕ್ರಿಯೆಗಳೂ ಅನುವಾದದ ವಿರಾಟ್‌ಲೀಲೆ ಅನಿಸತೊಡಗುತ್ತದೆ. ರಾಮದುರ್ಗದಂತಹ ಚಿಕ್ಕ ಪಟ್ಟಣದಲ್ಲಿ ಸಣ್ಣಪ್ರಾಯದ ಹುಡುಗನೊಬ್ಬ ಭಗ್ನಗೊಂಡ ತಂದೆತಾಯಂದಿರ ನಡುವೆ ಮಧ್ಯವರ್ತಿಯಂತೆ ಕೆಲಸ ಮಾಡಿದ್ದು ಕೂಡ, ಈ ಅನುವಾದದ ವಿರಾಟ್‌ಲೀಲೆಯ ಒಂದು ಭಾಗವಿರಬೇಕು.



2. ಹಸನ್ ನಯೀಂ ಸುರಕೋಡರಿಗೆ ಈಚೆಗೆ 60 ವರ್ಷ ತುಂಬಿದವು. ಅವರು ಅನುವಾದಿಸಿದ ಅಮೃತಾ ಪ್ರೀತಮರ ಆತ್ಮಕತೆ 'ರಸೀದಿ ತಿಕೀಟು'ಗೆ ಕೇಂದ್ರ ಸಾಹಿತ್ಯ ಅಕಾದೆಮಿಯ ಅನುವಾದ ಪ್ರಶಸ್ತಿಯೂ ಬಂದಿತು. ಅವರ ಕೃತಿಗಳನ್ನು ಪ್ರಕಟಿಸಿರುವ ಲೋಹಿಯಾ ಪ್ರಕಾಶನದ ಚೆನ್ನಬಸವಣ್ಣ, ಈ ನೆಪದಲ್ಲಿ ಅವರನ್ನು ಗೌರವಿಸುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು-ಹಾವೇರಿಯಲ್ಲಿ. ಅದು ಲೋಹಿಯಾ ಜನ್ಮ ಶತಮಾನೋತ್ಸವದ ಕಾರ್ಯಕ್ರಮ ಕೂಡ ಆಗಿತ್ತು. ಅದರೊಳಗೇ ಹಾವೇರಿಯ ಪ್ರಸಿದ್ಧ ರಂಗನಟಿ ಮತ್ತು ಗಾಯಕಿ ಜುಬೇದಾಬಾಯಿ ಸವಣೂರರನ್ನು ಕುರಿತ ಪುಸ್ತಕದ ಬಿಡುಗಡೆಯೂ ಇತ್ತು. ಬಿಹಾರದ ಬನಿಯಾ ಕುಟುಂಬದಲ್ಲಿ ಹುಟ್ಟಿದ ಲೋಹಿಯಾ, ಪಂಜಾಬಿ ಲೇಖಕಿ ಅಮೃತಾಪ್ರೀತಮರ ಆತ್ಮಕತೆ ಅನುವಾದಿಸಿರುವ ರಾಮದುರ್ಗದ ಸುರಕೋಡ, ಬಳ್ಳಾರಿಯ ಚೆನ್ನಬಸವಣ್ಣ, ಕಾರ್ಯಕ್ರಮ ಸಂಘಟಿಸಿದ್ದ ಹಾವೇರಿಯ ಮಿತ್ರ ಸತೀಶ ಕುಲಕರ್ಣಿ-ಎತ್ತಣಿಂದೆತ್ತ ಸಂಬಂಧವಯ್ಯ ಎಂದು ನಾನು ಯೋಚಿಸುತ್ತ ಸಭೆಯಲ್ಲಿ ಕುಳಿತಿದ್ದೆ.

ಕಾರ್ಯಕ್ರಮಕ್ಕೆ ನಾಡಿನಾದ್ಯಂತ ಇರುವ ಸುರಕೋಡರ ಸಂಗಾತಿಗಳು ಬಂದಿದ್ದರು. ಲೋಹಿಯಾರ 'ಜಾತಿಪದ್ಧತಿ'ಯನ್ನು ಅನುವಾದಿಸಿದ ಸುರಕೋಡರ ರಾಜಕೀಯ ಹಿನ್ನೆಲೆಯನ್ನೂ ಸೈದ್ಧಾಂತಿಕ ಬದ್ಧತೆಯನ್ನೂ ಜಾತ್ಯತೀತ ಸ್ವರೂಪವನ್ನೂ ಸೂಚಿಸುವಂತಹ ಗೆಳೆಯರ ಬಳಗವದು. ಅವರು ತಮ್ಮ ಮುನ್ನುಡಿಗಳಲ್ಲಿ ನೆನೆಯುವ ಸಂಗಾತಿಗಳ ಪಟ್ಟಿ ನೋಡಿದರೂ ಇದು ಸ್ಪಷ್ಟವಾಗುತ್ತದೆ. ಜಾತಿಧರ್ಮಗಳು ಸೂಕ್ಷ್ಮವಾಗಿ ನಮ್ಮ ದೈನಿಕ ವರ್ತನೆಗಳನ್ನು ನಿಯಂತ್ರಿಸುವ ಸಮಾಜದಲ್ಲಿ ಬದುಕುವಾಗ, ನಮ್ಮ ಒಟನಾಟ ಯಾರ ಜತೆಗಿರುತ್ತದೆ ಎಂಬುದು ಯಾವಾಗಲೂ ಅಗ್ನಿಪರೀಕ್ಷೆಯ ಸಂಗತಿ.

ಸುರಕೋಡರ ಜಾತ್ಯತೀತ ಸಂಗಾತಿಗಳ ಸಹವಾಸ ನನ್ನ ಅನುಭವಕ್ಕೂ ಬಂದಿದೆ. ಒಮ್ಮೆ ಒಬ್ಬ ಜನಪದ ಗಾಯಕನನ್ನು ಹುಡುಕಿಕೊಂಡು ರಾಮದುರ್ಗಕ್ಕೆ ಹೋಗಿದ್ದೆ. ಅವನು ಮನೆಯಲ್ಲಿರಲಿಲ್ಲ. ಸಿರಸಂಗಿಗೆ ಹೋಗಿದ್ದನು. ಏನೂ ತೋಚದೆ ಚಾದಂಗಡಿಯಲ್ಲಿ ಕುಳಿತು, ಸುರಕೋಡರಿಗೆ ಫೋನು ಮಾಡಿದೆ. ಕೂಡಲೇ ಕಿಂದರಿ ಜೋಗಿಯಂತೆ ತಮ್ಮ ಶಿಷ್ಯರ ಮತ್ತು ಗೆಳೆಯರ ದಂಡಿನ ಜತೆ ಪ್ರತ್ಯಕ್ಷವಾದರು. ಅವರ ಶಿಷ್ಯರು ಸಮಸ್ತ

ಸುರಕೋಡರ ಜಾತ್ಯತೀತ ಸಂಗಾತಿಗಳ ಸಹವಾಸ ನನ್ನ ಅನುಭವಕ್ಕೂ ಬಂದಿದೆ. ಒಮ್ಮೆ ಒಬ್ಬ ಜನಪದ ಗಾಯಕನನ್ನು ಹುಡುಕಿಕೊಂಡು ರಾಮ ದುರ್ಗಕ್ಕೆ ಹೋಗಿದ್ದೆ. ಅವನು ಮನೆಯಲ್ಲಿರಲಿಲ್ಲ. ಸಿರಸಂಗಿಗೆ ಹೋಗಿದ್ದನು. ಏನೂ ತೋಚದೆ ಚಾದಂಗಡಿಯಲ್ಲಿ ಕುಳಿತು, ಸುರಕೋಡರಿಗೆ ಫೋನು ಮಾಡಿದೆ. ಕೂಡಲೇ ಕಿಂದರಿ ಜೋಗಿಯಂತೆ ತಮ್ಮ ಶಿಷ್ಯರ ಮತ್ತು ಗೆಳೆಯರ ದಂಡಿನ ಜತೆ ಪ್ರತ್ಯಕ್ಷವಾದರು. ಅವರ ಶಿಷ್ಯರು ಸಮಸ್ತ ಧರ್ಮ ಜಾತಿಗಳಿಗೆ ಸೇರಿದವರು. ಮಾಜಿ ಶಾಸಕರಿಂದ ಹಿಡಿದು, ಮುನಿಸಿಪಾಲಿಟಿ ಸದಸ್ಯರು, ಶಿಕ್ಷಕರು, ವ್ಯಾಪಾರಿಗಳ ತನಕ ಎಲ್ಲ ಕ್ಷೇತ್ರದಲ್ಲಿರುವವರು. ಎಲ್ಲರೂ ಸೇರಿ, ಊಟ ಮಾಡಿ, ಮಾತುಕತೆ ಆಡಿದೆವು.

ಧರ್ಮಜಾತಿಗಳಿಗೆ ಸೇರಿದವರು. ಮಾಜಿ ಶಾಸಕರಿಂದ ಹಿಡಿದು, ಮುನಿ ಸಿಪಾಲಿಟಿ ಸದ್ಯಸ್ಯರು, ಶಿಕ್ಷಕರು, ವ್ಯಾಪಾರಿಗಳ ತನಕ ಎಲ್ಲ ಕ್ಷೇತ್ರದಲ್ಲಿರುವವರು. ಎಲ್ಲರೂ ಸೇರಿ, ಊಟ ಮಾಡಿ, ಮಾತುಕತೆ ಆಡಿದೆವು. ಚರ್ಚೆಯಲ್ಲಿ ಜ಼ಾಹಿರ್ ಅವರ ಕಾವ್ಯ, ಮಹಮದ್ ರಫಿಯ ಹಾಡು, ಲೋಹಿಯಾರ ಹೋರಾಟ, ಲಂಕೇಶರ ಬರವಣಿಗೆ, ಬಿ.ಸಿ.ದೇಸಾಯರ ಘನತೆವೆತ್ತ ವ್ಯಕ್ತಿತ್ವ, ಪ್ರೇಮಚಂದರ ಕತೆ, ಗೋಪಾಲಗೌಡರ ದೊಡ್ಡತನ, ಮುಸ್ಲಿಂ ಪುರೋಹಿತಶಾಹಿ, ಹಿಂದೂ ಕೋಮುವಾದ, ಸರ್ಕಾರದ ಕಾರ್ಯವೈಖರಿ –ಎಲ್ಲವೂ ಬಂದು ಹೋದವು.

ಚರ್ಚೆ ಮುಗಿಯುವಾಗ ಬೆಳಗಿನ ಜಾವ. ಬಹಳ ಸಂಕೋಚ ಸ್ವಭಾವದ, ಅಂತರ್ಮುಖಿಯಾದ, ಮೆದುಮಾತಿನ, ಸುಲಭಕ್ಕೆ ಬಿಚ್ಚಿಕೊಳ್ಳದ ಸುರಕೋಡರು, ತಮ್ಮ ಆಪ್ತರಿದ್ದಾಗ ಮತ್ತು ಕೊಂಚ ಗುಂಡು ಬಿದ್ದಾಗ, ಮಹಾ ವಾಚಾಳಿ. ಕೆಲವೊಮ್ಮೆ ಮಾತು ಅತಿಯ ಅಂಚನ್ನೂ ಮುಟ್ಟಿ ಬರುವುದುಂಟು. ಹಗಲಲ್ಲಿ ಸಾರ್ವಜನಿಕವಾಗಿ ಆಡಲಾಗದ್ದನ್ನೆಲ್ಲ ನಸುಗತ್ತಲಿನಲ್ಲಿ ಸುರಕೋಡರು ತೆರೆದು ಸುರಿಯುತ್ತಾರೆ. ನಡುವೆ ಹಾಡನ್ನೂ ಹಾಡುತ್ತಾರೆ. ಅವರ ಮಾತು ಕೇಳಲೆಂದೇ ಅವರ ಗೆಳೆಯರು ಅವರಿಗೆ ಪಾರ್ಟಿ ಕೊಡುತ್ತಾರೇನೊ ಅನಿಸುತ್ತದೆ.

3. ಆದರೆ ಸುರಕೋಡರು ಲೌಕಿಕ ಲೆಕ್ಕಾಚಾರದಲ್ಲಿ ಅಷ್ಟು ಚತುರರಲ್ಲ. ರಾಮದುರ್ಗದ ಮಾಜಿಸ್ಲಮ್ಮಿನಂತಹ ಮಡ್ಡಿಗಲ್ಲಿಯಲ್ಲಿರುವ ಅವರ ಝಿಂಕ್‌ಶೀಟಿನ ಮನೆಯನ್ನು ನೋಡಿದರೇ ಇದು ಹೊಳೆಯುತ್ತದೆ. ಕುಟುಂಬದಲ್ಲಿ ಅನೇಕ ಅಕಾಲಿಕ ಸಾವುಗಳನ್ನೂ ದುರಂತಗಳನ್ನೂ ಕಂಡು ಹಣ್ಣಾಗಿರುವ ಸುರಕೋಡರರದು, ನಿಶ್ಚಿತವಾದ ಆದಾಯವಿಲ್ಲದ ನಿತ್ಯ ಹೋರಾಟದ ಬದುಕು. ಶಾಲೆ ಕಲಿಯದ ಅವರ ಮಡದಿ, ತಲೆಯಲ್ಲಿ ಏನೇನೊ ಆದರ್ಶ ಹುಚ್ಚುಗಳನ್ನು ತುಂಬಿಕೊಂಡು ತಿರುಗಾಡುವ ವ್ಯಕ್ತಿಯನ್ನು ಲಗ್ನವಾಗಿ, ಮನೆಯನ್ನು ಕಷ್ಟಪಟ್ಟು ಸಂಭಾಳಿಸಿದ್ದಾರೆ ಎಂದು ಯಾರೂ ಊಹಿಸಬಹುದು. ಎಂ.ಡಿ. ನಂಜುಂಡಪ್ಪನವರ ಶಿಷ್ಯರಾಗಿ, ಕರ್ನಾಟಕ ವಿವಿಯಲ್ಲಿ ಅರ್ಥಶಾಸ್ತ್ರದಲ್ಲಿ ಎಂ.ಎ ಪದವಿಯನ್ನು ಪಡೆದಿರುವ ಸುರಕೋಡರು, ಲೆಕ್ಚರರ್ ಆಗಿದ್ದರೆ ಇಷ್ಟುಹೊತ್ತಿಗೆ ಎಲ್ಲಾದರೂ ಪ್ರಿನ್ಸಿಪಾಲರಾಗಿ ನಿವೃತ್ತರಾಗುತ್ತಿದ್ದರು. ಆದರೆ ಅವರ ಅಂಕಪಟ್ಟಿ ಬಡಕಲಾಗಿತ್ತು. ಬಹುಶಃ ಈ ಯಜಮಾನರು ಸರಿಯಾಗಿ ಕ್ಲಾಸಿಗೇ ಹೋದಂತಿಲ್ಲ. 'ನೀವು ನೋಡಿದರೆ ಎಕನಾಮಿಕ್ಸ್ ನವರು.

ಈ ಸಾಹಿತ್ಯ ಸಿನಿಮಾಗಳತ್ತ ಹೇಗೆ ಬಂದಿರಿ?' ಎಂದು ನಾನೊಮ್ಮೆ ಕೇಳಿದೆ. 'ನಮ್ಮ ಯೂನಿವರ್ಸಿಟಿಗಳಲ್ಲಿ ಕಲಿಸೋದು ಅರ್ಥಶಾಸ್ತ್ರವಲ್ಲ ಸಾರ್, ಅದು ಅನರ್ಥಶಾಸ್ತ್ರ. ಅದು ಬರೇ ಬಂಡವಾಳಶಾಹಿಯ ವಿಜೃಂಭಣೆ ಮಾಡ್ತದ. ನನಗೂ ಅದಕ್ಕೂ ಸರಿಹೋಗಲಿಲ್ಲ' ಎಂದರು. ಅವರು ಯೂನಿವರ್ಸಿಟಿಯಲ್ಲಿದ್ದಾಗ ತರಗತಿ ತಪ್ಪಿಸಿ ಮಾಡುತ್ತಿದ್ದ ಘನಕಾರ್ಯಗಳೆಂದರೆ, ಸಿನಿಮಾ ನೋಡುವುದು, ಲೈಬ್ರರಿಗೆ ಹೋಗಿ ತಮಗೆ ಪ್ರಿಯವಾದ ಅನಕೃ ಕಾದಂಬರಿ ಹಿಡಿದು ಕೂರುವುದು ಮತ್ತು ಹಾಲಿ ಅರ್ಥಶಾಸ್ತ್ರವನ್ನ ಕಟುವಾಗಿ ಟೀಕಿಸುವ ನಾರ್ತಕೋಟ್ ಪಾರ್ಕಿನ್ಸನ್ನನ ಮುಂತಾದ ಕೃತಿಗಳನ್ನು ಓದುವುದು.

ಸುರಕೋಡರ ಪ್ರಮುಖ ಆಸಕ್ತಿಗಳು ರಾಜಕಾರಣ, ಸಾಹಿತ್ಯ, ಸಿನಿಮಾ. ಇವು ಭಾರತದ ಬಹುತೇಕ ಸಮಾಜವಾದಿಗಳ ಟಿಪಿಕಲ್ ಆಯ್ಕೆಗಳು ಕೂಡ. ಅನೇಕ ಸಮಾಜವಾದಿಗಳ ಜೀವನದಲ್ಲಿ ರಾಜಕಾರಣವು ಎಲ್ಲಿ ಮುಗಿದು

ವಿಶೇಷ ಸಂಗತಿಯೆಂದರೆ, ರಾಮದುರ್ಗದಂತಹ ತಾಲೂಕು ಪಟ್ಟಣದಲ್ಲಿದ್ದ ಸುರಕೋಡರು ಭಾರತದಾದ್ಯಂತ ಅನೇಕ ಲೇಖಕರ ಜತೆ ಸಂಬಂಧ ಇರಿಸಿಕೊಂಡಿದ್ದು. ತಮ್ಮಗೆ ಪ್ರಿಯರಾದ ಗೋಪಾಲಗೌಡರನ್ನಾಗಲಿ, ಲೋಹಿಯಾರನ್ನಾಗಲಿ ಜೀವನದಲ್ಲಿ ಕಂಡಿರದ ಸುರಕೋಡರು, ಮಧುಲಿಮಯೆ ಹಾಗೂ ಕಿಶನ್ ಪಟ್ನಾಯಕ್ ಜತೆ ಪತ್ರ ವ್ಯವಹಾರ ಇರಿಸಿಕೊಂಡಿದ್ದರು. ಕರ್ನಾಟಕದ ಸಮಾಜವಾದಿಗಳಲ್ಲಿ ಜೆ.ಎಚ್. ಪಟೇಲ್ ಮುಂತಾದ ಉಳ್ಳವರೂ ಇದ್ದಾರೆ. ಅಬ್ಬಿಗೇರಿಯಂತಹ ಇಲ್ಲದವರೂ ಇದ್ದರು. ತಾವಿದ್ದ ಊರಿಗೆ ಲೋಹಿಯಾ ಅವರನ್ನೇ ಕರೆಸಿಕೊಂಡಿದ್ದ ಅಬ್ಬಿಗೇರಿ, ಹರಿದು ಹೋದ ಹವಾಲಿ ಚಪ್ಪಲಿ ಹಾಕಿಕೊಂಡು ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದಾಗ, ಕೆಲವರಿಗೆ ಶಾಕ್ ಆಗಿತ್ತು. ನೀಲಗಂಗಯ್ಯ ಪೂಜಾರರ ಸಂದರ್ಶನಕ್ಕೆಂದು ನಾನು ಹೋದಾಗ, ಇವರು ಹಿಂದೆ ಶಾಸಕರಾಗಿದ್ದರೇ ಎಂದು ಸೋಜಿಗ ಪಡುವಷ್ಟು ಸಾಧಾರಣ ಸ್ಥಿತಿಯಲ್ಲಿ ಅವರು ಜೀವಿಸಿದ್ದರು.

ಸಾಹಿತ್ಯ ಸಂಗೀತ ಸಿನಿಮಾಗಳು ಎಲ್ಲಿ ಆರಂಭ ವಾಗುತ್ತವೆ ಎಂದು ಹೇಳುವುದೇ ಸಂದಿಗ್ಧ. ಸುರಕೋಡರಿಗೆ 'ಸಾಹಿತ್ಯ ಮತ್ತು ರಾಜಕಾರಣದಲ್ಲಿ ನಿಮ್ಮ ಆಯ್ಕೆ ಯಾವುದು?' ಎಂದು ಕೇಳಿದೆ. ತಟ್ಟನೆ ಹೇಳಿದರು: 'ಲಂಕೇಶ್ ಮತ್ತು ಶಾಂತವೇರಿ ಗೋಪಾಲಗೌಡ'. ಕೆಲವರು ಸೇರಿ ತಮ್ಮನ್ನು ಮುಖ್ಯಮಂತ್ರಿ ಮಾಡಲು ಯತ್ನಿಸುವಾಗ ಗೋಪಾಲಗೌಡರು ತಿರಸ್ಕರಿಸಿದ್ದು; ಅಧ್ಯಾಪಕನಾಗಿ ವಿಶ್ವವಿದ್ಯಾಲಯದಲ್ಲಿ ಇರಬಹುದಾಗಿದ್ದ ಪತ್ರಕರ್ತನಾಗಿ ಲಂಕೇಶ್ ಸಾರ್ವಜನಿಕ ಜೀವನಕ್ಕೆ ಧುಮುಕಿದ್ದು, ಇವರಿಗೆ ದೊಡ್ಡ ಆದರ್ಶದಂತೆ ಕಂಡವಂತೆ.

ಸುರಕೋಡರ ಈ ಎರಡು ವ್ಯಕ್ತಿತ್ವಗಳ ಆಯ್ಕೆಗಳಲ್ಲಿ ಕೆಲವು ವಿಚಿತ್ರ ಸಾಮ್ಯಗಳಿವೆ. ಇಬ್ಬರೂ ಆದರ್ಶವಾದಿಗಳು; ನಾಡನ್ನು ಕಟ್ಟುವಲ್ಲಿ ತಮ್ಮನ್ನು ತೊಡಗಿಸಿಕೊಂಡವರು; ಹೊಂದಾಣಿಕೆಯಾಗದ ವೈರುಧ್ಯಗಳಿದ್ದವರು; ತಪ್ಪುಮಾಡುತ್ತಿದ್ದವರು; ಪರಿತಾಪ ಪಡುತ್ತಿದ್ದವರು. ಸುರಕೋಡರ ಮೇಲೆ ಪ್ರಭಾವ ಬೀರಿರುವ ಇತರರೆಂದರೆ, ಕಿಶನ್ ಪಟ್ನಾಯಕ್, ಅಸಘರಲಿ ಇಂಜಿನಿಯರ್, ಮಧುಲಿಮಯೆ, ಕರ್ಪೂರಿ ಠಾಕೂರ್. ಸುರಕೋಡರ ಪ್ರಕಾರ ಕರ್ಪೂರಿ ಠಾಕೂರರು ಬಿಹಾರದ ಗೋಪಾಲಗೌಡರು.

ಸುರಕೋಡರ ಅಭಿರುಚಿಗಳಂತೆ ಅವರ ಬದುಕಿನ ವಿದ್ಯಮಾನಗಳೂ ವೈವಿಧ್ಯಮಯವಾಗಿವೆ. ಬಹುಶಃ ಇದು ಅವರ ಅಜ್ಜನಿಂದ ಬಂದ ಗುಣವಿರಬೇಕು. ಅವರ ಅಜ್ಜ ಬಡಗಿ, ಗೌಂಡಿ, ನೇಕಾರ ಮತ್ತು ರೈತ ಎಲ್ಲವೂ ಆಗಿದ್ದನಂತೆ. ಮರಾಠಿ ಉರ್ದು ಕನ್ನಡ ಫಾರಸಿ ಬಲ್ಲವನಾಗಿದ್ದ ಆತ, ಎಂ.ಎನ್. ರಾಯ್ ಅವರ ಅನುಯಾಯಿಯಂತೆ. ತೀರಿಕೊಂಡಾಗ ಆತನ ದೊಡ್ಡ ಸಂದೂಕದಲ್ಲಿ ಬರಿಯ ಪುಸ್ತಕಗಳೇ ಇದ್ದವಂತೆ. ಸುರಕೋಡರು ಬಹಳ ಇಷ್ಟಪಡುವ ಕಾರಂತರ 'ಹುಚ್ಚುಮನಸ್ಸಿನ ಹತ್ತುಮುಖಗಳ'ಂತೆ ಅವರ ಮತ್ತು ಅವರಜ್ಜನ ಅಭಿರುಚಿಗಳಿಗೆ ಹರಿದು ಕ್ಷೇತ್ರಗಳಲ್ಲಿ ಹಂಚಿಹೋಗಿವೆ. ಸಮಾಜವಾದಿ ಆದರ್ಶಗಳಿಂದ ತುಡಿಯುತ್ತಿದ್ದ ಸುರಕೋಡರು, ರಘುರಾಮಶೆಟ್ಟರ ಸಂಪಾದಕತ್ವದ 'ಮುಂಗಾರು' ಪತ್ರಿಕೆಗೆ ಸೇರಿದರು. ಅಲ್ಲಿ ಅವರಿಗೆ ಸಂಗಾತಿಗಳಾಗಿದ್ದವರು ಕೆ. ರಾಮಯ್ಯ ಇಂದೂಧರ ಹೊನ್ನಾಪುರ, ಕೆ. ಪುಟ್ಟಸ್ವಾಮಿ, ಎನ್.ಎಸ್. ಶಂಕರ್, ಮುಂತಾದವರು.

ತಾತ್ವಿಕ ಭಿನ್ನಮತದಿಂದ ಇವರೆಲ್ಲರೂ ಪತ್ರಿಕೆಗೆ ಸಾಮೂಹಿಕ ರಾಜಿನಾಮೆ ನೀಡಿ ಹೊರಬಂದಾಗ, ಸುರಕೋಡರು ಮಂಗಳೂರಿನಿಂದ ರಾಮದುರ್ಗಕ್ಕೆ ಬಂದರು; ಬಂದವರೇ ಹಾಲು, ಪೇಪರ್, ಎಲ್‌ಐಸಿಗಳ ಏಜೆನ್ಸಿ ತೆಗೆದುಕೊಂಡು ಹೊಸ ಜೀವನ ಶುರುಮಾಡಿದರು. ಕೆಲವು ದಿನ ಜಮಖಾನೆಗಳ ವ್ಯಾಪಾರ; ಮತ್ತೆ ಕೆಲಕಾಲ ನೇಂಪ್ಲೇಟ್ ಮಾಡಿಸುವ ಕೆಲಸ. ಜತೆಗೆ, ಊರ ಹೊರಗೆ ಪಾಳುಬಿದ್ದ ಸುಂಕದಕಟ್ಟೆಯಲ್ಲಿ ಮಕ್ಕಳಿಗೆ ಇಂಗ್ಲಿಷ್ ಟೂಶನ್ ಹೇಳುವುದು. 'ಅಂಗ್ರೇಜಿ ಹಟಾವೊ' ಚಳುವಳಿ ಮಾಡಿದ ಲೋಹಿಯಾರ ಅನುಯಾಯಿಯೊಬ್ಬರು, ಇಂಗ್ಲೀಶಿನಲ್ಲಿ ಫೇಲಾಗುವ ಗ್ರಾಮೀಣ ಮಕ್ಕಳಿಗೆ ಪಾಠ ಹೇಳಬೇಕಾಗಿದ್ದು ಚಾರಿತ್ರಿಕ ವ್ಯಂಗ್ಯವೊ, ಇಂಗ್ಲೀಶನ್ನು ಎದುರಿಸಲು ತುಂಬಿದ ನೈತಿಕ ಧೈರ್ಯವೊ ಹೇಳುವುದು ಕಷ್ಟ. ಅದರ ಸುದ್ದಿ ಬಂದಾಗ ಮಾತ್ರ ಅವರು 'ಸಾರ್, ನನ್ನ ವಿದ್ಯಾರ್ಥಿಗಳ್ಯಾರೂ ಫೇಲ್ ಆಗಲಿಲ್ಲ' ಎಂದು ಎದೆತಟ್ಟಿ ಹೇಳುವುದುಂಟು. ಒಟ್ಟಿನಲ್ಲಿ ಸುರಕೋಡರದು ಭುಜಂಗಯ್ಯನ ದಶಾವತಾರಗಳು. ನಾನು ಸುರಕೋಡರಿಗೆ ಆತ್ಮಕಥೆ ಬರೀರಿ ಎಂದು ಕಾಡಿಸುತ್ತಿರುತ್ತೇನೆ.

ವಿಶೇಷ ಸಂಗತಿಯೆಂದರೆ, ರಾಮದುರ್ಗದಂತಹ ತಾಲೂಕು ಪಟ್ಟಣದಲ್ಲಿದ್ದ ಸುರಕೋಡರು ಭಾರತದಾದ್ಯಂತ ಅನೇಕ ಲೇಖಕರ ಜತೆ ಸಂಬಂಧ ಇರಿಸಿಕೊಂಡಿದ್ದು. ತಮ್ಮಗೆ ಪ್ರಿಯರಾದ ಗೋಪಾಲಗೌಡರನ್ನಾಗಲಿ, ಲೋಹಿಯಾರನ್ನಾಗಲಿ ಜೀವನದಲ್ಲಿ ಕಂಡಿರದ ಸುರಕೋಡರು, ಮಧುಲಿಮಯೆ ಹಾಗೂ ಕಿಶನ್ ಪಟ್ನಾಯಕ್ ಜತೆ ಪತ್ರವ್ಯವಹಾರ ಇರಿಸಿಕೊಂಡಿದ್ದರು. ಕರ್ನಾಟಕದ ಸಮಾಜವಾದಿಗಳಲ್ಲಿ ಜೆ.ಎಚ್.ಪಟೇಲ್ ಮುಂತಾದ ಉಳ್ಳವರೂ ಇದ್ದಾರೆ. ಅಬ್ಬಿಗೇರಿಯಂತಹ ಇಲ್ಲದವರೂ ಇದ್ದರು. ತಾವಿದ್ದ ಊರಿಗೆ ಲೋಹಿಯಾ ಅವರನ್ನೇ ಕರೆಸಿಕೊಂಡಿದ್ದ ಅಬ್ಬಿಗೇರಿ, ಹರಿದು ಹೋದ ಹವಾಲಿ ಚಪ್ಪಲಿ ಹಾಕಿಕೊಂಡು ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದಾಗ, ಕೆಲವರಿಗೆ ಶಾಕ್ ಆಗಿತ್ತು. ನೀಲಗಂಗಯ್ಯ ಪೂಜಾರರ ಸಂದರ್ಶನಕ್ಕೆಂದು ನಾನು ಹೋದಾಗ, ಇವರು ಹಿಂದೆ ಶಾಸಕರಾಗಿದ್ದರೇ ಎಂದು ಸೋಜಿಗ ಪಡುವಷ್ಟು ಸಾಧಾರಣ ಸ್ಥಿತಿಯಲ್ಲಿ ಅವರು ಜೀವಿಸಿದ್ದರು. ನಂಬಿದ ಆದರ್ಶಕ್ಕಾಗಿ ಜೀವನದಲ್ಲಿ ರಿಸ್ಕ್ ತೆಗೆದುಕೊಂಡು ಬದುಕಿದ ಸಮಾಜವಾದಿಗಳಲ್ಲಿ ಸುರಕೋಡರೂ ಒಬ್ಬರೆನ್ನಬಹುದು. ಪ್ರಶ್ನೆಯೆಂದರೆ, ಇವರು ಬೇಕೆಂದೇ ಇಂಥಾ ಜೀವನ ಆರಿಸಿ

ಕೊಂಡರೂ ಅಥವಾ ಜೀವನದ ಸಂದರ್ಭಗಳೇ ಇವರನ್ನು ಅಲ್ಲಿಗೆ ಕರೆದೊಯ್ದವೊ?

4. ಕರ್ನಾಟಕದಲ್ಲಿ ಬಹುತೇಕ ಲೇಖಕರು, ಚಿಂತಕರು, ವಾಗ್ಮಿಗಳು ತಂಪಾಡಿಗೆ ತಾವಿದ್ದುಕೊಂಡು ಕೆಲಸ ಮಾಡುವವರು. ಆದರೆ ಮತ್ತೆ ಕೆಲವರು ತಮ್ಮ ಜತೆಗೆ ತಮ್ಮ ಪರಿಸರವನ್ನೂ ಬಸಲಿಸಲು ಯತ್ನಿಸುವವರು; ಗೆಳೆಯರಲ್ಲಿ ವಿದ್ಯಾರ್ಥಿಗಳಲ್ಲಿ ಒಳ್ಳೆಯ ಅಭಿರುಚಿ, ಸಾಮಾಜಿಕ ಕಾಳಜಿ, ರಾಜಕೀಯ ಪ್ರಜ್ಞೆ ಬೆಳೆಸುವ, ಹೊಸ ಪ್ರತಿಭೆಗಳನ್ನು ಗುರುತಿಸಿ ಬೆಳೆಸುವವರು. ಇವರು ಇದಕ್ಕಾಗಿ ತಮ್ಮ ಸಮಯ ಮತ್ತು ಶಕ್ತಿ ವ್ಯಯಿಸಬಲ್ಲರು.

ತಕ್ಷಣಕ್ಕೆ ಗೋಕರ್ಣದ ಗೌರೀಶ ಕಾಯ್ಕಿಣಿ, ವಿಜಾಪುರದ ಹಿಪ್ಪರಗಿ, ಬನಹಟ್ಟಿಯ ದುನಿಂ ಬೆಳಗಲಿ, ಹೆಗ್ಗೋಡಿನ ಕೆ.ವಿ. ಸುಬ್ಬಣ್ಣ, ಹಲಸಂಗಿಯ ಮಧುರಚೆನ್ನ, ಅಂಕೋಲಾದ ವಿಷ್ಣುನಾಯಕ, ಮುಂಡರಗಿಯ ಎ.ಬಿ. ಹಿರೇಮಠ, ರಾಯಚೂರಿನ ಶಾಂತರಸ, ಹರಪನಹಳ್ಳಿಯ ಎಸ್.ಎಸ್. ಹಿರೇಮಠ, ಹುನಗುಂದದ ಮಲ್ಲಿಕಾರ್ಜುನ ಹಿರೇಮಠ– ಮುಂತಾದವರು ನೆನಪಾಗುತ್ತಾರೆ. ಇವರಲ್ಲಿ ಹೆಚ್ಚಿನವರು ಶಿಕ್ಷಕರು ಎಂಬುದು ಗಮನಾರ್ಹ. ಶಿಕ್ಷಕರೂ ಆಗಿದ್ದ ಸುರಕೋಡರು ತಮ್ಮ ಸಮಾಜವಾದಿ ಬದ್ಧತೆಯಿಂದಲೂ ಅಪಾರ ಓದಿನಿಂದಲೂ ರಾಜಕೀಯ ಪ್ರಜ್ಞೆಯಿಂದಲೂ ಸದಭಿರುಚಿಯಿಂದಲೂ ರಾಮದುರ್ಗದ ಪರಿಸರವನ್ನು ಸೃಜನಶೀಲವಾಗಿ ವೈಚಾರಿಕವಾಗಿ ಇಡಲು ಯತ್ನಿಸಿದವರು. ಅವರ ಪಾಠವೆಂದರೆ, ಒಂದು ಸಾಂಸ್ಕೃತಿಕ ತರಬೇತಿ ಎಂದು ಈಗ ಶಿಕ್ಷಕರಾಗಿರುವ ಅನೇಕರು ಅಪಾರ ಗೌರವದಿಂದ ಹೇಳಿದ್ದನ್ನು ನಾನು ಕೇಳಿದ್ದೇನೆ.

5. ಆದರೆ ತಮ್ಮ ಹುಚ್ಚು ಮತ್ತು ಅಭಿರುಚಿಗಳನ್ನು ಇತರರಿಗೂ ಹತ್ತಿಸಲು ಹೋಗಿ ಸುರಕೋಡರು ಪೆಚ್ಚಾಗಿರುವ ಕತೆಗಳೂ ಇವೆ. ಅವರಿಗೆ ಒಮ್ಮೆ ಪ್ರೇಮಚಂದ್ ಆರಂಭಿಸಿದ 'ಹಂಸ್' ಪತ್ರಿಕೆಯನ್ನು ತರಿಸಿ ರಾಮದುರ್ಗದ ಜನಕ್ಕೆ ಓದಿಸಬೇಕು ಅನಿಸಿತು. ತರಿಸುತ್ತಿದ್ದ ಐದು ಪ್ರತಿಯಲ್ಲಿ ತಾವೊಂದು ಇಟ್ಟುಕೊಂಡು ಉಳಿದ ನಾಲ್ಕನ್ನು ಮಾರಲು ಬ್ಯಾಗಿನಲ್ಲಿಟ್ಟುಕೊಂಡು ಮನೆಮನೆಗೆ ತಿರುಗುತ್ತಿದರು. ದಿನಪತ್ರಿಕೆಯನ್ನೂ ಓದದ ಕೆಲವು ಅಧ್ಯಾಪಕರು ಇರುವಾಗ, ಹಿಂದಿ ಪತ್ರಿಕೆಯನ್ನು ಯಾರು ಕೇಳಬೇಕು? ಅಥವಾ ಊರಾದರೂ ಸುರಕೋಡರ ಅಭಿರುಚಿಯನ್ನೇ ತನ್ನ ಅಭಿರುಚಿಯೆಂದು ಯಾಕೆ ತಿಳಿಯಬೇಕು? ಅವರ ಪ್ರಕಾರ ಕರಿಯರಿಸ್ಟ್ ಅಧ್ಯಾಪಕರು ಸಾಹಿತ್ಯದ ಪಹಿಲಾ ನಂಬರ್ ಶತ್ರುಗಳು.

ಸುರಕೋಡರು, ಪ್ರಗತಿಶೀಲ ಉರ್ದು ಮತ್ತು ಹಿಂದಿ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿರುವವರು. ಇದಕ್ಕಾಗಿ ಅವರು ಉರ್ದು ಲಿಪಿಯನ್ನು ಓದಲು ಕಲಿತರು. ಒಮ್ಮೆ ಅವರು ರಾಜೇಂದ್ರಸಿಂಗ್ ಯಾದವ್ ದೊಡ್ಡ ಲೇಖಕ ಎಂದರು. ಸಾಹಿತ್ಯದ ಅಧ್ಯಾಪಕನಾಗಿ ನಾನು ಆ ಹೆಸರನ್ನೇ ಕೇಳಿಲ್ಲ. ಲಂಕೇಶ್, ಕುವೆಂಪು, ಶಿವರಾಮ ಕಾರಂತ, ಲೋಹಿಯಾ, ಅಮೃತಾ ಪ್ರೀತಂ, ಸಾದತ್ ಹಸನ್ ಮಂಟೂ, ಸಾಹಿರ್ ಲುಧಿಯಾನ್ವಿ, ಫೈಜ್ ಅಹ ಮದ್ ಫೈಜ್ ಕುರಿತು ಸುರಕೋಡರಿಗೆ ವಿಶೇಷ ಅಭ್ಯಾಸ ವಿದೆ. ಅವರ ಪ್ರಿಯ ಪ್ರಕಾರಗಳೆಂದರೆ ಆತ್ಮಚರಿತ್ರೆ–ಜೀವನಚರಿತ್ರೆ. ಒಮ್ಮೆ ಅವರು ಅಮೃತರಾಯ್ ತಮ್ಮ ತಂದೆ ಪ್ರೇಮಚಂದರ ಮೇಲೆ ಬರೆದ 'ಕಲಂ ಕ ಸಿಪಾಹಿ' ಕೃತಿಯ ಬಗ್ಗೆ ಮಾತಾಡಿದರು. ಅವರ ಪ್ರಕಾರ ಅದು ಶ್ರೇಷ್ಠ ಜೀವನ ಚರಿತ್ರೆಗಳಲ್ಲಿ ಒಂದು. ವೈಭವೀಕರಣವಿಲ್ಲದೆ

ಸುರಕೋಡರು, ಪ್ರಗತಿಶೀಲ ಉರ್ದು ಮತ್ತು ಹಿಂದಿ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿರುವವರು. ಇದಕ್ಕಾಗಿ ಅವರು ಉರ್ದು ಲಿಪಿಯನ್ನು ಓದಲು ಕಲಿತರು. ಒಮ್ಮೆ ಅವರು ರಾಜೇಂದ್ರಸಿಂಗ್ ಯಾದವ್ ದೊಡ್ಡ ಲೇಖಕ ಎಂದರು. ಸಾಹಿತ್ಯದ ಅಧ್ಯಾಪಕನಾಗಿ ನಾನು ಆ ಹೆಸರನ್ನೇ ಕೇಳಿಲ್ಲ. ಲಂಕೇಶ್, ಕುವೆಂಪು, ಶಿವರಾಮ ಕಾರಂತ, ಲೋಹಿಯಾ, ಅಮೃತಾ ಪ್ರೀತಂ, ಸಾದತ್ ಹಸನ್ ಮಂಟೂ, ಸಾಹಿರ್ ಲುಧಿಯಾನ್ವಿ, ಫೈಜ್ ಅಹ ಮದ್ ಫೈಜ್ ಕುರಿತು ಸುರಕೋಡರಿಗೆ ವಿಶೇಷ ಅಭ್ಯಾಸ ವಿದೆ. ಅವರ ಪ್ರಿಯ ಪ್ರಕಾರಗಳೆಂದರೆ ಆತ್ಮಚರಿತ್ರೆ–ಜೀವನಚರಿತ್ರೆ. ಒಮ್ಮೆ ಅವರು ಅಮೃತರಾಯ್ ತಮ್ಮ ತಂದೆ ಪ್ರೇಮ ಚಂದರ ಮೇಲೆ ಬರೆದ 'ಕಲಂ ಕ ಸಿಪಾಹಿ' ಕೃತಿಯ ಬಗ್ಗೆ ಮಾತಾಡಿದರು. ಅವರ ಪ್ರಕಾರ ಅದು ಶ್ರೇಷ್ಠ ಜೀವನ ಚರಿತ್ರೆಗಳಲ್ಲಿ ಒಂದು.

ನಿಷ್ಠುರ ವಿಮರ್ಶೆಯ ಸಮೇತ ಬರೆಯಲಾಗಿರುವ ಈ ಕೃತಿಯಲ್ಲಿ ಕೇವಲ ಪ್ರೇಮಚಂದರ ಬಗ್ಗೆ ಮಾತ್ರವಲ್ಲ, ಅವರ ಕಾಲದ ಇಡೀ ಪ್ರಕ್ಷುಬ್ಧ ಇತಿಹಾಸವೇ ಇದೆಯಂತೆ.

ಮೂಲತಃ ಅನುವಾದಕರಾದ ಸುರಕೋಡರು ಸ್ವತಂತ್ರವಾಗಿ ಬರೆದಿದ್ದು ಕಡಿಮೆ. ಬರೆದಿರುವ ಎರಡು ಸ್ವತಂತ್ರ ಲೇಖನಗಳಲ್ಲಿ ಒಂದು– ತಮಗೆ ಆಪ್ತರಾಗಿದ್ದ ಕತೆಗಾರ ಬಿ.ಸಿ.ದೇಸಾಯರ ಬಗ್ಗೆಯಿದೆ. ಇನ್ನೊಂದು– ರಾಮದುರ್ಗದ ಒಂದು ಪ್ರೇಮದುರಂತ ಕುರಿತಿದೆ. ಎರಡನೆಯ ಲೇಖನ ಪೋಸ್ಟ್‌ಮ್ಯಾನ್ ಕೆಲಸ ಮಾಡುತ್ತಿದ್ದ ಮುಸ್ಲಿಂ ಹುಡುಗ ಮತ್ತು ಕುರುಬರ ಹುಡುಗಿಯ ಸಡ್ಡುವಣ ಪ್ರೇಮದ ಕಥೆ. ಇವರ ಪ್ರೇಮವನ್ನು ಒಪ್ಪದ ಹುಡುಗಿಯ ಕಡೆಯವರು ರೊಚ್ಚಿನಿಂದ ಹುಡುಗನ ಎರಡು ಕಣ್ಣುಗಳನ್ನು ಚಾಕುವಿನಿಂದ ಚುಚ್ಚಿ ಕಳೆದರು.

ಆದರೆ ಕುರುಡನಾದ ತನ್ನ ಪ್ರಿಯತಮನ ಜತೆ ಬಾಳಲು ಆ ಧೀರಯುವತಿ ನಿರ್ಧರಿಸಿದಳು. ಜಾತಿಧರ್ಮವನ್ನು ಮೀರಿದ ಪ್ರೇಮವು ಸುರಕೋಡರಿಗೆ ಯಾವಾಗಲೂ ದೊಡ್ಡ ಜೀವನತತ್ವವಾಗಿ ಕಂಡಿದೆ. ಅವರು ಅಮೃತಾಪ್ರೀತಂ ಹಾಗೂ ಕವಿ ಸಾಹಿರ್ ಲುಧಿಯಾನ್ವಿಯರ ಪ್ರೇಮಗಾಥೆಯಾಗಿರುವ 'ರಸೀದಿ ತಿಕೇಟು' ಅನುವಾದಿಸಲು ಇದೂ ಒಂದು ಕಾರಣವಿರಬೇಕು. ಸಾಹಿರ್ ಅವರ ಪ್ರಿಯ ಕವಿ. ಅವರು ಸಾಹಿರ್ ಕುರಿತು ಬರೆದ ಕೃತಿಯ ಹೆಸರು ಮಾರ್ಮಿಕವಾಗಿದೆ: 'ಪ್ರೇಮಲೋಕದ ಮಾಯಾವಿ'. ಸಾಹಿರರ ಒಂದು ಹಾಡನ್ನು ಕೇಳಿ, ಅವರ ಸಾಹಿತ್ಯದ ಬಗ್ಗೆ ಒಲವು ಬೆಳೆಸಿಕೊಂಡ ಸುರಕೋಡರು, ಸಂಶೋಧನೆ ಮಾಡುತ್ತ ಅವರ ಜೀವನ ಕಥೆಯನ್ನೇ ಬರೆದರು. ಪ್ರೇಮ ಮತ್ತು ಅದರ ಭಗ್ನತೆಯ ದುರಂತವು ಅವರ ಎಲ್ಲ ಬರೆಹಗಳಲ್ಲಿ ಮತ್ತು ಅನುವಾದಗಳಲ್ಲಿ ನಾನಾ ತೆರನಾಗಿ ಹಬ್ಬಿಕೊಂಡಿದೆ.

ಇದಕ್ಕೆ ಪ್ರೇರಣೆ ಪ್ರೇಮದಿಂದ ಬಾಳಲಾಗದ ತಮ್ಮ ತಾಯ್ತಂದೆಯರ ಬಾಳುವೆಯೋ ಏನೊ? ಅವರ ನೆಚ್ಚಿನ ಹೀರೋಗಳಾದ ಪ್ರೇಮಚಂದ್, ಸಾದತ್ ಹಸನ್ ಮಂಟೂ, ರಾಜೇಂದ್ರಸಿಂಗ್, ಅಮೃತಾ ಪ್ರೀತಂ, ಲಂಕೇಶ್, ಲೋಹಿಯಾ, ಕಿಶನ್ ಪಟ್ನಾಯಕ್, ಬಿ.ಸಿ. ದೇಸಾಯಿ, ಗೋಪಾಲಗೌಡ ಎಲ್ಲರೂ ಬದುಕನ್ನು ಗಾಢವಾಗಿ ಪ್ರೀತಿಸಿದವರು; ಅದನೊಂದು ದೀವಟಿಗೆ ಮಾಡಿ ಉರಿದುಹೋದವರು; ತಮ್ಮ ಪರಿಸರದ ಕೇಡಿನ ಬಗ್ಗೆ ಆಕ್ರೋಶಗೊಂಡವರು. ದುರಂತಪ್ರಜ್ಞೆಯವರು. ಜಾತಿ ಧರ್ಮಗಳಿಗೆ ಅತೀತರಾದವರು. ಕಂಪನಶೀಲ ಮನಸ್ಸು ಹೊಂದಿದ್ದವರು. ಪ್ರೇಮವು ಅವರಿಗೆಲ್ಲ ಬದುಕನ್ನು ನೋಡುವ ಒಂದು ತತ್ವವಾಗಿತ್ತು.

ಸುರಕೋಡರು ರಾಜೇಂದ್ರಸಿಂಗ್ ಬೇಡಿ, ಗುರುಭಕ್ಷ್ ಸಿಂಗ್, ಉಪೇಂದ್ರನಾಥ ಅಶ್ಕ್, ಸಾಹಿರ್ ಲುಧಿಯಾನ್ವಿ, ಅಮೃತಾ ಪ್ರೀತಂ ಮುಂತಾದವರು, ಅಮೃತಸರದ ಬಳಿ ಕಮ್ಯೂನ್ ಮಾದರಿಯಲ್ಲಿ ಕಟ್ಟಿಕೊಂಡಿದ್ದ ಪ್ರೀತನಗರದ ಬಗ್ಗೆ ಬಹಳ ಭಾವುಕವಾಗಿ ಈಗಲೂ ಮಾತಾಡುವುದುಂಟು. ಇಂತಹ ಪ್ರೀತನ ಗರಗಳು ಪಂಜಾಬಿನಲ್ಲಿ ಮಾತ್ರವಲ್ಲ, ಎಲ್ಲ ಊರುಗಳಲ್ಲೂ ಇವೆ ಎಂಬುದು ಅವರ ನಂಬಿಕೆ.

6. ಅನುವಾದಕ್ಕೆ ಕೃತಿಯೊಂದನ್ನು ಆಯ್ಕೆ ಮಾಡಿಕೊಳ್ಳುವಾಗ, ಕೆಲಸ ಮಾಡುವುದು ವೈಯಕ್ತಿಕ ಅಭಿರುಚಿಗಳೊ, ಒಂದು ನಾಡಿನ ಸಾಂಸ್ಕೃತಿಕ ಅಗತ್ಯಗಳೊ? ಬಹುಶಃ ಅತ್ಯುತ್ತಮ ಮನಸ್ಸಿನ ಅನುವಾದಕರಲ್ಲಿ ಇವೆರಡೂ ಬೇರೆಯಾಗುವುದಿಲ್ಲ. ಸುರಕೋಡರು ಅನುವಾದಕ್ಕೆ ಆರಿಸಿಕೊಂಡ ಕೃತಿಗಳನ್ನು ಗಮನಿಸಿ: ಲೋಹಿಯಾರ 'ಜಾತಿಪದ್ಧತಿ'; ಮಧುಲಿಮಯೆ ಅವರ 'ಅಯೋಧ್ಯೆ: ವಿನಾಶಕಾರಿ ವೋಟ್‌ಬ್ಯಾಂಕ್ ರಾಜಕೀಯ'; ಅಸಘರ ಅಲಿ ಅವರ 'ಇಸ್ಲಾಂ ಹುಟ್ಟು ಮತ್ತು ವಿಕಾಸ'; ಸಾದತ್ ಹಸನ್ ಮಂಟೂ ಅವರ ಸಣ್ಣಕತೆಗಳು 'ಸದ್ಯಕಿದು ಹುಚ್ಚರಸಂತೆ';

ವಿಭೂತಿ ನಾರಾಯಣರ 'ಕೋಮುಗಲಭೆಗಳು ಹಾಗೂ ಭಾರತದ ಪೋಲಿಸರು'; ಕಿಶನ್ ಪಟ್ನಾಯಕರ ಚಿಂತನೆ 'ಪ್ರತಿಚಿಂತನೆ'; ಅಮೃತಾ ಪ್ರೀತಮರ ಆತ್ಮಕತೆ 'ರಸೀದಿ ತಿಕ್ಕೆಟು'; ಬಿ.ಎನ್.ಪಾಂಡೆ ಅವರ 'ಹಿಂದೂ ಮಂದಿರಗಳು ಹಾಗೂ ಔರಂಗಜೇಬನ ಆದೇಶಗಳು'.

ಈ ಕೃತಿಗಳು ಸುರಕೋಡರ ಜಾತ್ಯತೀತ ಮನಸ್ಸಿನ, ಧಾರ್ಮಿಕ ಸಮುದಾಯಗಳ ಸಂಬಂಧ ಬೆಸೆಯುವ ಕಾಳಜಿಯ ದ್ಯೋತಕಗಳಂತಿವೆ. ಹಿಂದೂ ಕೋಮುವಾದ ಮತ್ತು ಮುಸ್ಲಿಂ ಮೂಲಭೂತವಾದ ಎರಡನ್ನೂ ವಿರೋಧಿಸುವ ಸುರಕೋಡರರದು ಕನಸುಗಾರ ಮನಸ್ಸು. ಆದರೆ ಅವರಲ್ಲಿ ಕನಸುಗಳು ಸುಲಭದಲ್ಲಿ ಈಡೇರಲಾಗದ ವಾಸ್ತವತೆಯ ಅರಿವೂ ಇದೆ; ವಾಸ್ತವ ಬದಲಾಗಬಹುದು ಎಂಬ ಆಶಾವಾದವೂ ಇದೆ. ಇದಕ್ಕೆ ಕಾರಣ, ಭಾರತದ ಪ್ರಗತಿಶೀಲ ಚಳುವಳಿಯಲ್ಲಿ ಅವರಿಗಿರುವ ತಾದಾತ್ಮ್ಯವಿರಬೇಕು.

7. ಸುರಕೋಡರು, ಕರ್ನಾಟಕದ ಕಮ್ಯುನಿಸ್ಟ್ ಚಳುವಳಿ, ಸಮುದಾಯ, ಬಂಡಾಯ ಸಾಹಿತ್ಯ ಸಂಘಟನೆಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡರು. ಅವರದು ನೆಲದೊಳಗಡೆ ಎರೆಯ ಹುಳುವಿನಂತೆ ಕೆಲಸ ಮಾಡುವ ಸ್ವಭಾವ. ಅವರು ಸಾಂಸ್ಥಿಕ ಬೆಂಬಲವಿಲ್ಲದೆ ಗ್ರಾಮೀಣ ಪ್ರದೇಶದಲ್ಲಿ, ಅಭಿರುಚಿ ನಿರ್ಮಾಣದ ಉಪಯುಕ್ತ ಮಾಡಿದವರು. ಆದರೂ ಅವರಲ್ಲಿ ಉತ್ತರ ಕರ್ನಾಟಕದ ಜನಪದ ಪರಂಪರೆಯ ಪ್ರೇರಣೆ ಕಡಿಮೆ. ಅಭದ್ರತೆಯೊಳಗೇ ಸಾಹಸ ಮಾಡುವ ದುಡುಕತನವಾಗಲಿ, ಸಾರ್ವಜನಿಕ ಪ್ರತಿರೋಧಗಳಲ್ಲಿ ಭಾಗವಹಿಸುವಿಕೆಯಾಗಲಿ ಅವರ ಬದುಕಿನಲ್ಲಿ ಹೆಚ್ಚಿಲ್ಲ. ಆದರೆ ಹಾಗೆ ದುಡುಕುವವರಿಗೆ ಬೇಕಾದ ಮನಸ್ಸನ್ನು ಕಟ್ಟಲು ಚಿಂತನೆಯನ್ನು ಹತ್ತುಕಡೆಯಿಂದ ತಂದು ಒದಗಿಸುವುದಕ್ಕೂ, ನೈತಿಕ ಬೆಂಬಲ ನೀಡುವುದಕ್ಕೂ ಅವರು ಸದಾ ಸಿದ್ಧರು.

ಅಂತರ್ಮುಖಿಗಳಾದ ಸುರಕೋಡರರದು ಕೋಮಲವಾದ ಮನಸ್ಸು. ಲೋಹಿಯಾರ ಬದ್ಧತೆ ಆದರ್ಶಗಳನ್ನು ಮೈಗೂಡಿಸಿಕೊಂಡಿರುವ ಅವರು ಸೈದ್ಧಾಂತಿಕ ಭಿನ್ನಮತ ಬಂದಾಗ ನಿಷ್ಠುರ ಮಾತಾಡುವುದುಂಟು. ಆದರೆ ಬಾಳಿನಲ್ಲಿ ಅಬ್ಬರವಿಲ್ಲದ, ಮಕ್ಕಳಂತೆ ಮುಕ್ತವಾಗಿ ನಗುವ, ಸಂತೃಪ್ತಿಯನ್ನು ತುಳುಕಿಸುವ ವ್ಯಕ್ತಿತ್ವ ಅವರದು. ಕಷ್ಟಗಳಲ್ಲಿ ತೊಳಲಾಡುತ್ತಿದ್ದರೂ ತನ್ನ ನೋವನ್ನು ಯಾರಲ್ಲೂ ಹೇಳಿಕೊಳ್ಳದೆ ತಾವೇ ನುಂಗುವ ಗುಣವಿದೆ ಅವರಲ್ಲಿ. ಒಮ್ಮೆ ನಾನು 'ನೀವು ಜನಪರ ಸಂಘಟನೆಗಳಲ್ಲಿ ಕೆಲಸ ಮಾಡಿದ್ದೇನೆ ಅಂತೀರಿ. ಆದರೆ ನಾನು ಭಾಗವಹಿಸಿದ ಯಾವ ಸಮ್ಮೇಳನಗಳಲ್ಲೂ ನಿಮ್ಮನ್ನು ಕಂಡಂತಿಲ್ಲ' ಎಂದೆ. ಅವರು ಮೆಲು ದನಿಯಲ್ಲಿ ಎಂದರು: 'ನನಗೂ ಸಮಾವೇಶಗಳಿಗೆ ಬರಲು ಆಸೆಯಿರುತ್ತಿತ್ತು ತರಿಕೇರಿ ಸಾರ್, ಬಟ್ ಮೈ ಪಾಕೆಟ್ ಡಿಡ್ ನಾಟ್ ಪರ್ಮಿಟ್ ಮಿ'. ನಾನು ಆ ವಿಷಯ ಮತ್ತೆ ಮಾತಾಡಲಿಲ್ಲ. ಒಮ್ಮೊಮ್ಮೆ ಅವರ ಹಿಂಜರಿಕೆಯ ಸ್ವಭಾವವು ಕೀಳರಿಮೆಯದೊ ಸ್ವಾಭಿಮಾನದ್ದೊ ಸಜ್ಜನಿಕೆಯದು ತಿಳಿಯದೆ ಗೊಂದಲಕ್ಕೆ ಒಳಗಾಗಿದ್ದೇನೆ.

ರಾಮದುರ್ಗವು ಇಬ್ಬರು ದೇಸಾಯಿಗಳಿಗೆ ಖ್ಯಾತವಾಗಿದೆ. ಒಬ್ಬ- ಈ ಭಾಗದ ದೊಡ್ಡ ಸಿರಿವಂತರಾಗಿ ಮಾರ್ಕ್ಸ್‌ವಾದಿಯೂ ಆಗಿ, ವೈಯಕ್ತಿಕವಾಗಿ ಅಪಾರ ತಲ್ಲಣದ ಬದುಕನ್ನು ಬದುಕಿದ ಲೇಖಕ ಬಿ.ಸಿ.ದೇಸಾಯಿ; ಇನ್ನೊಬ್ಬ- ರಾಮದುರ್ಗದ ಅರಮನೆಯಲ್ಲಿ ದೊರೆಯಾಗಿದ್ದ ದೇಸಾಯಿ. ಈ ಎರಡನೆಯ ದೇಸಾಯಿ ಗಾಂಧಿಯನ್ನು ಕೊಂದ ಗೊಡ್ಸೆಯ ಸಂಬಂಧಿಕ. ಗಾಂಧಿ

> **ಸುರಕೋಡರು, ಕರ್ನಾಟಕದ ಕಮ್ಯುನಿಸ್ಟ್ ಚಳುವಳಿ, ಬಂಡಾಯ ಸಾಹಿತ್ಯ ಸಂಘಟನೆಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡರು. ಅವರದು ನೆಲದೊಳಗಡೆ ಎರೆಯ ಹುಳುವಿನಂತೆ ಕೆಲಸ ಮಾಡುವ ಸ್ವಭಾವ. ಅವರು ಸಾಂಸ್ಥಿಕ ಬೆಂಬಲವಿಲ್ಲದೆ ಗ್ರಾಮೀಣ ಪ್ರದೇಶದಲ್ಲಿ, ಅಭಿರುಚಿ ನಿರ್ಮಾಣದ ಉಪಯುಕ್ತ ಮಾಡಿದವರು.**

ಹತ್ಯೆಯ ಪಿಸ್ತೂಲು ಅವನ ವಾಡೆಯಿಂದ ಹೋಗಿತ್ತಂತೆ. ಹೀಗಾಗಿ ಗಾಂಧಿ ಹತ್ಯೆಗಾರರ ಆರೋಪಪಟ್ಟಿಯಲ್ಲಿ ರಾಮದುರ್ಗದ ದೇಸಾಯಿಯದೂ ಹೆಸರಿತ್ತು. ಇಂತಹ ಊರಲ್ಲಿ, ಗಾಂಧಿಯ ಚಿಂತನೆಗಳನ್ನು ಅವರ ಮರಣಾನಂತರ ಸಾರ್ವಜನಿಕ ಬದುಕಿನಲ್ಲಿ ಬಿತ್ತುವ ಕೆಲಸ ಮಾಡಿದ ಲೋಹಿಯಾರ ಮಾನಸಶಿಷ್ಯನೊಬ್ಬ ಹುಟ್ಟಿಬೆಳೆದರು. ಇದು ಚರಿತ್ರೆಯ ವ್ಯಂಗ್ಯವಿರಬೇಕು.

8. ಸುರಕೋಡರಿಗೆ ರಾಮದುರ್ಗವೇ ಜಗತ್ತು. ಅದನ್ನು ಬಿಟ್ಟು ಅವರು ಎಲ್ಲೂ ಹೆಚ್ಚು ಹೋಗುವುದಿಲ್ಲ. ಸೇದಲೊಂದು ಕಟ್ಟು ಗಣೇಶ ಬೀಡಿ, ಗಂಟೆಗೊಂದು ಕಪ್ಪು ಚಹಾ, ಹರಟಲು ಸುತ್ತ ಗೆಳೆಯರು, ತಮಗೆಬೇಕಾದ ಪುಸ್ತಕ-ಇಷ್ಟಿದ್ದರೆ ಅವರಿಗೆ ತಮ್ಮೂರು ಸ್ವರ್ಗ. ಸವುಡು ಸಿಕ್ಕಾಗ ಸುರಕೋಡರ ಬಾಯಲ್ಲಿ, ಬಿ.ಸಿ. ದೇಸಾಯರ ಮೇಲಿನ ಕತೆಗಳನ್ನು ಕೇಳಬೇಕು; ದೇಶವಿಭಜನೆಯ ಹೊತ್ತಲ್ಲಿ ಬಂದ ಮಾನವೀಯ ದುರಂತ ಹಾಗೂ ಮನುಷ್ಯ ಪ್ರೀತಿಯನ್ನು ಪ್ರಕಟಿಸುವ ಸಾಹಿತ್ಯದ ಚರ್ಚೆ ಕೇಳಬೇಕು; ಆರ್ಕೆ ನಾರಾಯಣ್ ಕಾದಂಬರಿ ಆಧರಿಸಿದ ತೆಗೆದ 'ಗೈಡ್' ಸಿನಿಮಾ ಬಗೆಗಿನ ವಿಶ್ಲೇಷಣೆ ಕೇಳಬೇಕು. ಅವು ಸಂವೇದನಶೀಲ ವಿದ್ವಾಂಸನೊಬ್ಬ ಮಾಡಬಹುದಾದ ಪಾಂಡಿತ್ಯಪೂರ್ಣ ಉಪನ್ಯಾಸಗಳು. ಒಮ್ಮೆ ಸುಮ್ಮನೆ ಕೇಳಿದೆ: 'ನಿಮಗೆ ಬೇಜಾರಾಗುವ ಸಂಗತಿ ಯಾವುದು?. 'ನನಗೆ ಬೇಕಾದ ಪುಸ್ತಕ ಕೊಳ್ಳೋಕೆ ಆಗದೆ ಇರೋದು' ಅಂದರು.

ಪುಸ್ತಕ ರಾಶಿಬಿದ್ದಿರುವ ವಿಶ್ವವಿದ್ಯಾಲಯಗಳಲ್ಲಿ ಅವನ್ನು ಓದುವವರಿಲ್ಲ. ಓದುವ ದಾಹದ ಇವರಿಗೆ ಕೊಳ್ಳುವುದಕ್ಕೆ ಶಕ್ತಿಯಿಲ್ಲ. ಎಂಥ ವೈರುಧ್ಯ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ವಿದ್ವತ್ ಪರಂಪರೆ ತೀವ್ರಗತಿಯಲ್ಲಿ ನಶಿಸುತ್ತಿರುವುದು ಎಲ್ಲರಿಗೂ ಗೊತ್ತಿದೆ. ಇಂತಹ ಬಿಕ್ಕಟ್ಟಿನ ಕಾಲದಲ್ಲಿ ಕೇವಲ ನಾಡಿನ ಮೇಲಣ ಪ್ರೀತಿಯಿಂದ, ಸಾಂಸ್ಕೃತಿಕವಾದ ಕಾಳಜಿಯಿಂದ ಮತ್ತು ಸಮಾಜವಾದಿ ಬದ್ಧತೆಯಿಂದ ಸುರಕೋಡರೂ ಅವರಂತಹ ಅನೇಕರೂ ಮಾಡುತ್ತಿರುವ ಕೆಲಸಗಳು ಸಾಂಸ್ಕೃತಿಕವಾಗಿ ಬಹಳ ದೊಡ್ಡವು. ಜೀವನವನ್ನು ಅಭದ್ರತೆ ಮತ್ತು ಅನಿಶ್ಚಿತತೆಗಳಿಗೆ ಒಡ್ಡಿಕೊಂಡು, ಸಮಾಜದ ಬದಲಾವಣೆಗೆ ತವಕಿಸುವ ಸಮುದಾಯ ಇಂತಹವರನ್ನು ನೋಡುವಾಗ, ಈ ಹೊತ್ತು ನಾಡಿಗೆ ಬೇಕಾದ ವಿದ್ವತ್ತು ವಿವೇಕಗಳು ವಿಶ್ವವಿದ್ಯಾಲಯಗಳ ಆಚೆಯೇ ಹುಟ್ಟುತ್ತಿವೆಯೇನೊ ಅನಿಸುತ್ತದೆ.

(ಈ ಲೇಖನ ಸಿದ್ಧಪಡಿಸುವಲ್ಲಿ ಸಹಕರಿಸಿದ ಪ್ರೊ. ಚಿಕ್ಕನರಗುಂದ, ಎಂ.ಡಿ.ವಕ್ಕುಂದ, ಬಸವರಾಜ ಸೂಳಿಭಾವಿ ಅವರಿಗೆ ಕೃತಜ್ಞತೆಗಳು.) □

ಸಣ್ಣವರ ಕೈಯಲ್ಲಿ ದೊಡ್ಡವರ ಪ್ರತಿಮೆಗಳು!

(11ನೇ ಪುಟದಿಂದ)

ಯೇನಿಲ್ಲ.

ಇನ್ನೂ ನಾರಾಯಣ ಗೌಡ, ವಾಟಾಳ ನಾಗರಾಜ್, ಇನ್ನಿತರ ಕೂಗುಮಾರಿ ಕನ್ನಡ ಸಂಘಟನೆಗಳ ವಿರೋಧದಲ್ಲೇನಾದರೂ ಉನ್ನತ ಆಶಯವಿಳವೆಯೇ? ಈಗಾಗಲೇ ಗಮನಿಸಿದಂತೆ "ಕನ್ನಡವೇ ಧರ್ಮ" ಎಂಬ ಅವರ ವಾದದಲ್ಲಿ ಯಾವ ಕನ್ನಡಿಗರ ಹಿತವೂ ಇಲ್ಲ. ಆಯ ಸಂಘಟನೆಗಳ ಹಿತಗಳನ್ನು ಹೊರತುಪಡಿಸಿ! ತಾವು ಆ ತಿರುವಳ್ಳುವರ್‌ಗಾಗಲೀ ಅವರ ಪ್ರತಿಮೆಯ ಅನಾವರಣಕ್ಕಾಗಲೀ ವಿರೋಧವಿಲ್ಲವೆಂದೂ, ಹೇಳುವ ಈ ಸಂಘಟನೆಗಳು, ಅದೇ ಸಮಯದಲ್ಲಿ "ಶಾಸ್ತ್ರೀಯ ಭಾಷಾ ಸ್ಥಾನಮಾನ ವಿವಾದ, ಹೊಗನೇಕಲ್, ಕಾವೇರಿ ವಿವಾದದಿಂದ ಮೊದಲಲಗೊಂಡು ತಮಿಳರಿಂದ ಕನ್ನಡಿಗರಿಗಾಗಿರುವ ಎಲ್ಲಾ ಅನ್ಯಾಯಗಳು ಬಗೆಹರಿಯದೇ ತಿರುವಳ್ಳುವರ್ ಪ್ರತಿಮೆಯ ಅನಾವರಣಕ್ಕೆ ಅವಕಾಶ ಕೊಡುವುದಿಲ್ಲವೆಂದು" ಹಠ ಹಿಡಿದಿವೆ. ಈ ಬಗೆಯಲ್ಲಿ ತಮಿಳುನಾಡಿನ ಸರ್ಕಾರ ಮಾಡುತ್ತಿರುವ ಅನ್ಯಾಯವನ್ನು ಇಡೀ ತಮಿಳು ಸಮುದಾಯಕ್ಕೆ ಅನ್ವಯಿಸಿ ಇಡೀ ತಮಿಳು ಜನಾಂಗವನ್ನೇ ದ್ವೇಷಿಸುವಂತೆ ಮಾಡುವ ಭಾಷಾ ಫ್ಯಾಸಿಸ್ಟ್ ಧೋರಣೆಯನ್ನು ಕನ್ನಡ ಚಳವಳಿಗೆ ಕಲಿಸಿಕೊಟ್ಟಿದ್ದೂ ಸಹ ಹಿಂದೂತ್ವ ಫ್ಯಾಸಿಸ್ಟ್ ಆಗಿ ಪರಿವರ್ತನೆಯಾಗಿರುವ ಚಿದಾನಂದ ಮೂರ್ತಿಗಳೇ.

ಈ ಫ್ಯಾಸಿಸಮ್ಮು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಅವರದಲ್ಲದ ತಪ್ಪುಗಳನ್ನು ಹೇರುತ್ತಾ, ಬಹುಸಾಂಖ್ಯಾತ ಸಮುದಾಯದವರು ಇಡೀ ಅಲ್ಪಸಂಖ್ಯಾತ ಸಮುದಾಯವನ್ನೇ ದ್ವೇಷಿಸುವಂತೆ ಮಾಡುತ್ತದೆ. ಆ ಮೂಲಕ ಬಹುಸಂಖ್ಯಾತ ಸಮುದಾಯದ ದಮನಿತರಿಗೂ ಮತ್ತು ಅಲ್ಪಸಂಖ್ಯಾತ ಸಮುದಾಯದ ದಮನಿತರಿಗೂ ನಡುವೆ ಶಾಶ್ವತ ಘರ್ಷಣೆ ಏರ್ಪಡಿಸಿ ಬಹುಸಂಖ್ಯಾತ ಸಮುದಾಯಕ್ಕೆ ಸೇರಿದ ಶೋಷಕರನ್ನು ಕಾಪಾಡುತ್ತದೆ. ಇದೇ ಫ್ಯಾಸಿಸಂನ ತಿರುಳು. ಭಾಷಾ ಫ್ಯಾಸಿಸಮ್ಮಿಗೂ, ಹಿಂದೂತ್ವವಾದಿ ಫ್ಯಾಸಿಸಮ್ಮಿಗೂ ಹೀಗೆ ಹತ್ತಿರದ ಸಂಬಂಧ.

ಒಂದು ತಮಿಳು ಅಲ್ಪಸಂಖ್ಯಾತರನ್ನು ದೋಷಿಗಳನ್ನಾಗಿ ಮಾಡಿದರೆ ಮತ್ತೊಂದು ಮುಸ್ಲಿಂ ಅಲ್ಪಸಂಖ್ಯಾತರನ್ನು ಕಗ್ಗೊಲೆ ಮಾಡುತ್ತದೆ ಹೀಗೆ ಎರಡಕ್ಕೂ ಚಿಮೂವೇ ಸೈದ್ಧಾಂತಿಕ ನಾಯಕರಾಗಿರುವುದು ಆಕಸ್ಮಿಕವೇನೂ ಅಲ್ಲ. ಎರಡು ಬಗೆಯ ಜಗಳವು ಹುಟ್ಟಿಹಾಕಿರುವ ಸದ್ದಿನ ಗದ್ದಲವು ಜನರ ಗಮನವನ್ನು ಬೇರೆಡೆಗೆ ಸೆಳೆದಿರುವಾಗ ಸದ್ದಿಲ್ಲದೆ ಬಿಜೆಪಿ ಸರ್ಕಾರದ ಒಂದೊಂದೇ ಜನವಿರೋಧಿ ನೀತಿಗಳನ್ನು ಜಾರಿ ಮಾಡುತ್ತಿರುವುದೂ ಆಕಸ್ಮಿಕವೇನಲ್ಲ. ಹೀಗಾಗಿ ದುಷ್ಟ ಚಿಮೂಗಳಿಂದ ಭ್ರಷ್ಟ ನಾರಾಯಣ ಗೌಡರಿಂದ ತಿರುವಳ್ಳುವರ್ ಮತ್ತು ಸರ್ವಜ್ಞರನ್ನು ಕಾಪಾಡುವ ಹೊಣೆ ಭಾಷೆಯ ಹಂಗಿಲ್ಲದೆ ಬದುಕನ್ನು ಅರ್ಥಮಾಡಿಕೊಳ್ಳಬಲ್ಲ ಜನರೆಲ್ಲರ ಮೇಲಿದೆ. ಅದಕ್ಕೇ ಸರ್ವಜ್ಞ ಹೀಗೆ ಹೇಳುತ್ತಾನೆ:

ಕಲ್ಲು ಕಲ್ಲೆಂಬುವಿರಿ ಕಲ್ಲೊಳಗಿರ್ಪುದೇ ದೈವ
ಕಲ್ಲಲ್ಲಿ ಕಳೆಯನಿಲಿಸಿದಾ ಗುರುವಿನಾ
ಸೊಲ್ಲೇದೈವ ಸರ್ವಜ್ಞ! □

ಬಂಡವಾಳಶಾಹಿ ಉಣಬಡಿಸಿರುವ ವಿಲಾಸಿತನಕ್ಕೆ 'ಸಮಾಜವಾದ' ಪರಿಹಾರವೇ?

ಅದು 2007ರ ಜನವರಿ 24ನೇ ತಾರೀಖು ಎಂದುಕೊಳ್ಳುತ್ತೇನೆ. ನಮ್ಮ ವಿಶ್ವವಿದ್ಯಾನಿಲಯದ ಇಂಗ್ಲೀಷ್ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಿಯಾಂಕ ಎಂಬ ವಿದ್ಯಾರ್ಥಿನಿ ನನ್ನ ಕೈಗೊಂದು ಸಿ.ಡಿ.ಯನ್ನು ನೀಡಿ ಸರ್ ಇದು ಕಿಷನ್ ಪಟ್ನಾಯಕ್ ಅವರ ಸಮಾಜವಾದದ ಕುರಿತಾಗಿ ಭಾಷಣದ ಧ್ವನಿ ಮುದ್ರಣವಾಗಿದೆ ದಯವಿಟ್ಟು ಇದನ್ನು ಕೇಳಿ ಎಂದು ಹೇಳಿ ಹೊರಟು ಹೋದರು. ಅಂದಿನಿಂದ ಇಂದಿನವರೆಗೂ ಸುಮಾರು ಒಂದು ಗಂಟೆ 16 ನಿಮಿಷಗಳ ಪಟ್ನಾಯಕ್‌ರ ಮಾತುಗಳನ್ನು ಪದೇ ಪದೇ ಕೇಳಿದ್ದೇನೆ. ಜಾಗತಿಕ ವಿಸ್ತರಣಾವಾದಿಗಳ ಆಕ್ರಮಣ ಒಂದು ಕಡೆ, ಮತೀಯ ಶಕ್ತಿಗಳ ಅನಾಗರಿಕ ವರ್ತನೆ ಇನ್ನೊಂದು ಕಡೆ. ಈ ಅಡ್ಡ ಕತ್ತರಿಗೆ ಸಿಕ್ಕಿ ಉದ್ಭವಿಸಿದ ಸಾಂಸ್ಕೃತಿಕ ಅಧೀರತೆ ನಮ್ಮ ಧ್ವನಿ ಅಡಗಿಸುವ ಮುನ್ನ ಬನ್ನಿ ಬೆಳಕಿನ ದೊಂದಿ ಹಚ್ಚೋಣ... ಎಂಬ ಪೀಠಿಕೆ ಯೊಂದಿಗೆ ಪ್ರಾರಂಭವಾಗುವ ಈ ಧ್ವನಿಸುರುಳಿ ಬಹಳ ದಿನ ನನ್ನನ್ನು ಕಾಡಿದೆ.

ಹಾಗೇ ನೋಡುವುದಾದರೆ ಸಮಾಜವಾದದ ಕುರಿತಾಗಿ ನನ್ನ ಓದು ತೀರಾ ಕಡಿಮೆ. ಅದಕ್ಕೆ ಕಾರಣ ನನ್ನ ಕಾಲದಲ್ಲಿ ಸಮಾಜವಾದವನ್ನು ಮೀರಿ ಬಂಡವಾಳಶಾಹಿ, ಉದಾರವಾದ, ಖಾಸಗಿಮಾಲಿಕತ್ವ ಮುಂತಾದ ಪರಿಕಲ್ಪನೆಗಳ ಚರ್ಚೆಯೇ ಹೆಚ್ಚಾಗಿರುವುದಿರಬಹುದು. ಆಗಾಗ ಡಿ.ಎಸ್.ನಾಗಭೂಷಣರಂತವರ ಮಾತುಗಳು, ಬರಹಗಳು ಸಮಾಜವಾದದ ಕುರಿತಾದ ತತ್ವಗಳನ್ನು ನೆನಪಿಸಿದರೂ, ಸಮಾಜವಾದದ ಕುರಿತಾಗಿ ತುಂಬಾ ತೀವ್ರವಾದ ಗಮನ ಹರಿಸಿದ್ದು ಕಡಿಮೆಯೇ. ಆದರೆ ಕಿಶನ್ ಪಟ್ನಾಯಕ್‌ರವರ ಮಾತುಗಳು ನಿಜವಾಗಲೂ ಸಮಾಜವಾದದ ಕುರಿತಾದ ಬಹಳ ದೊಡ್ಡ ಸಿದ್ಧಾಂತವನ್ನು ದಿನ ನಿತ್ಯದ ಸರಳ ಪರಿ ಭಾಷೆಯಲ್ಲಿ ವಿವರಿಸಿದಂತಿವೆ. ಇಂದಿನ ಯುವಕರು ಅಗತ್ಯ ವಾಗಿ ಕೇಳಲೇಬೇಕಾದ ಭಾಷಣ ಇದಾಗಿದೆ. ಸಮಾಜ ವಾದವನ್ನು ಒಪ್ಪುವುದು, ಒಪ್ಪದಿರುವುದು ಬೇರೆ ವಿಚಾರ. ಆದರೆ ಪಟ್ನಾಯಕ್‌ರವರ ಮಾತುಗಳು ಮಾತ್ರ ಪ್ರಸ್ತುತ ಕಾಲಘಟ್ಟಕ್ಕೆ ಅದರಲ್ಲಿಯೂ ಯುವ ಜನರಿಗೆ ಅಗತ್ಯವಾಗಿವೆ.

ಈ ಹಿನ್ನೆಲೆಯಲ್ಲಿ ಅವರ ಇಡೀ ಭಾಷಣವನ್ನು ಕನ್ನಡಕ್ಕೆ ಭಾಷಾಂತರಿಸಿದ್ದೇನೆ. ಈ ಕೆಲಸಕ್ಕೆ ಸಹಕರಿಸಿದ ನಮ್ಮ ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಾದ ಶ್ರೀನಿವಾಸ್ ಹಾಗೂ ರವಿಚಂದ್ರ ಇವರಿಗೆ ನನ್ನ ಧನ್ಯವಾದಗಳನ್ನು ತಿಳಿಸ ಬಯಸುತ್ತೇನೆ. ಈ ಭಾಷಣದ ಧ್ವನಿಸುರುಳಿಯನ್ನು 'ನೆಲಸಿರಿ' ಸಾಂಸ್ಕೃತಿಕ ವೇದಿಕೆ ಹೊರತಂದಿದೆ. ಪಟ್ನಾಯಕ್‌ರಂತಹ ಮಹಾನ್ ಚೇತನದ ಮಾತುಗಳನ್ನು ಕೇಳಲು ಅವಕಾಶ ಮಾಡಿಕೊಟ್ಟ ಅವರಿಗೂ ಧನ್ಯವಾದಗ ಳನ್ನು ತಿಳಿಸುತ್ತಾ ಸಮಾಜದ ಸಾಮಾಜಿಕ ಸಮಸ್ಯೆಗಳ ಪರಿ ಹಾರದ ಕುರಿತ ವೇದಿಕೆಯ ಪ್ರಯತ್ನ ನಿರಂತರವಾಗಿ ಜಾರಿಯಲ್ಲಿರಲಿ ಎಂದು ಆಶಿಸುತ್ತೇನೆ. ಚಾಮರಾಜನಗರದ ಸಮಾಜವಾದಿ ಅಧ್ಯಯನ ಶಿಬಿರದಲ್ಲಿ 2003ರಲ್ಲಿ ಕಿಷನ್ ಪಟ್ನಾಯಕ್ ಅವರು ಮಾಡಿದ ಭಾಷಣದ ಕನ್ನಡ ಅನುವಾದ ಇದಾಗಿದೆ.

ಮೂಲ: ಕಿಷನ್ ಪಟ್ನಾಯಕ್
ಅನು : ಕಿರಣ್.ಎಂ ಗಾಜನೂರು

ಪ್ರೀತಿಯ ಗೆಳೆಯರೇ ಮತ್ತು ಆತ್ಮೀಯ ಯುವಕರೇ ನಾನು ಅತ್ಯಂತ ಸರಳವಾದ ಭಾಷೆಯಲ್ಲಿ ಮಾತನಾಡುತ್ತೇನೆ, ಭಾಷಾಂತರ ಮಾಡುವ ಅಗತ್ಯತೆ ಕಂಡುಬರಲಾರದು ಈ ದಿನ ನಾನು ನೇರವಾಗಿ ಯುವಕರನ್ನು ಉದ್ದೇಶಿಸಿ ಮಾತನಾಡುತ್ತೇನೆ. ಹಾಗೆಂದ ಮಾತ್ರಕ್ಕೆ ಇದರಲ್ಲಿ ವಯಸ್ಕರೊಂದಿಗೆ ನನ್ನ ಸಂವಾದ ಇಲ್ಲ ಎಂದಲ್ಲ. ಬದಲಾಗಿ ಪರೋಕ್ಷವಾಗಿ ಅವರೊಂದಿಗೇ ನಾನು ಮಾತ ನಾಡುತ್ತಿದ್ದರೂ, ನನ್ನ ಇಂದಿನ ಭಾಷಣದ ಸಂಪೂರ್ಣ ಗುರಿ ಯುವಕರನ್ನು ತಲುಪುವುದಾಗಿದೆ.



ನಿಮ್ಮ ಬದುಕಿನಲ್ಲಿ ನೀವು ಶಿಕ್ಷಣದ ಬಗ್ಗೆ ಕೇಳಿಯೇ ಇರುತ್ತೀರಿ ಹಾಗೂ ಇತ್ತೀಚಿನ ಬೆಳವಣಿಗೆಯಾದ ಜಾಗತೀಕರಣ ಮತ್ತು ಶಿಕ್ಷಣದ ಕುರಿತಾಗಿ ತಿಳಿಯುವ ಪ್ರಯತ್ನವನ್ನು ಮಾಡಿರುತ್ತೀರ. ಹಾಗಾದರೆ ಶಿಕ್ಷಣದ ಮೂಲಭೂತ ಉದ್ದೇಶವೇನು? ಈ ಪ್ರಶ್ನೆಯಿಂದ ನನ್ನ ಮಾತುಗಳನ್ನು ಪ್ರಾರಂಭಿಸುತ್ತೇನೆ.

ಶಿಕ್ಷಣದ ಮೂಲ ಉದ್ದೇಶ ನಮ್ಮನು ಅರ್ಹರನ್ನಾಗಿಸುವುದು. ಅಂದರೆ ಜಗತ್ತನ್ನು ಅರ್ಥಮಾಡಿಕೊಳ್ಳಲು, ಅಲ್ಲಿನ ಸಮಸ್ಯೆಗಳನ್ನು ಎದುರಿಸಲು ಮತ್ತು ಜಗತ್ತನ್ನು ಬದಲಾಯಿಸಲು ನಮ್ಮನು ಅರ್ಹರಾಗಿ ಸುವುದೇ ಶಿಕ್ಷಣದ ಮೂಲ ಉದ್ದೇಶವಾಗಿದೆ. ಹಾಗಾದರೆ ಪ್ರಸ್ತುತ ಇಂದಿನ ಯುವಕರು ಶಿಕ್ಷಣದ ಮೂಲಕ ಯಾವ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಎದುರಿಸಿ ಮತ್ತು ಬದಲಾಯಿಸಬೇಕಾಗಿದೆ ಎಂಬುದು ಇಲ್ಲಿ ಪ್ರಮುಖ ಪ್ರಶ್ನೆಯಾಗುತ್ತದೆ. ಇಂದು ನಾನು ಮಾತನಾಡುತ್ತಿರುವ ವಿಷಯ ಜಾಗತೀಕರಣಕ್ಕೆ ಪರ್ಯಾಯವಾದುದು ಯಾವುದಾದರೂ ಇದೆಯೆ? ಸರಳವಾಗಿ ಹೇಳುವುದಾದರೆ ಜಾಗತೀಕರಣವನ್ನು ಎದುರಿಸಲು ಇರುವ ಪರ್ಯಾಯವೇನು ಎಂಬುದಾಗಿದೆ.

ಹಾಗಾದರೆ ನೀವು ಜಾಗತೀಕರಣಕ್ಕೆ ಏನಾದರೂ ಪರ್ಯಾಯ ಚಿಂತಿಸಲು ಮತ್ತು ಕಾಣಲು ಸಾಧ್ಯವೇ? ಎಂದು ನನ್ನನ್ನು ಕೇಳಿದರೆ ನನ್ನ ಉತ್ತರ ಹೌದು, ಜಾಗತೀಕರಣಕ್ಕೆ ನಿಜವಾಗಿಯೂ ಪರ್ಯಾಯವಾದ ಒಂದು ಪ್ರಬಲ ಶಕ್ತಿ ಇದೆ. ಅದು ನಮ್ಮೊಳಗೇ ಇದ್ದು ನಾವೇ ಅದನ್ನು ಹೊರತರಬೇಕಾದ ಅನಿವಾರ್ಯತೆ ಇದೆ. ಹಾಗಾದರೆ ಜಾಗತೀಕರಣದ ಸವಾಲುಗಳಿಗಿರುವ ಆ ಪ್ರಬಲ ಪರ್ಯಾಯ ಯಾವುದು ಎಂಬ ಅಂಶ ನಿಮ್ಮನ್ನು ಕಾಡ ಬಹುದು ಆ ಪರ್ಯಾಯವೇನೆಂದರೆ ಅದುವೇ ನಾಗರೀಕ ಪ್ರಪಂಚ (Civilized world) ನೆನಪಿಡಿ. ಜಾಗತೀಕರಣಕ್ಕೆ ಪರ್ಯಾಯವಾಗಿ ಏನಾದರೂ ಇದ್ದಲ್ಲಿ ಅದು ನಾಗರೀಕ ಪ್ರಪಂಚದ ನಿರ್ಮಾಣ ಅಥವಾ ಕಟ್ಟುವಿಕೆಯೇ

ನೀವು ಜಾಗತೀಕರಣಕ್ಕೆ ಏನಾದರೂ ಪರ್ಯಾಯ ಚಿಂತಿಸಲು ಮತ್ತು ಕಾಣಲು ಸಾಧ್ಯವೇ? ಎಂದು ನನ್ನನ್ನು ಕೇಳಿದರೆ ನನ್ನ ಉತ್ತರ ಹೌದು, ಜಾಗತೀಕರಣಕ್ಕೆ ನಿಜವಾಗಿಯೂ ಪರ್ಯಾಯವಾದ ಒಂದು ಪ್ರಬಲ ಶಕ್ತಿ ಇದೆ. ಅದು ನಮ್ಮೊಳಗೇ ಇದ್ದು ನಾವೇ ಅದನ್ನು ಹೊರತರಬೇಕಾದ ಅನಿವಾರ್ಯತೆ ಇದೆ. ಹಾಗಾದರೆ ಜಾಗತೀಕರಣದ ಸವಾಲುಗಳಿಗಿರುವ ಆ ಪ್ರಬಲ ಪರ್ಯಾಯ ಯಾವುದು ಎಂಬ ಅಂಶ ನಿಮ್ಮನ್ನು ಕಾಡಬಹುದು ಆ ಪರ್ಯಾಯವೇನೆಂದರೆ ಅದುವೇ ನಾಗರೀಕ ಪ್ರಪಂಚ ನೆನಪಿಡಿ. ಜಾಗತೀಕರಣಕ್ಕೆ ಪರ್ಯಾಯವಾಗಿ ಏನಾದರೂ ಇದ್ದಲ್ಲಿ ಅದು ನಾಗರೀಕ ಪ್ರಪಂಚದ ನಿರ್ಮಾಣ ಅಥವಾ ಕಟ್ಟುವಿಕೆಯೇ ಆಗಿದೆ. ನನ್ನ ಪ್ರಕಾರ ಪ್ರಸ್ತುತ ಜಗತ್ತು ನಾಗರೀಕವಲ್ಲ.

ಆಗಿದೆ. ನನ್ನ ಪ್ರಕಾರ ಪ್ರಸ್ತುತ ಜಗತ್ತು ನಾಗರೀಕವಲ್ಲ. ನೀವು ಅದನ್ನು ಜಾಗತೀಕರಣ, ಉದಾರೀಕರಣ, ಬಂಡವಾಳಶಾಹಿತ್ವ ಏನೆಂದಾದರೂ ಕರೆಯಿರಿ; ಆದರೆ ಇದು ನಾಗರೀಕ ವಾಗಿಲ್ಲ. ಆದ್ದರಿಂದಲೇ ಇಂದು ನಮ್ಮ ಪ್ರಪಂಚ ನಾಗರೀಕವಾಗಿಲ್ಲ.

ಮೊದಲು ಈ ನಮ್ಮ ಸಮಾಜ ಏಕೆ ನಾಗರೀಕವಲ್ಲ ಎಂಬುದನ್ನು ತಿಳಿಯೋಣ. ನಮ್ಮೆಲ್ಲರಿಗೂ ತಿಳಿದಿರುವಂತೆ ಈ ಆಧುನಿಕ ಪ್ರಪಂಚದಲ್ಲಿ ಸಂಪತ್ತಿನ ಉತ್ಪಾದನೆ ಅತ್ಯಂತ ಹೆಚ್ಚಾಗಿದೆ. ಇಲ್ಲಿ ಹೆಚ್ಚಾಗಿ ಸರಕು-ಸಂಪತ್ತು, ಅಂತಸ್ತು, ಹಣವನ್ನು ಕಾಣಲು ಸಾಧ್ಯವಿದೆ. ಆದರೆ ಪ್ರಾಚೀನ ಮತ್ತು ಮಧ್ಯಕಾಲದಲ್ಲಿ ಈ ಮಟ್ಟಿಗಿನ ಸಂಪತ್ತು ಇರಲಿಲ್ಲ. ಆದ್ದರಿಂದ ಅಲ್ಲಿ ಕೆಲವು ಮಂದಿ ಆಹಾರವಿಲ್ಲದೆ ಬದುಕುತ್ತಿದ್ದರು. ಉದಾಹರಣೆಗೆ ನೋಡುವುದಾದರೆ ಪ್ರಾಚೀನ ಕಾಲದ ಹರ್ಷವರ್ಧನ ಮತ್ತು ಅಶೋಕನ ಸಾಮ್ರಾಜ್ಯದಲ್ಲಿ ಸಂಪತ್ತು ಎಂಬುದು ಅತ್ಯಂತ ಕಡಿಮೆ ಪ್ರಮಾಣದಲ್ಲಿತ್ತು (ಇಂದಿಗೆ ಹೋಲಿಸಿದರೆ). ಆದ್ದರಿಂದ ಅಲ್ಲಿ ಕೆಲವು ಜನರು ಅಗತ್ಯಕ್ಕೆ ತಕ್ಕಷ್ಟು ಆಹಾರ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಇಂದು ನಾವು ಸಂಪತ್ತನ್ನು ಹೆಚ್ಚು ಹೆಚ್ಚಾಗಿ ಉತ್ಪಾದಿಸುತ್ತಿದ್ದೇವೆ.

ಆದರೆ ನಮ್ಮ ಸುತ್ತಲೂ ಲಕ್ಷಾಂತರ ಜನ ಆಹಾರವಿಲ್ಲದೆ ಸಾಯಿತ್ತಿರುವುದನ್ನು ನೋಡುತ್ತಿದ್ದೇವೆ! ಹಾಗಾದರೆ ನಿಜವಾದ ನಾಗರೀಕರು ಯಾರು? ಎಂಬ ಪ್ರಶ್ನೆ ಇಲ್ಲಿ ಪ್ರಮುಖವಾಗುತ್ತದೆ. ಪ್ರಾಚೀನ ಕಾಲದಲ್ಲಿ ಸಂಪತ್ತು ಕಡಿಮೆ ಇತ್ತು, ಕೆಲವರು ಮಾತ್ರ ಉಪವಾಸ ಇರುತ್ತಿದ್ದರು. ಹಾಗಾಗಿ ಅಂದಿನ ಜನ ಅನಾಗರೀಕರಿರಬಹುದು! ಆದರೆ ಇಂದಿನ ಸಂಪತ್ತು ಅಧಿಕವಾಗಿದೆ. ಆಧುನಿಕತೆ, ತಂತ್ರಜ್ಞಾನದ ಹೆಸರಿನಲ್ಲಿ ಉತ್ಪಾದನೆಯು ಅಧಿಕವಾಗಿದೆ. ಆದರೂ ಸಾವಿರಾರು ಜನ ಊಟ, ಬಟ್ಟೆ ಮತ್ತು ಶಿಕ್ಷಣವಿಲ್ಲದೆ ಅಲೆದಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಯಾವುದು ನಿಜವಾದ ನಾಗರೀಕತೆ? ಯಾವುದನ್ನು ನಾವು ನಾಗರೀಕತೆಯ ಗುರುತು ಎಂದು ನಂಬಿಕೊಂಡಿದ್ದೇವೆ?

ಹಾಗೆ ನೋಡುವುದಾದರೆ ನಿಜವಾಗಿಯೂ ಇಂದಿನ ಮನುಷ್ಯ, ಪ್ರಾಣಿಗಳಿಗಿಂತ ಉತ್ತಮನೇ? ಯಾವಾಗ ಮನುಷ್ಯನು ಪ್ರಾಣಿಗಳಿಗಿಂತ ಉತ್ತಮ ಎನಿಸಿಕೊಳ್ಳುತ್ತಾನೆ? ಯಾವಾಗ ಅವನು ತನ್ನ ಸುತ್ತಮುತ್ತಲಿನ ಪ್ರಾಣಿ ಸಮುದಾಯಕ್ಕಿಂತ ಮೇಲ್ಮಟ್ಟದ ಸಮುದಾಯಿಕ ಜೀವನ ನಡೆಸಲು ಶಕ್ತನಾಗುತ್ತಾನೋ ಆಗ ಅವನನ್ನು "ನಾಗರೀಕ" ಎಂದು ಕರೆಯುತ್ತೇವೆ. ಉದಾ: ಮನುಷ್ಯ ನಾಯಿಗಳಿಗಿಂತ, ಬೆಕ್ಕುಗಳಿಗಿಂತ, ಇಲಿಗಳಿಗಿಂತ ಮೇಲ್ಮಟ್ಟದಲ್ಲಿ ಬದುಕಲು ಸಾಧ್ಯವಾದಾಗ ಮಾತ್ರ ಆತನನ್ನು ನಾವು ನಾಗರೀಕ ಎಂದು ಕರೆಯಬಹುದು.

ನೀವು ಎಂದಾದರೂ ನಿಮ್ಮ ಬೀದಿಯ ಮತ್ತು ಮನೆಗಳಲ್ಲಿನ ಬೆಕ್ಕು ಇಲಿಗಳನ್ನು ಗಮನಿಸಿದ್ದೀರಾ? ಗಮನಿಸಿದ್ದೇ ಆದರೆ ಅವುಗಳಲ್ಲಿ ಮರೆಯದೆ ಒಂದು ಅಂಶವನ್ನು ಗುರುತಿಸಿ. ನಿಮ್ಮ ಬೀದಿಗಳಲ್ಲಿ ಹಲವಾರು ಬೆಕ್ಕುಗಳು ಮತ್ತು ಇಲಿಗಳು ಇರಬಹುದು. ಅವುಗಳಲ್ಲಿ ಕೆಲವು ಬೆಕ್ಕುಗಳು ದಪ್ಪಗೆ, ಇನ್ನು ಕೆಲವು ಆಹಾರವಿಲ್ಲದೇ ಬಡಕಲಾಗಿರುವುದನ್ನು ನೋಡಲು ಸಾಧ್ಯವೇ? ಅಲ್ಲದೆ ಅಲ್ಲಿನ ಇಲಿಗಳು ಏನು ತಿನ್ನಲು ಸಿಗದೇ ಉಪವಾಸದಿಂದ ಇರುವುದು ನಿಮಗೆ ಗೋಚರಿಸುತ್ತದೆಯೇ? ಖಂಡಿತ ವಸ್ತು ಸ್ಥಿತಿ ಹೀಗಿರಲು ಸಾಧ್ಯವಿಲ್ಲ. ಇದ್ದರೆ ಎಲ್ಲ ಬೆಕ್ಕುಗಳು ಮತ್ತು ಇಲಿಗಳು ತಿನ್ನಲು ಏನು ಸಿಗದೇ ಹಸಿವಿನಿಂದ ಇರುತ್ತವೆ. ಅಥವಾ ತಿನ್ನಲು ಏನಾದರೊಂದು ವಸ್ತುವನ್ನು ಪಡೆದಿರುತ್ತವೆ. ಹಾಗಾದರೆ ಮಾನವ ಸಮಾಜ ಅವುಗಳಿಗಿಂತ ಉತ್ತಮ ಎಂದು ತಮಗನಿಸುತ್ತೇದೆಯೆ?

ನಿಮಗೂ ತಿಳಿದಿರುವಂತೆ ಪಕ್ಷಿಗಳು, ಹುಲಿಗಳು, ಆನೆಗಳಂತೆಯೇ ಮಾನವನು ಸಹ ಒಂದು ಜೀವ ಪ್ರಬೇಧ. ಮಾನವ ಜೀವಿಯನ್ನು ಯಾವಾಗ ನಾವು ನಾಗರೀಕರೆಂದು ಗುರುತಿಸಲು ಸಾಧ್ಯವಾಗುವುದೆಂದರೆ ಅವನು ಕೆಲವೊಂದು ಗುಣಲಕ್ಷಣಗಳನ್ನು ಹೊಂದಿದ್ದಾಗ ಮಾತ್ರ, ಆ ಗುಣಲಕ್ಷಣಗಳೆಂದರೆ ಆರೋಗ್ಯ, ಮೌಲ್ಯಗಳು ಮತ್ತು ಕಲಿಯುವಿಕೆ.

ಒಂದು ವೇಳೆ ಮನುಷ್ಯ ಪ್ರಬೇಧದಲ್ಲಿ ಒಂದು ಗುಂಪು ಮಾತ್ರ ಅತಿ ಹೆಚ್ಚಾದ ಆಸ್ತಿ, ಆಹಾರ, ಭೋಗ ವಸ್ತುಗಳನ್ನು ಪಡೆಯುತ್ತಿದ್ದರೆ, ಅದು ಮಾನವ ಸಮುದಾಯದ ಅಭಿವೃದ್ಧಿ ಅಲ್ಲ. ಬದಲಾಗಿ ಅದು ಒಂದು ವರ್ಗದ ಜನರ ಅಭಿವೃದ್ಧಿ ಮಾತ್ರವಾಗಿರುತ್ತದೆ. ಮಾನವ ಸಮುದಾಯವನ್ನು ಯಾವಾಗ ಅಭಿವೃದ್ಧಿ ಹೊಂದಿದ ಸಮುದಾಯವೆಂದು ವಿವರಿಸಲು ಸಾಧ್ಯವಾಗುತ್ತದೆಂದರೆ, ಒಬ್ಬ ಸಾಮಾನ್ಯ ಮನುಷ್ಯ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಶಕ್ತನಾದಾಗ. ಕೆಲವರು ಇವನನ್ನು "ಕೊನೆಯ ವ್ಯಕ್ತಿ" ಎಂದು ಕರೆದಿದ್ದಾರೆ. ಗಾಂಧೀಜಿಯವರು ಈ ಭಾಷೆಯನ್ನು ಬಳಸಿದ್ದಾರೆ. ನಿಜವಾದ ಮಾನವ ಸಮುದಾಯದ ಅಭಿವೃದ್ಧಿಯ ಸೂಚಕವೆಂದರೆ ಆ ಸಮುದಾಯದ ಕೊನೆಯ ವ್ಯಕ್ತಿ ಊಟ ಮಾಡಲು, ಬಟ್ಟೆ ತೊಡಲು ಮೂಲಭೂತ ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುವುದು. ಆಗ ಮಾತ್ರ ನಾವು ಈ ಮಾನವರನ್ನು ನಾಗರೀಕರು ಎಂದು ಕರೆಯಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಮಾನವ ಸಮಾಜ ನಾಗರೀಕವಾಗಿಲ್ಲ

> **ಶಿಕ್ಷಣದ ಮೂಲ ಉದ್ದೇಶ ನಮ್ಮನು ಅರ್ಹರನ್ನಾಗಿಸುವುದು. ಅಂದರೆ ಜಗತ್ತನ್ನು ಅರ್ಥಮಾಡಿಕೊಳ್ಳಲು, ಅಲ್ಲಿನ ಸಮಸ್ಯೆಗಳನ್ನು ಎದುರಿಸಲು ಮತ್ತು ಜಗತ್ತನ್ನು ಬದಲಾಯಿಸಲು ನಮ್ಮನು ಅರ್ಹರಾಗಿಸುವುದೇ ಶಿಕ್ಷಣದ ಮೂಲ ಉದ್ದೇಶವಾಗಿದೆ. ಹಾಗಾದರೆ ಪ್ರಸ್ತುತ ಇಂದಿನ ಯುವ ಕರು ಶಿಕ್ಷಣದ ಮೂಲಕ ಯಾವ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, ಎದುರಿಸಿ ಮತ್ತು ಬದಲಾಯಿಸಬೇಕಾಗಿದೆ ಎಂಬುದು ಇಲ್ಲಿ ಪ್ರಮುಖ ಪ್ರಶ್ನೆಯಾಗುತ್ತದೆ. ಇಂದು ನಾನು ಮಾತನಾಡುತ್ತಿರುವ ವಿಷಯ ಜಾಗತೀ ಕರಣಕ್ಕೆ ಪರ್ಯಾಯವಾದುದು ಯಾವುದಾದರೂ ಇದೆಯೆ? ಸರಳವಾಗಿ ಹೇಳುವುದಾದರೆ ಜಾಗತೀಕರಣವನ್ನು ಎದುರಿಸಲು ಇರುವ ಪರ್ಯಾಯವೇನು ಎಂಬುದಾಗಿದೆ.**

ಎಂಬುದು ಸ್ಪಷ್ಟವಾಗುತ್ತದೆ.

ಹಾಗಾದರೆ ನಮ್ಮ ಮುಂದಿರುವ ಪ್ರಶ್ನೆ, ಈ ಪ್ರಪಂಚವನ್ನು ನಾಗರೀಕವನ್ನಾಗಿ ಮಾಡುವುದು ಹೇಗೆ? ಎಂಬುದಾಗಿದೆ. ಅದಕ್ಕಿಂತ ಪೂರ್ವದಲ್ಲಿ ನಾವು ಏಕೆ ಜಾಗತೀಕರಣವನ್ನು ಒಪ್ಪಿಕೊಂಡಿದ್ದೇವೆ ಎಂಬುದು ಪ್ರಮುಖ ಪ್ರಶ್ನೆಯಾಗುತ್ತದೆ. ಹಾಗೆ ನೋಡುವುದಾದರೆ, ಇಂದು ನಾವು ನಿಜವಾಗಲು ಸಮಸ್ಯೆಯಲ್ಲಿದ್ದೇವೆ. ನಾವು ಜಾಗತೀಕರಣವನ್ನು "ವಿಮರ್ಶಾತಕ್ಮವಾದ" ಭಾಷೆಯಲ್ಲಿ ಮಾತ್ರ ಎದುರಿಸುತ್ತಿದ್ದೇವೆ. ಹಾಗಾದರೆ ಈ ಸ್ಥಿತಿಯನ್ನು ಬದಲಾಯಿಸಲು ಸಾಧ್ಯವೇ ಎಂಬ ಪ್ರಶ್ನೆ ಇಲ್ಲಿ ಉದ್ಭವವಾಗುತ್ತದೆ. ಏಕೆ ನಮ್ಮ ಸಮಾಜದ ಬಹುಸಂಖ್ಯೆಯ ಶಿಕ್ಷಿತರು ಜಾಗತೀಕರಣವನ್ನು ಒಪ್ಪಿಕೊಂಡಿದ್ದಾರೆ ಎಂಬುದು ಇಲ್ಲಿ ಪ್ರಮುಖವಾಗುತ್ತದೆ. ಏಕೆ ಅವರು ಜಾಗತೀಕರಣವೊಂದನ್ನು ವಿರೋಧಿಸುತ್ತಿಲ್ಲ? ಏಕೆಂದರೆ ಅವರು ಜಾಗತೀಕರಣದ ತತ್ವವನ್ನು ಒಪ್ಪಿಕೊಂಡಿದ್ದಾರೆ- ಅವರ ಪ್ರಜ್ಞೆಯಲ್ಲಿ ಜಾಗತೀಕರಣದ ಕೆಲವು ಪ್ರಾಥಮಿಕ ಪರಿಕಲ್ಪನೆಗಳು ಮಾತ್ರ ಇವೆ.

ಆ ಪ್ರಾಥಮಿಕ ಪರಿಕಲ್ಪನೆಗಳು ಮೊದಲು ಬದಲಾಗಲೇಬೇಕು. ಪ್ರಾಥಮಿಕವಾದಂತಹ ನಡವಳಿ ಬದಲಾಗಬೇಕು. ಇದನ್ನು ಹೇಗೆ ಬದಲಾಯಿಸಲು ಸಾಧ್ಯ? ಈಗ ಪ್ರಭುತ್ವ ಪರಿಕಲ್ಪನೆಗಳು (Ruling concepts) ಅಂದರೆ ಯಾವ ಪರಿಕಲ್ಪನೆಗಳು ಆಳುವ ವರ್ಗದಿಂದ ಸಮ್ಮತಿಯನ್ನು ಪಡೆದಿರುತ್ತವೆಯೋ ಅದನ್ನು ನಾವು ಪ್ರಭುತ್ವ ಪರಿಕಲ್ಪನೆಗಳು ಎನ್ನುತ್ತೇವೆ(ನಮ್ಮನ್ನು ಆಳುವ ವರ್ಗದಿಂದ ಸ್ವೀಕೃತಗೊಂಡ ತತ್ವಗಳು ಅಥವಾ ಪರಿಕಲ್ಪನೆಗಳು). ಇವು ಶಾಲೆಗಳು, ಶಿಕ್ಷಣ ವ್ಯವಸ್ಥೆ, ಪತ್ರಿಕೆಗಳು, ವಿಶ್ವವಿದ್ಯಾನಿಲಯ ಮುಂತಾದವುಗಳನ್ನು ನಿಯಂತ್ರಿಸುತ್ತವೆ. ಈ ಪರಿಕಲ್ಪನೆಗಳು ತಮ್ಮದೇ ಆದ ಮಾಧ್ಯಮದ ಮೂಲಕ ನಮ್ಮನ್ನು ಈ ಒಂದು ಪ್ರಭುತ್ವದ ನಡವಳಿಕೆಯನ್ನು ಒಪ್ಪುವಂತೆ ಮಾಡುತ್ತವೆ.

ಹಾಗಾದರೆ ಸುಮ್ಮನೆ ಗಮನಿಸಿದರೆ, ಇಂದಿನ ಯುವಕ ಮತ್ತು ಯುವತಿಯರಿಗೆ ಕನಸುಗಳಿವೆ ಮತ್ತು ಪ್ರತಿಯೊಬ್ಬರು ಅವರ ಬದುಕಿನ ಬಗ್ಗೆ ಕನಸುಗಳನ್ನು ಕಾಣುತ್ತಿರುತ್ತಾರೆ. ಒಂದು ವೇಳೆ ನೀವು ಕನಸು ಕಾಣದಿದ್ದರೆ ನೀವು ಯೌವನದಲ್ಲಿಲ್ಲವೆಂದೇ ಅರ್ಥ. ಇಂದು ಜಾಗತೀಕರಣ, ಅಮೆರಿಕಾ, ಬಂಡವಾಳಶಾಹಿತ್ವ, ಟಿ.ವಿ., ಮಾಧ್ಯಮ, ಇವು ನಿಮಗೆ ತಪ್ಪಾದಂತಹ ಕನಸುಗಳನ್ನು ತೋರಿಸುತ್ತಿವೆ. ಅವು ನಿಮ್ಮ ವೈಯಕ್ತಿಕ ಬದುಕಿನ ಬಗೆಗಿನ ಕನಸುಗಳನ್ನು ಮಾತ್ರ ನೀಡುತ್ತವೆ. ನಿಮ್ಮ ಭವಿಷ್ಯದಲ್ಲಿ ನೀವು ಎಷ್ಟು ಶ್ರೀಮಂತರಾಗಿರುತ್ತೀರಿ, ನೀವು ಎಷ್ಟರ ಮಟ್ಟಿಗೆ ವೈಭವವನ್ನು ಅನುಭವಿಸಲು ಸಾಧ್ಯ ಎಂಬಿತ್ಯಾದಿ ಕನಸುಗಳನ್ನು ಕಾಣಲು ಇವು ನಿಮ್ಮನ್ನು ಪ್ರೇರೇಪಿಸುತ್ತವೆ. ಇಲ್ಲಿರುವ ಯಾರಿಗಾದರೂ ಅಲ್ಪ-ಸ್ವಲ್ಪ ಹಿಂದಿ ಬಂದಿದ್ದರೆ, ಇತ್ತೀಚೆಗೆ ದೂರದರ್ಶನದಲ್ಲಿ ಪ್ರಸಾರವಾಗುತ್ತಿರುವ ಅಮಿತಾಬಚ್ಚನ್ ಅವರು ಒಂದು ಕೆಟ್ಟ ಕಾರ್ಯಕ್ರಮವನ್ನು ನೋಡುತ್ತಿರುತ್ತೀರಾ. ಅದರ ಹೆಸರು 'ಕೌನ್ ಬನೇಗಾ ಕರೋಡಪತಿ' ಈ ರೀತಿಯ ಕನಸುಗಳನ್ನು ಜಾಗತೀಕರಣ ನಿಮ್ಮ ತಲೆಗೆ ತುಂಬುತ್ತದೆ.

ನೀವು ನಿಮ್ಮೊಳಗೆ ಕೋಟ್ಯಾಧೀಶನಾಗುವ ಆಲೋಚನೆಯನ್ನು ಮಾಡುತ್ತೀರಿ. ಶ್ರೀಮಂತನಾಗುವ, ಅಗರ್ಭ ಶ್ರೀಮಂತನಾಗುವ ಕನಸು ಕಾಣುತ್ತೀರ. ಮುಂದುವರಿದು ನೀವೊಬ್ಬರೇ ಅಗರ್ಭ ಶ್ರೀಮಂತರಾಗಲು ಸಾಧ್ಯ ಎಂಬ

ಸಂದೇಶವನ್ನು ಆ ಕಾರ್ಯಕ್ರಮ ನಿಮಗೆ ಕೊಡುತ್ತದೆ. ಇದು ತಪ್ಪಾದ ಕನಸುಗಳಿಗಿರುವ ಒಂದು ಉದಾಹರಣೆಯಾಗಿದೆ. ಯುವಕರಲ್ಲಿನ ಈ ರೀತಿಯ ಕನಸುಗಳು ಬದಲಾಗಬೇಕಿದೆ. ಈ ರೀತಿಯ ಕನಸುಗಳು ಬದಲಾವಣೆ ಹೊಂದಿ ಆ ಜಾಗದಲ್ಲಿ ಬೇರೆ ರೀತಿಯ ಕನಸುಗಳನ್ನು ಮರುಸ್ಥಾಪಿಸಬೇಕಾಗಿದೆ. ಅವು ಯಾವುದೆಂದರೆ ನಾವೆಲ್ಲರೂ, ಅಂದರೆ ಎಲ್ಲಾ ಮಾನವರು ಇಡೀ ಭಾರತೀಯರು ಬದುಕಲು ಉತ್ತಮವಾದ ಪ್ರದೇಶ ಇರಬೇಕು, ನಮ್ಮ ಸಮಾಜದ ಯಾವುದೇ ವ್ಯಕ್ತಿ ಸಹ ಹಸಿವಿನಿಂದ ಇರಬಾರದು, ಯಾವ ವ್ಯಕ್ತಿಯೂ ಅನಕ್ಷರಸ್ಥನಾಗಿರಕೂಡದು.

ಈ ರೀತಿಯ ಕನಸುಗಳು ಹೊಸ ಬಗೆಯ ಉತ್ತಮ ಪ್ರಪಂಚದ ನಿರ್ಮಾಣಕ್ಕೆ ಸುಧಾರಿತ ಮಾನವೀಯ ಸಮುದಾಯದ ನಿರ್ಮಾಣಕ್ಕೆ ಕಾರಣವಾಗುತ್ತವೆ. ನಿಮ್ಮಲ್ಲೇನಾದರು ಈ ರೀತಿಯ ಕನಸುಗಳಿದ್ದರೆ ಇಂದೇ ಜಗತ್ತನ್ನು ಬದಲಾಯಿಸಲು ಪ್ರಾರಂಭಿಸಿ. ಜಗತ್ತನ್ನು ಬದಲಾಯಿಸುವ ದಾರಿಯಲ್ಲಿ ಅದನ್ನು ಉನ್ನತ ಹಂತಕ್ಕೆ ಕೊಂಡೊಯ್ಯಬೇಕಾದರೆ ನೀವು ಇಡೀ ಸಮಾಜವೇ ಒಂದು, ಇಡೀ ದೇಶವೇ ಒಂದು, ಇಡೀ ಪ್ರಪಂಚವೇ ಒಂದು, ಎಂಬ ಬಗೆಯ ಕನಸುಗಳನ್ನು ಕಾಣಲು ಪ್ರಾರಂಭಿಸಿ ಕೆಲವು ಸಾರಿ ಇದನ್ನೇ ನಾವು "ಸಮಾಜವಾದ" ಎಂದು ಕರೆಯುತ್ತೇವೆ. ಆದರೆ ಇದರ ಅಗತ್ಯವಿಲ್ಲ. ನೀವು ಇದನ್ನು "ನಾಗರೀಕ ಸಮಾಜ" ಎಂದು ಬೇಕಾದರೆ ಕರೆಯಿರಿ ಅಥವಾ ಕೇವಲ ಸಮಾಜ ಎಂದಾದರೂ ಕರೆಯಿರಿ. ಕನಸುಗಳನ್ನು ಕಾಣಬೇಕಾದರೆ ನೀವು ಇಚ್ಛಾಪೂರ್ವಕವಾಗಿ ಸಮಾಜದ ಕೆಲವು ಮೌಲ್ಯಗಳನ್ನು, ನೀತಿ ನಿಯಮಗಳನ್ನು, ನಂಬಿಕೆಗಳನ್ನು ಹೊಂದಿರಬೇಕಾಗುತ್ತದೆ. ಆದರೆ ಈಗಿರುವ ಆಧುನಿಕ ನಾಗರೀಕತೆ ಈ ರೀತಿಯ ಸಮುದಾಯಿಕ ಪ್ರಜ್ಞೆಯ ಕನಸುಗಳನ್ನು ಹೊಂದಿಲ್ಲ. ಇದು ಹಲವಾರು ವಿಷಯಗಳ ಬಗ್ಗೆ ತಪ್ಪಾದ ಆಲೋಚನೆಗಳನ್ನೂ, ವ್ಯಕ್ತಿ ಕೇಂದ್ರಿತವಾದ ಕನಸುಗಳನ್ನೂ ಪಸರಿಸುತ್ತದೆ.

ಉದಾಹರಣೆಗೆ, ರಾಷ್ಟ್ರದ ಅಭಿವೃದ್ಧಿ ಮತ್ತು ಸಂಪತ್ತನ್ನು ತೆಗೆದುಕೊಳ್ಳೋಣ. ಅಮೆರಿಕಾ ರಾಷ್ಟ್ರದ ಸಂಪತ್ತು ಎಷ್ಟು? ಹಾಗೆಯೇ ಭಾರತದ ರಾಷ್ಟ್ರೀಯ ಉತ್ಪಾದನೆ ಮತ್ತು ಸಂಪತ್ತು ಎಷ್ಟು? ಅಮೆರಿಕಾದಂತ ರಾಷ್ಟ್ರದಲ್ಲಿ ಅತಿ ಹೆಚ್ಚು ಸಂಪತ್ತಿದೆ, ಅಲ್ಲಿ ಸಂಪತ್ತಿಗೆ ಯಾವುದೇ ಮಿತಿ ಇಲ್ಲ, ಅಲ್ಲಿ ಸಂಪತ್ತು ಎಂಬುದು ಎಂದಿಗೂ ಹೆಚ್ಚಾಗುತ್ತಲೇ ಇದೆ. ಭಾರತವು ಸಹ ಸಂಪತ್ತಿನ ನಿರಂತರ ಮೇಲ್ಮುಖ ಚಲನೆ ಬಗ್ಗೆ ಯೋಚಿಸುತ್ತದೆ. ಹಾಗೆಯೇ, ಒಬ್ಬ ವಿದ್ಯಾವಂತನೂ ಸಹ ತನ್ನ ಸಂಪತ್ತನ್ನು ಹೆಚ್ಚಿಸಲು ಬಯಸುತ್ತಾನೆ. ಅಂತೆಯೇ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ಚಿಂತಿಸಿರುತ್ತಾನೆ. ಹಾಗಾದರೆ ಎಲ್ಲರ ಸಂಪತ್ತು ಹೆಚ್ಚಾಗಲು ಸಾಧ್ಯವೇ? ಎಂಬುದು ಇಲ್ಲಿನ ಪ್ರಮುಖ ಪ್ರಶ್ನೆ. ಇದು ಹೇಗೆ ಸಾಧ್ಯವಾಗುತ್ತದೆ. ಇದು ಕೆಲವರಿಗೆ ಮಾತ್ರ ಸಾಧ್ಯವಾಗುಬಹುದೇನೋ! ಆದರೆ ಇಂದು ಈ ಕಲ್ಪನೆ ಇಡೀ ಸಮುದಾಯಕ್ಕೆ ಅಥವಾ ದೇಶಕ್ಕೆ ಸಾಧ್ಯವಾಗುವ ಮಾತಾಗಿದೆ, ಯಾಕೆ? ಏಕೆಂದರೆ ಪ್ರಸ್ತುತವಿರುವ ಎಲ್ಲಾ ಸಂಪತ್ತು, ನೈಸರ್ಗಿಕ ಸಂಪನ್ಮೂಲಗಳ ಕೊಡುಗೆಯಾಗಿದೆ.

ನಿಮ್ಮಲ್ಲಿನ ಕಾರು, ಊಟ, ಔಷಧಿ ನಿಮ್ಮ ಮೊಬೈಲ್ ಎಲ್ಲವು ಸಹ ನೈಸರ್ಗಿಕ ಸಂಪನ್ಮೂಲ ಮತ್ತು ದೈಹಿಕ ಶ್ರಮದಿಂದಲೇ ಮಾಡಲ್ಪಟ್ಟಿವೆ. ಆದರೆ ಈ ಸಂಪನ್ಮೂಲಗಳು

ರಾಷ್ಟ್ರದ ಅಭಿವೃದ್ಧಿ ಮತ್ತು ಸಂಪತ್ತನ್ನು ತೆಗೆದುಕೊಳ್ಳೋಣ. ಅಮೆರಿಕಾ ರಾಷ್ಟ್ರದ ಸಂಪತ್ತು ಎಷ್ಟು? ಹಾಗೆಯೇ ಭಾರತದ ರಾಷ್ಟ್ರೀಯ ಉತ್ಪಾದನೆ ಮತ್ತು ಸಂಪತ್ತು ಎಷ್ಟು? ಅಮೆರಿಕಾದಂತ ರಾಷ್ಟ್ರದಲ್ಲಿ ಅತಿ ಹೆಚ್ಚು ಸಂಪತ್ತಿದೆ, ಅಲ್ಲಿ ಸಂಪತ್ತಿಗೆ ಯಾವುದೇ ಮಿತಿ ಇಲ್ಲ, ಅಲ್ಲಿ ಸಂಪತ್ತು ಎಂಬುದು ಎಂದಿಗೂ ಹೆಚ್ಚಾಗುತ್ತಲೇ ಇದೆ. ಭಾರತವು ಸಹ ಸಂಪತ್ತಿನ ನಿರಂತರ ಮೇಲ್ಮುಖ ಚಲನೆ ಬಗ್ಗೆ ಯೋಚಿಸುತ್ತದೆ. ಹಾಗೆಯೇ, ಒಬ್ಬ ವಿದ್ಯಾವಂತನೂ ಸಹ ತನ್ನ ಸಂಪತ್ತನ್ನು ಹೆಚ್ಚಿಸಲು ಬಯಸುತ್ತಾನೆ.

ಅತ್ಯಂತ ಕಡಿಮೆ ಪ್ರಮಾಣದಲ್ಲಿವೆ. ಕಡಿಮೆ ಪ್ರಮಾಣದ ಸಂಪನ್ಮೂಲಗಳಿಂದ ಎಂದಿಗೂ ಕೊನೆಯಾಗದ ಸಂಪತ್ತಿನ ಉತ್ಪಾದನೆ ಹೇಗೆ ಸಾಧ್ಯವಾಗುತ್ತದೆ? ಇದು ನಿಜವಾಗಿಯೂ ತಪ್ಪಾದ ಆಲೋಚನೆ. ಆದರೆ ಪ್ರಸ್ತುತ ಇದೇ ಆಲೋಚನೆ(ಎಲ್ಲರೂ ಸಂಪತ್ತನ್ನು ಗಳಿಸಬೇಕು) ಜನರ ಮನಸ್ಸಿನಲ್ಲಿ ಓಡಾಡುತ್ತಿದೆ. ಇಂದು ಮಾಧ್ಯಮಗಳು, ಪಠ್ಯ ಪುಸ್ತಕಗಳು, ಟಿ.ವಿ. ಮುಂತಾದವುಗಳು ಈ ರೀತಿಯ ತಪ್ಪಾದ ಆಲೋಚನೆಯನ್ನು ಸಮಾಜದಲ್ಲಿ ಜನರಲ್ಲಿ ಹರಡುತ್ತಿವೆ. ಆದರೆ ವಾಸ್ತವದಲ್ಲಿ ಇದು ಸಾಧ್ಯವೇ ಇಲ್ಲ. ಪ್ರತಿಯೊಂದು ಸಮಾಜದಲ್ಲಿ ಅಥವಾ ದೇಶದಲ್ಲಿ ಶ್ರೀಮಂತ ವರ್ಗ ಎಂಬುದೊಂದು ವರ್ಗವಿರುತ್ತದೆ.

ಇವರು ಅಲ್ಲಿನ ಬಹುಪಾಲು ಆಸ್ತಿಯ ಒಡೆಯರಾಗಿರುತ್ತಾರೆ ಮತ್ತು ಬಡತನಕ್ಕೆ ಮೂಲ ಕಾರಣ ಇವರೇ ಆಗಿರುತ್ತಾರೆ. ಇದು ಇತಿಹಾಸ ಹೊಂದಿರುವ ಅಥವಾ ತೋರಿಸಿರುವ ಸತ್ಯ. ಆದ್ದರಿಂದ ಎಲ್ಲಿಯವರೆಗೂ ಈ ಶ್ರೀಮಂತ ವರ್ಗವನ್ನ ಅಳಿಸಲು ಸಾಧ್ಯವಿಲ್ಲವೊ ಅಲ್ಲಿಯವರೆಗೂ ಬಡತನ ನಿರ್ಮೂಲನೆ ಅಸಾಧ್ಯ. ಹಾಗಾದರೆ ಇಂದಿನ ಯುವಜನತೆಯ ಕನಸೇನಾಗಿರಬೇಕೆಂದರೆ, ನಮ್ಮ ದೇಶ/ಸಮಾಜವನ್ನು ವರ್ಗರಹಿತವಾದ ದೇಶ/ಸಮಾಜವಾಗಿ ಕಟ್ಟುವ ಕನಸು ಯುವ ಜನತೆಯಲ್ಲಿರಬೇಕು. ಒಂದು ವೇಳೆ ನೀವು ಸದೃಢ ಭಾರತ ಕಟ್ಟುವ, ಬಡಜನರ ಪರಿಸ್ಥಿತಿಯನ್ನು ಸುಧಾರಿಸುವ ಗುರಿ ಹೊಂದಿದ್ದರೆ ಅನಿವಾರ್ಯವಾಗಿ ಶ್ರೀಮಂತ ವರ್ಗವನ್ನು ಅಳಿಸಬೇಕಾಗಿದೆ.

ಸಂಪತ್ತು ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ನಮಗೆ ನಮ್ಮ ಪ್ರಾಚೀನ ನಾಗರೀಕತೆಗಳು ಉತ್ತಮ ಸಂಪ್ರದಾಯವನ್ನೇ ಹಾಕಿಕೊಟ್ಟಿವೆ. ಅದು ಭಾರತದ ನಾಗರೀಕತೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಪ್ರಾಚೀನ ನಾಗರೀಕತೆಗಳು ಜಗತ್ತನ್ನು ಉತ್ತಮವಾಗಿಸುವ ಕುರಿತಾಗಿ ತಮ್ಮದೇ ಆದಂತಹ ಆಲೋಚನಾ ಕ್ರಮವನ್ನು ತೋರಿಸಿಕೊಟ್ಟಿವೆ. ಹಾಗೆ ನೋಡುವುದಾದರೆ ಭಾರತದ "ಸಮೂಹವಾದದ" ಚಿಂತನೆ ಬುದ್ಧನಿಂದ ಮೊದಲಾಗುತ್ತದೆ. ಅಥವಾ ನನ್ನ ಪ್ರಕಾರ ಬುದ್ಧ–ಈಶೋಪನಿಷತ್, ಭಾರತದ ಸಮಾಜವಾದಿ ಚಳುವಳಿಯ ಮೂಲವಾಗಿವೆ. ಈಶೋಪ ನಿಷತ್ ಎಂಬುದು ಉಪನಿಷತ್‌ನ ಒಂದು ಗಣ್ಯ ಭಾಗವಾಗಿದೆ.

ಬುದ್ಧ ಭಾರತದ ಚರಿತ್ರೆಯಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದ್ದಾನೆ. ಬುದ್ಧನ ಕುರಿತಾಗಿ 2 ಪ್ರಮುಖ ವಿಷಯಗಳನ್ನು ನೆನಪಿಸಿಕೊಳ್ಳುವುದು ಪ್ರಸ್ತುತ. ಹಾಗೆಯೇ ಈಶೋಪನಿಷತ್‌ನ ಒಂದು ಅಂಶವನ್ನು ನೆನಪಿಟ್ಟುಕೊಳ್ಳುವುದ ಅಗತ್ಯ. ಈಶೋಪನಿಷತ್ ಏನು ಹೇಳುತ್ತದೆಂದರೆ, ನೀವು ನಿಮ್ಮ ಜೀವನದಲ್ಲಿ ಯಾವುದೇ ಸ್ಥಾನ ಪಡೆಯದೆ ಸಂತಸದಿಂದ ಇರಬಹುದು. ಸಂಪತ್ತು ಮತ್ತು ವಸ್ತುಗಳು ಯಾರ ಒಡೆತನದಲ್ಲೂ ಇಲ್ಲ, ನೀವೂ ಅದನ್ನು ಅನುಭವಿಸಬಹುದು. ಆದರೆ ಅದರ ಮಾಲಿಕತ್ವಕ್ಕೆ ಬರುವ ಪ್ರಯತ್ನ ಮಾಡಬೇಡಿ. ನಿಮ್ಮ ಬದುಕಿನ ಸಂತೋಷಕ್ಕೆ ಅಗತ್ಯವಾದ ಎಲ್ಲಾ ವಸ್ತುಗಳು ನಿಸರ್ಗದಲ್ಲಿಯೇ ಇವೆ. ಆದರೆ ಅವು ಯಾವುವೂ ಸಹ ನಿಮ್ಮ ಮಾಲೀಕತ್ವಕ್ಕಲ್ಲ. "ಮಾಲೀಕತ್ವ" ಎಂಬುದು ಒಂದು ಕೆಟ್ಟ ಪರಿಪಾಠವಾಗಿದೆ. ಇದನ್ನೇ ಉಪನಿಷತ್ತು ಹೇಳುತ್ತದೆ.

ಬುದ್ಧ ಇನ್ನೆರಡು ಅಂಶಗಳನ್ನು ಹೇಳುತ್ತಾನೆ. ಅವನ ಪ್ರಕಾರ ಮನುಷ್ಯ ಮೂಲಭೂತವಾದ ದ್ವಂದ್ವಗಳನ್ನು, ಕಷ್ಟಗಳನ್ನು ಮೊದಲು ದೂರ ಮಾಡಿಕೊಳ್ಳಬೇಕು. ಜೀವನವು ಕಷ್ಟಗಳಿಂದಲೇ ಪ್ರಾರಂಭವಾಗುತ್ತದೆ. ಅದರಲ್ಲಿ ಕೆಲವೂ ಮೂಲಭೂತ ಕಷ್ಟಗಳು ಇರುತ್ತವೆ. ಅವುಗಳನ್ನು ಮೊದಲು ತೊಡೆದು ಹಾಕಬೇಕು.

1) ಅದರಲ್ಲಿ ಮೊದಲನೆಯದು ದುಃಖ. ಮೊದಲು ಇದನ್ನು ಹೋಗಲಾಡಿಸಬೇಕು. ಬುದ್ಧ ದುಃಖವನ್ನು ಹೋಗೂಡಿಸಬೇಕೆಂದಿದ್ದಾನೆಯೇ ಹೊರತು ಸುಖವನ್ನು ಹುಡುಕು ಎಂದಲ್ಲ. ಬುದ್ಧ ಮೂಲಭೂತವಾದ ದುಃಖವನ್ನು ಮೊದಲು ನಿವಾರಿಸಿಕೊ. ನೀನು ಹಸಿವಿನಿಂದರಬೇಡ. ಏಕೆಂದರೆ ಹಸಿವಿನಿಂದ ಇದ್ದರೆ ನಿನ್ನ ಅಸ್ತಿತ್ವವೇ ಸಾಧ್ಯವಿಲ್ಲ, ಆದ್ದರಿಂದ ನೀನು ಏನಾದರೂ ತಿನ್ನು, ಬೆತ್ತಲೆಯಾಗಿ ತಿರುಗಬೇಡ, ನೀನು ನಿನ್ನನ್ನು ಮಳೆ ಬಿಸಿಲಿನಿಂದ ರಕ್ಷಿಸಿಕೊ. ಇದು ದುಃಖವನ್ನು ನಿವಾರಿಸಿಕೊಳ್ಳುವ ಪರಿ. ಆದರೆ ದುಃಖವನ್ನು ತೆಗೆದು ಸುಖ ಗಳಿಕೆಯ ಕಡೆ ಹೋಗಬೇಡ. ಏಕೆಂದರೆ ಅದಕ್ಕೆ ಕೊನೆಯೇ ಇಲ್ಲ! ಅದು (ಸುಖದ ಹುಡುಕಾಟ) ಕೊನೆಯಾಗುವುದೂ ಇಲ್ಲ.

2) ಬುದ್ಧನು ಹೇಳುವ ಇನ್ನೊಂದು ಅಂಶ ಅತ್ಯಂತ ಪ್ರಮುಖವಾದುದ್ದು. ಅದನ್ನು ಅದುವರೆಗೂ ಯಾರು ಹೇಳಿರಲಿಲ್ಲ ಅಥವಾ ಭಾರತದ ಮಟ್ಟಿಗಾದರೂ ಅದನ್ನು ಬುದ್ಧನಗಿಂತ ಪೂರ್ವದಲ್ಲಿ ಯಾರು ಹೇಳಿರಲಿಲ್ಲ. ಯಾವುದೇ ಹಿಂದೂ ಪುರಾಣಗಳು ಇವರ ಬಗ್ಗೆ ಮಾತನಾಡಿಲ್ಲ. ಆದರೆ ಬುದ್ಧ ಇದರ ಬಗ್ಗೆ ತಿಳಿಸಿದ್ದಾನೆ. ಅದೆಂದರೆ "ನಿಮ್ಮ ಮನಸ್ಸಿನಲ್ಲಿ ಕರುಣೆ ತುಂಬಿರಲಿ". ಹಾಗಾದರೆ ಕರುಣೆ ಎಂದರೇನು? ಶಬ್ದಕೋಶಗಳಲ್ಲಿ ಹುಡುಕಿದರೆ ಇದಕ್ಕೆ ಸರಿಯಾದ ಅರ್ಥ ಹುಡುಕಿದಂತಾಗುವುದಿಲ್ಲ. ಕರುಣೆ ಎಂದರೆ ನೀವೂ ನಿಮ್ಮನ್ನು ನಿಮ್ಮ ಜೀವಿತಾವಧಿಯಲ್ಲಿ ನಿಮ್ಮ ಪರಿಸರದ ಒಡಗೂಡಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದು. ಉದಾಹರಣೆಗೆ ನಾಯಿ, ರೋಗಿಷ್ಟ, ಭಿಕ್ಷುಕ, ವೇಶ್ಯೆ, ಎಲ್ಲರೂ ಸಹ ನಿಮ್ಮ ಜೀವಿತಾವಧಿಯಲ್ಲಿ ನಿಮ್ಮೆದುರಿಗೆ ಸಾಗುತ್ತಾರೆ...... ಒಂದು ವೇಳೆ ನಿಮ್ಮ ಮನಸ್ಸಿನಲ್ಲಿ ಕರುಣೆ ಇದ್ದರೆ, ನೀನು ಅವರನ್ನು ನನ್ನಂತೆ ಎಂದು ತಿಳಿಯುತ್ತೀಯ ಹಾಗೂ ನಿನ್ನನ್ನು ನೀನು ನೋಡಿಕೊಂಡಂತೆಯೇ ಅವರನ್ನು ನೋಡುತ್ತೀಯ. ಈ ರೀತಿಯ ಮಹತ್ತರವಾದ ಸಹ–ಅನೂಭೂತಿಯನ್ನೇ ನಾವು "ಕರುಣೆ" ಎಂದು ಕರೆಯುತ್ತೇವೆ. ಇದನ್ನು

ಹೊಂದಿರುವ ಮನುಷ್ಯ ಮಾತ್ರ ಜಗತ್ತಿನ ಅತ್ಯಂತ ಉನ್ನತ ಜೀವಿಯಾಗಲು ಸಾಧ್ಯ, ಇದು ಬುದ್ಧನ ದೃಷ್ಟಿಯಲ್ಲಿ ಕರುಣೆ.

ಸಮಾಜವಾದ ಇಲ್ಲಿಂದ ಮೊದಲಾಗುತ್ತದೆ. ಎಲ್ಲರೂ ಸಹ ನಮ್ಮಂತೆ ಇರಬೇಕು. ನಾವು ಎಲ್ಲರನ್ನು ನಮ್ಮಂತೆ ಗ್ರಹಿಸಬೇಕು. ಬಿಲ್ ಗೇಟ್ಸ್, ಅಂಬಾನಿ, ಸಚಿನ್ ತೆಂಡೋಲ್ಕರ್, ನಾರಾಯಣ ಮೂರ್ತಿ, ಪ್ರೇಮಜೀ, ಇವರೆಲ್ಲಾ ಏಕೆ ಅಷ್ಟೊಂದು ಸಂಪತ್ತು ಹೊಂದಿದ್ದಾರೆ, ಏಕೆ ಅವರಿಗೆ ಅಷ್ಟೊಂದು ಹಣದ ಅವಶ್ಯಕತೆ ಇದೆ, ಎಂದು ಯಾರಾದರೂ ಪ್ರಶ್ನಿಸಿದರೆ ಅವರಿಗೆ ಅರ್ಹತೆ ಇದೆ ಎಂಬ ಸಿದ್ಧ ಉತ್ತರ ಸಿಗುತ್ತದೆ. ಅರ್ಹತೆ ಎಂಬುದು ಸಂಪತ್ತಿನೊಂದಿಗೆ ಯಾವ ಸಂಬಂಧ ಹೊಂದಿರಲೂ ಸಾಧ್ಯವಿಲ್ಲ. ಹೆಚ್ಚು ಅರ್ಹತೆ ಹೊಂದಿದವನು, ಹೆಚ್ಚು ಹಣ ಹೊಂದಬಹುದಾಗಿದೆ ಎಂಬುದು ಸತ್ಯವಾದರೆ, ಹೆಚ್ಚು ಹಣ ಹೊಂದಿರುವವನು ಹೆಚ್ಚು ಅರ್ಹತೆಯನ್ನು ಹೊಂದಿರುತ್ತಾನೆ ಎಂಬುದೂ ಸತ್ಯವಾಗುತ್ತದೆ. ಹಣ-ಅರ್ಹತೆಯ ನಡುವೆ ಯಾವ ಸಂಬಂಧವೂ ಇಲ್ಲ. ಹಾಗೊಂದು ವೇಳೆ ಇದ್ದರೆ ಅದು ಅನಾಗರೀಕತೆಯ ಪರಿಕಲ್ಪನೆಯಾಗಿದೆ.

ಏಕೆ ಹಣ ಮತ್ತು ಸಂಪತ್ತಿನ ಅಗತ್ಯತೆ ಇದೆ? ಬುದ್ಧನ ಪ್ರಕಾರ ನಮ್ಮ ಹೊಟ್ಟೆ, ಬಟ್ಟೆ ಮತ್ತು ಅಪತ್ಕಾಲಕ್ಕೆ ಅಗತ್ಯವಾದ ಸಂಪತ್ತು ಸಾಕು. ಹಾಗಾದರೆ ಹೆಚ್ಚಿನ ಹಣದ ಬಯಕೆ ಏಕೆ? ಯಾರಿಗೆ ಹೆಚ್ಚಿನ ಹಣದ ಅವಶ್ಯಕತೆ ಇದೆ? ಸುಮ್ಮನೆ ಅಂದುಕೊಳ್ಳಿ ನಾನು ಪ್ರತಿ ತಿಂಗಳು 5000 ರೂ. ಪಡೆಯುತ್ತಿದ್ದೇನೆ, ಅದರಲ್ಲಿಯೇ ನಾನು ಹೊಟ್ಟೆ ಬಟ್ಟೆ ಎಲ್ಲವನ್ನು ನಿಭಾಯಿಸಿ ಕೆಲವೊಂದು ಪ್ರಸ್ತುಕಗಳನ್ನು ಕೊಳ್ಳುತ್ತೇನೆ. ಹಾಗಾದರೆ ನನಗಿಂತ ಅಧಿಕ ಹಣ ಯಾರಿಗೆ ಬೇಕು? ಒಂದು ವೇಳೆ ಯಾವುದಾದರೂ ವ್ಯಕ್ತಿ ನನಗಿಂತ ಗಾತ್ರದಲ್ಲಿ ದೊಡ್ಡವನಾಗಿದ್ದರೆ ಅವನಿಗೆ ಅಧಿಕ ಹಣ ಬೇಕು. ಏಕೆಂದರೆ, ಅವನು ಹೆಚ್ಚು ತಿನ್ನಬಹುದು. ಒಂದು ವೇಳೆ ಅವನು ಕೃಷಿಕನಾಗಿದ್ದಲ್ಲಿ ಹಗಲು ರಾತ್ರಿ ಬೆವರು ಸುರಿಸಿ ದುಡಿಯುತ್ತಾನೆ ಆದ್ದರಿಂದ ಹೆಚ್ಚು ಹಸಿವಾಗಿ ಹೆಚ್ಚು ಊಟ ಮಾಡುತ್ತಾನೆ. ಆದ್ದರಿಂದ ನನಗಿಂತ ಹೆಚ್ಚು ಹಣ ರೈತನಿಗೆ ಬೇಕಾಗಿದೆ. ವಾಸ್ತವವಾಗಿ ಒಬ್ಬ ಕೃಷಿ ಕಾರ್ಮಿಕನಿಗೆ ಕರ್ನಾಟಕದ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರುಗಳಿಗಿಂತ ಹೆಚ್ಚು ಹಣದ ಅವಶ್ಯಕತೆ ಇದೆ. ಏಕೆಂದರೆ ಅವನು ಹೆಚ್ಚು ಶ್ರಮವಹಿಸುತ್ತಾನೆ ಹೆಚ್ಚು ಹಸಿದಿರುತ್ತಾನೆ! ಇದು ನಿಜವಾದ ನಾಗರೀಕತೆ ಮತ್ತು ತರ್ಕವಾಗಿದೆ.

ಆದರೆ ಇಂದು ಈ ತತ್ವಕ್ಕೆ ವಿರುದ್ಧವಾದ ಪರಿಸ್ಥಿತಿ ಇದೆ. ಯಾವ ವ್ಯಕ್ತಿಗೆ ಅತಿ ಹೆಚ್ಚು ಆಹಾರ ಬೇಕೋ ಆತ ಕಡಿಮೆ ಹಣ ಪಡೆಯುತ್ತಿದ್ದಾನೆ, ಯಾವ ವ್ಯಕ್ತಿಗೆ ಕಡಿಮೆ ಆಹಾರ ಬೇಕೋ ಆತ ಹೆಚ್ಚಾದ ಆಹಾರದಿಂದ ನರಳುತ್ತಿದ್ದಾನೆ. ಅವನು ಯಾವಾಗಲೂ ವೈದ್ಯರನ್ನು ಸಂಪರ್ಕಿಸಿ ನಾನೂ ಯಾವಾಗ ತೆಳ್ಳಗಾಗುವುದು ಎಂದು ಕೇಳುತ್ತಿರುತ್ತಾನೆ. ಇದು ಅನಾಗರಿಕತೆಯ ನಿಜವಾದ ಲಕ್ಷಣ. ಆದರೆ ಇವೇ ತತ್ವ ಇಂದು ನಮ್ಮ ಸಮಾಜ ಮತ್ತು ನಮ್ಮ ಮನಸ್ಸನ್ನು ಆಳುತ್ತಿವೆ. ಇದು ಬದಲಾಗಬೇಕು. ಅವನು ಕೃಷಿಕನಾಗಿರಲಿ ಉಪಾಧ್ಯಾಯನಾಗಿರಲಿ, ಕಂಪ್ಯೂಟರ್ ಇಂಜಿನಿಯರ್ ಆಗಿರಲಿ, ಅವನಿಗೆ ಹೊಟ್ಟೆ-ಬಟ್ಟೆಗೆ ಆಗುವಷ್ಟು ಹಣ ಸಾಕು. ಅವನಿಗೆ ವಹಿಸಿದ ಕೆಲಸವನ್ನು ಮಾಡಲು ಅಗತ್ಯ ಪ್ರಮಾಣದ ಸಂಪತ್ತು ಸಾಕು. ಅದಕ್ಕಿಂತ ಹೆಚ್ಚಿನದು ಏಕೆ? ನಿಜವಾಗಿಯೂ ಅಧಿಕ ಹಣ ಬೇಕಾಗಿರುವುದು

ಏಕೆ ಹಣ ಮತ್ತು ಸಂಪತ್ತಿನ ಅಗತ್ಯತೆ ಇದೆ? ಬುದ್ಧನ ಪ್ರಕಾರ ನಮ್ಮ ಹೊಟ್ಟೆ, ಬಟ್ಟೆ ಮತ್ತು ಅಪತ್ಕಾಲಕ್ಕೆ ಅಗತ್ಯವಾದ ಸಂಪತ್ತು ಸಾಕು. ಹಾಗಾದರೆ ಹೆಚ್ಚಿನ ಹಣದ ಬಯಕೆ ಏಕೆ? ಯಾರಿಗೆ ಹೆಚ್ಚಿನ ಹಣದ ಅವಶ್ಯಕತೆ ಇದೆ? ಸುಮ್ಮನೆ ಅಂದುಕೊಳ್ಳಿ ನಾನು ಪ್ರತಿ ತಿಂಗಳು 5000 ರೂ ಪಡೆಯುತ್ತಿದ್ದೇನೆ, ಅದರಲ್ಲಿಯೇ ನಾನು ಹೊಟ್ಟೆ ಬಟ್ಟೆ ಎಲ್ಲವನ್ನು ನಿಭಾಯಿಸಿ ಕೆಲವೊಂದು ಪ್ರಸ್ತುಕಗಳನ್ನು ಕೊಳ್ಳುತ್ತೇನೆ. ಹಾಗಾದರೆ ನನಗಿಂತ ಅಧಿಕ ಹಣ ಯಾರಿಗೆ ಬೇಕು? ಒಂದು ವೇಳೆ ಯಾವುದಾದರೂ ವ್ಯಕ್ತಿ ನನಗಿಂತ ಗಾತ್ರದಲ್ಲಿ ದೊಡ್ಡವನಾಗಿದ್ದರೆ ಅವನಿಗೆ ಅಧಿಕ ಹಣ ಬೇಕು. ಏಕೆಂದರೆ, ಅವನು ಹೆಚ್ಚು ತಿನ್ನಬಹುದು. ಒಂದು ವೇಳೆ ಅವನು ಕೃಷಿಕನಾಗಿದ್ದಲ್ಲಿ ಹಗಲು ರಾತ್ರಿ ಬೆವರು ಸುರಿಸಿ ದುಡಿಯುತ್ತಾನೆ ಆದ್ದರಿಂದ ಹೆಚ್ಚು ಹಸಿವಾಗಿ ಹೆಚ್ಚು ಊಟ ಮಾಡುತ್ತಾನೆ. ಆದ್ದರಿಂದ ನನಗಿಂತ ಹೆಚ್ಚು ಹಣ ರೈತನಿಗೆ ಬೇಕಾಗಿದೆ.

ಯಾರಿಗೆ? ಒಬ್ಬ ಶಾಲಾ ಶಿಕ್ಷಕನಿಗೆ ಅಧಿಕ ಹಣ ಬೇಡ. ಆದರೆ ಶಾಲೆಗೆ ಅಧಿಕ ಹಣಬೇಕು. ಒಬ್ಬ ವೈದ್ಯನಿಗೆ ಅಧಿಕ ಹಣದ ಅವಶ್ಯಕತೆ ಇಲ್ಲ. ಆದರೆ ಆಸ್ಪತ್ರೆಗೆ ಅಧಿಕ ಹಣದ ಅವಶ್ಯಕತೆ ಇದೆ. ಹಣ ಎಂಬುದು ಆಸ್ಪತ್ರೆಗಾಗಿ ಇರಬೇಕೆ ಹೊರತು, ಡಾಕ್ಟರನ ಕಿಸೆ ಅಥವಾ ಆತನ ಬ್ಯಾಂಕ್ ಬ್ಯಾಲೆನ್ಸ್‌ನಲ್ಲಿ ಅಲ್ಲ! ಹಣ ಶಾಲೆಗಳಿಗಾಗಿ ಇರಬೇಕೆ ಹೊರತು, ಉಪಾಧ್ಯಾಯರ ಕಿಸೆಯಲ್ಲಿ ಅಲ್ಲ.

ಸಂಪತ್ತಿನ ಬಗೆಗಿನ ಈ ತತ್ವಜ್ಞಾನವನ್ನು ಪುರಸ್ಕರಿಸಬೇಕು. ಬುದ್ಧ ಮತ್ತು ಈ ಈಶೋಪನಿಷತ್ತಿನ ತತ್ವಗಳು ಸಮಾಜದಲ್ಲಿ ಪುರಸ್ಕೃತವಾಗಬೇಕು. ಇದು ಸಮಾಜವಾದದ ಮತ್ತು ನಾಗರೀಕ ಸಮಾಜದ ಆರಂಭದ ಹಂತ. ನೀವು ಈ ಮೂಲಭೂತ ತತ್ವಗಳನ್ನು ಅರ್ಥಮಾಡಿಕೊಳ್ಳಬೇಕು. ಸಂಪತ್ತಿನ ಮತ್ತು ಸಮಾನತೆಯ ತತ್ವಗಳು ರೂಪಿಸಿಕೊಳ್ಳಬೇಕು. ಸಮಾನತೆ ಎಂಬುದು ಮಾನವನಿಗೆ ಇರಬೇಕಾದ ಅತ್ಯಂತ ಉನ್ನತವಾದ ಮೌಲ್ಯ. ಯಾವುದೇ ರೀತಿಯ ಕೆಟ್ಟ ಗುಣ, ಕೆಟ್ಟ ನಡವಳಿಕೆಗಳು ಅಸಮಾನತೆಯನ್ನು ಹುಟ್ಟು ಹಾಕಲು ಸಾಕು. ಉದಾ: ಭ್ರಷ್ಟಾಚಾರ

ನೀವು ಸಮಾನತೆಯ ತತ್ವವನ್ನು ಅರ್ಥಮಾಡಿಕೊಳ್ಳಲು ಎರಡು ರೀತಿಯ ಸಮಾಜವನ್ನು ಉದಾಹರಣೆಯಾಗಿ ತೆಗೆದುಕೊಳ್ಳಿ, ಒಂದು ಸಮಾಜದಲ್ಲಿ ಆರ್ಥಿಕ ಸಮಾನತೆ ಇದ್ದರೆ, ಇನ್ನೊಂದು ಸಮಾಜದಲ್ಲಿ ಬಹಳ ಅಸಮಾನತೆ ಇದೆ ಎಂದುಕೊಳ್ಳಿ. ನಾನು ಆ ಎರಡು ಸಮಾಜವನ್ನು ನೋಡದೇ ಹೇಳಬಲ್ಲೆ, ಸಮಾನತೆಯ ಸಮಾಜದಲ್ಲಿ ಕಡಿಮೆ ಭ್ರಷ್ಟಾಚಾರ ಇದ್ದರೆ, ಅಸಮಾನತೆಯ ಸಮಾಜದಲ್ಲಿ ಹೆಚ್ಚು ಭ್ರಷ್ಟಾಚಾರ ಇರುತ್ತದೆ. ಈ ರೀತಿಯ ಏಕಿದೆ? ತಾರ್ಕಿಕವಾಗಿ ನೋಡಿದರೆ, ಇದು ಸಹಜ ಎನ್ನಿಸುತ್ತದೆ. ಏಕೆಂದರೆ, ಅಸಮಾನತೆಯ ಸಮಾಜದಲ್ಲಿ ಆ ಸಮಾಜದ ಅತ್ಯಂತ ಕೆಳಗಿನ ಹಂತ ಇರುವ ವ್ಯಕ್ತಿ, ಮಧ್ಯಮ ವರ್ಗಕ್ಕೆ ಬರಲು ಪ್ರಯತ್ನಿಸಿದರೆ, ಮಧ್ಯಮ ವರ್ಗದ ವ್ಯಕ್ತಿ

ಮೇಲ್ವರ್ಗಕ್ಕೆ ಹೋಗಲು ಪ್ರಯತ್ನಿಸುತ್ತಾನೆ. ಅಂತಹ ಸಮಾಜದಲ್ಲಿ ಎಲ್ಲರಲ್ಲೂ ಇರುವ ಒಂದು ಕನಸೆಂದರೆ ಹೇಗಾದರೂ ಸರಿ ನಾವು ಕೊಟ್ಯಾಧಿಪತಿಗಳಾಗಬೇಕೆಂದು, ಅದು ಒಳ್ಳೆಯದಿರಲಿ ಅಥವಾ ಕೆಟ್ಟದಿರಲಿ. ಆದ್ದರಿಂದ ಅಲ್ಲಿ ಭ್ರಷ್ಟಾಚಾರ ಎಂಬುದು ಸದಾ ಚಾಲ್ತಿಯಲ್ಲಿರುತ್ತದೆ.

ಇನ್ನು ಸಮಾನತೆಯ ಪರಿಕಲ್ಪನೆಯನ್ನು ಬೇರೆ ಬೇರೆ ಅರ್ಥದಲ್ಲಿ ಪ್ರಸ್ತುತಪಡಿಸಲಾಗಿದೆ. ಬುದ್ಧನ ಪ್ರಕಾರ ಸಮಾನತೆ ಎಂದರೆ ಜಗತ್ತಿನಲ್ಲಿರುವ ಎಲ್ಲಾ ಜೀವ ಪ್ರಭೇಧಗಳ ನಡುವಣ ಸಮಾನತೆ. ಕಾರ್ಲ್‌ಮಾರ್ಕ್ಸ್ ಆರ್ಥಿಕ ಸಮಾನತೆಯನ್ನು ಚರ್ಚಿಸಿದ್ದಾರೆ. ಅಂಬೇಡ್ಕರ್‌ರವರು ಸಾಮಾಜಿಕ ಸಮಾನತೆ ಬಗ್ಗೆ ಮಾತನಾಡಿದ್ದಾರೆ. ಈ ಅಂಶಗಳು, ಮೌಲ್ಯಗಳು ಇಂದಿನ ಪ್ರಸ್ತುತ ಯುವಕ ಯುವತಿಯರಿಗೆ ಅರ್ಥವಾಗಬೇಕಿದೆ. ಮತ್ತು ಆ ನಿಟ್ಟಿನಲ್ಲಿ ಅವರು ಕಾರ್ಯ ಪ್ರವೃತ್ತರಾಗಬೇಕಿದೆ. ಹಾಗಾದಲ್ಲಿ ಮಾತ್ರ ಪ್ರಸ್ತುತ ಸಮಾಜವನ್ನು ಬದಲಾಯಿಸಲು ಸಾಧ್ಯ.

ಬುದ್ಧನಿಂದ ಹಿಡಿದು ಅಂಬೇಡ್ಕರ್ ವರೆಗೆ ಸಮಾನತೆಯ ಚರ್ಚೆಯಾಗಿದೆ. ಗಾಂಧಿಯು ಸಹ ಈ ವಿಷಯವಾಗಿ ಚರ್ಚಿಸಿದ್ದಾರೆ. ಅವರು ಒಂದು ಪ್ರಶ್ನೆ ಕೇಳುತ್ತಾರೆ. ಯಾಕೆ ಒಬ್ಬ ಕೂಲಿಕಾರ ಹೈಕೋರ್ಟಿನ ವಕೀಲರಿಗಿಂತ ಕಡಿಮೆ ಕೂಲಿ ಪಡೆಯುತ್ತಾನೆ? ಯಾಕೆ ಒಬ್ಬ ಹೈಕೋರ್ಟಿನ ನ್ಯಾಯವಾದಿ ಕೃಷಿ ಕಾರ್ಮಿಕನಿಗಿಂತ ಹೆಚ್ಚು ಸಂಭಾವನೆ ಪಡೆಯುತ್ತಾನೆ? ಈ ಪ್ರಶ್ನೆ ಗಾಂಧಿ ಕೇಳುತ್ತಾರೆ. ಯಾರಾದರೂ ಇದಕ್ಕೆ ಉತ್ತರಿಸಲು ಸಾಧ್ಯವೇ? ನ್ಯಾಯಾವಾದಿ ಮತ್ತು ಕೃಷಿಕನ ನಡುವಿನ ಅಸಮಾನತೆಗೆ ಯಾವುದೇ ಸಮರ್ಥನೆ ಕೊಡಲು ಸಾಧ್ಯವಿಲ್ಲ.

ನೀವು ಅವೈಜ್ಞಾನಿಕವಾಗಿ ಮತ್ತು ಅನಾಗರೀಕವಾಗಿ ಚಿಂತಿಸದಿದ್ದರೆ, ಈ ರೀತಿಯ ವೇತನದಲ್ಲಿ ವ್ಯತ್ಯಾಸವನ್ನು ಸಮರ್ಥಿಸಲು ಸಾಧ್ಯವಿಲ್ಲ. ಒಡೆತನ(ಮಾಲಿಕತ್ವ)ದ ನಿಯಮದ ಪ್ರಕಾರ, ಯಾರು ಎಷ್ಟನ್ನು ಹೊಂದಬಹುದು? ಯಾಕೆ ನೀವು ಒಂದು ಮನೆಗಿಂತ ಹೆಚ್ಚು ಮನೆ ಹೊಂದುತ್ತೀರಿ? 10 ಏಕರೆಗಿಂತ ಅಧಿಕ ಭೂಮಿಗೆ ಮಾಲಿಕರಾಗಲು ಕಾರಣವೇನು? ಒಂದು ಕಾರ್ಖಾನೆಗಿಂತ ಹೆಚ್ಚು ಕಾರ್ಖಾನೆಗಳ ನಿನಗೆ ಯಾಕೆ ಇದೆ?– ಈ ರೀತಿಯ ಪ್ರಶ್ನೆಗಳಿಗೆ ಸಮರ್ಥನೆಗಳು ಇಲ್ಲ. ನೀನು ದುಡಿಯುವುದಕ್ಕಿಂತ ಹೆಚ್ಚಿನದಕ್ಕೆ ಮಾಲಿಕನಾಗುವ ಹಂಬಲ ಏಕೆ ಬೇಕು? ಏಕೆ ನೀನು 2 ಶಾಲೆಯ ಶಿಕ್ಷಕನಾಗಿ ಬಯಸುತ್ತೀಯಾ? (ಒಂದು ಶಾಲೆ ಚಾಮರಾಜನಗರದಲ್ಲಿದ್ದಾರೆ. ಇನ್ನೊಂದು ಶಾಲೆ ಮೈಸೂರಿನಲ್ಲಿರುತ್ತದೆ) ಇದು ಸಮರ್ಥನೀಯವೇ! ಮುರ್ಡೋಕ್ ಎಂಬ ಯುರೋಪಿಯನ್ ವ್ಯಕ್ತಿ ಹಾಂಗ್ ಕಾಂಗ್‌ನಲ್ಲಿ ನೆಲೆಸಿದ್ದಾನೆ. ಅವನು ಇಡೀ ಜಗತ್ತಿನ ವೃತ್ತಪತ್ರಿಕೆಗಳು ಮತ್ತು ದೂರವಾಣಿ ಸಂಪರ್ಕಕ್ಕೆ ಮಾಲಿಕನಾಗಿದ್ದಾನೆ. ಅವನು ಹೀಗೆ ಮಾಡಲು ಅವಕಾಶ ಮಾಡಿಕೊಟ್ಟವರು ಯಾರು? ಮಾಲಿಕತ್ವ ಎಂಬುದು ನಿಮ್ಮ ಜೀವನಕ್ಕಷ್ಟೇ ಸೀಮಿತವಾಗಿರಬೇಕು.

ಆರ್ಥಿಕ ಉತ್ಪಾದನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಗಮನಕ್ಕೆ ತೆಗೆದುಕೊಂಡರೆ, ಇವುಗಳನ್ನು ಯಾವುದೇ ವ್ಯಕ್ತಿ ಅಥವಾ ಕುಟುಂಬದ ಮಾಲಿಕತ್ವಕ್ಕೆ ಒಳಗಾಗಿಸಬಾರದು. ಏಕೆ ಒಂದು ಕುಟುಂಬ, ಶಾಲೆಯ ಮಾಲಿಕರಾಗಬೇಕು? ಏಕೆ 100 ಕಾಲೇಜ್ ಹೊಂದಿರಬೇಕು? ಏಕೆಂದರೆ, ಇದು ಮಾಲಿಕತ್ವ ಪ್ರಧಾನ ಸಮಾಜ.

ಸಮಾಜವೆಂದರೆ ಸರ್ಕಾರವಾಗಿರಬಹುದು ಅಥವಾ ಸಹಕಾರಿ ಸಂಘವಾಗಿರಬಹುದು ಅದರ ಮೂಲಕ ಸಮಾಜಕ್ಕಾಗಿ ಉತ್ಪಾದನ ಕಾರ್ಯ ನಡೆಸಬೇಕು. ಸಮಾಜವೇ ಸಮಾಜಕ್ಕಾಗಿ ಉತ್ಪಾದಿಸಬೇಕು. ಸಮಾಜವನ್ನು ನಿರ್ವಹಿಸಬೇಕು. ಬುಡಕಟ್ಟು ಜನಾಂಗದವರು ಆಧುನಿಕ ಸಮಾಜಕ್ಕೆ ಹೋಲಿಸಿದರೆ ಅತ್ಯಂತ ನಾಗರೀಕವಾದ ಮಾಲಿಕತ್ವ ಗುಣವನ್ನು ಹೊಂದಿದ್ದಾರೆ. ಬುಡಕಟ್ಟು ಜನಾಂಗದವರ ಮಧ್ಯೆ ಯಾವ ರೀತಿಯ ಸಾಮುದಾಯಿಕ ಮಾಲಿಕತ್ವ ಹೊಂದಿದೆ ಎಂದು ತಮಗೆ ತಿಳಿದಿದೆ. ಇಂದು ಅವರು ನಿಜವಾಗಿಯೂ ತೊಂದರೆಯಲ್ಲಿದ್ದಾರೆ. ಏಕೆಂದರೆ ಆಧುನಿಕ ನಾಗರೀಕತೆ, ಆಧುನಿಕ ಸಮಾಜ ಸಾಮೂಹಿಕ ಮಾಲಿಕತ್ವದ ಮೇಲೆ ನಂಬಿಕೆ ಹೊಂದಿಲ್ಲ.

ಈ ಸಮಾಜ ವ್ಯಕ್ತಿಗತವಾದಂತಹ ಮತ್ತು ಖಾಸಗಿ ಮಾಲಿಕತ್ವವನ್ನು ಬೆಂಬಲಿಸುತ್ತದೆ. ಇದು ಇಲ್ಲಿನ ಸರ್ಕಾರ, ಅವರ ಕಾನೂನು, ಅವರ ಆಜ್ಞೆ, ಆದ್ದರಿಂದಲೇ ಬುಡಕಟ್ಟು ಜನ ತೊಂದರೆಯಲ್ಲಿದ್ದಾರೆ. ಏಕೆಂದರೆ ಬುಡಕಟ್ಟುಗಳಲ್ಲಿ ಭೂಮಿಯ ಮೇಲೆ ಯಾರ ಒಡೆತನವೂ ಇರುವುದಿಲ್ಲ. ಅದು ಇಡೀ ಸಮುದಾಯಕ್ಕೆ ಸೇರಿರುತ್ತದೆ. ಏಕೆಂದರೆ ವ್ಯಕ್ತಿಗತವಾದ ಮಾಲಿಕತ್ವ ಅವರಿಗೆ ಇರುವುದಿಲ್ಲ. ಉತ್ಪಾದನಾ ಸಾಧನಕ್ಕೆ ಸಂಬಂಧಿಸಿದಂತೆ ವ್ಯಕ್ತಿಗತ ಮಾಲಿಕತ್ವವನ್ನು ಅವರು ಹೊಂದಿರುವುದಿಲ್ಲ. ಅಲ್ಲಿ ಭೂಮಿ ಎಂಬುದು ಸಮುದಾಯಕ್ಕೆ ಸೇರಿರುತ್ತವೆ. ಅದು ನಿಜವಾದ ನಾಗರೀಕತೆಯ ಲಕ್ಷಣ. ಆದರೆ ಇಂದು ಆ ಬುಡಕಟ್ಟು ಸಮುದಾಯದಲ್ಲಿ ಒಂದು ಕಾರ್ಖಾನೆ ಸ್ಥಾಪಿಸಿದರೆ ಅವರೆನ್ನೆಲ್ಲರನ್ನು ಆಚೆ ನೂಕುತ್ತಾರೆ ಮತ್ತು ಅವರು ಯಾವುದೇ ಪರಿಹಾರವನ್ನು ಪಡೆಯಲಾಗುವುದಿಲ್ಲ.

ನಾವು ಈ ಮಾದರಿಯ–ಬುಡಕಟ್ಟು ರೀತಿಯ–ಸಮಾಜವನ್ನು ಮರುಸ್ಥಾಪಿಸಬೇಕು. ಪ್ರಸ್ತುತವಿರುವ ಈ ಕೆಲವು ತತ್ವಗಳನ್ನು ಬಳಸಿಕೊಂಡು ಅವುಗಳನ್ನು ಒಟ್ಟುಗೂಡಿಸಿ ಭಿನ್ನವಾಗಿ ಗ್ರಹಿಸುವ ಮೂಲಕ ಪ್ರಪಂಚವನ್ನು ಮರುವಿನ್ಯಾಸಗೊಳಿಸಬೇಕು. ಆದರೆ ಆ ತತ್ವಗಳು ನಾಗರೀಕ ತತ್ವಗಳಾಗಿರಬೇಕು. ಹಾಗಾದರೆ ಈ ಜಗತ್ತಿನ ಬದಲಾವಣೆಯ ಆರಂಭ ಹೇಗೆ? ಇದು ನಿಜವಾಗಿಯೂ ಕಷ್ಟದ ಕೆಲಸ. ನಿನ್ನೆ ಈ ಶಿಬಿರದ ಉದ್ಘಾಟನೆಯ ಸಂದರ್ಭದಲ್ಲಿ ಒಂದ್ಪುಟ್ಟ ಬೆಂಕಿ ಪಟ್ಟಣದಿಂದ ಎಷ್ಟೆ ಪ್ರಯತ್ನಿಸಿದರೂ ದೀಪ ಹತ್ತಿಕೊಳ್ಳುತ್ತಿರಲಿಲ್ಲ. ಏಕೆಂದರೆ ಎಡಗಡೆ ಕಿಟಕಿಯಿಂದ ಬಲವಾದ ಗಾಳಿ ಬೀಸುತ್ತಿತ್ತು.

ಅದನ್ನು ಗಮನಿಸಿದ ನಿಮ್ಮಲ್ಲಿಯೇ ಒಬ್ಬರು ಹೇಳಿದ ಮಾತೆಂದರೆ, ಜಾಗತೀಕರಣದ ಗಾಳಿ ಪ್ರಬಲವಾಗಿದೆ. ಇಲ್ಲಿ ನೀವೂ ಸಮಾಜವಾದದ ದೀಪವನ್ನು ಹಚ್ಚಲು ಸಾಧ್ಯವಿಲ್ಲ. ಒಂದು ಸಣ್ಣ ಬೆಂಕಿಪಟ್ಟಣದಿಂದ ಸಾಧ್ಯವಿಲ್ಲ. ಆಗ ಒಬ್ಬ ಮಹಿಳೆ ಒಂದು ಕಾಗದದ ದೊಡ್ಡ ಚೂರನ್ನು ಕಳುಹಿಸಿದರು. ಅದರ ಸಹಾಯದಿಂದ ದೀಪವನ್ನು ಹಚ್ಚಲು ಸಾಧ್ಯವಾಯಿತು. ಇದರ ಅರ್ಥ ಜಾಗತೀಕರಣಕ್ಕೆ ಪ್ರತಿರೋಧವನ್ನು ಒಡ್ಡಲು, ಒಂದು ಸಣ್ಣ ಬೆಂಕಿ ಕಡ್ಡಿ ಸಾಲದು. ಬದಲಾಗಿ ಪ್ರಜ್ವಲಿಸುವ ಶಕ್ತಿಯುತ ಜ್ವಾಲೆಯ ಅವಶ್ಯಕತೆ ಇದೆ. ತೀವ್ರವಾದ ಸಮಾಜವಾದದ ಪ್ರಜ್ಞೆ ಮತ್ತು ಬದ್ಧತೆಯ ಹೋರಾಟದ ಅವಶ್ಯಕತೆ ಇದೆ. ಜಾಗತೀಕರಣದ ಕತ್ತಲಿಂದ ಹೊರ ಬರಲು ಆ ಒಂದು ಸಮಾಜವಾದಿ ಜ್ವಾಲೆಯನ್ನು ಉತ್ಪಾದಿಸಬೇಕಿದೆ.

ಹಳೆಯ ಸಮಾಜವಾದ ಸತ್ತುಹೋಗಿದೆ. ಇಲ್ಲಿರುವ ಅನೇಕ ಯುವಕ–ಯುವತಿಯರಿಗೆ ಸಮಾಜವಾದ ಎಂದರೆ ಏನು ಎಂದೇ ತಿಳಿಯದಿರಬಹುದು. ಅದು ಏಕೆಂದರೆ ಅವರು ಇತ್ತೀಚೆಗೆ ಜನಿಸಿದವರಾಗಿದ್ದಾರೆ. ನಾವು ವಿಶ್ವವಿದ್ಯಾನಿಲಯದಲ್ಲಿ ಕಲಿಯುತ್ತಿದ್ದಾಗ ನಾನು ಸಮಾಜವಾದವನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗಿತ್ತು. ಏಕೆ ಅಷ್ಟೊಂದು ಸುಲಭವಾಗಿತ್ತೆಂದರೆ, ಅಂದಿನ ಬರವಣಿಗೆ ಮತ್ತು ಚರ್ಚೆಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಸಮಾಜವಾದದ ಕುರಿತಾಗಿ ಚರ್ಚೆಗಳಾಗುತ್ತಿದ್ದವು. ಎಲ್ಲರೂ ಸಹ ಸಮಾಜವಾದದ ಬಗ್ಗೆ ಮಾತನಾಡುತ್ತಿದ್ದರು. ಬರೀ ಮಾತ

ಬುದ್ಧನಿಂದ ಹಿಡಿದು ಅಂಬೇಡ್ಕರ್ ವರೆಗೆ ಸಮಾನತೆಯ ಚರ್ಚೆಯಾಗಿದೆ. ಗಾಂಧಿಯು ಸಹ ಈ ವಿಷಯವಾಗಿ ಚರ್ಚಿಸಿದ್ದಾರೆ. ಅವರು ಒಂದು ಪ್ರಶ್ನೆ ಕೇಳುತ್ತಾರೆ. ಯಾಕೆ ಒಬ್ಬ ಕೂಲಿಕಾರ ಹೈಕೋರ್ಟಿನ ವಕೀಲರಿಗಿಂತ ಕಡಿಮೆ ಕೂಲಿ ಪಡೆಯುತ್ತಾನೆ? ಯಾಕೆ ಒಬ್ಬ ಹೈಕೋರ್ಟಿನ ನ್ಯಾಯವಾದಿ ಕೃಷಿ ಕಾರ್ಮಿಕನಿಗಿಂತ ಹೆಚ್ಚು ಸಂಭಾವನೆ ಪಡೆಯುತ್ತಾನೆ? ಈ ಪ್ರಶ್ನೆ ಗಾಂಧಿ ಕೇಳುತ್ತಾರೆ. ಯಾರಾದರೂ ಇದಕ್ಕೆ ಉತ್ತರಿಸಲು ಸಾಧ್ಯವೇ? ನ್ಯಾಯಾವಾದಿ ಮತ್ತು ಕೃಷಿಕನ ನಡುವಿನ ಅಸಮಾನತೆಗೆ ಯಾವುದೇ ಸಮರ್ಥನೆ ಕೊಡಲು ಸಾಧ್ಯವಿಲ್ಲ. ನೀವು ಅವೈಜ್ಞಾನಿಕವಾಗಿ ಮತ್ತು ಅನಾಗರೀಕವಾಗಿ ಚಿಂತಿಸದಿದ್ದರೆ, ಈ ರೀತಿಯ ವೇತನದಲ್ಲಿ ವ್ಯತ್ಯಾಸವನ್ನು ಸಮರ್ಥಿಸಲು ಸಾಧ್ಯವಿಲ್ಲ.

ನಾಡುತ್ತಿರಲಿಲ್ಲ ಅವರ ಹಿಂದೆ ಒಂದು ಪ್ರಬಲವಾದ ಶಕ್ತಿ ಇತ್ತು. ಮತ್ತು ಅದು ಜನತೆಯ ಶಕ್ತಿಯಾಗಿತ್ತು.

ಸಮಾಜವಾದಿ ಹೋರಾಟ, ಕಾರ್ಮಿಕ ಹೋರಾಟ, ಯುವ ಹೋರಾಟಗಳ ಮೂಲಕ ಜನ ಸಂಘಟಿತರಾಗಿ ಉತ್ತಮ ಸಮಾಜಕ್ಕಾಗಿ ಹಂಬಲಿಸುತ್ತಿದ್ದರು. ಸಮಾಜವಾದಿ ಸಮಾಜ ಮತ್ತು ಸಮತಾವಾದಿ ಸಮಾಜದ ನಿರ್ಮಾಣಕ್ಕೆ ಪ್ರಯತ್ನಿಸುತ್ತಿದ್ದರು. ಆದ್ದರಿಂದ ನಮಗೆ ಸಮಾಜವಾದ ಪಾಠಗಳನ್ನು ಅರ್ಥಮಾಡಿಕೊಳ್ಳಲು ಸುಲಭವಾಗಿತ್ತು. ಆದರೆ ಅದು ಸೋಲುವುದರೊಂದಿಗೆ ಕೊನೆಗೊಂಡಿದೆ. ಆದ್ದರಿಂದ ಹೊಸ ಪಾಠವನ್ನೇ ನಾವು ಪ್ರಾರಂಭಿಸಬೇಕಿದೆ. ಇಂದಿನ ಯುವ ಜನಾಂಗದ ಹೆಗಲ ಮೇಲೆ ನೂತನ ಸಮಾಜವಾದ ಉದಯವಾಗಬೇಕಿದೆ. ಅವರೆ ಹೊಸ ಸಮಾಜವಾದದ ಬರಹಗಾರರು ಮತ್ತು ಕರ್ತೃಗಳು.

ಹಳೆಯ ಸಮಾಜವಾದದಲ್ಲಿ ಕೆಲವೊಂದು ತಪ್ಪುಗಳಿದ್ದವು. ಇತಿಹಾಸವನ್ನು ಅರ್ಥಮಾಡಿಕೊಳ್ಳುವಲ್ಲಿ ಗೊಂದಲಗಳಿದ್ದವು. ಹಳೆಯ ಸಮಾಜವಾದದ ಅಂತ್ಯದ ಕೊನೆಯ ಪಾಠದಲ್ಲಿ ಬರುವ ಪ್ರಮುಖರಾದ ಲೆನಿನ್, ಮಾವೊತ್ಸೆ ತುಂಗ್, ಭಾರತದಲ್ಲಿ ಜಯಪ್ರಕಾಶ ನಾರಾಯಣ ಸಮಾಜವಾದದ ಉನ್ನತ ನಾಯಕರಾಗಿದ್ದರು. ಅಲ್ಲಿ ಮೂಲಭೂತವಾಗಿಯೇ, ಸ್ವಲ್ಪ ಸಮಸ್ಯೆ ಇದ್ದಿತು. ಅವರೆಲ್ಲರೂ ಸಮಾನತೆಯಲ್ಲಿ ನಂಬಿಕೆ ಉಳ್ಳವರಾಗಿದ್ದರು. ಅದೂ ಸರಿಯೇ ಆಗಿತ್ತು. ಆದರೆ ಅವರು ಒಂದು ತಪ್ಪಾದ ಪರಿಕಲ್ಪನೆಯನ್ನು ನಂಬಿದ್ದರು. ಅವರುಗಳು ಸಹ ಯುರೋಪ್ ಮತ್ತು ಅಮೇರಿಕ ರಾಷ್ಟ್ರಗಳ ಸಂಪತ್ತಿನ ಮಾರು ಹೋಗಿದ್ದರು. ಈ ಜಗತ್ತಿನಲ್ಲಿ ಶ್ರೀಮಂತ ರಾಷ್ಟ್ರ ಎಂದು ಕರೆಸಿಕೊಳ್ಳುವ ಎಲ್ಲಾ ಯೂರೋಪಿಯನ್ ರಾಷ್ಟ್ರಗಳಲ್ಲಿ ಜಪಾನ್‌ನ್ನು ಹೊರತುಪಡಿಸಿದರೆ, ಯುರೋಪಿನ್ನರಿಗಿಂತ ಹೆಚ್ಚಾಗಿ ಇಂದಿನ ಅಮೇರಿಕನ್ನರಾಗಿದ್ದಾರೆ.

ಯುರೋಪಿಯನ್ ಸಂಪತ್ತು ನಮ್ಮ ಸಮಾಜವಾದಿ ನಾಯಕರನ್ನು ಮಂಕಾಗಿಸಿತು, ಅವರನ್ನು ಕುರುಡಾಗಿಸಿತ್ತು. ಎಲ್ಲರೂ ಸಹ ಯುರೋಪಿನ ಸಂಪತ್ತಿಗೆ ಮೂಕವಿಸ್ಮಿತರಾಗಿದ್ದರು. ಅವರ ಪ್ರಕಾರ ಆಧುನಿಕ ತಂತ್ರಜ್ಞಾನದಿಂದ, ಯುರೋಪ್ ಅತ್ಯಂತ ಸಂಪದ್ಭರಿತ ರಾಷ್ಟ್ರವಾಗಿತ್ತು. ಈ ಸಮಾಜವಾದಿಗಳು ತಮ್ಮ ಸರಳತೆ ಮತ್ತು ಅರಿವಿನ ಕೊರತೆಯಿಂದ ನಾವು ಸಹ ಅಮೇರಿಕಾ ಮತ್ತು ಯುರೋಪ್‌ನಂತಾಗಲು ಸಾಧ್ಯ ಎಂದು ನಂಬಿದ್ದರು. ಅದು ಅಸಾಧ್ಯ ಮತ್ತು ತಪ್ಪು ಕೂಡ. ಯುರೋಪ್ ಮತ್ತು ಅಮೇರಿಕಾ ರಾಷ್ಟ್ರಗಳು ಕೇವಲ ಕೈಗಾರಿಕೆ ತಂತ್ರಜ್ಞಾನದಿಂದಲೇ ಶ್ರೀಮಂತರಾಗಲಿಲ್ಲ.

ಸಾಮ್ರಾಜ್ಯಶಾಹಿತ್ವ ಇಲ್ಲದಿದ್ದರೆ ಈ ತಂತ್ರಜ್ಞಾನ ಅವರಿಗೂ ಕೂಡ ಅಪ್ರಯೋಜಕವೇ. ವಸಾಹತು ರಾಷ್ಟ್ರಗಳಲ್ಲಿ ತಮ್ಮ ತಂತ್ರಜ್ಞಾನವನ್ನು ಉಪಯೋಗಿಸಿ ಅಲ್ಲಿರುವ ಸಂಪನ್ಮೂಲಗಳನ್ನು ಬಳಸಿ; ಅದರಿಂದ ಬಂದ ಉಪಯೋಗವಿಲ್ಲದ ವಸ್ತುಗಳನ್ನು ಅದೇ ದೇಶದಲ್ಲಿ ಬಿಟ್ಟು, ಉಪಯುಕ್ತವಾದ ವಸ್ತುವನ್ನು ತಮ್ಮ ದೇಶದ ಮಾರುಕಟ್ಟೆಗೆ ಕೊಂಡೊಯ್ಯಲು ಈ ದೊಡ್ಡ ದೊಡ್ಡ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗಿದೆ. ಅಮೇರಿಕಾ ಹೇಗೆ ಶ್ರೀಮಂತವಾಯಿತೆಂದರೆ, ಆಫ್ರಿಕಾ ದೇಶವನ್ನು ಕೊಳ್ಳೆ ಹೊಡೆದದ್ದರಿಂದ. ಇದ್ದರಿಂದ ಆಫ್ರಿಕಾ ಬಡವಾಯಿತು. ಇಂಗ್ಲೇಂಡಿನ ಸಂಪತ್ತಿಗೆ ಭಾರತ ಶೋಷಣೆಗೆ ಒಳಗಾಗಬೇಕಾಯಿತು.

ಒಂದು ವೇಳೆ ಭಾರತವು ಆಫ್ರಿಕಾದಂತಹ ಒಂದು ವಸಾಹತು ರಾಷ್ಟ್ರವನ್ನು ಪಡೆದಿದ್ದರೆ ಶ್ರೀಮಂತವಾಗುತ್ತಿತ್ತೇನೋ! ಎಲ್ಲಿಯವರೆಗೆ ಭಾರತ ಆಫ್ರಿಕಾವನ್ನು ಪಡೆಯಲು ಸಾಧ್ಯವಿಲ್ಲವೋ, ಅಲ್ಲಿಯವರೆಗೆ ಅಮೇರಿಕಾದಂತೆ ಶ್ರೀಮಂತ ರಾಷ್ಟ್ರವಾಗಲು ಸಾಧ್ಯವಿಲ್ಲ. ಆದರೆ ಭಾರತದಲ್ಲಿ ಏನು ನಡೆಯುತ್ತಿದೆ? ಇದೇ ರೀತಿಯ ತಂತ್ರಜ್ಞಾನ (ಅಮೇರಿಕಾ, ಯುರೋಪ್) ಭಾರತಕ್ಕೆ ತಂದರೆ ಏನಾಗುತ್ತದೆ? ಭಾರತ ಎಂದಿಗೂ ಸಹ ಆಫ್ರಿಕಾವನ್ನು ವಸಾಹತು ಮಾಡಿಕೊಳ್ಳಲು ಸಾಧ್ಯವಿಲ್ಲ.

ಇಂದು ಜಗತ್ತಿನ ಎಲ್ಲಾ ರಾಷ್ಟ್ರಗಳು ಅಭಿವೃದ್ಧಿಯೆಡೆಗೆ, ಕೈಗಾರಿಕರಣದೆಡೆಗೆ ಪ್ರತಿದಿನ ಮುನ್ನುಗುತ್ತಿವೆ. ಆದರೆ ಫಲಿತಾಂಶ ನಮ್ಮೆದುರಿಗಿದೆ. ಅಮೆರಿಕಾ ಮತ್ತು ಯುರೋಪ್‌ನ್ನು ಅನುಸರಿಸುವುದರ ಮೂಲಕ ಯಾವೊಂದು ಚಿಕ್ಕ ರಾಷ್ಟ್ರವೂ ಶ್ರೀಮಂತವಾಗಿರುವ ಉದಾಹರಣೆಯೇ ಇಲ್ಲ. ಏಕೆಂದರೆ ಈ ದೃಷ್ಟಿಕೋನದ ಅಭಿವೃದ್ಧಿ ಸಾಧ್ಯವೇ ಇಲ್ಲ. ಅಮೆರಿಕಾದ ಏಳಿಗೆಯ ನೋಟ ತಪ್ಪಾದುದ್ದಾಗಿದೆ, ಅಮೆರಿಕಾ ಎಷ್ಟು ಸಾಧ್ಯವೋ ಅಷ್ಟು ಬೇಗ ಕುಸಿಯುತ್ತದೆ.

ಆದರೆ ಮೈಸೂರು ಚಾಮರಾಜನಗರವನ್ನು ಶೋಷಣೆ ಮಾಡಲು ಭಾರತದಲ್ಲಿ ಸಾಧ್ಯವಿದೆ. ಏಕೆಂದರೆ ಮೈಸೂರು ಉಜ್ವಲವಾಗಬೇಕಿದೆ. ಅದಕ್ಕಾಗಿ ಚಾಮರಾಜನಗರ ಕಳೆಗುಂದುವುದರಲ್ಲಿ ತಪ್ಪಿಲ್ಲ. ಮೈಸೂರು, ಬೆಂಗಳೂರು-ಚಾಮರಾಜನಗರಗಳ ಶ್ರೀಮಂತರು ಇಲ್ಲಿಯ ಬಡವರ ಶೋಷಣೆಯಿಂದಲೇ ಆ ಮಟ್ಟಿನ ಶ್ರೀಮಂತಿಕೆ ಪಡೆಯಲು ಸಾಧ್ಯವಾಗಿದೆ. ಈ ವಸಾಹತು ಶಾಹಿ ಜ್ಞಾನದ ಪ್ರತಿಫಲ ಲೆನಿನ್ ಮತ್ತು ಜಯಪ್ರಕಾಶರವರ ಸಮಾಜವಾದ ನಿಲುವುಗಳು ಈ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಸೋತಿದ್ದವು. ಅವರ ಪ್ರಕಾರ ಅಮೇರಿಕಾದಂತ ಕೈಗಾರಿಕರಣವನ್ನು ಭಾರತದಲ್ಲಿ ಅಭಿವೃದ್ಧಿಪಡಿಸಿದರೆ ಭಾರತವೂ ಸಹ ಅಮೇರಿಕದಂತೆ ಉಜ್ವಲಿಸುತ್ತದೆ ಎಂದು ನಂಬಿದ್ದರು.

ಇಂದು ಜಗತ್ತಿನ ಎಲ್ಲಾ ರಾಷ್ಟ್ರಗಳು ಅಭಿವೃದ್ಧಿಯೆಡೆಗೆ, ಕೈಗಾರಿಕರಣದೆಡೆಗೆ ಪ್ರತಿದಿನ ಮುನ್ನುಗುತ್ತಿವೆ. ಆದರೆ ಫಲಿತಾಂಶ ನಮ್ಮೆದುರಿಗಿದೆ. ಅಮೆರಿಕಾ ಮತ್ತು ಯುರೋಪ್‌ನ್ನು ಅನುಸರಿಸುವುದರ ಮೂಲಕ ಯಾವೊಂದು ಚಿಕ್ಕ ರಾಷ್ಟ್ರವೂ ಶ್ರೀಮಂತವಾಗಿರುವ ಉದಾಹರಣೆಯೇ ಇಲ್ಲ. ಏಕೆಂದರೆ ಈ ದೃಷ್ಟಿಕೋನದ ಅಭಿವೃದ್ಧಿ ಸಾಧ್ಯವೇ ಇಲ್ಲ. ಅಮೆರಿಕಾದ ಏಳಿಗೆಯ ನೋಟ ತಪ್ಪಾದುದ್ದಾಗಿದೆ, ಅಮೆರಿಕಾ ಎಷ್ಟು ಸಾಧ್ಯವೋ ಅಷ್ಟು ಬೇಗ ಕುಸಿಯುತ್ತದೆ. ಏಕೆಂದರೆ ಏಷ್ಯಾ ರಾಷ್ಟ್ರಗಳು ಅಮೆರಿಕಾ ವಸ್ತುಗಳನ್ನು ತಮ್ಮ ಮಾರುಕಟ್ಟೆಯಿಂದ ಹೊರ ಇಟ್ಟರೆ; ಭಾರತ, ಚೈನಾ, ಈಜಿಪ್ಟ್, ಇಂಡೋನೇಷ್ಯಾ ಕೂಡಿ ನಾವು ಅಮೆರಿಕಾದ ವಸ್ತು ಮತ್ತು ಕಂಪನಿಗಳನ್ನು ನಿರ್ಬಂಧಿಸುತ್ತಿದ್ದೇವೆ ಎಂದು ಘೋಷಿಸಿದರೆ ಇಡೀ ಅಮೆರಿಕಾ ನಿರುದ್ಯೋಗದಿಂದ ಬಳಲುಬೇಕಾಗುತ್ತದೆ. ನೀವು ಈಡೀ ಜಗತ್ತಿನ ಎಲ್ಲ ರಾಷ್ಟ್ರಗಳು ಸಮಾನವಾಗಿರುವಂತೆ ಕಾಣಿರಿ. ಅಮೆರಿಕಾವೂ ಸಹ ಆಫ್ರಿಕಾದಷ್ಟೆ ಸಮಾನವಾಗಿರಬೇಕು. ಆಫ್ರಿಕಾ ಸಹ ಯೂರೋಪ್ ರಾಷ್ಟ್ರಗಳಂತೆ ಸಮಾನಾಗಿರಬೇಕು. ನಾವು ಕಾಣಬೇಕಾಗಿರುವ ಕನಸು ಈ ರೀತಿಯ ಅಂತರಾರಾಷ್ಟ್ರೀಯ ವ್ಯವಸ್ಥೆ, ಹಾಗಾದರೆ ಇದನ್ನು ಸಾಧಿಸುವುದು ಹೇಗೆ?

ಇಂದು ಹಲವಾರು ಜನ ಜಾಗತೀಕರಣವನ್ನು ವಿರೋಧಿಸುತ್ತಿದ್ದಾರೆ. ಜಾಗತೀಕರಣ ಅದು ಮಾಡಿದೆ, ಇದೂ ಮಾಡಿದೆ ಎಂದು ಕೂಗುತ್ತಿದ್ದಾರೆ. ಎಲ್ಲೆಡೆ ಜಾಗತೀಕರಣ ಕೆಟ್ಟದ್ದು ಎಂದು ಹೇಳುತ್ತಿದ್ದಾರೆ. ಆದರೆ ಏನು ಮಾಡಬೇಕು? ಅದರ ಕುರಿತು ಯಾರು ಮಾಡುತಿಲ್ಲ. ಈ ಜಾಗತೀಕರಣವನ್ನು ಜಾರಿಗೆ ತಂದವರು ಯಾರು? ನನ್ನ ಪ್ರಕಾರ ಅದಕ್ಕೆ ಕಾರಣ ಕರ್ತರು ಮೂವರು 1) ವಿಶ್ವ ಬ್ಯಾಂಕ್ 2) ಅಂತರಾಷ್ಟ್ರ ಹಣಕಾಸು ನಿಧಿ(IMF) 3) WTO-ಇವು ಜಾಗತೀಕರಣದ ಪ್ರಮುಖ ಸಾಧನಗಳು.

ನೀವು ಜಾಗತೀಕರಣದ ವಿರುದ್ಧ ಹೋರಾಡಬೇಕೆಂದರೆ ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳು ಅಂತರರಾಷ್ಟ್ರೀಯ ವ್ಯಾಪಾರ ಸಂಘದಿಂದ ತಮ್ಮ ಸದಸ್ಯತ್ವವನ್ನು ಹಿಂಪಡೆಯಲು ಕರೆ ನೀಡಬೇಕು. ಅಂತರ ರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವ ಬ್ಯಾಂಕ್‌ನಿಂದ ತಮ್ಮ ಸದಸ್ಯತ್ವವನ್ನು ಹಿಂಪಡೆಯಲು ಸೂಚಿಸಬೇಕು. ನಮ್ಮ ಮತ್ತು ಈ 3 ಸಂಸ್ಥೆಗಳ ನಡುವೆ ಯಾವುದೇ ಸಂಬಂಧ ಇರಕೂಡದು. ವಿಶ್ವಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ಹಣಕಾಸು ನಿಧಿ- ಈ ಸಂಸ್ಥೆಗಳು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಾಲ ಪಡೆಯಲು ಪ್ರೇರೇಪಿಸುತ್ತವೆ. ಭಾರತ, ಬ್ರೆಜಿಲ್, ಅರ್ಜೆಂಟೈನಾ ಮತ್ತು ಮೆಕ್ಸಿಕೋದಂತಹ ರಾಷ್ಟ್ರಗಳು. ಅವು ನೀಡಿದ ಸಾಲದಿಂದ ಸಮಸ್ಯೆಯ ನಡುವೆ ಸಿಕ್ಕಿಕೊಳ್ಳುತ್ತವೆ. ಅವರಿಗೆ ಹಣಕ್ಕೆ ಬಡ್ಡಿಯನ್ನು ಕಟ್ಟಲೂ ಸಹ ಸಾಧ್ಯವಾಗುವುದಿಲ್ಲ. ನೀವೂ ಕರ್ನಾಟಕದ ಹಣಕಾಸು ಸಚಿವರನ್ನು ಕೇಳಿ. ಕರ್ನಾಟಕ ಸರ್ಕಾರದ ಮೇಲೆ ಇರುವ ಲೋನಿನ ಹಣವೆಷ್ಟು ಮತ್ತು ಅದಕ್ಕೆ ನಮ್ಮ ಸರ್ಕಾರ ಅದರ ಬಡ್ಡಿಯನ್ನು ಕಟ್ಟಲು ಸಾಧ್ಯವಾಗಿದೆಯೇ ಎಂದು. ಕರ್ನಾಟಕ ಸರ್ಕಾರ ಎಲ್ಲಿಯವರೆಗೆ ಮತ್ತೊಂದು ಸಾಲವನ್ನು ಪಡೆಯುವುದಿಲ್ಲವೋ, ಅಲ್ಲಿಯವರೆಗೆ ಬಡ್ಡಿಯನ್ನು ಕಟ್ಟಲು ಸಾಧ್ಯವೇ ಇಲ್ಲ! ಎಲ್ಲ ರಾಜ್ಯಗಳೂ ಇದೇ ಸ್ಥಿತಿಯಲ್ಲಿವೆ.

ಒಂದು ವೇಳೆ ಒಬ್ಬ ರೈತ ಈ ರೀತಿಯ ಸ್ಥಿತಿಯಲ್ಲಿದಿದ್ದರೆ ಏನಾಗುತ್ತಿದ್ದ ತಿಳಿದಿಯೇ? ಇಂದು ರೈತರು ಸಾಲ ಪಡೆದು ಹಣ ಮತ್ತು ಬಡ್ಡಿ ಮರುಪಾವತಿಸದೆ ಹೆಚ್ಚು ಹೆಚ್ಚು ಸಾಲ ಪಡೆದುಕೊಂಡು ಈಗ ಅವರು ಆತ್ಮಹತ್ಯೆ ದಾರಿ ಹಿಡಿದಿದ್ದಾರೆ. ಇಂದು ಅವರೆಲ್ಲರೂ ನಿರ್ಬಂಧಿತ ಕಾರ್ಮಿಕರಾಗುತ್ತಿದ್ದಾರೆ. ಭಾರತ, ಬ್ರೆಜಿಲ್, ನೇಪಾಳ, ಮೆಕ್ಸಿಕೋ ರಾಷ್ಟ್ರಗಳು ರೈತರಂತೆ ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಇದರಿಂದ ಈ ದೇಶಗಳು ಅಮೆರಿಕಾದ ನಿರ್ಬಂಧಿತ ಕಾರ್ಮಿಕತ್ವಕ್ಕೆ ಒಳಪಡುತ್ತವೆ.ಅಮೆರಿಕಾ ಏನು ಹೇಳಿದರೂ ನಾವು ಮಾಡಬೇಕಾಗುತ್ತೇವೆ.

ಈ ರಾಷ್ಟ್ರಗಳನ್ನು ಶೋಷಣೆಯಿಂದ ಮೇಲೆ ತರುವ ಏಕೈಕ ವಿಧಾನವೆಂದರೆ ಅವರು ಈ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಸಾಲ ಪಡೆಯುವುದನ್ನು ನಿಲ್ಲಿಸಬೇಕು. ಮತ್ತು ಅವುಗಳೊಡಗಿನ ತಮ್ಮ ಸಂಬಂಧವನ್ನು ಕಡಿದುಕೊಳ್ಳಬೇಕು. ಇದು ನಿಜವಾಗಿಯೂ ಕಷ್ಟದ ಕೆಲಸ. ಈ ದೇಶದ ಹಿರಿಯರ ಪ್ರಕಾರ ಇಂದಿನ ಸಮಯದಲ್ಲಿ ನಾವು ಇದನ್ನು ಊಹಿಸಿಕೊಳ್ಳುವುದಕ್ಕೂ ಕಷ್ಟವಾಗಿದೆ. ಏಕೆಂದರೆ ಅವರು ಅಮೆರಿಕ ಮತ್ತು ಯೂರೋಪ್ ರಾಷ್ಟ್ರಗಳ ತತ್ವಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದಾರೆ.

[illegible]ವಾಗಿನ ಹಿರಿಯರಿಗೆ ನಮ್ಮ ಅತ್ಯಂತ ಮೂರ್ಖ [illegible] ತೋರುತ್ತದೆ.

ಆದ್ದರಿಂದಲೇ ನಾನು ಈ ಅಂಶಗಳನ್ನು ಈ ದೇಶದ ಹಿರಿಯರನ್ನು ಉದ್ದೇಶಿಸಿ ಹೇಳುತ್ತಿಲ್ಲ. ನಾನು ಹೊಸಪೀಳಿಗೆಯನ್ನುದ್ದೇಶಿಸಿ ಹೇಳುತ್ತಿದೇನೆ. ಹೊಸ ಪೀಳಿಗೆ ತನ್ನ ಸ್ವಾತಂತ್ರದ ಬಗ್ಗೆ ಯೋಚಿಸಲೇಬೇಕು. ಆದರೆ ಹೊಸಪೀಳಿಗೆಯೇ ಗುಲಾಮರಾಗಿ ಹುಟ್ಟಿದ್ದಾರೆ. ಅಮೆರಿಕಾ, ಯೂರೋಪ್, WTO, ವಿಶ್ವಬ್ಯಾಂಕ್‌ಗಳ ಗುಲಾಮರಾಗಿ ನಮ್ಮನ್ನು ನಮ್ಮ ಹಿರಿಯರು ಬೆಳೆಸಿದ್ದಾರೆ. ಇಂದು ನಾವು ಯುವಕರು ಅಮೆರಿಕಾದಂತಹ ರಾಷ್ಟ್ರಗಳಿಗೆ ಅಸಹಕಾರವನ್ನು ತೋರಲೇಬೇಕು.

ಅದು ಕೋಕಾಕೋಲಾವಾಗಿರಲಿ ಅಥವಾ ಬೇರಾವ ವಸ್ತುಗಳಾಗಿರಲಿ, ಅವುಗಳನ್ನು ನಾವು ವಿರೋಧಿಸಲೇಬೇಕು ಅದರ ಮೂಲಕ ಅಮೆರಿಕಾದ ಮಾರುಕಟ್ಟೆಯ ಕುತಂತ್ರವನ್ನು ವಿರೋಧಿಸಲು ಸಾಧ್ಯವಿದೆ. ಇದೆಲ್ಲ ಸಾಧ್ಯವಾಗಬೇಕಾದರೆ ನಾವು ಅತ್ಯಂತ ಸರಳವಾದ ಬದುಕುವುದು ಹೇಗೆ ಎಂದು ಮೊದಲು ತಿಳಿಯಬೇಕು. ಭಾರತವನ್ನು ಒಳಗೊಂಡಂತೆ ತೃತೀಯ ಜಗತ್ತಿನ ಎಲ್ಲ ರಾಷ್ಟ್ರದ ಜನರ ವೈಭವ ಬದುಕಿಗೆ ಹೊರತಾದ ಸರಳತೆ ಬದುಕನ್ನು ರೂಢಿಸಿಕೊಳ್ಳಬೇಕು.

ಜೀವನ ಖಾಸಗಿ ಕಾರುಗಳಿಲ್ಲದೆ ಸರಳವಾಗಿರಬೇಕು ಆಗ ಮಾತ್ರ ಜಾಗತೀಕರಣದ ವ್ಯವಸ್ಥೆಯ ವಿರುದ್ಧ ಹೋರಾಡಲು ಸಾಧ್ಯ. ಇದು ಒಂದು ಮಹಾ ಹೋರಾಟ. ಎಷ್ಟು ದೊಡ್ಡದು ಎಂದರೆ ಯಾರಿಗೂ ಊಹಿಸಲು ಸಾಧ್ಯವಾಗದಷ್ಟು, ಇದು ಹೀಗೆ 10 ವರ್ಷದ ಹೋರಾಟವಲ್ಲ, 50 ವರ್ಷದ ಹೋರಾಟವಲ್ಲ, 100 ವರ್ಷಗಳ ಹೋರಾಟವೂ ಅಲ್ಲ, ಬದಲಾಗಿ ಇದು ಒಂದು ನಿರಂತರ ಹೋರಾಟ. ಇದು 20 ವರ್ಷಗಳ ಸಣ್ಣ ಹೋರಾಟವು ಅಲ್ಲ, 100 ವರ್ಷಗಳ ದೊಡ್ಡ ಹೋರಾಟವೂ ಅಲ್ಲ, ಒಂದು ಹೊಸ ಚಳುವಳಿ.

ಆಧುನಿಕತೆ ಎಂಬ ಹೊಸ ಪ್ರಜ್ಞೆ, ಈ ಜಗತ್ತು ಮತ್ತು ಸಮಾಜವನ್ನು ಬದಲಾಯಿಸಿ ಎಲ್ಲರಿಗೂ ಕೂಡಾ ಗುಲಾಮತ್ವವನ್ನು ನೀಡಿದೆ. ಇದಕ್ಕೆ ವಿರುದ್ಧವಾಗಿ ನಾವು ಸಂಘಟಿತರಾಗಬೇಕಿದೆ ಮತ್ತು ನಾವೇ ಸ್ವತ ಈ ಹೋರಾಟಕ್ಕೆ ಸಿದ್ಧರಾಗಬೇಕಿದೆ. ನಿಮ್ಮ ಚಿಂತನೆಗಳಿಂದ ನೀವೇ ನಿಮ್ಮನ್ನು ಸದೃಡಗೊಳಿಸಿಕೊಳ್ಳಬೇಕಿದೆ. ನಿಮ್ಮ ಭಯರಹಿತ ವ್ಯಕ್ತಿತ್ವದಿಂದ ಹೋರಾಟ ಕಟ್ಟಬೇಕಿದೆ. ನೀವು ಜಗತ್ತಿನ ಯಾವುದೇ ಶಕ್ತಿಗೆ ಹೆದರದೆ ಪ್ರತಿರೋಧವನ್ನು ಒಡ್ಡುವ ಸರಳತೆಯನ್ನು ಸಾಧಿಸುವ ಪ್ರಜ್ಞೆ ಬೆಳೆಸಿಕೊಳ್ಳಬೇಕಿದೆ. ಇದು ಒಂದು ಹೊಸ ನಾಗರಿಕ ಪ್ರಪಂಚದ ಹುಟ್ಟಿಗೆ ಕಾರಣವಾಗಬೇಕಿದೆ. ಮಾನವ ಸಮಾಜ ನಾಗರೀಕಗೊಳ್ಳಬೇಕು, ನಾಗರೀಕ ತತ್ವಗಳ ಅಡಿಯಲ್ಲಿ ತನ್ನನ್ನು ತಾನೇ ಪುರ್ನರಚಿಸಿಕೊಳ್ಳಬೇಕು. ಭಾತೃತ್ವದ ತತ್ವದ ಆಧಾರ ಮೇಲೆ; ಆದ್ದರಿಂದ ಸ್ವ ವಿಮೋಚನೆಯ ತತ್ವನ್ನು ನೆನಪಿನಲ್ಲಿಡಿ.

2 ತಿಂಗಳ ಹಿಂದೆ ಬಿಹಾರಕ್ಕೆ ಬೇಟಿ ನೀಡಿದ್ದೆ. ಬಿಹಾರ ಕರ್ನಾಟಕಕ್ಕಿಂತಲೂ ಒಂದು ದುಃಸ್ಥಿತಿಯಲ್ಲಿರುವ ರಾಜ್ಯ. ನನ್ನ ಸ್ವಂತ ರಾಜ್ಯವಾದ ಒರಿಸ್ಸಾವೂ ಆರ್ಥಿಕವಾಗಿ ದುಃಸ್ಥಿತಿ ಹೊಂದಿರುವ ರಾಜ್ಯ. ನನ್ನನ್ನು ಯಾರಾದರೂ ಬಿಹಾರವನ್ನು ಹೇಗೆ ಅಭಿವೃದ್ಧಿ ರಾಜ್ಯವನ್ನಾಗಿ ಕಟ್ಟಬೇಕು ಎಂದು ಕೇಳಿದರೆ, ಅದಕ್ಕೆ ನಾನು ಹೇಳುವುದು: ನೀವು ಬಿಹಾರವನ್ನು ಭಾರತದಿಂದ ಹೊರಗೆ ತಂದರೆ ಬಿಹಾರ ಅಭಿವೃದ್ಧಿ ಸಾಧ್ಯವಿದೆ! ಭಾರತದಲ್ಲಿ ಬಿಹಾರ ರಾಜ್ಯವಿದ್ದರೆ ಅದರ ಅಭಿವೃದ್ಧಿ ಕಷ್ಟವಿದೆ. ಏಕೆಂದರೆ ಭಾರತವು ಪ್ರಸ್ತುತ ಆರ್ಥಿಕ ವ್ಯವಸ್ಥೆಗೆ ಪೂರಕವಾಗಿ ವಿಭಾಗಿಸಲ್ಪಟ್ಟಿದೆ. ಭಾರತವು ಇಂದು ಕೆಲವು ಶ್ರೀಮಂತ ಮತ್ತು ಕೆಲವು ಬಡರಾಜ್ಯಗಳಾಗಿ ವಿಂಗಡಿಸಲ್ಪಟ್ಟಿವೆ.

ಹಾಗೆಯೇ ಪ್ರತಿಯೊಂದು ರಾಜ್ಯವು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದಿಲ್ಲದ ಜಿಲ್ಲೆಗಳಾಗಿ ವಿಭಾಗಿಸಲ್ಪಟ್ಟಿದೆ. ನೀವು ಭಾರತದಲ್ಲಿಯೇ ಉಳಿದರೆ ಪಂಜಾಬ್ ಮತ್ತು ದೆಹಲಿ ಶ್ರೀಮಂತ ರಾಷ್ಟ್ರಗಳಾಗುತ್ತವೆ. ಬಿಹಾರ ಬಡರಾಜ್ಯವಾಗಿಯೇ ಉಳಿಯುತ್ತದೆ. ಆದ್ದರಿಂದ ಭಾರತದಿಂದ ಹೊರಬರುವುದು ಒಳ್ಳೆಯದು. ಇದು ಸಾಧ್ಯವೇ? ತಾವು ಬಿಹಾರದ ಅರ್ಥ ವ್ಯವಸ್ಥೆಯ ಸುಧಾರಿಸಲು ಮಾನಸಿಕವಾಗಿ ಸಿದ್ಧವಾಗಿದ್ದಲ್ಲಿ, ನೀವು ನಿಮ್ಮ ಮತ್ತು ನಿಮ್ಮಲ್ಲಿನ ಸಂಪನ್ಮೂಲಗಳಲ್ಲಿ ನಂಬಿಕೆ ಹೊಂದಿದ್ದಲ್ಲಿ ಅದು ಸಾಧ್ಯವಿದೆ. ಆದರೆ ಅದೆ ಕೊನೆಯಲ್ಲ, ಆರಂಭವೂ ಅಲ್ಲ.

ಭಾರತವು ಈ ಪ್ರಪಂಚದಿಂದಲೇ ಹೊರಬರಬೇಕಿದೆ. ಪ್ರಪಂಚಕ್ಕಿಂತ ಮೊದಲು ಅಂತರರಾಷ್ಟ್ರೀಯ ಮಾರುಕಟ್ಟೆಯಿಂದ ಹೊರ ಬರಬೇಕಿದೆ. ಭಾರತವು ತನ್ನನ್ನು ತಾನು, ತನ್ನ 100 ಕೋಟಿ ಜನಸಂಖ್ಯೆಯ ಬಲದ ಮೇಲೆ ಮರು ಸ್ಥಾಪಿಸಿಕೊಳ್ಳಬೇಕಿದೆ ಮತ್ತು ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಇರುವ ಸಂಪನ್ಮೂಲಗಳನ್ನು ಬಳಸಿಕೊಂಡರೆ ಭಾರತಕ್ಕೆ ಉತ್ತಮ ಭವಿಷ್ಯವಿದೆ. ಒಂದು ನೂತನ ಆರ್ಥಿಕತೆಯ ಕಟ್ಟುವಿಕೆಗೆ ಇಷ್ಟು ಸಾಕಲ್ಲವೆ? ನಾವು ಈ ನಿಟ್ಟಿನಲ್ಲಿ ಯೋಚಿಸಬೇಕಿದೆ. ನಾವು ಏಕೆ, ಈ ಕುರಿತಂತೆ ಇಲ್ಲಿ ಮಾತನಾಡುತ್ತಿದ್ದೇವೆ? ಬೆಂಗಳೂರು ಇದಕ್ಕಿಂತ ಉತ್ತಮವಾಗಿತ್ತಲ್ಲವೇ? ಆದರೆ ಚಾಮರಾಜನಗರ ಹೊಸ ಸಮಾಜದ ಕುರಿತು ಮಾತನಾಡಲು ಬೆಂಗಳೂರಿಗಿಂತ ಉತ್ತಮ ಪ್ರದೇಶವಾಗಿದೆ. ಏಕೆಂದರೆ ಬೆಂಗಳೂರು ಮಾಧ್ಯಮಗಳು, ದೂರದರ್ಶನ ಮತ್ತು ಬಹುರಾಷ್ಟ್ರೀಯ ಕಂಪನಿಗಳ ವ್ಯಾಪಾರ ಮಳಿಗೆಗಳಿಂದ ಕಲುಷಿತವಾಗಿದೆ. ನಾನು ನನ್ನ ಯುವ ಸಂಗಾತಿಗಳಿಂದ ಈ ರೀತಿಯ ಭಾವನಾತ್ಮಕ, ಸಂಘಟನಾತ್ಮಕ ಬದ್ಧತೆ ಬಯಸುತ್ತೇನೆ.

> **ಭಾರತ ತನ್ನ ಹೊಸತನವನ್ನು, ಹೊಸ ಚಿಂತನೆಗಳನ್ನು ಕಲುಷಿತಗೊಳಿಸಿಕೊಳ್ಳದೆ ತನ್ನದೇ ದೇಶದಿಂದ ಪ್ರಾರಂಭಿಸಬೇಕಿದೆ. ಹಳ್ಳಿಗಳು ಮತ್ತು ಹೋಬಳಿಗಳಲ್ಲಿಯೇ ಈ ರೀತಿಯ ಚಿಂತನೆ ಬೆಳೆಯಲು ಸಾಧ್ಯ. ಏಕೆಂದರೆ ಅಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಆಲೋಚನೆಗಳೊಂದಿಗೆ ಸಂವಾದಿಸದೆ ತಮ್ಮ ಪ್ರದೇಶವನ್ನು ಕಲುಷಿತಗೊಳ್ಳದೆ ಇಟ್ಟುಕೊಳ್ಳು ಸಾಧ್ಯವಿದೆ. ಇಂದು ಹೊಸ ರೀತಿಯ ತತ್ವ ಮತ್ತು ಚಿಂತನೆಗಳ ನಿರೀಕ್ಷೆ ಹೆಚ್ಚಾಗಿದೆ. ಶಿಕ್ಷಣವೆಂಬುದೇ ಅತ್ಯಂತ ಕ್ರೂರವಾದ ಸಂದರ್ಭದಲ್ಲಿ, ಶಿಕ್ಷಣ ಕುರಿತು ಹಲವಾರು ಆಯಾಮಗಳಲ್ಲಿ ಇಂದು ಚರ್ಚಿಸಿದ್ದೇವೆ. ಈ ಚಿಂತನೆಯಿಂದ ನಾವು ಹೊಸ ಸಮಾಜದ ಕನಸು ಕಾಣಲು ಸಾಧ್ಯವಾಗಿ ನಮ್ಮ ಬದ್ಧತೆಯನ್ನು ಹೆಚ್ಚಿಸಿಕೊಳ್ಳಬೇಕಿದೆ.**

ನೀವು ಬದಲಾವಣೆಗೆ ಸಂಘಟನೆ ಮಾಡಬೇಕಿದೆ. ಸೈನ್ಯ ಕಟ್ಟಬೇಕಿದೆ. ಜಗತ್ತಿನ ಇತಿಹಾಸದಲ್ಲಿ ಹಲವಾರು ನಾಗರಿಕತೆಗಳು ಸತ್ತಿವೆ. ನಮ್ಮ ಎದುರಿಗಿರುವ ಯುರೋಪ್ ಇತ್ತೀಚಿನ ನಾಗರೀಕತೆ. ಅದಕ್ಕಿಂತ ಹಿಂದಿನ ಅಥವಾ ಹಿರಿದಾದ ಇಸ್ಲಾಂ ನಾಗರಿಕತೆ, ವೇದಗಳ ನಾಗರಿಕತೆ, ಮೆಸಪಟೋಮಿಯ ನಾಗರಿಕತೆ, ರೋಮ್‌ನ ನಾಗರಿಕತೆ, ಗ್ರೀಕ್ ನಾಗರಿಕತೆಗಳು ಇವುಗಳು ಬರುಬರುತ್ತ ಭ್ರಷ್ಟಾವಾಗಿ ಮಾನವನ ಸಮಸ್ಯೆಗಳನ್ನು ಪರಿಹರಿಸಲಾಗದ ಹಂತವನ್ನು ತಲುಪಿ ಪತನಗೊಂಡಿದೆ. ಕೆಲವು 500 ವರ್ಷಗಳಲ್ಲಿ, ಕೆಲವು 700 ವರ್ಷಗಳಲ್ಲಿ ಈ ನಾಗರಿಕತೆಗಳು ಒಬ್ಬ ಮನುಷ್ಯನ ಅತ್ಯಂತ ಕನಿಷ್ಟ ಅವಶ್ಯಕತೆಗಳನ್ನು ಪೂರೈಸಲು ವಿಫಲವಾಗಿದೆ. ಇವು ಯಾವುವು? ಆಹಾರ, ಆಶ್ರಯ, ಶಿಕ್ಷಣ.

ಇವನ್ನು ನೀಡದೆ ಇಂದಿನ ನಾಗರೀಕತೆ ಅನಗತ್ಯ ಸಂಕೀರ್ಣ ನಾಗರಿಕತೆಯಾಗಿದೆ. ಇನ್ನು ಈ ರೀತಿಯ ನಾಗರಿಕತೆ ಮುಂದುವರೆಯಲು ಸಾಧ್ಯವಿಲ್ಲ. ಅಮೆರಿಕಾ ತನ್ನ ಶಕ್ತಿಯ ಪ್ರಭಾವದಿಂದಲೇ ಕುರುಡಾಗಿದೆ. ಅದು ತಾರ್ಕಿಕವಾಗಿಯಾದರೂ ಬದುಕಲು ರಾಷ್ಟ್ರವಾಗಿ ಉಳಿದಿಲ್ಲ. ಅದು ತನ್ನ ಮಾನಸಿಕ ಸ್ವಪ್ನ ಕಳೆದುಕೊಂಡಿದೆ. ಆಧುನಿಕ ನಾಗರಿಕತೆಯ ದೇಶಕ್ಕೆ ಮಹೋನ್ನತೆ ಸಾಧ್ಯತೆ ಇಲ್ಲ. ಅದಕ್ಕಿಂತ ಬೇಗ ಸತ್ತರೂ ಆಶ್ಚರ್ಯವಿಲ್ಲ. ಸೋವಿಯತ್ ಯೂನಿಯನ್ ರಷ್ಯಾ ಪತನಗೊಳ್ಳಲು ಕೆಲವು ಕಾರಣಗಳಿದ್ದವು. ಆದರೆ ಅಮೆರಿಕ ಆ ರೀತಿಯ ಕಾರಣವಿಲ್ಲದೆ ಪತನಗೊಳ್ಳುವ ಸಾಧ್ಯತೆ ಇದೆ. ಭಾರತ ತನ್ನ ಹೊಸತನವನ್ನು, ಹೊಸ ಚಿಂತನೆಗಳನ್ನು ಕಲುಷಿತಗೊಳಿಸಿಕೊಳ್ಳದೆ ತನ್ನದೇ ದೇಶದಿಂದ ಪ್ರಾರಂಭಿಸಬೇಕಿದೆ. ಹಳ್ಳಿಗಳು ಮತ್ತು ಹೋಬಳಿಗಳಲ್ಲಿಯೇ ಈ ರೀತಿಯ ಚಿಂತನೆ ಬೆಳೆಯಲು ಸಾಧ್ಯ. ಏಕೆಂದರೆ ಅಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಆಲೋಚನೆಗಳೊಂದಿಗೆ ಸಂವಾದಿಸದೆ ತಮ್ಮ ಪ್ರದೇಶವನ್ನು ಕಲುಷಿತಗೊಳ್ಳದೆ ಇಟ್ಟು ಕೊಳ್ಳು ಸಾಧ್ಯವಿದೆ. ಇಂದು ಹೊಸ ರೀತಿಯ ತತ್ವ ಮತ್ತು ಚಿಂತನೆಗಳ ನಿರೀಕ್ಷೆ ಹೆಚ್ಚಾಗಿದೆ.

ಶಿಕ್ಷಣವೆಂಬುದೇ ಅತ್ಯಂತ ಕ್ರೂರವಾದ ಸಂದರ್ಭದಲ್ಲಿ, ಶಿಕ್ಷಣ ಕುರಿತು ಹಲವಾರು ಆಯಾಮಗಳಲ್ಲಿ ಇಂದು ಚರ್ಚಿಸಿದ್ದೇವೆ. ಈ ಚಿಂತನೆಯಿಂದ ನಾವು ಹೊಸ ಸಮಾಜದ ಕನಸು ಕಾಣಲು ಸಾಧ್ಯವಾಗಿ ನಮ್ಮ ಬದ್ಧತೆಯನ್ನು ಹೆಚ್ಚಿಸಿಕೊಳ್ಳಬೇಕಿದೆ. ನೀವು ಈ ಆಲೋಚನೆಯಿಂದ ನಿಮ್ಮ ಬದ್ಧತೆಯ ಮೂಲಕ ಚಿಂತಿಸಬೇಕಿದೆ. ಅಂತಿಮವಾಗಿ ನಮಗಿರುವ ಬದ್ಧತೆಯೇ, ನಮ್ಮ ಯಶಸ್ಸಿನ ಮೊದಲ ಮೆಟ್ಟಲು. ಸಮಾನತೆ ತತ್ವವನ್ನು ಎತ್ತಿಹಿಡಿಯಿರಿ. ನಾನು ದ್ವೇಷಿಸಿ ಎಂಬ ಶಬ್ದ ಬಳಸುವುದಿಲ್ಲ. ಏಕೆಂದರೆ ಅದು ಸೂಕ್ತವಲ್ಲ. ಆದರೆ ನಿಮಗೆ ಆಕ್ರೋಶವಿರಬೇಕಿದೆ. ವೈಭೋವೋಪೇತ ಜೀವನದಿಂದ ಪೋಲಾಗುತ್ತಿರುವ ಸಂಪತ್ತಿನಿಂದ ನಾವು ಆಕ್ರೋಶಗೊಳ್ಳಬೇಕಿದೆ. ಏಕೆಂದರೆ ಇದು ಅಸಮಾನತೆಗೆ ಮೂಲ ಕಾರಣವಾಗಿದೆ. ನಮ್ಮ ದೇಶದಲ್ಲಿ ಇಂದು ಒಂದು ಕಡೆ ಸಂಪತ್ತಿನ ಮೂರ್ತರೂಪದಂತವರಿದ್ದರೆ, ಮತ್ತೊಂದು ಕಡೆ ದಾರಿದ್ರ್ಯದಿಂದಿರುವ ಜನರಿದ್ದಾರೆ. ಇದು ನಿಜವಾಗಿಯೂ ಆಕ್ರೋಶಗೊಳ್ಳುವಂತೆ ಮಾಡುತ್ತದೆ. □

ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು

ಡೆಂಗಿ ಜ್ವರ ಎಂದರೇನು?

ಡೆಂಗಿ ಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಕಾಯಿಲೆ ಈ ಕಾಯಿಲೆಯು ಸೋಂಕು ಹೊಂದದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು

ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಗೆ ಕ್ರಮಗಳು:-

೧. ಡೆಂಗಿ ಹರಡುವ ಈಜಿಪ್ಟ್ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂ ಕುಂಡದ ನೀರಿನ ಸಂಗ್ರಹಗಳು ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರ ವಹಿಸಿ.

೨. ಬಯಲಲ್ಲಿ ಪೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.

೩. ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ಧರು ಕಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದು. ಹೀಗೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟುವುದು ಸುಲಭ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ.

ಕರ್ನಾಟಕ ವಾರ್ತೆ
Karnataka Information

ಮೈಲಿಗೆ ಬಾವಿ

ಡಾ. ನಾ. ಡಿಸೋಜ

ಕಥೆ

ಮನೆ ಅಂಗಳದಲ್ಲಿ ಯಾವುದೋ ಪತ್ರಿಕೆ ಓದುತ್ತ ಕುಳಿತ ನನ್ನ ಮೇಲೆ ನೆರಳೊಂದು ಹಾದು ಹೋಗಲು ನಾನು ತಲೆ ಎತ್ತಿ ನೋಡಿದೆ. ಸುಮಾರು ಎಂಬತ್ತರ ಗಡಿ ದಾಟಿದ ವ್ಯಕ್ತಿಯೋರ್ವ ನನ್ನ ಮುಂದೆ ನಿಂತಿದ್ದ. ಆತ ವಯಸ್ಸು ಹಾಗು ದೈಹಿಕ ದೌರ್ಬಲ್ಯದಿಂದ ಸಾಕಷ್ಟು ಜೀರ್ಣನಾಗಿದ್ದ. ತಲೆಕೂದಲು ಹಣ್ಣಾಗಿತ್ತು, ದೇಹ ಸೊರಗಿತ್ತು. ಕಣ್ಣುಗಳು ಆಳಕ್ಕೆ ಇಳಿದು ಬತ್ತಿದ ಬಾವಿಯಲ್ಲಿಯ ನೀರ ಸೆಲೆಯಂತೆ ಕಾಣುತ್ತಿದವು. ನಿಲ್ಲಲು ನಡೆಯಲು ತ್ರಾಣವಿಲ್ಲದೆ ಆತ ತೊನೆದಾಡುತ್ತಿದ್ದ. ಅವನ ಹಾಗೆಯೇ ಅವನು ಉಟ್ಟ ಬಟ್ಟೆ ಕೂಡ ಶಿಥಿಲವಾಗಿತ್ತು. ಯಾರೋ ಭಿಕ್ಷುಕನೋ, ಭಿಕಾರಿಯೋ ಇರಬೇಕು ಅನಿಸಿ ನಾನು ಅವನನ್ನ ನಿವಾರಿಸಿಕೊಳ್ಳಬೇಕು ಅನ್ನುವ ಇರಾದೆಯಿಂದ "ಏನು?" ಎಂದು ಎರಡಕ್ಷರದ ಒಂದು ಪ್ರಶ್ನೆಯನ್ನ ಅವನತ್ತ ಎಸೆದೆ. ಆತ ತುಸು ಸುಧಾರಿಸಿಕೊಂಡು "ಅಯ್ಯಾರಾ, ಕೆಳಗಿನ ಬನದಳ್ಳಿ ಅಂತ ಇಲ್ಲಿ ಎಲ್ಲಿ ಬಂತು ಹೇಳತೀರೇನ್ರಿ" ಎಂದ.

ಇವನು ಭಿಕ್ಷುಕನೂ ಅಲ್ಲ ಭಿಕಾರಿಯೂ ಅಲ್ಲ ಅನ್ನುವುದು ಖಚಿತವಾದಮೇಲೆ ಅವನ ಬಗ್ಗೆ ನನಗಿದ್ದ ಅಭಿಪ್ರಾಯ ಬದಲಾಗಿ ನಾನು ತುಸು ಆಸಕ್ತಿಯಿಂದ ಅವನತ್ತ ಗಮನ ಹರಿಸಿದೆ. ಅವನು ಕೇಳಿ ಕೊಂಡು ಬಂದ ಊರು ಬನದಳ್ಳಿ ಅನ್ನುವುದು. ಇದೀಗ ನಾನು ಇರುವ ಊರಿನ ಹೆಸರು ಕೂಡ ಅದೇನೆ. ಆದರೆ ಈ ಹೆಸರಿನ ಹಿಂದೆ ಈತ ಅಂಟಿಸಿರುವ ಈ ಹೊಸ ಶಬ್ದ ಎಲ್ಲಿಂದ ಬಂದಿತು ಎಂದು ಒಂದು ಕ್ಷಣ ಅಚ್ಚರಿ ಪಟ್ಟೆ. ಏಕೆಂದರೆ ಈ ನಮ್ಮೂರು ಕೆಳಗಿನ ಬನದಳ್ಳಿ ಆಗಿರಲಿಲ್ಲ. ಇದು ಬರೀ "ಬನದಳ್ಳಿ" ಆಗಿತ್ತು. ಊರ ಸುತ್ತ ನಡುವೆ ಕೆಲ ಮರಗಳು ಇದ್ದುದರಿಂದ ಇದನ್ನು ಜನ ಬನದಳ್ಳಿ ಎಂದು ಕರೆಯುತ್ತಿದ್ದಿರಬಹುದು.



"ಬನದಳ್ಳಿ ಸರಿ ಯಜಮಾನ, ಆದರೆ ಅದೇನೋ ಬೇರೊಂದು ಶಬ್ದ ಸೇರಿಸಿದ್ದೀಯಲ್ಲ, ಅದನ್ನ ನಾನು ಈವರೆಗೆ ಕೇಳಿಲ್ಲವೆ?"

ನಾನು ನನ್ನ ಕಷ್ಟ ತೋಡಿ ಕೊಂಡೆ.

"ಹೌದ್ರಿ ಸಾಹೇಬ್ರ, ಇಲ್ಲಿ ಯಾರು ಯಾರಿಗೋ ನಾನು ಕೇಳಿದ್ನರೀ, ಎಲ್ಲರೂ ಹಿಂಗೇ ಅಂತಾರ್ರೀ" ಎಂದ ಆತ.

"ನಾನು ಒಂದ್ ಸಾರಿ ಇಲ್ಲಿಗೆ ಬಂದಿ ದ್ದನ್ರೀ, ಊರಿನ ಹೆಸರು ನೆನಪದ ಆದರ ಊರು ಬದಲಾಗದ ನೋಡ್ರಿ, ತಿಳೀವಲ್ದು...."

ಎಂದು ತಲೆ ಕೆರೆದುಕೊಳ್ಳುತ್ತ ಆತ ನಿಂತ.

"ಎಷ್ಟು ವರ್ಷ ಆಯಿತು ನೀನು ಇಲ್ಲಿಗೆ ಬಂದು?"

"ಒಂದ್ ನಲವತ್ತು ವರ್ಷ ಆತು ಬಿಡ್ರಿ..ಆವಾಗ ನನ್ನ ಮಗಳಾ ಇಪ್ಪತ್ತು ವರ್ಷದಾಕಿ ಇದ್ಲು"

ಆತ ಹಿಂದಿನದನ್ನ ನೆನಪು ಮಾಡಿಕೊಂಡು ನುಡಿದ. ಈ

ನೆನಪು ಮಾಡಿಕೊಳ್ಳುವ ಪ್ರಕ್ರಿಯೆ ಅವನಲ್ಲಿ ಏನೋ ಒಂದು ಬದಲಾವಣೆ ತಂದುದನ್ನ ನಾನು ಸೂಕ್ಷ್ಮವಾಗಿ ಗಮನಿಸಿಧೆ. ಆ ಬದಲಾವಣೆ ಕೂಡ ಸಂತಸದಾಯಕವಾದುದಲ್ಲ ಅನ್ನುವುದನ್ನ ಅವನ ಮುಖ ಚಹರೆಯೇ ತಿಳಿಸಿ ಹೇಳಿತು.

"ಹೌದಪ್ಪ. ನೀನು ಎಲ್ಲಿಂದ ಇಲ್ಲಿಗೆ ಬಂದಿದ್ದೆ, ಯಾವ ಕೆಲಸಕ್ಕೆ ಬಂದಿದ್ದೆ?"

ನಾನು ಪತ್ರಿಕೆ ಪಕ್ಕಕ್ಕೆ ಇರಿಸಿ ಅವನೊಡನೆ ಮಾತಿಗೆ ತೊಡಗಿದೆ.

"ರಾಣೀ ಬೆನ್ನೂರು ನಮ್ಮೂರು ಸಾಹೇಬ್ರ, ನಮ್ಮ ಕುರಿ ಹೊಡಕೊಂಡು ನಾವು ಈ ಬದಿ ಬಂದಿದ್ವಿ ನೋಡ್ರಿ...ಹೊಲದಾಗ ಒಂದು ರಾತರ ಕುರಿ ಬಿಟ್ಟು ಮುಂದ್ ಪ್ರಯಾಣ ಮಾಡೂದು ನಮ್ ಕೆಲಸ ಇತ್ರಿ, ಅದಕ್ಕ ಬಂದದ್ದು.....ಆ ಮ್ಯಾಲ ಈ ಕಡಿ ನಾವು ಬರನಿಲ್ಲ ನೋಡ್ರೀ"

ನನಗೆಲ್ಲ ಸ್ಪಷ್ಟವಾಯಿತು. ಬಯಲು ಸೀಮೆಯ ಕುರುಬರು ತಮ್ಮ ಕುರಿ ಮಂದೆಯನ್ನ ಹೊಡೆದುಕೊಂಡು ಮಲೆನಾಡಿಗೆ ಬರುವುದು ಒಂದು ಪದ್ಧತಿ. ಹೀಗೆ ಬಂದವರು ಹೊಲ ಗದ್ದೆಗಳಲ್ಲಿ ಕುರಿ ಬಿಟ್ಟು ಒಂದು ರಾತ್ರಿ ಅಲ್ಲಿ ಕಳೆದು, ರೈತರು ಕೊಡುವ ದವಸ ಧಾನ್ಯ ಒಂದಿಷ್ಟು ಕಾಸು ಕಲೆಹಾಕಿ ಕೊಂಡು ಹೊರಟು ಹೋಗುತ್ತಾರೆ. ಇದು ಈಗಲೂ ನಡೆಯುತ್ತಿದೆ. ಅಂದರೆ ಈಗ ನಲವತ್ತು ವರ್ಷಗಳ ಹಿಂದೆ ಬಂದ ಈತ ಈಗ ಹಳೇ ಊರನ್ನ ಹುಡುಕಿಕೊಂಡು ಬಂದಿದ್ದಾನೆ. ಆದರೆ ಇವನು ಹುಡುಕಿಕೊಂಡು ಬಂದಿರುವ ಊರು ಬೇರೆಯೇ ಆಗಿದೆಯಲ್ಲ.

"ಅದು ಸರಿ ಯಜಮಾನ, ಆದರೆ ಇದು ನೀನು ಹಿಂದೆ ಬಂದ ಊರಲ್ಲವಲ್ಲ"

ಎಂದೆ ನಾನು ನಿರಾಶೆಯಿಂದ. ಇಷ್ಟು ಹೊತ್ತಿನ ವರೆಗೆ ಇವನನ್ನ ನಿಲ್ಲಿಸಿಕೊಂಡು ಮಾತನಾಡಿ ಈಗ ಈ ಉತ್ತರವನ್ನ ಕೊಡ ಬೇಕಲ್ಲ ಅನ್ನುವ ಬೇಸರದಿಂದ.

ಆಗ ಮನೆ ಹೆಬ್ಬಾಗಿಲನ್ನ ದಾಟಿ ನಿಧಾನವಾಗಿ ಹೊರ ಬಂದ ಅಪ್ಪಯ್ಯ ಒಳಗಿ ನಿಂದಲೇ ನಮ್ಮ ಮಾತನ್ನ

ಕೇಳಿಸಿ ಕೊಂಡವ=

"ಏನಂತೆ ವಿಷಯ?"

ಎಂದು ಕೇಳಿದ.

ನಾನು ಉತ್ತರ ಹೇಳುವುದಕ್ಕೂ ಮೊದಲು ಆ ಯಜಮಾನ ಬಾಯಿ ಹಾಕಿ–

"ಅದೇ ಕೆಳಗಿನ ಬನದಳ್ಳಿ ಅಂತ ಒಂದೂರು ಇಲ್ಲಿ ಎಲ್ಲಿಯಾದರೂ ಇದೆಯೋ ಹೆಂಗೆ ಅಂತ ಚೌಕಾಶಿ ಮಾಡುವ ಅಂತ ಬಂದೇನ್ರಿ"

ಎಂದ.

ಅಪ್ಪಯ್ಯನ ಕಣ್ಣುಗಳಲ್ಲಿ ಏನೋ ಬೆಳಕು ಕಂಡಿತು. ಆತ ಹೌದು ಹೌದು ಅನ್ನು ವಂತೆ ತಲೆಯಾಡಿಸಿದ.

"ನೀ ಹೇಳೋ ಕೆಳಗಿನ ಬನದಳ್ಳಿ ಇದೇನೆ"

ಅಂದ ಅಪ್ಪಯ್ಯ. ನನಗೆ ತುಸು ಗಾಬರಿ. ಇದು ಊರಿನ ಹೆಸರಿಗೆ ಸಂಬಂಧ ಪಟ್ಟ ವಿಷಯ. ಪಂಚಾಯ್ತಿಯವರು ಇರಿಸಿದ ಊರಿಗೆ ಬೇರೊಂದು ಹೆಸರಿನಿಂದ ಕರೆಯುವುದು ತಪ್ಪು. ಅಲ್ಲದೆ ಈತ ಬೇರೆ ಕೆಳಗೆ ಮೇಲೆ ಎಂದೇನೋ ಹೇಳುತ್ತಿದ್ದಾನೆ. ಇದು ಏನಾದರೂ ತಾಪತ್ರಯ ತಂದು ಹಾಕಿದರೆ?

"ಇಲ್ಲ ಅಪ್ಪಯ್ಯ, ಇವನು ಹೇಳೊ ಊರು ಬೇರೆ ಇರಬೇಕು"

ಎಂದು ಅಪ್ಪಯ್ಯನನ್ನು ಯಾವುದೇ ಪ್ರಕರಣದಿಂದ ದೂರ ಇಡಬೇಕು ಅನ್ನುವ ಯತ್ನ ಮಾಡುತ್ತ ನಾನು ನುಡಿದೆ.

ಅವನ ಈ ಪ್ರಶ್ನೆ ನನ್ನನ್ನು ಮತ್ತೂ ಗೊಂದಲದಲ್ಲಿ ಕೆಡವಿತು. ಆದರೆ ಆತ ಮೈದಾನ ಬಾವಿ ಅನ್ನುವಾಗ ಊರ ನಡುವೆ, ಸಾಕಷ್ಟು ದೊಡ್ಡದಾಗಿರುವ, ಈ ಊರಿಗೆ ಕರಿ ಬೊಟ್ಟು ಅನ್ನುವ ಹಾಗೆ ಇದ್ದ ಒಂದು ಮೈದಾನ, ಅದರ ನಡುವೆ ಇದ್ದ ಒಂದು ಹಾಳು ಬಾವಿ ನನ್ನ ನೆನಪಿಗೆ ಬಂದಿತು. ಆ ಮೈದಾನದಲ್ಲಿ ಯಾವ ಮಕ್ಕಳೂ ಆಡುತ್ತಿರಲಿಲ್ಲ, ಆ ಬಾವಿಯಿಂದ ಯಾರೂ ನೀರನ್ನ ಸೇದುತ್ತಿರಲಿಲ್ಲ. ಇದರ ಜೊತೆಗೆ ಆ ಬಾವಿಯ ಬಗ್ಗೆ ಜನರಲ್ಲಿ ಏನೋ ಭೀತಿ ಮನೆ ಮಾಡಿತ್ತು. ಆ ಬಾವಿಯನ್ನ ಊರಿನ ಜನ ಮೈಲಿಗೆ ಬಾವಿ ಎಂದು ಕೂಡ ಕರೆಯುತ್ತಿದ್ದರು.

ಒಂದು ದಿನ ಬೆಳಿಗ್ಗೆ ಅವನ ಮಗಳು ಸಂತಸದಿಂದ ಉಲ್ಲಾಸ ದಿಂದ ಈ ಬದಿಯ ಹೊಲದಲ್ಲಿ ತಿರುಗಾಡಿಕೊಂಡು ಬಂದಿದ್ದಾಳೆ. ಹೊಲದ ಬದುವಿನ ಮೇಲಿನ ಹುಲ್ಲಿನಲ್ಲಿ ಕೆಲ ಹೂವುಗಳು ಅರಳಿವೆ, ಅಲ್ಲಲ್ಲಿ ಕೆಲ ಹಕ್ಕಿಗಳು ಹಾರುತ್ತಿವೆ, ಇಬ್ಬನಿ ತೆಳುವಾಗಿ ಎಲ್ಲ ಕಡೆ ಬೀಳುತ್ತಿದೆ. ಹುಡುಗಿ ಹುರುಪಿನಿಂದ ಉಲ್ಲಸಿತಳಾಗಿ ಬರುವಾಗ ಮಡಿವಂತರಾದ ಕೆಲ ಜನ ಎದುರಿನಿಂದ ಬಂದಿದ್ದಾರೆ. ಇವಳ ಉಡುಗೆ ತೊಡುಗೆ ಬಣ್ಣ ನೋಡಿದ್ದೇ ಅವರು ತಾಳ್ಮೆ ಕಳೆದು ಕೊಂಡಿದ್ದಾರೆ, ಉಗ್ರರಾಗಿದ್ದಾರೆ "ಏಯ್ ಕರಿ ಮುಖ ದೋಳೆ, ಎದ್ದ ಕೂಡಲೆ ನಿನ್ನ ಮುಖ ತೋರಿಸಲಿಕ್ಕೆ ಬಂದ್ಯೇನು....ತೊಲಗು ದೂರ" "ಹಾಳಾದ ನಿನ್ನ ಮುಖ ನೋಡಿದರೆ ನಮಗೆ ಇವತ್ತಿನ ಊಟ ಸಿಗೂದಿಲ್ಲ, ಹೋಗಾಚೆಗೆ....." "ದರಿದ್ರದೋಳು ಇಲ್ಲಿ ಎಲ್ಲಿ ಬಂದಳಪ್ಪ...ಬೆಳಗಿನ ಹೊತ್ತು ಎದ್ದ ತಕ್ಷಣ...ಗೂಬೆ ಬಂದ ಹಾಗೆ"

"ನಿನಗೆ ಗೊತ್ತಿಲ್ಲ ಸುಮ್ನಿರು...ಇಲ್ಲಿ ಸುತ್ತ ಮುತ್ತ ಕೆಳಗಿನ ಮಾವಳ್ಳಿ, ಕೆಳಗಿನ ಕಾನಳ್ಳಿ, ಕೆಳಗಿನ ಗುಂದ ಅಂತ ಹಿಂದುಳಿದ ಜನಾಂಗದವರೇ ಹೆಚ್ಚು ಹೆಚ್ಚಾಗಿ ಇದ್ದ ಹಳ್ಳಿಗಳು ಇದ್ವು, ಇವುಗಳ ಜೊತೆಯಲ್ಲಿ ಮೇಲಿನ ಮಾವಳ್ಳಿ, ಮೇಲಿನ ಕಾನಳ್ಳಿ, ಮೇಲಿನ ಗುಂದ ಅಂತ ಮುಂದುವರಿದ ಜನ ಇರೋ ಊರುಗಳು ಇದ್ವು, ಹಾಗೇನೆ ಮೇಲಿನ ಬನದಳ್ಳಿ ಅಂತ ಒಂದು ಊರಿತ್ತು, ಕೆಳಗಿನ ಬನದಳ್ಳಿ ಅಂತಾನು ಒಂದು ಊರಿತ್ತು. ಕ್ರಮೇಣ ಈ ಮೇಲು ಕೆಳಗು ಅನ್ನೋ ಶಬ್ದಗಳು ಮಾಯವಾಗಿ ಮಾವಳ್ಳಿ, ಕಾನಳ್ಳಿ, ಗುಂದ ಅನ್ನೊ ಹೆಸರು ಉಳೀತು...ಹಾಗೆ ಬದಲಾಗಿದ್ದು ಈ ಬನದಳ್ಳಿ"

ಅಪ್ಪಯ್ಯ ನನ್ನ ಬಾಯನ್ನು ತರ್ಕಬದ್ಧವಾಗಿಯೇ ಮುಚ್ಚಿಸಿದಾಗ ಆ ಯಜಮಾನ–

"ಹಂಗನ್ರೀ ಮತ್ತ"

ಎಂದ. ಅವನ ಮಾತಿಗೆ ಅಪ್ಪಯ್ಯ ಹುರುಪು ಗೊಂಡು–

"ಹಿಂದೆ ಈ ಹಳ್ಳೀಲಿ ಇದ್ದವರು ಕೇವಲ ಹಿಂದುಳಿದವರು. ಸಮಾಜದ ಮುಂದು ವರಿದವರಿಂದ ಮುಟ್ಟಿಸಿ

ಕೊಳ್ಳದ ಜನ. ಇವರನ್ನ ಹತ್ತಿರ ಸೇರಿಸದ ಮುಂದುವರಿದವರು ಅವರ ಊರಿನ ಹೆಸರುಗಳಿಗೆ ಹೀಗೊಂದು ಅಂಕಿತವನ್ನ ಇಡುವುದರ ಮೂಲಕ ಅವರನ್ನ ದೂರ ಇಟ್ಟಿದ್ದರು. ಕ್ರಮೇಣ ಬೇರೆ ಬೇರೆ ಜಾತಿಯವರು, ಧರ್ಮದವರು ಬಂದು ಸೇರಿ ಕೊಂಡ್ರು...ನಾವು ಹೀಗೇನೆ ಬಂದವರು ಅಲ್ವಾ...ನಾವು ಇಲ್ಲಿಗೆ ಬಂದು ಮೂವತ್ತು ವರ್ಷ ಆತು. ನಲವತ್ತು ವರ್ಷದ ಕತೆ ನಮಗೆಲ್ಲಿ ಗೊತ್ತಿರ ಬೇಕು....ನಾನು ಅಲ್ಲಿ ಇಲ್ಲಿ ಕೇಳಿದ್ದು ಅಷ್ಟೇಯ. ಊರಿಗೆ ಹೊಸ ಹೊಸ ಜನ ಬರತಿದ್ದ ಹಾಗೆ ಊರಿನ ಹೆಸರೂ ಬೇರೆ ಆಯ್ತು..... ಈ ಬೇರೆ ಹೆಸರಿಗೆ ಪಂಚಾಯ್ತಿ ಅನುಮತಿ ಸಿಗತು... ಈ ವಿಷಯ ನಿಮಗೆಲ್ಲ ಎಲ್ಲಿ ಗೊತ್ತಿರುತ್ತೆ?"

ಅಪ್ಪಯ್ಯ ಇಷ್ಟು ಹೇಳಿ ಆತನತ್ತ ತಿರುಗಿ–

"ಅಲ್ಲಪ್ಪ ಯಜಮಾನ, ನೀನು ಹಳೇ ಬಾಕಿ ಏನಾರ ವಸೂಲು ಮಾಡಲಿಕ್ಕೆ ಬಂದಿದಿಯೋ ಹ್ಯಾಗೆ?"

ಎಂದು ಕೇಳುತ್ತ, ನಗುತ್ತ ಅಂಗಳ ದಾಟಿದ.

ಬೆಳಿಗ್ಗೆ ಎದ್ದ ಕೂಡಲೇ ಉಡುಪರ ಹೋಟೆಲಿಗೆ ಹೋಗಿ ಒಂದು ಚಾ ಕುಡಿಯುವುದು ಅಪ್ಪಯ್ಯನ ಚಟ. ಆತ ಅದಕ್ಕಾಗಿ ಮನೆಯಿಂದ ಹೊರಟಾಗ ಆ ಆಗುಂತಕ ನಿಧಾನವಾಗಿ ನಮ್ಮ ಮನೆಯ ಜಗಲಿಯ ಮೇಲೆ ಕುಳಿತು–

"ಅಂತು ನಾನು ಬಂದದ್ದು ಸರಿ ಆತು..."

ಎಂದ.

"ಹೌದು, ನೀನು ಬಂದದ್ದಾದರೂ ಯಾಕೆ?"

ಎಂದು ನಾನು ಕುತೂಹಲದಿಂದ ಕೇಳಿದೆ.

ಆದರೆ ಆತ ನನ್ನ ಪ್ರಶ್ನೆಗೆ ಉತ್ತರ ಕೊಡುವ ಗೋಜಿಗೆ ಹೋಗದೆ ಬೇರೆಯೇ

(49ನೇ ಪುಟಕ್ಕೆ)

ಇಂಗ್ಲಿಷ್ ಪಠ್ಯಕ್ರಮ: ಬರೀ ಬೌದ್ಧಿಕ ಬಡಿವಾರ!

ಡಿ.ಎಸ್.ನಾಗಭೂಷಣ

ಕುವೆಂಪು ವಿಶ್ವವಿದ್ಯಾಲಯದ ಪದವಿ ತರಗತಿಗಳ ಇಂಗ್ಲಿಷ್ ಪಠ್ಯಕ್ರಮದ ಬಗ್ಗೆ ವಿವಾದವೆದ್ದಿದೆ. ಆಯ್ದ ಕೆಲವು ಕನ್ನಡ ಕೃತಿಗಳ ಇಂಗ್ಲಿಷ್ ಅನುವಾದಗಳನ್ನು ಮತ್ತು 'ನವೋದಿತ ಎಡಪಂಥೀಯತೆ'ಯೆಂದು ಗುರುತಿಸಬಹುದಾದ ತಾತ್ವಿಕತೆಯ ಆಶೀಶ್ ನಂದಿ, ಪಿ.ಸಾಯಿನಾಥ್‌ರಂತಹವರ ಲೇಖನಗಳನ್ನು ಮತ್ತು ಕೆಲವು ಕನ್ನಡ ಕೃತಿಗಳ ಇಂಗ್ಲಿಷ್ ಅನುವಾದಗಳನ್ನು ಪಠ್ಯವಾಗಿರಿಸುವ ಕ್ರಮವನ್ನು ಬಿಜೆಪಿವಾದಿಗಳು ಎಂದು ಹೇಳಲಾಗುವ ಕೆಲವರು ಪ್ರಶ್ನಿಸಿದ್ದಾರೆ.

ಹೀಗೆ ಪ್ರಶ್ನಿಸುವುದನ್ನು ವಿರೋಧಿಸಿ ದಲಿತ ಸಂಘರ್ಷ ಸಮಿತಿ ಹಾಗೂ 'ಪ್ರಗತಿಪರ'ವೆಂದು ಹೇಳಲಾಗುವ ಒಂದೆರಡು ಸಂಘಟನೆಗಳು ಪಠ್ಯಕ್ರಮದಲ್ಲಿ ಬದಲಾವಣೆ ಮಾಡದಂತೆ ಆಗ್ರಹಿಸಿವೆ. ಈ ಸಂಬಂಧ ಎಡ ಪಂಥೀಯ ಚಿಂತಕರೆಂದೇ ಗುರುತಿಸಲ್ಪಟ್ಟಿರುವ ಲಿಂಗ ದೇವರು ಹಳೆಮನೆಯವರು 19.7.2009ರ 'ಪ್ರಜಾವಾಣಿ'ಯಲ್ಲಿನ ತಮ್ಮ 'ಸಾರಸ್ವತ' ಎಂಬ ಅಂಕಣದಲ್ಲಿ 'ಇಂಗ್ಲಿಷ್ ಸಾಹಿತ್ಯ, ಇಂಗ್ಲಿಷ್‌ನಲ್ಲಿ ಸಾಹಿತ್ಯ' ಎಂಬ ಶೀರ್ಷಿಕೆಯಡಿ ಲೇಖನವೊಂದನ್ನು ಬರೆದಿದ್ದಾರೆ.

ಶಿವಮೊಗ್ಗದ ಯಾರೋ ಕಳಿಸಿದ 'ಪೇಪರ್ ಕಟಿಂಗ್'ವೊಂದನ್ನು ಆಧಾರವಾಗಿಟ್ಟುಕೊಂಡು ಬರೆದಿರುವುದಾಗಿ ಹೇಳಿಕೊಂಡಿರುವ ಈ ಲೇಖನದಲ್ಲಿ ಅವರು ಸಾಹಿತ್ಯ ಅಧ್ಯಯನದ ರೀತಿ ನೀತಿಗಳ ಬಗ್ಗೆ ಹಲವು ವಿಚಾರಗಳನ್ನು ಮಂಡಿಸಿದ್ದಾರೆ. ಆ ಮೂಲಕ ಈ ಪಠ್ಯಕ್ರಮ ಕುರಿತು ಎದ್ದಿರುವ ವಿವಾದದಲ್ಲಿನ ಹಲವು ಪ್ರಶ್ನೆಗಳಿಗೆ ಉತ್ತರಿಸಲು ಯತ್ನಿಸಿದ್ದಾರೆ. ಇವರ ಈ ಬರಹವನ್ನೇ ಈ ಪಠ್ಯಕ್ರಮದ ಸಮರ್ಥನೆ ಎಂದು ನಾವು ಭಾವಿಸಿದಾದಲ್ಲಿ, ಅದರ ಬಗ್ಗೆ ಈಗ ಎದ್ದಿರುವ ವಿವಾದದ ಹಿನ್ನೆಲೆಯಲ್ಲಿ ಅದನ್ನು ಪರಿಶೀಲಿಸುವುದು ನಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಕಳಕಳಿ ಇರುವ ಎಲ್ಲರ ಕರ್ತವ್ಯವಾಗಿದೆ.

ಹಳೆಮನೆಯವರು ಈಗ ಸಾಹಿತ್ಯ ಅಧ್ಯಯನ ಎಂದರೆ ಸಂಸ್ಕೃತಿ ಅಧ್ಯಯನವೂ ಆಗಿರುವುದರಿಂದ ಮತ್ತು ಇದು ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವ ಅರಿವು ಉಂಟಾಗಿರುವ ವಸಾಹತೋತ್ತರ/ಆಧುನಿಕೋತ್ತರ ಯುಗವೂ ಆಗಿರುವುದರಿಂದ, ಈ ಪಠ್ಯಗಳು ಸಮರ್ಥನೀಯವೇ ಆಗಿವೆ ಎಂದು ವಿವರಿಸಿದ್ದಾರೆ. ಆದರೆ ನಮ್ಮ ಎಲ್ಲ ಸೃಜನಶೀಲ ಕೃತಿಗಳೂ ಒಂದು ರೀತಿಯಲ್ಲಿ ಸಂಸ್ಕೃತಿ ಅಧ್ಯಯನಗಳೇ ಮತ್ತು ಹಾಗಾಗಿ ನಮ್ಮನ್ನು ನಾವು ಅಧ್ಯ ಯನ ಮಾಡಿಕೊಳ್ಳುವ ಪ್ರಯತ್ನಗಳೇ ಆಗಿದ್ದವು;ನವ್ಯ ವಿಮರ್ಶೆ ಆರಂಭವಾದಾಗಿನಿಂದಷ್ಟೇ ಅವು, 'ಹೊರ'ಗಿನೆಡೆಗಳಿಂದ ನಡೆಯುವ ಮತ್ತು ನಡೆಯಬೇಕಾದ ಸಾಹಿತ್ಯ ಅಧ್ಯಯನಗಳಾಗಿ-ಕೃತಿ ನಿಷ್ಠತೆಯ ಹೆಸರಿನಲ್ಲಿ-ಮಾರ್ಪಾಡಾದವು ಎಂಬುದನ್ನು ಅವರು ಮರೆತಂತೆ ತೋರುತ್ತದೆ.

ಹಾಗಾಗಿ, ಪಠ್ಯಕ್ರಮ ಕುರಿತು ಎತ್ತಲಾಗಿರುವ ಕೆಲವು ಮೂಲಭೂತ ಪ್ರಶ್ನೆಗಳು ಹಳೆಮನೆಯವರಿಂದ ಉತ್ತರ ಪಡೆಯದೇ ಹಾಗೇ ಉಳಿದುಬಿಟ್ಟಿವೆ!

ಈವರೆಗೆ ಪಶ್ಚಿಮದ ಕಣ್ಣಲ್ಲಿ ನಮ್ಮನ್ನು ನೋಡುವ ಅಥವಾ ನೋಡಿಕೊಳ್ಳುವ ಪೌರ್ವಾತ್ಯವಾದವೆಂದು ಕರೆಯಲಾಗುವ ಕ್ರಮವನ್ನು ಅನುಸರಿಸುತ್ತಿದ್ದುದಾಗಿಯೂ, ಇದು ಅನೇಕ ಅಧ್ಯಯನ ದೋಷಗಳಿಗೆ ಕಾರಣವಾಗಿತ್ತು ಎಂದೂ ಹೇಳಲಾಗುತ್ತಿದೆ. ಹಾಗೇ, ಇದಕ್ಕೆ ವಿರುದ್ಧವಾಗಿ, ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವುದೆಂದು ಹೇಳಲಾಗುವ ಈ ಹೊಸ 'ಆಧುನಿಕೋತ್ತರ' ಕ್ರಮವನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ಪ್ರತಿ ಪಾದಿಸಲಾಗುತ್ತಿದೆ.

ಆದರೆ ಇದೆಲ್ಲವೂ ನಮ್ಮದಲ್ಲದ ಇಂಗ್ಲಿಷ್;ಮತ್ತು ಇಂಗ್ಲಿಷ್ 'ವ್ಯಾಸಂಗ ಕ್ರಮ'ದ ಫಲವಾಗಿಯೇ ಮತ್ತು ಮೂಲಕವೇ ಆರಂಭವಾಗಿರುವುದು ಒಂದು ಸ್ವಯಂ ವಿರೋಧವಲ್ಲವೇ? ಇದರ ಹಿಂದೆ ಪರೋಕ್ಷ ರೂಪದಲ್ಲಿ ಇರುವುದು, ಅದೇ ಹಳೆಯ ಇಂಗ್ಲಿಷ್-ಭಾಷಾ (ವಸಾಹತು ಶಾಹಿ) ರಾಜಕಾರಣವೇ ಅಲ್ಲವೆ? ಎಂಬ ಪ್ರಶ್ನೆಗಳನ್ನು ಈ ಪ್ರತಿಪಾದನೆ ಗಮನಿಸದೇ ಹೋಗಿದೆ. ಹೋಗಲಿ, ಇಂಗ್ಲಿಷ್ (ನಮ್ಮ ಸು'ಶಿಕ್ಷಿತರ' ಮಟ್ಟದಲ್ಲಾದರೂ)-ಅದರೆಲ್ಲ ಜಾಗತಿಕ ತೆಯೊಡನೆ-ನಮ್ಮ ಭಾಷೆಯೇ ಆಗಿದೆ ಎಂದಂದು ಕೊಂಡರೂ, ಈ ನಮ್ಮನ್ನು ನಾವು ಅಧ್ಯಯನ ಮಾಡಿಕೊಳ್ಳುವ ಈ ಹೊಸ ಸಾಹಸ ನಿಜವಾಗಿಯೂ

ಕರ್ನಾಟಕದ, ವಿಶೇಷವಾಗಿ ಕುವೆಂಪು ವಿಶ್ವವಿದ್ಯಾಲಯದ ಸರಿಸುಮಾರು ಎಲ್ಲ ಪದವಿ ವಿದ್ಯಾರ್ಥಿಗಳೂ ಕನ್ನಡದ ಮಕ್ಕಳೇ ಆಗಿರುವುದರಿಂದ, ಈ ಕೃತಿಗಳ ಇಂಗ್ಲಿಷ್ ಅವತರಣಿಕೆಗಳನ್ನು ಅವರಿಗೆ ಪಠ್ಯ ಮಾಡುವ ಅಗತ್ಯವಾದರೂ ಏನು? ಮೂಲ ಕನ್ನಡ ಕೃತಿಗಳನ್ನೇ ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವ ಈ ಹೊಸ ಕ್ರಮಕ್ಕಾಗಿ ಪಠ್ಯಗಳನ್ನೇಕೆ ಮಾಡಿಕೊಳ್ಳಬಾರದು? ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳು ತಮ್ಮ ತುಲನಾತ್ಮಕ ಅಧ್ಯಯನಗಳಿಗಾಗಿ ಇಂಗ್ಲಿಷ್ ಪಠ್ಯಗಳನ್ನೂ ಅಭ್ಯಸಿಸುವುದಿಲ್ಲವೇ, ಹಾಗೆ? ಇನ್ನು ಇಂಗ್ಲಿಷ್‌ನ್ನು ಕನ್ನಡ ಸಂದರ್ಭದಲ್ಲಿ ಕಲಿಸಲೆಂದು ಈ ಅನುವಾದಿತ ಪಠ್ಯಗಳನ್ನು ಇರಿಸಲಾಗಿದೆ ಎಂಬ ವಾದವೂ ಇದೆ.

ಸ್ವಯಂ ಉದ್ದೀಪ್ತವೋ ಅಥವಾ ಅದು ಕೂಡಾ ಹೊರಗಿನ ಸಾಂಸ್ಕೃತಿಕ ಮತ್ತು ರಾಜಕೀಯ ಸ್ಫೂರ್ತಿಗಳಿಂದಲೇ ಆಮದಾದವೋ?

ನಮ್ಮನ್ನು ನಾವು ಅಧ್ಯಯನ ಮಾಡಿಕೊಳ್ಳುವ ಆಶಯಪ್ಪು ಎಂದು ಹಳೆಮನೆಯವರು ಪ್ರತಿಪಾದಿಸುತ್ತಿರುವ ಈ ಹೊಸ ಕ್ರಮವು ಪೌರ್ವಾತ್ಯವಾದ ಕಲಿಸಿದ ಅಧ್ಯಯನ ಕ್ರಮವನ್ನು ಪ್ರಶ್ನಿಸುತ್ತದೆ ಎಂಬುದರ ಹೊರತಾಗಿ, ಇನ್ನಾವ ರೀತಿಯಲ್ಲಿ ಮತ್ತು ನೆಲೆಯಲ್ಲಿ ಅದು ನಮ್ಮದೇ ಕ್ರಮ ಅನ್ನಿಸುತ್ತದೆ? ಪೌರ್ವಾತ್ಯವಾದ ಎನ್ನುವುದು ಯಾವ ಆಧುನಿಕ ವೈಚಾರಿಕತೆಯ ಭಾಗವಾಗಿತ್ತೋ, ಅದೇ ವೈಚಾರಿಕತೆಯ ಪ್ರತಿಲೋಮ ರೂಪವಷ್ಟೇ ಆಗಿದೆಯಲ್ಲವೇ ಚಾಮ್‌ಸ್ಕಿ, ಡೆರಿಡಾ, ಫುಕೋ ಮುಂತಾದವರಿಂದ ಉದ್ದೀಪ್ತವಾಗಿರುವುದೆಂದು ಇವರು ಹೇಳುವ, ಈ ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವ ಹೊಸ ಕ್ರಮ ಕೂಡಾ?(ಆಶೀಶ್ ನಂದಿಯಂತಹವರು ಮಾತ್ರ ಅವನ್ನು ಸ್ವದೇಶೀಗೊಳಿಸುವ ಪ್ರಯತ್ನ ಮಾಡುತ್ತಿದ್ದಾರೆ).

ನಮ್ಮ ಎಡಪಂಥೀಯ ಬುದ್ಧಿಜೀವಿಗಳೆನಿಸಿಕೊಂಡವರು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಬೌದ್ಧಿಕ ನೆಪಗಳನ್ನೊಡ್ಡಿ ಇಂತಹ ಉಪಕ್ರಮಗಳಿಗೆ ಕೈ ಹಾಕುವ ಮೂಲಕ ನಮ್ಮ ಮೂಲ ಚಿಂತನೆಯೆಂಬುದನ್ನೇ ಅವಿಶ್ವಾಸಾರ್ಹಗೊಳಿಸಿ, ಅಸಾಧ್ಯ ಮಾಡುತ್ತಿಲ್ಲವೇ? ಹೀಗಾಗಿ, ಇವರಿಗೆ ಆಧುನಿಕೋತ್ತರವಾದವೆನ್ನುವುದು ತುಕ್ಕು ಹಿಡಿದ ತಮ್ಮ ಆಧುನಿಕತಾವಾದವನ್ನು(ಆ ಮೂಲಕ ತಮ್ಮ ಎಡ ಪಂಥೀಯತೆಯನ್ನೂ) ಉಜ್ಜಿ ಹೊಸದಾಗಿ ಹೊಳಪುಗೊಳಿಸಿಕೊಳ್ಳಲು ಸಿಕ್ಕ ಸಾಧನವಾಗಿದೆಯಷ್ಟೇ ಎಂದು ಯಾರಿಗಾದರೂ ಅನ್ನಿಸಿದರೆ ಆಶ್ಚರ್ಯವೇನು?

ಹೀಗೆ ಆಧುನಿಕೋತ್ತರತೆಯ ಹೊಸ ಹುರುಪಿನಲ್ಲಿ (ಈ ಹಿಂದೆ ಆಧುನಿಕತಾವಾದವನ್ನು ಅಪ್ಪಿಕೊಂಡ ಹುರುಪಿನಂತೆಯೇ) 'ದೇಸೀ ಚಿಂತನೆ'ಯ ಮಾದರಿಗಳನ್ನೂ ಆಮದು ಮಾಡಿಕೊಳ್ಳುವಂತಹ ಈ ವಿಪರ್ಯಾಸಕ್ಕೆ (ಅಥವಾ ಪ್ರತಿಭಾಹೀನತೆಗೆ) ನಮ್ಮ (ಮಾಜಿ?) ಎಡ ಪಂಥೀಯ ಬುದ್ಧಿಜೀವಿಗಳು ಒಳಗಾಗಿರುವುದರಿಂದಲೋ ಏನೋ, ಹಳೆಮನೆಯವರಿಗೆ ನಮ್ಮ ಗಿರೀಶ್ ಕಾರ್ನಾಡ್, ವೈದೇಹಿ ಮುಂತಾದ ಒಂದು ನಿರ್ದಿಷ್ಟ ಗುಂಪಿನ ಲೇಖಕರನ್ನಷ್ಟೇ ಇಂಗ್ಲೀಷೀಕರಿಸಿ(ಇಂತಹ ಲೇಖಕರು ಮಾತ್ರ ಇಂಗ್ಲೀಷೀಕರಣಕ್ಕೆ ಒಗ್ಗುತ್ತಾರೇನೋ ತಿಳಿಯದು!) ಅದನ್ನು ಹೊಸ ಹೊಳಹುಗಳಿಗಾಗಿ ಅಧ್ಯಯನ ಮಾಡಲೆಳಸುವ ಉಪಕ್ರಮ 'ಪ್ರಗತಿಪರ'ವಾಗಿಯೇ ಕಂಡಿದೆ!

ಕರ್ನಾಟಕದ, ವಿಶೇಷವಾಗಿ ಕುವೆಂಪು ವಿಶ್ವವಿದ್ಯಾಲಯದ ಸರಿ ಸುಮಾರು ಎಲ್ಲ ಪದವಿ ವಿದ್ಯಾರ್ಥಿಗಳೂ ಕನ್ನಡದ ಮಕ್ಕಳೇ ಆಗಿರುವುದರಿಂದ, ಈ ಕೃತಿಗಳ ಇಂಗ್ಲಿಷ್ ಅವತರಣಿಕೆಗಳನ್ನು ಅವರಿಗೆ ಪಠ್ಯ ಮಾಡುವ ಅಗತ್ಯವಾದರೂ ಏನು?(ಅಥವಾ ಹೇಗೂ ಕನ್ನಡದ ಮಕ್ಕಳು ಕನ್ನಡವನ್ನು ಕೈಬಿಡುತ್ತಿರುವಾಗ, ಕನ್ನಡದ ಕೃತಿಗಳನ್ನು ಅವರಿಗೆ ಇಂಗ್ಲೀಷಿಕರಿಸಿ ಉಣಬಡಿಸುವ, ಕನ್ನಡ ಸಂಸ್ಕೃತಿ ರಕ್ಷಣೆಯ ಉದ್ದೇಶವೇನಾದರೂ ಇದರ ಹಿಂದೆ ಇದೆಯೋ ಏನೋ ತಿಳಿಯದು!) ಮೂಲ ಕನ್ನಡ ಕೃತಿಗಳನ್ನೇ ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವ ಈ ಹೊಸ ಕ್ರಮಕ್ಕಾಗಿ ಪಠ್ಯಗಳನ್ನೇಕೆ ಮಾಡಿಕೊಳ್ಳಬಾರದು?

ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳು ತಮ್ಮ ತುಲನಾತ್ಮಕ ಅಧ್ಯಯನಗಳಿಗಾಗಿ ಇಂಗ್ಲಿಷ್ ಪಠ್ಯಗಳನ್ನೂ ಅಭ್ಯಸಿಸುವುದಿಲ್ಲವೇ, ಹಾಗೆ? ಇನ್ನು ಇಂಗ್ಲಿಷ್‌ನ್ನು ಕನ್ನಡ ಸಂದರ್ಭದಲ್ಲಿ ಕಲಿಸಲೆಂದು ಈ ಅನುವಾದಿತ ಪಠ್ಯಗಳನ್ನು ಇರಿಸಲಾಗಿದೆ ಎಂಬ ವಾದವೂ ಇದೆ.

ಆ ಉದ್ದೇಶವೇ ನಿಜವಾಗಿದ್ದರೆ, ಗಿರೀಶ್ ಕಾರ್ನಾಡರ ನಾಟಕಗಳಲ್ಲಿ(ವಿಶೇಷವಾಗಿ ಈಗ ಪಠ್ಯವಾಗಿ ಸೂಚಿತವಾಗಿರುವ 'ತುಘಲಕ್' ನಲ್ಲಿ) ಯಾವ ಮತ್ತು ಎಂತಹ ಕನ್ನಡ ಭಾಷಾ ಅಥವಾ ಸಾಂಸ್ಕೃತಿಕ ಸಂದರ್ಭವಿದೆಯೋ ಈ ಪಠ್ಯ ಸಮರ್ಥಕರೇ ಹೇಳಬೇಕು! ಹಳೆ ಮನೆಯವರು ತಮ್ಮ ವಾದವನ್ನು ಇಡಿಯಾಗಿ, ಫ್ರಾನ್ಸಿನಲ್ಲಿ ಫ್ರೆಂಚ್ ಸಾಹಿತ್ಯವನ್ನು ಇಂಗ್ಲಿಷ್‌ನಲ್ಲಿ ಬೋಧಿಸುತ್ತಿರುವಾಗ ನಾವೇಕೆ ಹೀಗೆ ಮಾಡಬಾರದು ಎಂದು ಕೇಳುವ ಮೂಲಕ ಸಮರ್ಥಿಸಿಕೊಳ್ಳುವುದು ಕೂಡಾ, ಮೂಲತಃ ಅದೇ ಹಳೇ ಆಧುನಿಕವಾದದ ಮುಂದುವರಿಕೆ ಮಾತ್ರವಲ್ಲವೇ?

ಹಳೆಮನೆಯವರು ಆಶೀಸ್ ನಂದಿ ಮತ್ತು ಸಾಯಿನಾಥರ ಲೇಖನಗಳನ್ನು ಅಧ್ಯಯನ ಮಾಡುವ ಅವಶ್ಯಕತೆಯನ್ನು (ಈ ಅವಶ್ಯಕತೆಯನ್ನು ಖಂಡಿತ ನಾನು ಅಲ್ಲಗಳೆಯುತ್ತಿಲ್ಲ. ಆದರೆ ಈ ಲೇಖನಗಳು ಈಗ ಆಪಾದಿಸಲಾಗುತ್ತಿರುವಂತೆ, ತತ್ಕಾಲೀನ ರಾಜಕಾರಣ ಮತ್ತು ರಾಜಕೀಯ ಪಾತ್ರಗಳ ಬಗ್ಗೆ ತೀರ್ಪು ಕೊಡುವ ಶೈಲಿಯಲ್ಲಿದ್ದರೆ ಅವು ವಿದ್ಯಾರ್ಥಿಗಳ ಮೇಲಿನ ರಾಜಕೀಯ ಹೇರಿಕೆ ಮಾತ್ರವಲ್ಲ, ಅವರ ಏಕಪಕ್ಷೀಯ ರಾಜಕೀಯ ಶಿಕ್ಷಣದ ಪ್ರಯತ್ನವೂ ಆಗುತ್ತದೆ ಎಂಬುದನ್ನೂ ನಾವು ಗಮನಿಸಬೇಕು.

ಅಲ್ಲದೆ, ಅದೇ ಹೊತ್ತಿನಲ್ಲಿ ಈ ಪಠ್ಯಗಳ ತಾತ್ವಿಕ ಸಂಕೀರ್ಣತೆ ನಮ್ಮ ಇಂದಿನ ಬಹುತೇಕ ಇಂಗ್ಲಿಷ್ ಮೇಷ್ಟ್ರುಗಳ ಮತ್ತು ಆ ಮೂಲಕ ನಮ್ಮ ವಿದ್ಯಾರ್ಥಿಗಳ ಗ್ರಹಿಕೆಗೆ ಸಿಗುವಂತಿದೆಯೇ ಎಂಬ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಬೇಕು) ಸಮರ್ಥಿಸುವ ನೆಲೆಗಳನ್ನು ಗಮನಿಸಿದಾಗ ಈ ಆಯ್ಕೆಯ ಹಿಂದೆ ಸಂಸ್ಕೃತಿ ಅಧ್ಯಯನದ ಉದ್ದೇಶಗಳಿಗಿಂತ ಹೆಚ್ಚಾಗಿ ಒಂದು ನಿರ್ದಿಷ್ಟ ರಾಜಕೀಯ ಪ್ರಣಾಳಿಕೆಯ ಹಿತಾಸಕ್ತಿಗಳು ಎದ್ದು ಕಾಣುತ್ತಿವೆ ಎಂದು ಯಾರಿಗಾದರೂ ಅನ್ನಿಸಿದ್ದರೆ ಆಶ್ಚರ್ಯವಿಲ್ಲ.

ಏಕೆಂದರೆ ಇವರು ಈ ಲೇಖನಗಳ 'ವಿವಾದಿತ' ರಾಜಕೀಯ ಸಾಲುಗಳ('ಗೋಡ್ಸೆ ಮಾಡಲಾಗದ್ದನ್ನು ಅಡ್ವಾಣಿ ಮತ್ತು ಬಾಳ ಠಾಕ್ರೆ ಮಾಡಿದರು...' ಇತ್ಯಾದಿ) ಬಗ್ಗೆ ಪ್ರಸ್ತಾಪವನ್ನೇ ಮಾಡದೆ, ಇವನ್ನು ಸ್ವಾತಂತ್ರ್ಯೋತ್ತರ ಭಾರತದ ಮುಖ್ಯ ಸಂಕಥನಗಳೆಂದು ಸಾರಾ ಸಗಟಾಗಿ ಗುರುತಿಸಿ ಸಾಹಿತ್ಯದ ವಿದ್ಯಾರ್ಥಿಗಳಿಗೆ ಪಠ್ಯವಾಗಿ ಶಿಫಾರ್ಸು ಮಾಡುತ್ತಾರೆ.

ಪರಿಸ್ಥಿತಿ ಹೀಗಿರುವಾಗ, ಸಾಕಷ್ಟು ತುಕ್ಕು ಹಿಡಿದಿರುವ ಈ ರಾಜಕೀಯ ಪ್ರಣಾಳಿಕೆ ಈಗ ಕರ್ನಾಟಕದ ಜನವೂ ಸೇರಿದಂತೆ ಭಾರತದ ಗಣನೀಯ ಜನಸಂಖ್ಯೆಗೆ ಅನುಮಾನಾಸ್ಪದ ಅಥವಾ ಅಪೂರ್ಣವೆನ್ನಿಸ ತೊಡಗಿ ಅದನ್ನು ತಿರಸ್ಕರಿಸಲಾರಂಭಿಸಿರುವಾಗ, ಇಂತಹ ಪಠ್ಯಗಳೇ ಏಕೆ ನಮ್ಮ ಅಧ್ಯಯನ ಕ್ರಮದ ತಾತ್ವಿಕ ಯಜಮಾನಿಕೆ ವಹಿಸಿಕೊಳ್ಳುವುದನ್ನು ಮುಂದುವರೆಸಬೇಕು ಎಂಬ ಪ್ರಶ್ನೆಯನ್ನು ಬಿಜೆಪಿವಾದಿಗಳೆನಿಸಿಕೊಂಡವರು ಕೇಳುತ್ತಿರುವುದರಲ್ಲಿ ಆಶ್ಚರ್ಯವೇನು?

ಹಾಗೆ ನೋಡಿದರೆ ಇದು ಹಳೆ ಮನೆಯವರ ಆಧುನಿಕೋತ್ತರವಾದದ ದೃಷ್ಟಿಕೋನದಿಂದ ಕೂಡಾ 'ಪ್ರಜಾಸತ್ತಾತ್ಮಕ'ವಾಗಿಯೇ ಇದೆ ಅಲ್ಲವೆ? ನಮ್ಮ ತೀರ್ಮಾನಗಳು ನಿರಪೇಕ್ಷವಾದವುಗಳು ಮತ್ತು ಮಿಕ್ಕವರೆದ್ದಲ್ಲ ಸಾಪೇಕ್ಷವಾದವುಗಳು ಎಂದು ಹೇಳುವುದೇ 'ಆಧುನೀಕೋತ್ತರವಾದ' ವಾದಲ್ಲಿ, ಅದು ತಾತ್ವಿಕವಾಗಿಯೇ ಅಪ್ರಜಾಸತ್ತಾತ್ಮಕವಾದಿಯೂ ಆಗಿರುವುದರಲ್ಲಿ ಸಂಶಯವಿಲ್ಲ.

ಹಾಗಾಗಿ, ನಿನ್ನೆ ಮೊನ್ನೆಯವರೆಗೆ ತಮ್ಮನ್ನು ಆಧುನಿಕರೆಂದು ಕರೆದುಕೊಳ್ಳುತ್ತಿದ್ದು ಈಗ ತಮ್ಮ ಪಶ್ಚಿಮದ ಸಹ-ಆಧುನಿಕರಿಂದ ದತ್ತು ಪಡೆದ 'ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವ' ಹೊಸ ಕ್ರಮದಿಂದಾಗಿ ಇಂದು ಆಧುನಿಕೋತ್ತರವಾದಿಗಳಾಗಿ ಮಾರ್ಪಾಡಿರುವುದಾಗಿ ನಂಬಿರುವ ಇವರು;ಮೊದಲು, ಮೇಲೆ ಸೂಚಿಸಿದಂತಹ ಹಳೆಯ ಆಧುನಿಕ ರಾಜಕೀಯದ ಸಂಕುಚಿತ ದೃಷ್ಟಿಕೋನದ ಕಣ್ಣಿಯನ್ನು ಕಳಚಿಕೊಳ್ಳಬೇಕಿದೆ.(ಅದು ನಿಜವಾದ ಆಧುನಿಕೋತ್ತರತೆ ಎನಿಸಿಕೊಳ್ಳುತ್ತದೆ.)

ಆ ಮೂಲಕ ಈ ದೊಡ್ಡ ರಾಜಕೀಯ ಸ್ಥಿತ್ಯಂತರ ಕಾಲದಲ್ಲಿ ಮೂಡುತ್ತಿರುವ ಎಲ್ಲ ಬಣ್ಣಗಳ ವಿಚಾರಗಳ ಹೊಸ ಅನುಸಂಧಾನದ ಭಾಗವಾಗಿ ಹೆಚ್ಚು ಜನಾವೃತವಾಗುತ್ತಾ ಹೋಗುವಂತಹ ಹೊಸ ಪರಿಭಾಷೆಯನ್ನು ರೂಢಿಸಿಕೊಂಡು ತನ್ನನ್ನು ತಾನು ಸಮರ್ಥಿಸಿಕೊಳ್ಳುವುದನ್ನು ಕಲಿಯಬೇಕಿದೆ. ಇದರಿಂದ ನಮ್ಮನ್ನು ನಾವು ಅಧ್ಯಯನ ಮಾಡಿಕೊಳ್ಳುವುದು ನಮ್ಮದೇ ಭಾಷೆಯ ಮೂಲಕವಲ್ಲದಿದ್ದರೂ, ನಮ್ಮದೇ ಪರಿಭಾಷೆಯಲ್ಲಿ(ನುಡಿಗಟ್ಟಿನಲ್ಲಿ) ಮಾತ್ರ ಸಾಧ್ಯ ಎಂಬ ಅರಿವು ಮೂಡುತ್ತದೆ. ಆಗ ಮಾತ್ರ ನಮ್ಮನ್ನು ನಾವು ಅಧ್ಯಯನ ಮಾಡಿ ಕೊಳ್ಳುವುದು ಎಂಬುದು, ಆಧುನಿಕತಾವಾದದಂತೆ ಕೆಲವೇ ಜನರ ಒಂದು ಹೊಸ ಮೋಹಕ ಬೌದ್ಧಿಕವಾದ ಮಾತ್ರ ಆಗದೆ, ಜನಮುಖಿಯಾದ ವಾಸ್ತವ ಕಾರ್ಯಕ್ರಮವೂ ಆದೀತು. □

ಹಳೆಮನೆಯವರು ಈಗ ಸಾಹಿತ್ಯ ಅಧ್ಯಯನ ಎಂದರೆ ಸಂಸ್ಕೃತಿ ಅಧ್ಯಯನವೂ ಆಗಿರುವುದರಿಂದ ಮತ್ತು ಇದು ನಮ್ಮನ್ನು ನಾವೇ ಅಧ್ಯಯನ ಮಾಡಿಕೊಳ್ಳುವ ಅರಿವು ಉಂಟಾಗಿರುವ ವಸಾಹತೋತ್ತರ/ಆಧುನಿಕೋತ್ತರ ಯುಗವೂ ಆಗಿರುವುದರಿಂದ, ಈ ಪಠ್ಯಗಳು ಸಮರ್ಥನೀಯವೇ ಆಗಿವೆ ಎಂದು ವಿವರಿಸಿದ್ದಾರೆ. ಆದರೆ ನಮ್ಮ ಎಲ್ಲ ಸೃಜನಶೀಲ ಕೃತಿಗಳೂ ಒಂದು ರೀತಿಯಲ್ಲಿ ಸಂಸ್ಕೃತಿ ಅಧ್ಯಯನಗಳೇ ಮತ್ತು ಹಾಗಾಗಿ ನಮ್ಮನ್ನು ನಾವು ಅಧ್ಯಯನ ಮಾಡಿಕೊಳ್ಳುವ ಪ್ರಯತ್ನಗಳೇ ಆಗಿದ್ದವು;ನವ್ಯ ವಿಮರ್ಶೆ ಆರಂಭವಾದಾಗಿನಿಂದಷ್ಟೇ ಅವು, 'ಹೊರ'ಗಿನೆಡೆಗಳಿಂದ ನಡೆಯುವ ಮತ್ತು ನಡೆಯಬೇಕಾದ ಸಾಹಿತ್ಯ ಅಧ್ಯಯನಗಳಾಗಿ-ಕೃತಿನಿಷ್ಠತೆಯ ಹೆಸರಿನಲ್ಲಿ-ಮಾರ್ಪಾಡಾದವು ಎಂಬುದನ್ನು ಅವರು ಮರೆತಂತೆ ತೋರುತ್ತದೆ.

ಖೈರ್ಲಾಂಜಿ: ದಲಿತ ಭಾರತದ ಕಥನ

ಪುಸ್ತಕ ಅವಲೋಕನ



ಮೂಲ : ಆನಂದ್ ತೇಲ್‌ತುಂಬ್ಡೆ
ಸಂ : ಶಿವಸುಂದರ್
ಬೆಲೆ : ರೂ. 200/-
ಪ್ರ : ಲಂಕೇಶ್ ಪ್ರಕಾಶನ
ನಂ.9, ಪೂರ್ವ ಆಂಜನೆಯ ಗುಡಿ ರಸ್ತೆ,
ಬಸನವಗುಡಿ, ಬೆಂಗಳೂರು–560 004

ಎನ್. ಸತ್ಯ

ಈ ಅಭೂತಪೂರ್ವ ಕೃತಿಯನ್ನು ಓದಿದಾಗ ಆಗುವ ಅನುಭವವನ್ನು ಅಕ್ಷರ ರೂಪದಲ್ಲಿ ಕಟ್ಟಿಕೊಡಲು ಸಾಧ್ಯವಿಲ್ಲ. ಆದರೂ ಕೃತಿ ಮುಂದಿಡುವ ವಿಚಾರಗಳನ್ನು ಸಾಧ್ಯವಾದ ಮಟ್ಟಿಗೆ ನಮ್ಮ ಓದುಗರಿಗೆ ಪರಿಚಯಿಸಲು ಪ್ರಯತ್ನಿಸುತ್ತೇನೆ.

ಪ್ರಸಿದ್ಧ ಚಿಂತಕ ಆನಂದ್ ತೇಲ್‌ತುಂಬ್ಡೆಯವರು ರಚಿಸಿರುವ ಖೈರ್ಲಾಂಜಿ ಒಂದು ವಿನೂತನ ಕೃತಿ. ಈ ಕೃತಿಯನ್ನು ಓದಿದಾಗ ಅತೀವ ಸಂಕಟ, ಸಿಟ್ಟು, ಪಶ್ಚಾತ್ತಾಪ ಮತ್ತು ಸಂತೋಷ ಒಟ್ಟಿಗೇ ಉಮ್ಮಳಿಸಿ ಬರದೇ ಇರಲಾರವು. ಈ ಪುಸ್ತಕವು 2006 ರಲ್ಲಿ ಮಹರಾಷ್ಟ್ರದ ಕುಗ್ರಾಮ ಖೈರ್ಲಾಂಜಿಯಲ್ಲಿ ದಲಿತ ಕುಟುಂಬವೊಂದರ ಮೇಲೆ ನಡೆದ ಮೃಗೀಯ ಜಾತಿ ದೌರ್ಜನ್ಯವನ್ನು; ಈ ಮೃಗೀಯತೆಗೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಇರುವ ಸಾರ್ವತ್ರಿಕತೆಯನ್ನು; ದಲಿತ ಸಮುದಾಯದ ವಿರುದ್ಧ ಪ್ರಭುತ್ವ ಮತ್ತು ಮಾಧ್ಯಮ ಅನುಸರಿಸುತ್ತಿರುವ ಪಕ್ಷಪಾತವನ್ನು; ದಲಿತ ಸಮುದಾಯ ಅನುಭವಿಸುತ್ತಿರುವ ಅವಮಾನ, ಅನ್ಯಾಯಗಳ ಬಗ್ಗೆ ಪ್ರಗತಿಪರರು, ಎಡ ಪಂಥೀಯರನ್ನೂ ಒಳಗೊಂಡಂತೆ 'ನಾಗರೀಕ ಸಮಾಜ' ಹೊಂದಿರುವ ದಿವ್ಯ ನಿರ್ಲಕ್ಷ್ಯವನ್ನು; ಜಾತಿ ವ್ಯವಸ್ಥೆಯಲ್ಲಿ ಬರುತ್ತಿರುವ ರೂಪಾಂತರವನ್ನು; ದಲಿತ ಚಳುವಳಿ ಎದುರಿಸುತ್ತಿರುವ ವೈಚಾರಿಕ ಬಿಕ್ಕಟ್ಟನ್ನು; ದಲಿತರ ವಿಮೋಚನೆಗೆ ಇರುವ ಮಾರ್ಗವನ್ನು ಒಟ್ಟೊಟ್ಟಿಗೆ ತೆರೆದಿಡುತ್ತದೆ.

ಈ ಪುಸ್ತಕದ ಉದ್ದೇಶವನ್ನು ತೇಲ್‌ತುಂಬ್ಡೆಯವರು ತಮ್ಮ ಮಾತುಗಳಲ್ಲೇ ಹೀಗೆ ಹೇಳುತ್ತಾರೆ– "ನಾವು ಖೈರ್ಲಾಂಜಿಯನ್ನು ಒಂದು ದುರದೃಷ್ಟಕರ ಘಟನೆಯೆಂದೋ, ಒಂದು ಅಪವಾದವೆಂದೋ ಅಥವ ಯಾವುದೋ ವಿಳಾಸವಿಲ್ಲದ ಕೋರ್ಟೊಂದರಲ್ಲಿ ಕೇಳುವವರಿಲ್ಲದ ಪ್ರಕರಣವಾಗಿಯೋ ಮರೆತುಹೋಗಲು ಬಿಡಬಾರದು. ಈ ದೇಶದ ಜಾತಿ ವೃಕ್ಷವು ಎಂಥ ವಿಚಿತ್ರ ಹಣ್ಣುಗಳನ್ನು ಬಿಟ್ಟಿದೆಯೆಂದು ಅರ್ಥಮಾಡಿಕೊಳ್ಳುವ ಅಗತ್ಯ ಪ್ರಪಂಚಕ್ಕಿದೆ. ಈ ಜಾತಿ ವೃಕ್ಷದ ಬೇರಿನಲ್ಲೂ ರಕ್ತವಿದೆ, ಎಲೆಗಳಲ್ಲೂ ರಕ್ತವಿದೆ. ಈ ಪುಸ್ತಕವು ಇದ್ದಕ್ಕಿದ್ದಂತೆ ಹಬ್ಬುತ್ತಿರುವ ಸುಡುತ್ತಿರುವ ಮಾಂಸದ ವಾಸನೆಯನ್ನು ಜಗತ್ತಿಗೆ ಪರಿಚಯಿಸುತ್ತದೆ. ಈ ಪುಸ್ತಕವು ಜಾತಿ ಬೀಜವು ಹುಟ್ಟಿಹಾಕಿರುವ ವಿಚಿತ್ರ ಹಾಗೂ ವಿಷಪೂರಿತ ಬೆಳೆಯ ಮಧ್ಯೆ ನಿಮ್ಮನ್ನು ಕರೆದೊಯ್ಯುತ್ತದೆ."

ಈ ಪುಸ್ತಕದಲ್ಲಿ ಏನೆಲ್ಲಾ ಚರ್ಚಿಸಲಾಗಿದೆ ಎಂಬುದನ್ನೂ ಸಹ ತೇಲ್‌ತುಂಬ್ಡೆಯವರೆ ಚೆನ್ನಾಗಿ ಸಾರಸಂಗ್ರಹಿಸಿದ್ದಾರೆ: "ಈ ಪುಸ್ತಕವು– ಆ ಭಯಾನಕ ಘಟನೆ, ಘಟನೆಯ ಹಿನ್ನೆಲೆ, ಇದರ ವಿರುದ್ಧ ದಲಿತರ ಸಿಟ್ಟು ಮತ್ತು ಪ್ರತಿರೋಧ ಮತ್ತು ಈ ಪ್ರತಿರೋಧವನ್ನು ಸರ್ಕಾರ ಬರ್ಬರವಾಗಿ ದಮನ ಮಾಡಿದ ರೀತಿಯನ್ನು ದಾಖಲಿಸುತ್ತದೆ. ಸರ್ಕಾರ ಮತ್ತು ದೊಡ್ಡ ಉದ್ಯಮಿಗಳ ವಿರುದ್ಧ ಹೋರಾಟ ಮಾಡುವ ಸಾಮಾನ್ಯ ಜನರಿಗೆ 'ನಕ್ಸಲ್' ಎನ್ನುವ ಹಣೆಪಟ್ಟಿ ಹಚ್ಚಿ ಹೇಗೆ ಸದೆ ಬಡಿಯುತ್ತಾರೆ ಎಂಬುದನ್ನು ವಿವರಿಸುತ್ತದೆ. ಅಲ್ಲದೆ ದಲಿತರ ಮೇಲಿನ ದೌರ್ಜನ್ಯಗಳನ್ನು ವರದಿ ಮಾಡುವಾಗ ಸುದ್ದಿ ಮಾಧ್ಯಮಗಳು ತೋರುವ ಪೂರ್ವಗ್ರಹಗಳನ್ನು ವಿಶ್ಲೇಷಣೆಗೊಳಪಡಿಸುತ್ತದೆ. ಒಂದು ಜಡ್ಡುಗಟ್ಟಿದ ವ್ಯವಸ್ಥೆ ಮತ್ತು ಸಮಾಜ ಇಂಥ ಘಟನೆಗಳ ಬಗ್ಗೆ ತೋರುವ ನಿರ್ಲಕ್ಷದ ಹಿನ್ನೆಲೆಯಲ್ಲಿ ದಲಿತರ ಬವಣೆಯನ್ನು ನಿವಾರಿಸಲೆಂದೇ ರೂಪುಗೊಂಡಿರುವ ಸಂವಿಧಾನಾತ್ಮಕ ಕ್ರಮಗಳಿಗೆ ಒದಗುವ ಮಿತಿಗಳೇನೆಂದು ಪರಾಮರ್ಶೆ ಮಾಡುತ್ತದೆ. ದಲಿತರ ಮೇಲಿನ ದೌರ್ಜನ್ಯಗಳ ವಿಧಾನಗಳಲ್ಲಿ ಆಗುತ್ತಿರುವ ಮಾರ್ಪಾಡುಗಳು ಮತ್ತದರ ರಾಜಕೀಯ ಆರ್ಥಿಕತೆಯನ್ನು ಪರಿಶೀಲಿಸುತ್ತದೆ. 'ಆರ್ಥಿಕ ಉದಾರೀಕರಣ ಮತ್ತು ಜಾಗತೀಕರಣ ದಲಿತರ ಏಳಿಗೆಗೆ ಸಹಾಯಕ ಹಾಗೂ ನವ ಉದಾರವಾದವು ಸಮಾಜದ ಮೇಲಿರುವ ಜಾತಿ ಹಿಡಿತವನ್ನು ಸಡಿಲಗೊಳಿಸುತ್ತದೆ' ಎಂಬ ನಂಬಿಕೆಯನ್ನು ಮತ್ತು ಜಾತಿ ವ್ಯವಸ್ಥೆಯ ಮುಂದುವರಿಕೆಯ ಬಗೆಗೆ ರೂಢಿಯಲ್ಲಿರುವ ಇಂಥ ಇನ್ನೂ ಹಲವು ಬಗೆಯ ಮಿಥ್ಯೆಗಳನ್ನು ಖೈರ್ಲಾಂಜಿಯಲ್ಲಿ ನಡೆದ ಈ ಭೀಕರ ಅತ್ಯಾಚಾರ ಹೇಗೆ ನುಚ್ಚುನೂರು ಮಾಡಿದೆ ಎಂಬುದನ್ನೂ ಸಹ ಓದುಗರ ಗಮನಕ್ಕೆ ತರಲು ಪ್ರಯತ್ನಿಸುತ್ತದೆ."

> **ಅಂಬೇಡ್ಕರ್ ಮತ್ತು ದಲಿತರು ನಡೆಸಿದ ಹೋರಾಟಗಳಿಂದಾಗಿ ದಲಿತರ ರಕ್ಷಣೆಗೆಂದು, ಅಭಿವೃದ್ಧಿಗೆಂದು ಸಂವಿಧಾನದಲ್ಲಿ, ಕಾನೂನಿನಲ್ಲಿ ಹಲವಾರು ಕಾಯ್ದೆಗಳನ್ನು ರಚಿಸಿದ್ದರೂ ಅವು ಆಚರಣೆಯಾಗದೆ ಹೇಗೆ "ಎಲ್ಲವೂ ಕಚ್ಚಲಾಗದ ಹಲ್ಲುಗಳೆ" ಎಂಬುದನ್ನು ಕೃತಿ ರಾಚುವ ಅಂಕಿಸಂಕಿಗಳೊಂದಿಗೆ ರುಜುವಾತು ಪಡಿಸುತ್ತದೆ.**

ವಿಚಾರಪೂರ್ಣ ಪ್ರಸ್ತಾವನೆಯ ನಂತರ ಖೈರ್ಲಾಂಜಿಯಲ್ಲಿ ನಡೆದ ಜಾತಿ ದೌರ್ಜನ್ಯವನ್ನು ಯಾವ ರಂಜಕತೆಯೂ ಇಲ್ಲದೆ ನಡೆದದ್ದನ್ನು ನಡೆದಿರುವ ರೀತಿಯಲ್ಲಿಯೇ ದಾಖಲಿಸುವ ಮೂಲಕ ಕೃತಿ ಬಿಚ್ಚಿಕೊಳ್ಳಲು ಪ್ರಾರಂಭಿಸುತ್ತದೆ. ನಾಗಪುರದಿಂದ 125 ಕಿ.ಮೀ. ದೂರದಲ್ಲಿರುವ ಖೈರ್ಲಾಂಜಿ ಗ್ರಾಮಕ್ಕೆ 1989ರಲ್ಲಿ ಮಹರ್ [ಮಾದಿಗ] ಜಾತಿಗೆ ಸೇರಿದ ಭೋತ್‌ಮಾಂಗೆ ಕುಟುಂಬ ಬಂದು ನೆಲೆಸುತ್ತದೆ. ಕುಟುಂಬದಲ್ಲಿ ಭೈಯ್ಯಲಾಲ್ ಭೋತ್‌ಮಾಂಗೆ[55] ಮತ್ತು ಹೆಂಡತಿ ಸುರೇಖ ಭೋತ್‌ಮಾಂಗೆ [40], ಇಬ್ಬರು ಗಂಡು ಮಕ್ಕಳು ಸುಧೀರ್ ಭೋತ್‌ಮಾಂಗೆ [21], ರೋಷನ್‌ಭೋತ್‌ಮಾಂಗೆ [19] ಮತ್ತು ಮಗಳು ಪ್ರಿಯಾಂಕ ಭೋತ್‌ಮಾಂಗೆ [17] ಇರುತ್ತಾರೆ. ಅಂಬೇಡ್ಕರ್‌ವಾದಿಯೂ, ಶ್ರಮಜೀವಿಯೂ ಆಗಿದ್ದ ಕುಟುಂಬ ವ್ಯವಸಾಯದಲ್ಲೂ ಮತ್ತೂ ಶಿಕ್ಷಣದಲ್ಲೂ ಉನ್ನತಿ ಸಾಧಿಸತೊಡಗುತ್ತದೆ.

ದಲಿತ ಕುಟುಂಬವೊಂದರ ಏಳ್ಗೆಯನ್ನು ಸಹಿಸದ ಮೇಲ್ಜಾತಿ ಮನಸ್ಸುಗಳು ಒಂದಲ್ಲಾ ಒಂದು ನೆಪ ತೆಗೆದು ವ್ಯಾಜ್ಯ ಪ್ರಾರಂಭಿಸುತ್ತವೆ. ಇದನ್ನು ಕುಟುಂಬ ದಿಟ್ಟವಾಗಿಯೇ ಪ್ರತಿರೋಧಿಸುತ್ತದೆ. ಕೋರ್ಟಿನ ಮೊರೆಹೊಕ್ಕು ತನ್ನ ಭೂಮಿಯನ್ನು ರಕ್ಷಿಸಿಕೊಳ್ಳುತ್ತದೆ, ಕುಹುಕ ಮಾತುಗಳಿಗೆ ಸೊಪ್ಪು ಹಾಕದೆ ಮಕ್ಕಳನ್ನು ಓದಿಸ ತೊಡಗುತ್ತದೆ. ಆದರೂ ಸುಮ್ಮನಿರಲು ಸಿದ್ಧವಿಲ್ಲದ ಮೇಲ್ಜಾತಿ ಜನರು ಭೂತ್‌ಮಾಂಗೆ ಕುಟುಂಬಕ್ಕೆ ಬೆಂಬಲ ವಾಗಿದ್ದ ಸಿದ್ಧಾರ್ಥ್ ಗಜ್‌ಭಿಯೆಯವರಿಗೆ ಸುರೇಖ ಜೊತೆ ಸಂಬಂಧವಿದೆಯೆಂದು ಆರೋಪಿಸಿ ಸಿದ್ಧಾರ್ಥ್ ಮೇಲೆ ದೈಹಿಕ ಧಾಳಿ ಮಾಡುತ್ತಾರೆ. ಈ ಘಟನೆಗೆ ಸಾಕ್ಷಿಯಾಗಿದ್ದ ಸುರೇಖ ಮತ್ತು ಪ್ರಿಯಾಂಕ ಅಪರಾಧಿಗಳನ್ನು ಗುರುತಿಸುವುದರಿಂದ ಅಪರಾಧಿಗಳ ಬಂಧನದ ನಾಟಕ ನಡೆಯುತ್ತದೆ. ಹಣ ಮತ್ತು ಪ್ರಭಾವದ ಬಲದೊಂದಿಗೆ ಕೂಡಲೇ ಜಾಮೀನು ಪಡೆದು ಅಪರಾಧಿಗಳೆಲ್ಲಾ ವಿಜಯೋತ್ಸಾಹದಿಂದ ಹಿಂದುರುಗಿದರೂ ಈ ಅವಮಾನವನ್ನು ಸಹಿಸಲು ಸಿದ್ಧವಿಲ್ಲದ ಮೇಲ್ಜಾತಿ ಕುಟುಂಬಗಳೆಲ್ಲಾ ಸಭೆ ಸೇರಿ ಭೋತ್‌ಮಾಂಗೆ ಕುಟುಂಬವನ್ನು ಶಿಕ್ಷಿಸಲು ನಿರ್ಧರಿಸುತ್ತಾರೆ. ಗಂಡಸರು ಮತ್ತು ಹೆಂಗಸರನ್ನೊಳಗೊಂಡ 60–70 ಜನರಿದ್ದ ಗುಂಪು ಭೋತ್‌ಮಾಂಗೆ ಕುಟುಂಬದ ಮೇಲೆ ದಾಳಿ ಮಾಡುತ್ತದೆ.

"ಗುಡಿಸಲಿನೊಳಕ್ಕೆ ನುಗ್ಗಿದ ಗುಂಪಿನ ಹೆಂಗಸರು

ಮೊದಲು ಸುರೇಖ ಹಾಗೂ ಪ್ರಿಯಾಂಕಳ ತಲೆಗೂದಲು ಹಿಡಿದು ಎಳೆದು ತಂದರು. ಸಿಕ್ಕಸಿಕ್ಕಲ್ಲಿ ಹೊಡೆದು ಬಟ್ಟೆಗಳನ್ನು ಕಳಚಿ ಬೆತ್ತಲೆ ಮಾಡಿದರು. ಪ್ರಿಯಾಂಕಳನ್ನು ದನದ ಕೊಟ್ಟಿಗೆಗೆ ಎಳೆದುಕೊಂಡು ಹೋಗಿ ಒಬ್ಬರಾದ ಮೇಲೊಬ್ಬರಂತೆ ಅತ್ಯಾಚಾರವೆಸಗಿದರು. ಸುರೇಖಾಳಿಗೂ ಸಹ ಇದೇ ಗತಿಯಾಯಿತು. ಉಳಿದ ಇಬ್ಬರು ಹುಡುಗರಲ್ಲಿ ಸುಧೀರನಿಗೆ ಕಣ್ಣು ಕಾಣಿಸದಿದ್ದರೂ ಕಿಂಚಿತ್ತೂ ದಯೆ ತೋರದೆ ಅವನಿಗೂ ಮತ್ತು ರೋಷನ್ನನಿಗೂ ಯಾವುದೇ ಮುಲಾಜಿಲ್ಲದೇ ಹೊಡೆದು ಅವರ ತಾಯಿ ಮತ್ತು ಸಹೋದರಿಯರ ಮೇಲೆ ಅತ್ಯಾಚಾರವೆಸಗುವಂತೆ ಬಲವಂತ ಮಾಡಿದರೆಂದು ಹೇಳಲಾಗುತ್ತಿದೆ. ಅವರ ಶಿಶ್ನಗಳನ್ನು ಹಿಸುಕಿ ಹಾಕಿ ಕತ್ತರಿಸಿದರು. ಎಲ್ಲಾ ನಾಲ್ಕೂ ಮಂದಿಯೂ ಅಸಹಾಯಕರಾಗಿ ಬಿದ್ದುಕೊಂಡಿದ್ದರಿಂದ ಯಾರ್ಯಾರಿಗೆ ಏನೇನು ಮಾಡಬೇಕೆನ್ನಿಸಿತೋ ಅವೆಲ್ಲವನ್ನೂ ಅವರ ಮೇಲೆ ಮಾಡಿ ತೀರಿಸಿಕೊಂಡರು.

ಪ್ರಿಯಾಂಕ ಮತ್ತು ಸುರೇಖ ಇಬ್ಬರು ಸತ್ತು ಹೋದ ಎಷ್ಟೋ ಹೊತ್ತಿನ ನಂತರವೂ ಕೂಡಾ ಅವರ ಮೇಲೆ ಅತ್ಯಾಚಾರವಾಗುತ್ತಲೇ ಇತ್ತು ಎಂದು ಹೇಳಲಾಗುತ್ತದೆ. ತಾಲ್ಲೂಕು ಬಿಜೆಪಿ ಅಧ್ಯಕ್ಷನಾಗಿದ್ದ ಭಾಸ್ಕರ್ ಕಡವ ಪ್ರಿಯಾಂಕಳ ಶವದ ಮೇಲೆ ಅತ್ಯಾಚಾರ ಮಾಡಿದನೆಂದು ಹೇಳಲಾಗುತ್ತಿದೆ. ಇಂತಹ ಭೀಭತ್ಸವು ಸುಮಾರು ಎರಡು ಗಂಟೆಗಳ ಕಾಲ ನಿರಂತರವಾಗಿ ನಡೆದಿತ್ತು. ಅಂತಿಮವಾಗಿ ಇವೆಲ್ಲವೂ ಕೊನೆಗೊಂಡ ನಂತರ ಏನೂ ನಡೆದೇ ಇಲ್ಲವೇನೋ ಎಂಬಂತೆ ಎಲ್ಲವೂ ಮಾಮೂಲಿನ ಪರಿಸ್ಥಿತಿಗೆ ಹಿಂತಿರುಗಿತು. ಕೆಲವು ಜನರು ಎತ್ತಿನ ಗಾಡಿಯನ್ನು ತಂದು ನಾಲ್ಕು ಜನರ ಶವಗಳನ್ನು ಗಾಡಿಯಲ್ಲಿ ಹೇರಿಕೊಂಡು ಊರ ಹೊರಗೆ 4 ಕಿ.ಮೀ ನಷ್ಟು ದೂರ ತೆಗೆದುಕೊಂಡು ಹೋಗಿ ಕಾಲುವೆಗೆ ಎಸೆದರು".

ಇಂಥ ರೌರವ ದುಷ್ಕೃತ್ಯವನ್ನು ಮುಚ್ಚಿಹಾಕಲು ಪೋಲೀಸರು ಮತ್ತು ಸರ್ಕಾರ ಅತ್ಯಾಂತ ಲಜ್ಜೆಗೇಡಿಯಾಗಿ ವರ್ತಿಸುತ್ತವೆ. ದೂರು ನೀಡಲು ಬಂದ ಭಯ್ಯಾಲಾಲ್ ಭೋತ್‌ಮಾಂಗೆ ಮತ್ತು ಸಂಬಂಧಿಕರನ್ನೆ ಅಪರಾಧಿಗಳಂತೆ ನಡೆಸಿಕೊಳ್ಳಲಾಗುತ್ತದೆ. ಕಾನೂನು ಕ್ರಮಗಳನ್ನೆಲ್ಲಾ ಉಲ್ಲಂಘನೆ ಮಾಡಿ ಗಡಿಬಿಡಿಯಲ್ಲಿ ಪೋಸ್ಟ್ ಮಾರ್ಟಂ ಶಾಸ್ತ್ರ ಮುಗಿಸಿ ಹೆಣಗಳನ್ನು ಹೂಳಿಸಲಾಗುತ್ತದೆ. ಘಟನೆ ನಡೆದು ಒಂದು ತಿಂಗಳಾದರೂ ಅದು ಹೊರಜಗತ್ತಿನ ಗಮನಕ್ಕೆ ಬರದಂತೆ ಮುಚ್ಚಿಡಲಾಗುತ್ತದೆ. ಸ್ಥಳೀಯ ಪತ್ರಿಕೆಗಳು ಈ ಪ್ರಕರಣವನ್ನು "ಮಹಿಳೆಯೊಬ್ಬಳು 'ಹೊರಗಿನ ಪುರುಷನೊಂದಿಗೆ' ಅನೈತಿಕ ಸಂಬಂಧ ಇಟ್ಟುಕೊಂಡಿದ್ದ ಕಾರಣ ನೈತಿಕ ಆಕ್ರೋಶದಿಂದ ಕ್ರುದ್ಧರಾದ ಗ್ರಾಮಸ್ಥರು ಮಾಡಿದ ಕೊಲೆಯ ಪ್ರಕರಣವೆಂದೇ ಮಾಧ್ಯಮಗಳು ಪ್ರಚಾರ ಮಾಡುತ್ತವೆ". ಘಟನೆಯ ಜಾಡು ಹಿಡಿಯಬಹುದಾಗಿದ್ದ ದಲಿತ ನಾಯಕರುಗಳು ದೌರ್ಜನ್ಯವನ್ನು ಬಯಲಿಗೆಳೆದು ಪ್ರತಿರೋಧಿಸುವತ್ತ ಯಾವ ಉತ್ಸುಕತೆಯನ್ನೂ ತೋರುವುದಿಲ್ಲ. ಕೆಲವು ಸತ್ಯಶೋಧಕ ಸಮಿತಿಗಳ ಪ್ರಾಮಾಣಿಕ ಪ್ರಯತ್ನದಿಂದಾಗಿಯೇ ಸುಮಾರು ಒಂದು ತಿಂಗಳ ನಂತರ ಈ ಘಟನೆ ಹೊರ ಜಗತ್ತಿನ ಗಮನ ಸೆಳೆಯಲು ಪ್ರಾರಂಭಿಸುತ್ತದೆ.

"ಈ ಎಲ್ಲಾ ಸತ್ಯಶೋಧನಾ ಸಮಿತಿಗಳು ಆಡಳಿತ ವರ್ಗ ಮತ್ತು ರಾಜಕಾರಣಿಗಳು ಶಾಮೀಲಾಗಿ ಖೈರ್ಲಾಂಜಿ ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸುತ್ತಿದ್ದಾರೆಂದು ಬಹಿರಂಗಪಡಿಸಿದ ಮಾಹಿತಿಗಳು ದಲಿತರನ್ನು ರೊಚ್ಚಿಗೆಬ್ಬಿಸಿತು. ಇಂಥ ಒಂದು ದೌರ್ಜನ್ಯವು, ಅಂಬೇಡ್ಕರ್ ಪೂರ್ವಕಾಲದಿಂದಲೂ ಉಜ್ವಲ ದಲಿತ ಚಳವಳಿಯ ಇತಿಹಾಸ ಹೊಂದಿರುವ ನಾಗಪುರ-ಭಂಡಾರ ಪ್ರದೇಶಗಳಲ್ಲಿ ನಡೆದಿದೆ ಎಂಬುದು ಅವರನ್ನು ಮತ್ತಷ್ಟು ಉದ್ರಿಕ್ತರನ್ನಾಗಿಸಿತು. ಮತಾಂತರದ ನಂತರದ ಅವಧಿಯಲ್ಲಿ ಮೊದಲಿನಂತಿರದ ದಲಿತರ ಆಕ್ರೋಶದ ಬಗ್ಗೆ ಈ ವಲಯಕ್ಕೆ ಚೆನ್ನಾಗಿಯೇ ಪರಿಚಯವಿದೆ.

ಹೀಗಾಗಿ ಇಲ್ಲಿನ ಕಟ್ಟರ್ ಜಾತಿವಾದಿಗಳು ಸಹ ಅತ್ಯಂತ ದುರ್ಗಮ ಹಳ್ಳಿಗಳಲ್ಲೂ ದಲಿತರಿಗೆ ಅವಮಾನ ಮತ್ತು ಹಾನಿ ಮಾಡಬೇಕೆಂದರೆ ಎರಡೆರಡು ಬಾರಿ ಯೋಚಿಸುವ ಪರಿಸ್ಥಿತಿ ಇತ್ತು. ಅತ್ಯಂತ ಆತ್ಮಾಭಿಮಾನವನ್ನು ಹೊಂದಿದ್ದ ದಲಿತ ಯುವಕರೆದುರು ಅವರು ದನಿ ಎತ್ತುತ್ತಿರಲಿಲ್ಲ. ಆದರೆ ದಶಕಗಳು ಉರುಳಿದಂತೆ ದಲಿತ ಚಳವಳಿಯು ವಿಘಟನೆಯನ್ನು ಕಾಣುತ್ತಿದೆ. ಮತ್ತು ದಲಿತರ ಬಗ್ಗೆ ಸವರ್ಣೀಯ ಹಿಂದೂಗಳಿಗೆ ಇದ್ದ ಭಯವೂ ಮಾಯವಾಗುತ್ತಿದೆ. ಖೈರ್ಲಾಂಜಿಯು ಈ ಬೆಳವಣಿಗೆಗೆ ನಿರ್ಣಾಯಕವಾದ ಸಾಕ್ಷಿಯನ್ನು ಒದಗಿಸುತ್ತದೆ. ಇಂಥ ಇನ್ನೂ ಹಲವು ಸಂಭವಿಸಲಿವೆ ಎಂಬುದರ ಬಗ್ಗೆಯೂ ಅದು ಎಚ್ಚರಿಕೆ ನೀಡುತ್ತಿದೆ. ಖೈರ್ಲಾಂಜಿಯು ದಲಿತ ನಾಯಕರ ದಿವಾಳಿಕೋರತನವನ್ನೂ ಎತ್ತಿ ತೋರಿಸಿದೆ. ಮೊದಲು ಅವರು ಇದರ ಬಗ್ಗೆ ತಲೆಯನ್ನೇ ಕೆಡಿಸಿಕೊಂಡಿರಲಿಲ್ಲ. ಆ ನಂತರವೂ ಅವರು ಅದರ ಬಗ್ಗೆ ನಿಷ್ಕ್ರಿಯರಾಗಿಯೇ ಉಳಿದರು. ಇದರಿಂದ ಸಕಾರಣವಾಗಿಯೇ ಸಿಟ್ಟಿಗೆದ್ದ ಸಾಮಾನ್ಯ ದಲಿತರು ಮೊದಲಿಗೆ ಭಂಡಾರ, ನಾಗಪುರದಂಥ ವಿದರ್ಭದ ಪಟ್ಟಣಗಳಲ್ಲಿ ಮತ್ತು ಆ ನಂತರ ಇಡೀ ಮಹಾರಾಷ್ಟ್ರದ ಬೀದಿಬೀದಿಗಳಲ್ಲಿ ತೀವ್ರ ಪ್ರತಿಭಟನೆಗಳನ್ನೂ, ಹೋರಾಟಗಳನ್ನೂ ಪ್ರಾರಂಭಿಸಿದರು."

> "ಜಾತಿ ದೌರ್ಜನ್ಯಗಳ ರಾಜಕೀಯ ಆರ್ಥಿಕತೆ" ಎಂಬ ಅರ್ಥಪೂರ್ಣ ಅಧ್ಯಾಯದಲ್ಲಿ ದಲಿತರ ಮೇಲೆ ಹೆಚ್ಚುತ್ತಿರುವ ಜಾತಿ ದೌರ್ಜನ್ಯಗಳಿಗೆ ಇರುವ ಆರ್ಥಿಕ ಮತ್ತು ರಾಜಕೀಯ ಬೇರುಗಳ ಬಗ್ಗೆ ವಿಶ್ಲೇಷಿಸಲಾಗಿದೆ. "ಭಾರತೀಯ ಸಮಾಜವು ಅಹಿಂಸೆಯನ್ನೇ ಪರಮ ಧರ್ಮವಾಗಿ ಸ್ವೀಕರಿಸಿದೆಯೆಂಬ ಸಾಮಾನ್ಯ ಗ್ರಹಿಕೆ ಗಣನೀಯವಾಗಿ ಪ್ರಚಾರ ಪಡೆದಿದ್ದರೂ, ಹಿಂಸೆಯು ಇಲ್ಲಿನ ಸಮಾಜದ ಆಂತರಿಕ ಲಕ್ಷಣವೇ ಆಗಿದೆಯೆಂಬುದು ವಾಸ್ತವ... ಹಿಂದೂ ದೇವರುಗಳು ಮಾಡಿರುವ ಘೋರ ಹಿಂಸೆಗಳನ್ನು ಬೇರಿನ್ಯಾವ ಧರ್ಮಗಳ ದೇವರುಗಳು ಮಾಡಿರಲಿಕ್ಕಿಲ. ಆದರೆ ಅದು ಸಜ್ಜನರಿಗೆ ಅಭಯ ನೀಡುವ ಸಲುವಾಗಿ ದುಷ್ಟಶಕ್ತಿಗಳ ವಿರುದ್ಧ ನಡೆದಿರುವ ಹಿಂಸೆಯೆಂದು ಹಿಂದೂಗಳು ಅದನ್ನು ಸಮರ್ಥಿಸಿಕೊಳ್ಳುತ್ತಾರೆ. ಆದರೆ ಖೈರ್ಲಾಂಜಿಯಲ್ಲಿ ನಾವು ನೋಡಿದಂತೆ ಈ ಸದ್ಗುಣ ಹಾಗೂ ದುರ್ಗುಣಗಳ ಅರ್ಥೈಸುವಿಕೆಯು, ಜಾತಿ ಸಿದ್ಧಾಂತವನ್ನೇ ಆಧರಿಸಿರುತ್ತದೆ. ಜಾತಿ ಶ್ರೇಣೀಕರಣವನ್ನು ಒಪ್ಪಿಕೊಳ್ಳುವುದು ಸದ್ಗುಣ.

ಸ್ಫೋಟಗೊಂಡ ದಲಿತ ಸಮುದಾಯದ ಸಹಜ ಆಕ್ರೋಶಕ್ಕೆ ಪ್ರಭುತ್ವ ಪ್ರತಿಕ್ರಿಯಿಸಿದ ರೀತಿಯನ್ನು ಪುಸ್ತಕ ತೆರೆದಿಡುತ್ತದೆ. ರಾಜ್ಯದ ಹಲವಾರು ಕಡೆ ದಲಿತರನ್ನು ದರೋಡೆಕೋರರಂತೆ ನಡೆಸಿಕೊಂಡ ಪ್ರಭುತ್ವವು ಹಲವು ಕಡೆ ಗೋಲಿಬಾರ್ ನಡೆಸಿ ದಲಿತ ಯುವಕರನ್ನು ಬಲಿತೆಗೆದುಕೊಂಡಿದ್ದನ್ನು, ದಲಿತರ ಕಾಲೋನಿಗಳಿಗೆ ನುಗ್ಗಿ ಸಿಕ್ಕಸಿಕ್ಕವರನ್ನು ಹಿಡಿದು ಥಳಿಸುತ್ತಾ ನೂರಾರು ಜನರನ್ನು ಬಂಧಿಸಿ ಚಿತ್ರಹಿಂಸೆ ನೀಡಿದ್ದನ್ನು, ಪೋಲೀಸರ ಈ ಅಮಾನವೀಯ ದೌರ್ಜನ್ಯಕ್ಕೆ ಸಮರ್ಥನೆ ಪಡೆದುಕೊಳ್ಳಲು ಈ ಚಳುವಳಿಯ ಹಿಂದೆ ನಕ್ಸಲೀಯರಿದ್ದಾರೆ ಎಂಬ ಹಸಿಸುಳ್ಳಿನ ಗುಮ್ಮವನ್ನು ಸೃಷ್ಟಿಸಿದ್ದನ್ನು ಕೃತಿ ಬಯಲಿಗೆಳೆಯುತ್ತದೆ. "ನಕ್ಸಲ್ ಚಳವಳಿಯ ವಿರುದ್ಧ ಪ್ರಭುತ್ವಕ್ಕಿರುವ ಪ್ರತಿಪಾದಿತ ಶತ್ರುತ್ವ ಕಡೆಗೆ ದಲಿತ-ಆದಿವಾಸಿಗಳ ಮೇಲಿನ ಹಿಂಸೆಯಾಗಿ ಹರಳುಗಟ್ಟುತ್ತದೆ" ಎಂಬ ಕಟುವಾಸ್ತವವನ್ನು ಹಲವಾರು ಉದಾಹರಣೆಗಳೊಂದಿಗೆ ನಮ್ಮ ಮುಂದಿಡುತ್ತದೆ.

ಇಡೀ ವಿದ್ಯಮಾನಕ್ಕೆ ಮಾಧ್ಯಮ ಪ್ರತಿಸ್ಪಂದಿಸಿದ ರೀತಿಯನ್ನು ತೇಲ್‌ತುಂಬ್ಡೆ ತರಾಟೆಗೆ ತೆಗೆದುಕೊಳ್ಳುತ್ತಾರೆ. ಇದು ಕೇವಲ ಮಹಾರಾಷ್ಟ್ರ ಪತ್ರಿಕೆಗಳು ತೋರಿದ ಪೂರ್ವಗ್ರಹ ಮಾತ್ರವಾಗಿರದೆ ಇಡಿ ಭಾರತದ ಮಾಧ್ಯಮ ಹೇಗೆ ಮೇಲ್ಜಾತಿಯವರಿಂದ ಮತ್ತು ಮೇಲ್ಜಾತಿ ಮನಸ್ಸುಗಳಿಂದ ತುಂಬಿಹೋಗಿದೆ ಎಂಬುದನ್ನು ಸವಿವರವಾಗಿ ವಿವರಿಸುತ್ತಾರೆ. ಹಳ್ಳಿಗಳಲ್ಲಿ ದಲಿತರಿಗೆ ಬಹಿಷ್ಕಾರ ಹಾಕುವಂತೆ ಮಾಧ್ಯಮಗಳು ದಲಿತರಿಗೆ ಸಂಬಂಧಿಸಿದ ಸುದ್ದಿಗಳಿಗೆ ಹಾಕಿರುವ ಬಹಿಷ್ಕಾರವನ್ನು ಎತ್ತಿತೋರಿಸುತ್ತಾರೆ. "ಅಸ್ಪೃಶ್ಯರಿಗೆ ಪತ್ರಿಕೆಯಿಲ್ಲ' ಎಂದು ಮಾಧ್ಯಮಗಳ ಬಗೆಗೆ 1945ರಲ್ಲಿ ಅಂಬೇಡ್ಕರ್ ಹೇಳಿದ್ದೇ ಇವತ್ತಿನ ವಾಸ್ತವವಾಗಿಯೂ ಉಳಿದುಕೊಂಡಿರುವುದು ನಾಚಿಕೆಗೇಡಿನ ಸಂಗತಿಯಲ್ಲವೇ?" ಎಂದು ಪ್ರಶ್ನಿಸುತ್ತಾರೆ.

ಅಂಬೇಡ್ಕರ್ ಮತ್ತು ದಲಿತರು ನಡೆಸಿದ ಹೋರಾಟಗಳಿಂದಾಗಿ ದಲಿತರ ರಕ್ಷಣೆಗೆಂದು, ಅಭಿವೃದ್ಧಿಗೆಂದು ಸಂವಿಧಾನದಲ್ಲಿ, ಕಾನೂನಿನಲ್ಲಿ ಹಲವಾರು ಕಾಯ್ದೆಗಳನ್ನು ರಚಿಸಿದ್ದರೂ ಅವು ಆಚರಣೆಯಾಗದೆ ಹೇಗೆ "ಎಲ್ಲವೂ ಕಚ್ಚಲಾಗದ ಹಲ್ಲುಗಳೇ" ಎಂಬುದನ್ನು ಕೃತಿ ರಾಚುವ ಅಂಕಿಸಂಕಿಗಳೊಂದಿಗೆ ರುಜುವಾತು ಪಡಿಸುತ್ತದೆ. ದಲಿತರ ಮೇಲಿನ ಆಟ್ರಾಸಿಟಿಗಳನ್ನು ತಡೆಯಲು ಈವರೆಗೆ ತೆಗೆದುಕೊಂಡಿರುವ ಕ್ರಮಗಳಲ್ಲಿ ಅತ್ಯಂತ ಮುಖ್ಯವಾದ ಕ್ರಮವೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ [ಅಟ್ರಾಸಿಟಿ ನಿಯಂತ್ರಣ] ಕಾಯ್ದೆ, 1989, ಆಗಿದೆ. ಆದರೆ ಈ ಅತ್ಯಾಂತ ಪ್ರಬಲ ಕಾಯ್ದೆ [POA]ಯಡಿ 1998 ರವರೆಗೆ ಹಾಕಲಾಗಿದ್ದ 1,47,000 ಪ್ರಕರಣಗಳ ಪೈಕಿ 31,011 ಪ್ರಕರಣಗಳನ್ನು ಮಾತ್ರ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗಿತ್ತು. ಅವುಗಳಲ್ಲಿ 1,677 ಪ್ರಕರಣಗಳಲ್ಲಿ ಮಾತ್ರ ಆರೋಪಿಗಳಿಗೆ ಶಿಕ್ಷೆಯಾಗಿತ್ತು. ಅಂದರೆ ದಾಖಲಾದ ಆರೋಪಗಳಲ್ಲಿ ಶೇ. 1 ರಷ್ಟಕ್ಕೆ ಮಾತ್ರ ಶಿಕ್ಷೆಯಾಗಿದೆ. ಮಿಕ್ಕ ಶೇ.99 ರಷ್ಟು ಆರೋ

ಿಗಳು ಒಂದೋ ಆರೋಪದಿಂದ ಖುಲಾಸಾಗಿದ್ದಾರೆ ಅಥವ ಇನ್ನು, ಶಿಕ್ಷೆಯಾಗದೆ ನೆಮ್ಮದಿಯಿಂದಿದ್ದಾರೆ. ಪೋಲಿಸರ ಪಕ್ಷಪಾತತನ, ಅಸಮರ್ಪಕ ನ್ಯಾಯಾಂಗ ವ್ಯವಸ್ಥೆ-ಅಸಹಾಯಕ ದಲಿತರ ಪರಿಸ್ಥಿತಿ ಇದಕ್ಕೆ ಹೇಗೆ ಕಾರಣವೆಂಬುದನ್ನು ಕೃತಿ ವಿವರಿಸುತ್ತದೆ. "ದಲಿತರ ದಾಸ್ಯವನ್ನು ತೊಡೆದು ಹಾಕಲು, ಸಂವಿಧಾನದಲ್ಲಿ ಹೇಳಲಾಗಿರುವ ಮೂರು ಪ್ರಮುಖ ಅಂಶಗಳಾದ-ರಕ್ಷಣಾತ್ಮಕ ಕಾನೂನುಗಳು, ತಾರತಮ್ಯ ನಿವಾರಣೆ, ಅಭಿವೃದ್ಧಿ ನೀತಿಗಳು-'ಪ್ರಪಂಚದಲ್ಲೇ ಸರಿಸಾಟಿಯಿಲ್ಲದಂಥ' ನೀತಿಗಳಾಗಿವೆ. ಆದರೆ 'ಅವೆಲ್ಲವನ್ನು ರಾಜಕಾರಣಿಗಳ ನಿರ್ಲಕ್ಷ್ಯ, ಅಧಿಕಾರಶಾಹಿಯಲ್ಲಿರುವ ಪೂರ್ವಗ್ರಹ-ನಾಗರಿಕ ಸಮಾಜಕ್ಕಿರುವ ದ್ವೇಷದ ದೃಷ್ಟಿಕೋನಗಳು ನಿರರ್ಥಕಗೊಳಿಸಿದೆ." ಎಂದು ರಾಷ್ಟ್ರೀಯ ಮಾನವ ಹಕ್ಕು ಆಯೋಗದ ಸಕ್ಸೇನಾರವರ ಮಾತನ್ನು ಸಮಯೋಚಿತವಾಗಿ ಉಲ್ಲೇಖಿಸಲಾಗಿದೆ.

"ಜಾತಿ ದೌರ್ಜನ್ಯಗಳ ರಾಜಕೀಯ ಆರ್ಥಿಕತೆ" ಎಂಬ ಅರ್ಥಪೂರ್ಣ ಅಧ್ಯಾಯದಲ್ಲಿ ದಲಿತರ ಮೇಲೆ ಹೆಚ್ಚುತ್ತಿರುವ ಜಾತಿ ದೌರ್ಜನ್ಯಗಳಿಗೆ ಇರುವ ಆರ್ಥಿಕ ಮತ್ತು ರಾಜಕೀಯ ಬೇರುಗಳ ಬಗ್ಗೆ ವಿಶ್ಲೇಷಿಸಲಾಗಿದೆ. "ಭಾರತೀಯ ಸಮಾಜವು ಅಹಿಂಸೆಯನ್ನೇ ಪರಮ ಧರ್ಮವಾಗಿ ಸ್ವೀಕರಿಸಿದೆಯೆಂಬ ಸಾಮಾನ್ಯ ಗ್ರಹಿಕೆ ಗಣನೀಯವಾಗಿ ಪ್ರಚಾರ ಪಡೆದಿದ್ದರೂ, ಹಿಂಸೆಯು ಇಲ್ಲಿನ ಸಮಾಜದ ಆಂತರಿಕ ಲಕ್ಷಣವೇ ಆಗಿದೆಯೆಂಬುದು ವಾಸ್ತವ..... ಹಿಂದೂ ದೇವರುಗಳು ಮಾಡಿರುವ ಘೋರ ಹಿಂಸೆಗಳನ್ನು ಬೇರಿನ್ಯಾವ ಧರ್ಮಗಳ ದೇವರುಗಳು ಮಾಡಿರಲಿಕ್ಕಿಲ.

ಆದರೆ ಅದು ಸಜ್ಜನರಿಗೆ ಅಭಯ ನೀಡುವ ಸಲುವಾಗಿ ದುಷ್ಟಶಕ್ತಿಗಳ ವಿರುದ್ಧ ನಡೆದಿರುವ ಹಿಂಸೆಯೆಂದು ಹಿಂದೂಗಳು ಅದನ್ನು ಸಮರ್ಥಿಸಿಕೊಳ್ಳುತ್ತಾರೆ. ಆದರೆ ಖೈರ್ಲಾಂಜಿಯಲ್ಲಿ ನಾವು ನೋಡಿದಂತೆ ಈ ಸದ್ಗುಣ ಹಾಗೂ ದುರ್ಗುಣಗಳ ಅರ್ಥೈಸುವಿಕೆಯು, ಜಾತಿ ಸಿದ್ಧಾಂತವನ್ನೇ ಆಧರಿಸಿರುತ್ತದೆ. ಜಾತಿ ಶ್ರೇಣೀಕರಣವನ್ನು ಒಪ್ಪಿಕೊಳ್ಳುವುದು ಸದ್ಗುಣ. ಅದನ್ನು ವಿರೋಧಿಸು ವುದೇ ದುರ್ಗುಣ. ಕ್ರೂರ ಆಯುಧಗಳನ್ನು ಹಿಡಿದಿರುವ ದೇವರುಗಳು ಈ ಜಾತಿ ಚೌಕಟ್ಟನು ವಿರೋಧಿಸುವವರಿಗೆ ಬರ್ಬರ ಅಂತ್ಯ ಕಾಣುವ ಎಚ್ಚರಿಕೆಯನ್ನು ನೀಡುತ್ತಿರುತ್ತವೆ. ಖೈರ್ಲಾಂಜಿಯ ಹಿಂದೂ ಸವರ್ಣೀಯರು ಆಯುಧಗಳನ್ನು ಹಿಡಿದಿದ್ದೂ ಇದೇ ಕಾರಣಕ್ಕೆ."

ಜಾತಿ ಶೋಷಣೆಯ ರೀತಿಯನ್ನು ಸಂಪ್ರದಾಯಿಕ ರೀತಿಯಲ್ಲಿ ಅರ್ಥಮಾಡಿಕೊಳ್ಳದೆ ಇಂದು ಅದು ಅಭಿವ್ಯಕ್ತಿಗೊಳ್ಳುತ್ತಿರುವ ರೂಪದಲ್ಲಿ ಗ್ರಹಿಸಬೇಕೆಂದು ತೇಲ್‌ತುಂಬ್ಡೆಯವರು ಒತ್ತಿ ಹೇಳುತ್ತಾರೆ. ಅವರ ಪ್ರಕಾರ 1947ರ ನಂತರ ಅಧಿಕಾರಕ್ಕೆ ಬಂದ "ಬೂರ್ಜ್ವಾ-ಭೂಮಾಲೀಕ ವರ್ಗಗಳ ಕೂಟವು ಜಾರಿಕೆ ತಂದ ಅಭಿವೃದ್ಧಿ ಪಥವು ಗ್ರಾಮೀಣ ಭಾರತದಲ್ಲಿ ಒಂದೆಡೆ ಶೂದ್ರರ ಉನ್ನತಿಗೂ ಮತ್ತು ದಲಿತರ ಅವನತಿಗೂ ಕಾರಣವಾಯಿತು." ಎನ್ನುತ್ತಾರೆ. ಅದನ್ನು ಸಮರ್ಪಕ ವಿವರಗಳೊಂದಿಗೆ ಸಾಬೀತುಪಡಿಸುತ್ತಾರೆ. ಇದನ್ನಾಧರಿಸಿ "ಕಳೆದ ಅರವತ್ತು ವರ್ಷಗಳಲ್ಲಿ ಜಾತಿ ಸಮೀಕರಣಗಳು ಸಾಕಷ್ಟು ಬದಲಾವಣೆಗಳನ್ನು ಕಂಡಿವೆ. ಹಿಂದಿನ ಧರ್ಮವಿಧಿ ಆಧಾರಿತ ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಶೋಷಕರಾಗಿದ್ದು ಬಹು ಸಂಖ್ಯಾತ ದುಡಿಯುವ ಶೂದ್ರರು ಶೋಷಿತರಾಗಿದ್ದರು, ಅವರ್ಣೀಯರಾದ ದಲಿತರಿಗೆ ಸಮಾಜದಲ್ಲಿ ಯಾವ ಸ್ಥಾನವೂ

ಜಾತಿ ಶೋಷಣೆಯ ರೀತಿಯನ್ನು ಸಂಪ್ರದಾಯಿಕ ರೀತಿಯಲ್ಲಿ ಅರ್ಥ ಮಾಡಿಕೊಳ್ಳದೆ ಇಂದು ಅದು ಅಭಿವ್ಯಕ್ತಿಗೊಳ್ಳುತ್ತಿರುವ ರೂಪದಲ್ಲಿ ಗ್ರಹಿಸಬೇಕೆಂದು ತೇಲ್‌ತುಂಬ್ಡೆಯವರು ಒತ್ತಿ ಹೇಳುತ್ತಾರೆ. ಅವರ ಪ್ರಕಾರ 1947ರ ನಂತರ ಅಧಿಕಾರಕ್ಕೆ ಬಂದ "ಬೂರ್ಜ್ವಾ-ಭೂಮಾಲೀಕ ವರ್ಗಗಳ ಕೂಟವು ಜಾರಿಗೆ ತಂದ ಅಭಿವೃದ್ಧಿ ಪಥವು ಗ್ರಾಮೀಣ ಭಾರತದಲ್ಲಿ ಒಂದೆಡೆ ಶೂದ್ರರ ಉನ್ನತಿಗೂ ಮತ್ತು ದಲಿತರ ಅವನತಿಗೂ ಕಾರಣವಾಯಿತು" ಎನ್ನುತ್ತಾರೆ. ಅದನ್ನು ಸಮರ್ಪಕ ವಿವರಗಳೊಂದಿಗೆ ಸಾಬೀತುಪಡಿಸುತ್ತಾರೆ. ಇದನ್ನಾಧರಿಸಿ "ಕಳೆದ ಅರವತ್ತು ವರ್ಷಗಳಲ್ಲಿ ಜಾತಿ ಸಮೀಕರಣಗಳು ಸಾಕಷ್ಟು ಬದಲಾವಣೆಗಳನ್ನು ಕಂಡಿವೆ. ಹಿಂದಿನ ಧರ್ಮ ವಿಧಿ ಆಧಾರಿತ ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಶೋಷಕರಾಗಿದ್ದು ಬಹು ಸಂಖ್ಯಾತ ದುಡಿಯುವ ಶೂದ್ರರು ಅವರ್ಣೀಯರಾದ ದಲಿತರಿಗೆ ಸಮಾಜದಲ್ಲಿ ಯಾವ ಸ್ಥಾನವೂ ಇರಲಿಲ್ಲ.

ಇರಲಿಲ್ಲ. ಅವರ ಅಸ್ತಿತ್ವವನ್ನೇ ನಿರಾಕರಿಸುವುದೇ ಅವರ ದಮನದ ಅಭಿವ್ಯಕ್ತಿಯೂ ಆಗಿತ್ತು. ಮತ್ತದು ಅವರ ಬದುಕಿನ ಅವಿಭಾಜ್ಯ ಅಂಗವೂ ಆಗಿತ್ತು. ಅದಕ್ಕೆ ತದ್ವಿರುದ್ಧವಾಗಿ ಇಂದು ಶೂದ್ರ ಜಾತಿಗಳೇ [ಸರ್ಕಾರಿ ಭಾಷೆಯಲ್ಲಿ ಹೇಳುವುದಾದರೆ 'ಹಿಂದುಳಿದ' ವರ್ಗಗಳು ಮತು 'ಇತರ ಹಿಂದುಳಿದ'ವರ್ಗಗಳು-OBC] ಶೋಷಕರಾಗಿದ್ದರೆ, ದಲಿತರು ಶೋಷಿತರಾಗಿದ್ದಾರೆ.

ಪರಂಪರಾನುಗತವಾಗಿ ಪ್ರತಿಷ್ಟಿತರಾಗಿದ್ದವರು ಗ್ರಾಮೀಣ ಪ್ರದೇಶಗಳಿಂದ ನಗರ/ಪಟ್ಟಣಗಳಿಗೆ, ಜಾಗತೀಕರಣಗೊಳ್ಳುತಿರುವ ಭಾರತದೆಡೆ ವಲಸೆ ಹೋಗಿದ್ದಾರೆ" ಎನ್ನುತ್ತಾರೆ. ಒಂದುವೇಳೆ ಹೆಚ್ಚುತ್ತಿರುವ ಜಾತಿ ಹಿಂಸಾಚಾರಗಳು ದಲಿತರ ಹೆಚ್ಚುತ್ತಿರುವ ಆಶೋತ್ತರಗಳ ಮತ್ತು ಸ್ಥಾಪಿತಗೊಂಡಿರುವ ಸಮಾಜೋ-ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಮೇಲಾಧಿಪತ್ಯದ ಸಂರಚನೆಗಳಿಗೇ ದಲಿತರು ಎಸೆದಿರುವ ಸವಾಲಿಗೆ ಸಂಕೇತವಾಗಿದ್ದರೆ, ಹಿಂಸೆಯೆಂಬುದು ಈ ಆಶೋತ್ತರಗಳಿಗೆ ಮೇಲ್ಜಾತಿಗಳು ತೋರುತ್ತಿರುವ ಪ್ರತಿರೋಧದ ಅಭಿವ್ಯಕ್ತಿಯೇ ಆಗಿದೆ." ಎನ್ನುತ್ತಾರೆ. ಶೂದ್ರ ಜಾತಿಗಳೆ ಇಂದು ದಲಿತರ ಮೇಲಿನ ದೌರ್ಜನ್ಯಗಳಿಗೆ ನೇರವಾಗಿ ಕಾರಣವಾಗಿರುವುದನ್ನು ವಿವರಿಸುವ ಭರದಲ್ಲಿ ಇಂದೂ ಸಹ ಪುರೋಹಿತ ಶಾಹಿ ವರ್ಗಗಳು ಮತ್ತು ಸಂಪ್ರದಾಯಿಕ ಮೇಲ್ಜಾತಿಗಳು ವಹಿಸುತ್ತಿರುವ ಪ್ರತಿಗಾಮಿ ಪಾತ್ರವನ್ನು ತೇಲ್‌ತುಂಬ್ಡೆಯವರು ಗೌಣಗೊಳಿಸಿ ಮಂಡಿಸಿದ್ದಾರೆ. ಆದರೂ ಅವರು ಗಮನಕ್ಕೆ ತರುತ್ತಿರುವಂತೆ ಇತ್ತೀಚಿನ ದಶಕಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಶೂದ್ರ ಜಾತಿಗಳೆ ದಲಿತರ ಉನ್ನತಿಗೆ ಅಡ್ಡಿಯಾಗಿ ನಿಂತಿರುವ, ದಲಿತರ ಮೇಲಿನ ಬಹುತೇಕ ದಾಳಿಗಳನ್ನು ಅವರೇ ನಡೆಸುತ್ತಿರುವುದನ್ನು ನಾವು ಗಂಭೀರವಾಗಿ ಪರಿಗಣನೆಗೆ ತೆಗೆದುಕೊಳ್ಳುವ ಅಗತ್ಯವಿದೆ.

ಕೊನೆಯದಾಗಿ "ಒಡೆದ ಮಿಥ್ಯೆಗಳು" ಎಂಬ ಅಧ್ಯಾಯದಲ್ಲಿ ಕಮ್ಯೂನಿಸ್ಟರು, ಪ್ರಗತಿಪರರು, ದಲಿತ ಮುಖಂಡರು/ಬುದ್ಧಿಜೀವಿಗಳು ಚಿಂತಿಸಬೇಕಾದ ಹಲವು ಮೌಲಿಕ ವಿಚಾರಗಳನ್ನು ಅವರು ಚರ್ಚೆಗೆ ತರುತ್ತಾರೆ. ಒಂದು ರೀತಿಯಲ್ಲಿ ಸೌಮ್ಯ ರೀತಿಯಲ್ಲೆ ಎಲ್ಲರನ್ನೂ ಅವರು ತರಾಟೆಗೆ ತೆಗೆದುಕೊಂಡಿದ್ದಾರೆ. ಅವರು ಮಂಡಿಸಿರುವ ವಿಚಾರಗಳೆಲ್ಲವನ್ನೂ ನಾವು ಒಪ್ಪದೇ ಹೋದರೂ ಅವೆಲ್ಲವೂ ಗಂಭೀರ ಚರ್ಚೆಗೆ ಗ್ರಾಸವಾಗಬೇಕಾದ ವಿಷಯಗಳೇ ಆಗಿವೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಅವುಗಳನ್ನು ಸಾರಾಂಶೀಕರಿಸಿ ಮಂಡಿಸುವುದಾದರೆ, -ಬಂಡವಾಳಶಾಹಿ ಬೆಳೆದರೆ ಊಳಿಗಮಾನ್ಯತೆಯ ಅಂಶವಾದ ಜಾತಿ ಬಲಹೀನಗೊಳ್ಳುತ್ತದೆಂದು ವಾದಿಸುತ್ತಿದ್ದ ಕಮ್ಯೂನಿಸ್ಟರ, ಜಾಗತೀಕರಣ ಜಾರಿಯಾದರೆ ದಲಿತರ ಉನ್ನತಿಯಾಗುತ್ತದೆ ಎಂದು ವಾದಿಸುತ್ತಿದ್ದ ದಲಿತ ಬುದ್ಧಿಜೀವಿಗಳ ಗ್ರಹಿಕೆ ತಪ್ಪಾಗಿದೆ ಎಂದು ತೇಲ್ತುಂಬ್ಡೆ ವಾದಿಸುತ್ತಾರೆ.

ಭಾರತದಲ್ಲಿನ "ಬಂಡವಾಳಶಾಹಿಯು ಊಳಿಗಮಾನ್ಯ ಪದ್ಧತಿಯ ವಿರುದ್ಧ ಸೆಣಸುವ ಬದಲಾಗಿ ಭಾರತದಲ್ಲಿನ ಜಮೀನ್ದಾರಿ ವ್ಯವಸ್ಥೆಯ ಜೊತೆ ಮತ್ತು ಅದರೊಂದಿಗೆ ಬೆಸೆದುಕೊಂಡಿರುವ ಸಂಸ್ಥೆಗಳೊಂದಿಗೆ ಮೈತ್ರಿ ಬೆಳೆಸಿಕೊಂಡಿತು. ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಜಾತಿ ಪದ್ಧತಿಯು ತನ್ನ ಅಸ್ತಿತ್ವವನ್ನು ಯಶಸ್ವಿಯಾಗಿ ಕಾಪಾಡಿಕೊಂಡಿದೆ. ಹೀಗಾಗಿ ಬಂಡವಾಳಶಾಹಿ ವ್ಯವಸ್ಥೆಯ ತೀವ್ರವಾದ ಮತ್ತು ವಿಸ್ತುತವಾದ ಯೋಜನೆಯೆಂದೇ ಪರಿಗಣಿಸಲಾಗಿರುವ ಜಾಗತೀಕರಣಕ್ಕೆ ಜಾತಿ ವಿರುದ್ಧ ವಿನಾಶಕಾರಿ ಪರಿಣಾಮ ಬೀರಬಲ್ಲ ಯಾವುದೇ ಅಂತರ್ಗತ ಅಂಶಗಳಿಲ್ಲ ಎಂಬುದನ್ನು ಇದು ಸಾಬೀತುಪಡಿಸಿದೆ." ಎನ್ನುತ್ತಾರೆ.

"ಜಾತಿ ದೌರ್ಜನ್ಯವು ಜಾತಿ ಪ್ರಜ್ಞೆಯ ಒಂದು ಸಾಂದ್ರೀಕ್ರುತ ಅಭಿವ್ಯಕ್ತಿ" ಎಂದು ಹೇಳುತ್ತಾ 80, 90 ಮತ್ತು ಈ ದಶಕದಲ್ಲಿ ದಲಿತರ ಮೇಲಿನ ಜಾತಿ ದೌರ್ಜನ್ಯಗಳು ಹೆಚ್ಚುತ್ತಾ ಹೋಗಿರುವುದನ್ನು ಅಂಕಿಸಂಕಿಗಳ ಮೂಲಕ ಸಮರ್ಥಿಸುತ್ತಾರೆ. ಅಲ್ಲದೆ "ಈ ಹಿಂದೆ ಕೆಲವೇ ವ್ಯಕ್ತಿಗಳು ಅಥವಾ ಒಂದು ಸಣ್ಣ ಗುಂಪು ರಹಸ್ಯವಾಗಿ ದೌರ್ಜನ್ಯಗಳನ್ನು ಎಸಗುತ್ತಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ದಲಿತರ ಮೇಲಿನ ದೌರ್ಜನ್ಯಗಳನ್ನು ಸಾಮೂಹಿಕವಾಗಿ ಹಾಡುಹಗಲಿನಲ್ಲಿ ನಡೆಸಲಾಗುತ್ತಿದೆ. ಈ ಬಗೆಯ ದೌರ್ಜನ್ಯಗಳನ್ನು ನಡೆಸುವಾಗ ಎಲ್ಲಾ ಮಿತಿಗಳ ಉಲ್ಲಂಘನೆಯಾಗುತ್ತದೆಯಲ್ಲದೆ ಒಂದು ಬಗೆಯ ಗೆಲುವಿನ ಮತ್ತು ಸಂಭ್ರಮಾಚರಣೆಯ ಮನೋಸ್ಥಿತಿಯಲ್ಲಿ ಅವನ್ನು ನಡೆಸಲಾಗುತ್ತಿದೆ" ಎಂದು ಈ ದಶಕದಲ್ಲೇ ನಡೆದಿರುವ ಹಲವಾರು ಮೃಗೀಯ ಘಟನೆಗಳನ್ನು ಉದಾಹರಿಸುತ್ತಾರೆ.

* ದಲಿತರ ಪ್ರಶ್ನೆ ಎಂದರೆ ಮೂಲಭೂತವಾಗಿ ಭೂಮಿ ಪ್ರಶ್ನೆ ಎಂದು ವಾದಿಸುವ ಒಣ ಕಮ್ಯೂನಿಸ್ಟರ ನಂಬಿಕೆಯ ದೋಶವನ್ನೂ ಎತ್ತಿ ತೋರಿಸುತ್ತಾರೆ. "ಗ್ರಾಮೀಣ ಆರ್ಥಿಕತೆಯಲ್ಲಿ ಭೂಮಿಯೇ ಪ್ರಧಾನ ಸಂಪ

ನ್ಮೂಲವಾಗಿರುವುದರಿಂದ ಸಹಜವಾಗಿ ಭೂ ವಿವಾದಗಳು ಸಂಘರ್ಷಗಳಿಗೆ ದಾರಿ ಮಾಡಿಕೊಡುತ್ತದೆ". ಇದು ದಲಿತರನ್ನು ಒಳಗೊಂಡಿರುವ ಭೂ ವಿವಾದಗಳಿಗೂ ಅನ್ವಯವಾಗುತ್ತದೆ.

"ಆದರೂ ಇಲ್ಲಿ ಕೇಳಲೇ ಬೇಕಾಗಿರುವ ಪ್ರಮುಖ ಪ್ರಶ್ನೆಯೇನೆಂದರೆ ಭೂ ತಗಾದೆಗಳು ದಲಿತೇತರರ ನಡುವೆಯೂ ಹುಟ್ಟಿಕೊಳ್ಳುತ್ತವೆ, ಆದರೆ ಅದೇ ಕಾರಣಕ್ಕಾಗಿ ಅವು ಎಂದಿಗೂ ದಲಿತರ ಮೇಲೆ ನಡೆಸುವಂತಹ ಭೀಕರ ದೌರ್ಜನ್ಯಗಳಿಗೆ ಎಡೆಮಾಡಿಕೊಡುವುದಿಲ್ಲವೇಕೆ? ಆರ್ಥಿಕ ಅಥವಾ ಭೂ ತಗಾದೆಗಳಂಥ ತೋರಿಕೆಗಾದರೂ ಜಾತಿ ಧರ್ಮಗಳ ಸೋಂಕಿಲ್ಲದ ಶುದ್ಧ ಸೆಕ್ಯುಲಾರ್ ವಿಷಯಗಳೇ ದಲಿತರ ಮೇಲೆ ವಿದ್ವೇಷಗಳು ಮಡುಗಟ್ಟುವಂತೆ ಮಾಡುತ್ತವೆ. ಅಂದರೆ ಒಂದು ತಗಾದೆಯನ್ನು ದೌರ್ಜನ್ಯವಾಗಿ ಪರಿವರ್ತನೆಯಾಗುವಂತೆ ಪ್ರಭಾವಿಸುವುದು ಜಾತಿ ಎಂಬ ಸೆಕ್ಯೂಲರ್ ಅಲ್ಲದ ಸಂಗತಿಯೇ!"... "ಹಾಗಾಗಿ ಭೂವ್ಯಾಜ್ಯವೆ ಇಲ್ಲಿ ನಡೆದ ಜಾತಿ ದೌರ್ಜನ್ಯಕ್ಕೆ ಕಾರಣವಾದ ನಿರ್ದಿಷ್ಟ ಅಂಶವೆಂದು ನೋಡಲು ಬರುವುದಿಲ್ಲ. ಹಾಗೆ ನೋಡಿದರೆ ಇಲ್ಲಿಯತನಕ ನಡೆದ ಯಾವುದೇ ಕುಖ್ಯಾತ ದೌರ್ಜನ್ಯ ಪ್ರಕರಣಗಳಲ್ಲೂ ಭೂವ್ಯಾಜ್ಯಗಳು ಪ್ರಮುಖ ವಿಷಯವಾಗಿರಲಿಲ್ಲ." ಎನ್ನುತ್ತಾರೆ.

ಸಮಾಜದಲ್ಲಿ ಜಾತಿಯನ್ನು ವಿರೋಧಿಸುವ ದಲಿತೇತರ ಪ್ರಗತಿಪರರ–ನಾಗರಿಕ ಸಮಾಜ ಗಣನೀಯ ಸಂಖ್ಯೆಯಲ್ಲಿದೆ ಎಂಬುದೂ ಸಹ ಒಂದು ಮಿಥ್ಯೆ ಎಂದು ತೇಲ್‌ತುಂಬ್ಡೆ ಹೇಳುತ್ತಾರೆ. "ವಾಸ್ತವವಾಗಿ ಪ್ರಗತಿಪರರೆಂದು ಕರೆಸಿಕೊಳ್ಳುವ, ಕೋಮುವಾದ, ಲಿಂಗತಾರತಮ್ಯ, ಅಭಿವೃದ್ಧಿ ಮತ್ತು ಪರಿಸರ, ಕಾರ್ಮಿಕ ಮತ್ತು ರೈತಾಪಿ ಹಿತಾಸಕ್ತಿಯಂಥ ಸಾಮಾಜಿಕ ವಿಷಯಗಳನ್ನು ಕೈಗೆತ್ತಿಕೊಂಡು ಹೋರಾಡುತ್ತಿರುವ ದೊಡ್ಡ ಜನವಿಭಾಗವಿದೆ. ಏನೇ ಆಗಲಿ, ಜಾತಿ ವಿಷಯಕ್ಕೆ ಬಂದಾಗ ಮಾತ್ರ ಅವರು ಹೋರಾಟದ ಅಂಗಳವನ್ನು ದಲಿತರಿಗೆ ತೆರವುಗೊಳಿಸಿ ತಾವು ಮಗುಮ್ಮಾಗುತ್ತಾರೆ" ಎಂದು ನೋವಿನಿಂದ ನುಡಿಯುತ್ತಾರೆ. "ಮುಸ್ಲಿಮರ ಮೇಲೆ ನಡೆಯುವ ಕೋಮು ದಮನದ ವಿಷಯವನ್ನು ಉತ್ಸಹದಿಂದ ಎತ್ತಿಕೊಳ್ಳುವ ಈ ಪ್ರಗತಿಪರ ಬುದ್ಧಿಜೀವಿಗಳು ಅದೇ ರೀತಿ ದಲಿತರ ಜಾತಿ ಹಿಂಸೆಯ ಪ್ರಶ್ನೆಯನ್ನೇಕೆ ಹೋರಾಟಕೆ ಎತ್ತಿಕೊಳ್ಳಲು ಮುಂದೆ ಬರಲಿಲ್ಲ?" ಎಂದು ಪ್ರಶ್ನಿಸುತ್ತಾರೆ.

ಒಂದು ವೇಳೆ ದಲಿತರು ಆಡಳಿತಾಂಗದ ಸ್ತರಗಳಲ್ಲಿ ಪಾಲು ಪಡೆದರೆ ಆಡಳಿತ ಯಂತ್ರಾಂಗವನ್ನು ದಲಿತ ಸ್ನೇಹಿಯನ್ನಾಗಿ ಮಾಡಬಹುದು ಎಂಬುದೂ ಮಿಥ್ಯೆ ಎಂದು ಲೇಖಕರು ಹೇಳುತ್ತಾರೆ. ಖೈರ್ಲಾಂಜಿ ಘಟನೆ ಸಂದರ್ಭದಲ್ಲಿ ಅದರ ನೇರ ಮೇಲ್ವಿಚಾರಣೆಯಲ್ಲೆ ಹಲವು ದಲಿತರು ಅಧಿಕಾರದಲ್ಲಿದ್ದರೂ ಅವರು ಹೇಗೆ ದಲಿತರ ನೆರವಿಗೆ ಬರಲು ಆಗಿಲಿಲ್ಲ ಎಂಬುದನ್ನು ವಿವರಗಳ ಸಮೇತ ಸಾಬೀತುಪಡಿಸುತ್ತಾರೆ. "ಇವರೆಲ್ಲರೂ ದಲಿತರೇ ಆಗಿರುವುದರಿಂದ ಬ್ರಾಹ್ಮಣವಾದಿ ಜನರು ಅಧಿಕಾರದಲ್ಲಿದ್ದರಿಂದ ಹೀಗಾಯಿತೆಂದು ದೂಷಿಸಲು ಸಾಧ್ಯವಿಲ್ಲ"... "ಅವರು ಭೋತ್‌ಮಾಂಗೆಗಳಿಗೆ ಯಾವುದೇ ವಿಶೇಷ ಉಪಕಾರ ಮಾಡುವ ಅಗತ್ಯವಿರಲಿಲ್ಲ. ಅವರು ತಮಗೆ ವಹಿಸಿದ್ದ ಕರ್ತವ್ಯವನ್ನು ನ್ಯಾಯಪರತೆಯಿಂದ ಮತ್ತು ನಿಷ್ಠೆಯಿಂದ ತಟಸ್ಥರಾಗಿ ಕಾರ್ಯನಿರ್ವಹಿಸಿದ್ದರೂ ಸಾಕಿತ್ತು. ಆದರೆ ಅವರು ಅದನ್ನೂ ಮಾಡಲಿಲ್ಲ" ಎಂಬ ಕಟುಸತ್ಯವನ್ನು ಬಿಚ್ಚಿಡುತ್ತಾರೆ.

"ಆಡಳಿತ ಯಂತ್ರಾಗದಲ್ಲಿರುವ ದಲಿತ ವ್ಯಕ್ತಿಯು ಇಡೀ ವ್ಯವಸ್ಥೆಯು ದಲಿತ ಪರವಾಗಿರುವಂತೆ ಪ್ರಭಾವ ಬೀರಬಲ್ಲನೆಂದು ನಂಬುವುದು ಅಮಾಯಕತನ. ಬದಲಾಗಿ ವ್ಯವಸ್ಥೆಯೊಂದರಲ್ಲಿ ವ್ಯಕ್ತಿಯೊಬ್ಬ ಏಳಿಗೆಯ ಏಣಿ ಏರುತ್ತಾ ಹೋಗುತ್ತನೆಂದರೆ ಅದು ವ್ಯವಸ್ಥೆಯ ಮೌಲ್ಯಗಳನ್ನು ಎತ್ತಿ ಹಿಡಿದದ್ದಕ್ಕಾಗಿ ವ್ಯವಸ್ಥೆ ಆತನಿಗೆ ಮಾಡುವ ಸನ್ಮಾನವಷ್ಟೇ ಆಗಿರುತ್ತದೆ. ಹೀಗಾಗಿ ಹಲವಾರು ಬಾರಿ ದಲಿತರೇ ಇತರರಿಗಿಂತ ಹೆಚ್ಚಿನ ಉತ್ಸಾಹದಿಂದ ವವಸ್ಥೆಯನ್ನು ಎತ್ತಿ ಹಿಡಿಯುತ್ತಾರೆ. ವ್ಯವಸ್ಥೆಯು ವ್ಯಕ್ತಿಯನ್ನು ತನ್ನ ನಿಷ್ಠಾವಂತ ಸೇವಕನನ್ನಾಗಿ ರೂಪಾಂತರಿಸಿಕೊಳ್ಳುತ್ತದೆ. ವರ್ಗದ ದೃಷ್ಟಿಯಿಂದ ಹೇಳುವುದಾದರೆ ದಲಿತ ಅಧಿಕಾರಿಗಳು ದಲಿತರ ಮಿತ್ರವರ್ಗವಾಗಿಯೇನೂ ಉಳಿಯುವುದಿಲ್ಲ. ಅವರ ವರ್ಗ ಪರಿವರ್ತನೆಯು ಅವರನ್ನು ರಾಜಕೀಯವಾಗಿ ನಿಷ್ಕ್ರಿಯಗೊಳಿಸಿರುತ್ತದೆ" ಎನ್ನುತ್ತಾರೆ. "ವಿದ್ಯಾವಂತ ಜನ ನಮ್ಮನ್ನು ಮೋಸಗೊಳಿಸಿದರು" ಎಂಬ ಅಂಬೇಡ್ಕರರ ನೋವಿನ ಮಾತನ್ನು ಸಾಂದರ್ಭಿಕವಾಗಿ ಉಲ್ಲೇಖಿಸಿದ್ದಾರೆ.

ದಿವಂಗತ ಕಾನ್ಶಿರಾಮ್ ಅವರ ನೇತೃತ್ವದಲ್ಲಿ ರೂಪುಗೊಂಡ ತಕ್ಕ ಮಟ್ಟಿಗೆ ಯಶಸ್ಸನ್ನೂ ಪಡೆದಿದ್ದ 'ಬಹುಜನ' ಎಂಬ ಬಲಿಷ್ಠ ಪರಿಕಲ್ಪನೆ [ಈಗ ಅದರಿಂದಲೂ ದಾಟಿ ಹೋಗಿ ಬಿಎಸ್‌ಪಿ ಹೇಳುವ 'ಸರ್ವಜನ' ಎಂಬ ಪರಿಕಲ್ಪನೆ] ಸಹ ಒಂದು ಮಿಥ್ಯೆಯಲ್ಲದೆ ಬೇರೇನೂ ಅಲ್ಲ ಎಂದು ತೇಲ್‌ತುಂಬ್ಡೆ ವಾದಿಸುತ್ತಾರೆ. "ಮೂಲತಃ ಬಹುಜನವಾದ ಎಂಬುದು ಚುನಾವಣಾ ರಾಜಕಾರಣದಲ್ಲಿ ಗೆಲ್ಲಲು ದಲಿತರ ವ್ಯೂಹತಂತ್ರವಾಗಿದೆ."...

"ಈ ಪ್ರಕ್ರಿಯೆಯು ಕೆಳಸ್ತರದ ಶೂದ್ರವರ್ಗದ ಎಲ್ಲಾ ಜಾತಿಗಳು ಮತ್ತು ದಲಿತರು ಒಟ್ಟುಗೂಡಿ ರಾಜಕೀಯ ಅಧಿಕಾರ ಹೊಂದುವ ಪ್ರಬಲ ಮತಕ್ಷೇತ್ರವನ್ನು ಸೃಷ್ಟಿಸಿಕೊಳ್ಳಬಹುದೆಂದು ನಂಬುತ್ತದೆ ನಿಜ. ಈ ಜಾತಿಗಳ ಭೌತಿಕ ಬದುಕಿನ ಮಾನದಂಡಗಳಿಂದ ಮಾತ್ರ ನೋಡುವುದಾದಲ್ಲಿ ಅವೆಲ್ಲಾ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿದ್ದು ಒಗ್ಗಟ್ಟಾಗಲೇಬೇಕು. ಆದರೆ ಆ ಜನರನ್ನು ಜಾತಿಗುರುತುಗಳ ಆಧಾರದ ಮೇಲೆ ಮಾತ್ರ ಒಟ್ಟುಗೂಡಿಸಲು ಆಶಿಸುವ ಬಹುಜನವಾದವು, ಸಮಾಜದಲ್ಲಿ ಜಾತಿ ವಿಭಜನೆಗಳು ಪ್ರಧಾನವಗಿ ಸವರ್ಣೀಯ ಹಿಂದೂಗಳು ಮತ್ತು ದಲಿತರ ನಡುವಿನದ್ದಾಗಿದೆ ಎಂಬುದನ್ನು ಗುರುತಿಸಲು ವಿಫಲವಾಗುತದೆ. ಹಾಗೂ ದಲಿತರು ಈ ಜಾತಿ ಪ್ರಭೆಯ ಹೊರಗೆಯೇ ಉಳಿಯುತ್ತಾರೆ".

"ಉತ್ತರ ಪ್ರದೇಶದಲ್ಲಿ ಬಿಎಸ್ಪಿ ಸಾಧಿಸಿದ ಯಶಸ್ಸನ್ನು ಗಮನದಲ್ಲಿರಿಸಿಕೊಂಡು ನೋಡಿದಾಗ, 'ಬಹು ಜನವಾದ' ಎಂಬ ಪರಿಕಲ್ಪನೆಯು ರಾಜಕೀಯ ಮಟ್ಟದಲ್ಲಿ ಒಂದಿಷ್ಟು ಕೆಲಸ ಮಾಡಬಹುದು. ಆದರೆ ಸಾಮಾಜಿಕ ಮಟ್ಟದಲ್ಲಿ ಈ ಯಶಸ್ಸು ಸಂಭವಿಸುವುದಿಲ್ಲ. ವಾಸ್ತವ ಸಂಗತಿಯೇನೆಂದರೆ ದಲಿತರು ಮತ್ತು ಹಿಂದುಳಿದ ಜಾತಿಗಳ ನಡುವಿನ ಘರ್ಷಣೆ ಮುಂದುವರೆದೇ ಇದೆ" ಎಂದು ಅದಕ್ಕೆ ಹಲವಾರು ಪುರಾವೆಗಳನ್ನು ಒದಗಿಸುತ್ತಾರೆ. "ಬಹುಜನವಾದವು ಸಮಾಜದ ಎಲ್ಲಾ ಕೆಳ ವರ್ಗಗಳ ಜಾತಿ ಸೀಮೆಗಳನ್ನು ದಾಟಿದ ಐಕ್ಯತೆಯನ್ನು ಆಧರಿಸಿದಾಗ ಮಾತ್ರ ಒಂದು ಅರ್ಥಪೂರ್ಣ ಪರಿವರ್ತನಾ ಪ್ರಣಾಳಿಯಾಗಲು ಸಾಧ್ಯ. ಇಂತಹ ಒಗ್ಗಟ್ಟಿಗೆ ಜಾತಿ ಪರಿಭಾಷೆಗಳು ತಳಹದಿಯಾಗಲು ಸಾಧ್ಯವೇ ಇಲ್ಲ. ಏಕೆಂದರೆ ಜಾತಿಜಾತಿಗಳ ನಡುವೆ ಅಸ್ತಿತ್ವದಲ್ಲಿರುವ ವೈರುಧ್ಯಗಳನ್ನು ಮೀರುವುದು ಜಾತಿ ಜಾಯಮಾನಕ್ಕೆ ಸಾಧ್ಯವಿರದ ಮಾತು. ಜಾತಿಯು ಯಾವಾಗಲೂ ಶ್ರೇಣೀಕರಣವನ್ನು ಅರಸುತ್ತದಾದ್ದರಿಂದ ಅದು ಐಕಮತ್ಯದ ಪರಿಕಲ್ಪನೆಗೆ ವಿರೋಧವಾದದ್ದು. ಜಾತಿಗಳನ್ನು ವಿವರಿಸಿಕೊಳ್ಳಲು 'ಬಹುಜನ' ಶಬ್ದ ಪ್ರಯೋಗ ಪ್ರಯೋಜನಕ್ಕೆ ಬರಬಹುದು. ಆದರೆ ಹೋರಾಟದ ಕ್ಷೇತ್ರದಲ್ಲಿ ಅದು ಅಪ್ರಯೋಜಕ" ಎಂದು ವಿಚಾರ ಪೂರ್ಣವಾದವನ್ನು ಮಂಡಿಸುತ್ತಾರೆ.

ಭಾರತದಲ್ಲಿ ಜಾತಿ ವ್ಯವಸ್ಥೆಯಲ್ಲಿ ಬರುತ್ತಿರುವ ಬದಲಾವಣೆಗಳ ಬಗ್ಗೆ, ಜಾತಿಯತೆಯ ಇಂದಿನ ರೂಪಗಳ ಬಗ್ಗೆ, ಜಾತಿಯ ವಿನಾಶದ ಬಗ್ಗೆ, ದಲಿತರ ವಿಮೋಚನೆ ಬಗ್ಗೆ, ಹಲವಾರು ತಪ್ಪು ಪರಿಕಲ್ಪನೆಗಳು, ಪೂರ್ವಗ್ರಹಗಳು, ಉದಾಸೀನ ಧೋರಣೆಗಳು ನಮ್ಮ ನಿಮ್ಮ ನಡುವೆ ತುಂಬಿ ಹೋಗಿರುವ ಈ ಸಂದರ್ಭದಲ್ಲಿ ದಿಢೀರನೆ ಹೊರಬಂದಿರುವ ಈ ಕೃತಿ ಓದುಗರೆಲ್ಲರನ್ನೂ ಗಂಭೀರ ಚಿಂತನೆಗೆ ಹಚ್ಚುತ್ತದೆ. ಜಾತಿ ಮತ್ತು ದಲಿತ ಪ್ರಶ್ನೆಯನ್ನು ಈಗಲಾದರೂ ಗಂಭೀರ ಚರ್ಚೆಗೆ ಕೈಗೆತ್ತಿಕೊಳ್ಳಲು, ಉದಾಸೀನತೆಯನ್ನು ಬಿಸುಟು ಆಚರಣೆಗಿಳಿಯಲು ಪುಸ್ತಕ ಪ್ರೇರೇಪಣೆ ನೀಡುತ್ತದೆ. ಹಾಗಾಗಿ ಇಂತಹ ಉತ್ತಮ ಪುಸ್ತಕವನ್ನು ಕನ್ನಡಕ್ಕೆ ತರಲು ಕಾರಣರಾದ ಶಿವಸುಂದರ್‌ರವರಿಗೂ ಮತ್ತು ಲಂಕೇಶ್ ಬಳಗಕ್ಕೂ ನಮ್ಮೆಲ್ಲರ ಪರವಾಗಿ ಮನಃಪೂರ್ವಕ ಕೃತಜ್ಞತೆಗಳು. □

ಸಮಾಜದಲ್ಲಿ ಜಾತಿಯನ್ನು ವಿರೋಧಿಸುವ ದಲಿತೇತರ ಪ್ರಗತಿಪರರ–ನಾಗರಿಕ ಸಮಾಜ ಗಣನೀಯ ಸಂಖ್ಯೆಯಲ್ಲಿದೆ ಎಂಬುದೂ ಸಹ ಒಂದು ಮಿಥ್ಯೆ ಎಂದು ತೇಲ್‌ತುಂಬ್ಡೆ ಹೇಳುತ್ತಾರೆ. "ವಾಸ್ತವವಾಗಿ ಪ್ರಗತಿಪರರೆಂದು ಕರೆಸಿಕೊಳ್ಳುವ, ಕೋಮುವಾದ, ಲಿಂಗತಾರತಮ್ಯ, ಅಭಿವೃದ್ಧಿ ಮತ್ತು ಪರಿಸರ, ಕಾರ್ಮಿಕ ಮತ್ತು ರೈತಾಪಿ ಹಿತಾಸಕ್ತಿಯಂಥ ಸಾಮಾಜಿಕ ವಿಷಯಗಳನ್ನು ಕೈಗೆತ್ತಿಕೊಂಡು ಹೋರಾಡುತ್ತಿರುವ ದೊಡ್ಡ ಜನವಿಭಾಗವಿದೆ. ಏನೇ ಆಗಲಿ, ಜಾತಿ ವಿಷಯಕ್ಕೆ ಬಂದಾಗ ಮಾತ್ರ ಅವರು ಹೋರಾಟದ ಅಂಗಳವನ್ನು ದಲಿತರಿಗೆ ತೆರವುಗೊಳಿಸಿ ತಾವು ಮಗುಮ್ಮಾಗುತ್ತಾರೆ" ಎಂದು ನೋವಿನಿಂದ ನುಡಿಯುತ್ತಾರೆ. "ಮುಸ್ಲಿಮರ ಮೇಲೆ ನಡೆಯುವ ಕೋಮು ದಮನದ ವಿಷಯವನ್ನು ಉತ್ಸಹದಿಂದ ಎತ್ತಿಕೊಳ್ಳುವ ಈ ಪ್ರಗತಿಪರ ಬುದ್ಧಿಜೀವಿಗಳು ಅದೇ ರೀತಿ ದಲಿತರ ಜಾತಿ ಹಿಂಸೆಯ ಪ್ರಶ್ನೆಯನ್ನೇಕೆ ಹೋರಾಟಕೆ ಎತ್ತಿಕೊಳ್ಳಲು ಮುಂದೆ ಬರಲಿಲ್ಲ?" ಎಂದು ಪ್ರಶ್ನಿಸುತ್ತಾರೆ.

ದಲಿತರ ದೌರ್ಜನ್ಯಗಳು: ಬದಲಾಗುತ್ತಿರುವ ಸ್ವರೂಪಗಳು

ನರಸಿಂಹ ಗುಂಜಹಳ್ಳಿ

ಸ್ವಾತಂತ್ರ್ಯ ನಂತರ ಭಾರತದ ಅಭಿವೃದ್ಧಿಯ ಕಾರ್ಯಗಳಿಂದ ಪ್ರಭುತ್ವ ಜಾರಿಗೆ ತಂದ ಅರ್ಧಂಬರ್ಧ ಭೂಸು ಧಾರಣೆಗಳಿಂದ ಹಳ್ಳಿಗ ಳಿಂದ ಮೇಲ್ಜಾತಿ ಭೂಮಾಲಿಕರು ಹೊರ ಬಿದ್ದರು. ಆನಂತರ ಹಿಂದುಳಿದ ಜಾತಿಗ ಳಿಗೆ ಭೂ ಒಡೆತನ ನೀಡಿ ಹಳ್ಳಿಗಳ ಅಧಿ ಕಾರವನ್ನು ಈ ಹಿಂದು ಳಿದ ಜಾತಿಗಳಿಗೆ ಹಸ್ತಾಂತರಿಸಿತು, ಹಾಗು ಹಸಿರು ಕ್ರಾಂತಿಯು ಗ್ರಾಮೀಣ ಪ್ರದೇಶದಲ್ಲಿ ಅರೆ ಬಂಡವಾಳಶಾಹಿ ಸಂಬಂಧಗಳನ್ನು ಸೃಷ್ಟಿಸಿ ಈ ಹಿಂದು ಳಿದ ಜಾತಿಗಳಿಗೆ ಅರ್ಥಿಕ ಸಮೃದ್ಧಿ ಯನ್ನು ತಂದುಕೊಟ್ಟು ಈ ಶೂದ್ರ ಜಾತಿಗ ಳನ್ನು ಇನ್ನಷ್ಟು ಪ್ರಬಲ ಗೊಳಿಸಿತು. ಜಾಗತೀ ಕರಣ ಶೂದ್ರ ಜಾತಿಗ ಳನ್ನು ರಾಜಕೀಯ ವಾಗಿ- ಆರ್ಥಿಕವಾಗಿ ಸಬಲಕರಿಸಿತು. ಇದ ರಿಂದ ಹಳ್ಳಿಗಳಲ್ಲಿ ಶೂದ್ರ ಜಾತಿಗಳ ಪ್ರಬಾಲ್ಯ ಹೆಚ್ಚಾಯಿತು.

ಈ ಲೇಖನ ಎಲ್ಲಾ ಅಂಶಗಳು ಖೈರ್ಲಾಂಜಿ [ಮೂಲ ಆನಂದ್ ತೇಲ್‌ತುಂಬ್ಡೆ, ಕನ್ನಡಕ್ಕೆ ಶಿವಸುಂದರರು] ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

ಇಂದು ದೇಶದಲ್ಲಿ ದಲಿತರ ಮೇಲೆ ದೌರ್ಜನ್ಯಗಳು ಒಂದಲ್ಲ-ಒಂದು ರೀತಿಯಲ್ಲಿ ನಡೆಯುತ್ತಲೆ ಇವೆ. ಇದಕ್ಕೆ ಮುಖ್ಯವಾದ ಕಾರಣ ಜಾತಿ ದ್ವೇಷವೆ ಆಗಿದೆ. ಆದರೆ ಇಪ್ಪತ್ತೊಂದನೆಯ ಶತಮಾನದಲ್ಲಿ ಜಾತಿ ಪದ್ಧತಿ ನಾಶವಾಗಿದೆ ಎಂದು ಮೇಲ್ವರ್ಗದ ಬುದ್ಧಿಜೀವಿಗಳು ಹಾಗು ಪ್ರಭುತ್ವ ಹೇಳುತ್ತದೆ. ಇಂದು ಜಾತಿ ಪದ್ಧತಿಯು ಜಾಗತೀಕರಣ, ಅಧುನಿಕರಣ, ಬ್ರಿಟೀಷ್ ವಸಾಹತು ವ್ಯವಸ್ಥೆ ಹಾಗು ನಮ್ಮ ಗಣರಾಜ್ಯವು ಪ್ರತಿ ಪಾದಿಸುತ್ತಿರುವ ಪ್ರಜಾತಾಂತ್ರಿಕ ರಾಜಕಾರಣ ಮತ್ತು ಸಮಾಜವಾದಿ ಆರ್ಥಿಕ ನೀತಿಗಳು ಈ ಎಲ್ಲವುಗಳಿಂದ ಜಾತಿ ಪದ್ಧತಿಯು ತನ್ನ ಸ್ವರೂಪವನ್ನು ಬದಲಾಯಿಸಿದೆ. ನಮ್ಮ ಸಂವಿಧಾನವು ಸ್ವತಂತ್ರ್ಯ, ಸಮಾನತೆ, ನ್ಯಾಯಗಳ ತಳಹದಿಯ ಭಾರತವನ್ನು ಸರ್ವತಂತ್ರ, ಸಮಾಜವಾದಿ, ಜಾತ್ಯಾತೀತ, ಧರ್ಮನಿರುಪೇಕ್ಷೆತ ಪ್ರಜಾತಾಂತ್ರಿಕ ಗಣರಾಜ್ಯವನ್ನಾಗಿ ನಿರ್ಮಿಸುವ ಆಶಯಗಳನ್ನು ಘೋಷಿಸಿಕೊಂಡಿದೆ. ಹೀಗೆ ಸಂವಿಧಾನದಲ್ಲಿ ತಮಗೆ ದೊರೆತಿರುವ ಅವಕಾಶಗಳನ್ನು ಬಳಸಿಕೊಂಡ ದಲಿತರು ಇಂದು ಸ್ವಲ್ಪ ಅಭಿವೃದ್ಧಿಯನ್ನು ಸಾಧಿಸಿದ್ದಾರೆ. ಹಾಗು ದೇಶದ ಜಾತಿ ವ್ಯವಸ್ಥೆಯ ಅಧಿಕಾರ ರಚನೆಗೆ ಸವಾಲಾಗಿದ್ದಾರೆ. ಆದುದರಿಂದ ಶೋಷಕ ಶೂದ್ರ ಜಾತಿಗಳು ದಿನ ನಿತ್ಯಾ ದಲಿತರ ಮೇಲೆ ದೌರ್ಜನ್ಯಗಳು ನಡೆಸುತ್ತಿದ್ದಾರೆ.

ಶೂದ್ರ ಶೋಷಕರ ಉಗಮ ಮತ್ತು ದೌರ್ಜನ್ಯಗಳು:-

ಸ್ವಾತಂತ್ರ್ಯ ನಂತರ ಭಾರತದ ಅಭಿವೃದ್ದಿಯ ಕಾರ್ಯಗಳಿಂದ ಪ್ರಭುತ್ವ ಜಾರಿಗೆ ತಂದ ಅರ್ಧಂಬರ್ಧ ಭೂಸುಧಾರಣೆಗಳಿಂದ ಹಳ್ಳಿಗಳಿಂದ ಮೇಲ್ಜಾತಿ· ಭೂಮಾಲಿಕರು(ಬ್ರಾಹ್ಮಣರು) ಹೊರ ಬಿದ್ದರು. ಆನಂತರ ಹಿಂದುಳಿದ ಜಾತಿಗಳಿಗೆ (ಶೂದ್ರ) ಭೂ ಒಡೆತನ ನೀಡಿ ಹಳ್ಳಿಗಳ ಅಧಿಕಾರವನ್ನು ಈ ಹಿಂದುಳಿದ ಜಾತಿಗಳಿಗೆ ಹಸ್ತಾಂತರಿಸಿತು. ಹಾಗು ಹಸಿರು ಕ್ರಾಂತಿಯು ಗ್ರಾಮೀಣ ಪ್ರದೇಶದಲ್ಲಿ ಅರೆ ಬಂಡವಾಳಶಾಹಿ ಸಂಬಂಧಗಳನ್ನು ಸೃಷ್ಟಿಸಿ ಈ ಹಿಂದುಳಿದ ಜಾತಿಗ(ಶೂದ್ರ)ಳಿಗೆ ಅರ್ಥಿಕ ಸಮೃದ್ಧಿಯನ್ನು ತಂದುಕೊಟ್ಟು ಈ ಶೂದ್ರ ಜಾತಿಗಳನ್ನು ಇನ್ನಷ್ಟು ಪ್ರಬಲಗೊಳಿಸಿತು. ಜಾಗತೀಕರಣ ಶೂದ್ರ ಜಾತಿಗಳನ್ನು ರಾಜಕೀಯವಾಗಿ-ಆರ್ಥಿಕವಾಗಿ ಸಬಲಕರಿಸಿತು. ಇದರಿಂದ ಹಳ್ಳಿಗಳಲ್ಲಿ ಶೂದ್ರ ಜಾತಿಗಳ ಪ್ರಬಾಲ್ಯ ಹೆಚ್ಚಾಯಿತು. ಅನಂತರ ಅವರು ಸರಕಾರಿ ಅಭಿವೃದ್ಧಿ ಕಾರ್ಯಗಳನ್ನು ದಲಿತರಿಗೆ ಸಿಗದಂತೆ ಶೂದ್ರ ಜಾತಿಗಳು ಉಪಯೋಗಿಸಿಕೊಂಡು ಸಮಾಜಿಕ-ರಾಜಕೀಯ ಆರ್ಥಿಕ-ಸಾಂಸ್ಕೃತಿಕವಾಗಿ ಪ್ರಬಲಾರಾದರು. ಆದರೆ ದಲಿತರು ಹಸಿರುಕ್ರಾಂತಿ ಅರೆಬರೆ ಭೂ ಸುಧಾರಣೆಗಳು ಇನ್ನು ಮುಖ್ಯವಾಗಿ ಜಾಗತಿಕರಣದಿಂದ ದಲಿತರು ತಮ್ಮ ಕಸಬುಗಳನ್ನು ಕಳೆದುಕೊಂಡು ಹಿಂದುಳಿದ ಜಾತಿಗಳ ಮೇಲೆ ಅವಲಂಭಿತರಾದರು.

ಭೂ ಒಡೆತನ ಹೊಂದಿದ್ದ ಶೂದ್ರ ಜಾತಿಗಳು ಅರ್ಥಿಕವಾಗಿ ಪ್ರಬಲರಾಗುತ್ತಿದ್ದಂತೆ ದಲಿತರ ಬಗ್ಗೆ ಅಸಹನೆ ಬೆಳೆಯಿತು. ಇದೆ ಸಮಯದಲ್ಲಿ ದಲಿತರ ಸಾಮಾಜಿಕ, ಆರ್ಥಿಕ, ಅತ್ಮಾಭಿಮಾನ, ಗೌರವ, ಪ್ರತಿಷ್ಠೆ, ತನ್ನತನ, ಸ್ವಪ್ರಾತಿಪಾದನಗೆಳು ಹೆಚ್ಚಾದವು. ಆದುದರಿಂದ ಹಳ್ಳಿಗಳಲ್ಲಿ ಶೂದ್ರರು-ಮತ್ತು ದಲಿತರ ಮಧ್ಯ ಬಿಗುವಿನ ವಾತವಾರಣ ನಿರ್ಮಾಣಗೊಂಡಿತು. ಇಂತಹ ಸಂದರ್ಭದಲ್ಲಿ ಸ್ವಲ್ಪ ಯಾವುದಾದರೂ ನೆಪಸಿಕ್ಕಿದರೆ ಸಾಕು ದಲಿತರ ಮೇಲೆ ಹಲ್ಲೆಗಳು, ದಲಿತರ ಮಹಿಳೆಯ ಅತ್ಯಾಚಾರಗಳು ಸಾಮಾಜಿಕ ಬಹಿಷ್ಕಾರಗಳು, ನರಮೇದಗಳು ಮಲ

ತಿನ್ನುಸುವುದು, ದಲಿತರ ಮಹಿಳೆಯರನ್ನು ಬೆತ್ತಲೆ ಮಾಡಿ ಮೆರವಣಿಗೆ ಮಾಡುವುದು ಇಂತಹ ಹಲವಾರು ಘಟನೆಗಳು ನಡೆಯುತ್ತವೆ.

ಇಂದು ಬ್ರಾಹ್ಮಣ, ಹಾಗು ಇನ್ನಿತರ ಮೇಲ್ಜಾತಿಯವರು ಜಾಗತಿಕ ಆರ್ಥಿಕ ವ್ಯವಸ್ಥೆಯ ಹೊಸ ಕ್ಷೇತ್ರಗಳಿಗೆ ಕಾಲು ಹಿಡಿತ್ತಿದ್ದಾರೆ. ಇವರ ಇರುವ ಜಾಗಕ್ಕೆ ಹಿಂದುಳಿದ ಜಾತಿಗಳ (ಶೂದ್ರ) ಜನರು ಸ್ಥಳಾಂತರಗೊಳ್ಳುತ್ತಿದ್ದಾರೆ. ಈ ಶೂದ್ರ ಜಾತಿಯವರು ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸಿದರೂ, ತಮ್ಮ ಸಾಮಾಜಿಕ-ಸಾಂಪ್ರಾದಾಯಿಕ, ಸಾಂಸ್ಕೃತಿಕವಾಗಿ ಬದಲವಣೆ ಆಗಲಿಲ್ಲ ಆದುದರಿಂದ ಶೂದ್ರ ಜಾತಿಗಳಲ್ಲಿ ಜಾತಿಯತೆ, ಮೇಲುಕೀಳು, ತಾರತಮ್ಯ ಪ್ರಜ್ಞೆ, ಬ್ರಾಹ್ಮಣ್ಯ ಮನಸ್ಥಿತಿ ಹಾಗೆ ಉಳಿಯಿತು. ಹಾಗಾಗಿ ಇಂದು ದೇಶದಲ್ಲಿ ನಡೆಯುತ್ತಿರುವ ದಲಿತರ ಮೇಲೆ ದೌರ್ಜನ್ಯಗಳು, ಜಾತಿನಿಂದನೆ ಮಲತಿನ್ನುಸುವುದು ದಲಿತ ಮಹಿಳೆಯರ ಮೇಲೆ ಅತ್ಯಾಚಾರ, ದಲಿತರದಹನ, ಕಗ್ಗೊಲೆ, ಮಾಡುವುದು ಹಿಂದುಳಿದ ಜಾತಿಗಳೇ(ಶೂದ್ರ) ಹೊರೆತ ಬ್ರಾಹ್ಮಣರಲ್ಲ. ಈ ರೀತಿ ಪರಿಸ್ಥಿತಿ ಸೃಷ್ಟಿಯಾಗಿರುವುದಕ್ಕೆ ಪ್ರಭುತ್ವದ ಪಾತ್ರ ಕೂಡ ಇದೆ ಆಧುನಿಕ ರಾಜ್ಯ ವ್ಯವಸ್ಥೆ ಮೂಲಕ ಶೂದ್ರ-ದಲಿತರ(ಕೆಳಜಾತಿ-ಮೇಲ್ಜಾತಿ) ಮಧ್ಯ ಜಾತಿ ವೈರುಧ್ಯಗಳು ಬಲ ಪಡಿಸಿದೆ. ಹಾಗು ಅದು ಹುಟ್ಟು ಹಾಕಿದ ಸಾಮಾಜಿಕ ಆರ್ಥಿಕ ನೀತಿಗಳಿಂದ ದೇಶದಲ್ಲಿ ಜಾತಿ ಪದ್ಧತಿ ಇನ್ನಷ್ಟು ತೀಕ್ಷಣಗೊಳಿಸಿದೆ, ಹಾಗಾಗಿ ಶೂದ್ರರಲ್ಲಿ ಬ್ರಾಹ್ಮಣ್ಯ ಮನಸ್ಥಿತಿ ಹಾಗೆ ಇದೆ.

ಯಾವಾಗ ದಲಿತರು ಶಿಕ್ಷಣ ಪಡೆದು ಹಿಂದುಳಿದ ಜಾತಿಗಳ(ಶೂದ್ರ)ಶೋಷಣೆ ಬಗ್ಗೆ, ಬಿಟ್ಟಿ ಚಾಕರಿ ಬಗ್ಗೆ, ದೌರ್ಜನ್ಯ, ಮೋಸ, ಅನ್ಯಾಯ ಬಗ್ಗೆ ಪ್ರಶ್ನೆ ಮಾಡಿರುವುದರಿಂದ ಹಾಗು ಸರಕಾರದ ಅಲ್ಪಸ್ವಲ್ಪ ಕಾರ್ಯಗಳಿಂದ ದಲಿತರ ಸ್ಥಾನ ಮೇಲಕ್ಕೇರಿರುವುದರಿಂದ ಶೂದ್ರ ಜಾತಿಗಳವರು ದಲಿತರ ಅಭಿವೃದ್ಧಿಯನ್ನು ಸಹಿಸದೇ ಅವರ ಕೋಪವನ್ನು ಆಕ್ರೋಶವನ್ನು ಕಾರಂಚೇಡು(1984), ಚೆಂಡೂರು (1991). ಕಂಬಾಲಪಲ್ಲಿ(2000) ಜಝಾರ್ (2002), ಬೇಲ್ಚಿ, ಖೈರ್ಲಾಂಜಿ(2006)ಗಳಲ್ಲಿ ಹೊರಹಾಕುವವರು. ಹಾಗು ಕರ್ನಾಟಕದಲ್ಲಿ 1986ರಲ್ಲಿ ತತ್ತೂರು, ಬೆಂಡಿಗೇರಿಯಲ್ಲಿ ಲಿಂಗಾಯಿತ ಭೂಮಾಲಿಕರು ಮತ್ತು 1994ರಲ್ಲಿ ಕೋಲಾರದಲ್ಲಿ ರೆಡ್ಡಿ ಭೂಮಾಲಿಕರು ದಲಿತರಿಗೆ ಮಲತಿನ್ನಿಸಿದ ಪ್ರಕರಣಗಳು ನಡೆದಿವೆ ಇಂಥ ಅಮಾನವೀಯ ಅಪರಾಧಗಳನ್ನು ನಡೆಸುವುದಕ್ಕೆ ಹಿಂದುಳಿದ ಜಾತಿ(ಶೂದ್ರ)ಯವರನ್ನು ಪ್ರೇರೆಪಿಸುವುದಾದರೂ ಏನೂ..?

ಶೂದ್ರ ಜಾತಿಗಳವರಿಗೆ ದಲಿತರ ಮೇಲೆ ದೌರ್ಜನ್ಯ, ದಾಳಿ ಮಾಡುವಾಗ ನಾನು ಮಾಡುತ್ತಿರುವುದು ಸರಿಯಾಗಿಯೇ ಇದೆ ಎಂಬ ಗಾಡನಂಬಿಕೆ, ತಾವು ಮಾಡಿದ ದೌರ್ಜನ್ಯಗಳನ್ನು ಧಾರ್ಮಿಕ ಸಿದ್ಧಾಂತ, ಸಂಸ್ಕೃತಿ ಮತ್ತು ಸಾಂಪ್ರಾದಾಯಗಳ ಮುಖಾಂತರ ಸಮರ್ಥನಿಯವಾಗಿದೆ ಎಂದು ಅರ್ಥಮಾಡಿಕೊಳ್ಳುವುದು, ದೌರ್ಜನ್ಯ ಮಾಡಿದ ನಂತರ ನಮ್ಮ ವಿರುದ್ಧ ಕೀಳು ದರ್ಜೆಯ ದಲಿತರು ಪೊಲೀಸ್ ಸ್ಟೇಷನ್‌ಗೆ ದೂರು ಕೊಡುವುದಿಲ್ಲ ಎಂಬ ನಂಬಿಕೆ ಒಂದು ವೇಳೆ ದೂರು ಕೊಟ್ಟರು ತಮಗೆ ಇರುವ ರಾಜಕೀಯ ಸಂಬಂಧಗಳನ್ನು ಬಳಸಿ ಪೋಲಿಸ್ ತನಿಖೆ ಹಾಗು ನ್ಯಾಯ ವ್ಯವಸ್ಥೆಯಿಂದ ನಾವು ಪಾರು ಆಗಬಹುದು ಎಂಬ ಖಾತ್ರಿ ಇರುತ್ತದೆ. ಇನ್ನು ಹಲವಾರು ಸಂಗತಿಗಳು 'ಹಿಂದುಳಿದ ಜಾತಿಗಳವರಿಗೆ ದಲಿತರ ಮೇಲೆ ದೌರ್ಜನ್ಯ ನಡೆಸುವುದಕ್ಕೆ ಪ್ರೇರೆಪಿಸುತ್ತವೆ.

> **1990ರಿಂದ ಜಾಗತೀಕರಣದ ನಂತರ ಬಂಡವಾಳ-ಭೂಮಾಲಿಕ ವರ್ಗಗಳು ಜಾರಿಗೆ ತಂದ ಆರ್ಥಿಕ ಅಭಿವೃದ್ಧಿಗಳಿಂದ ಭಾರತದಲ್ಲಿ ಶೂದ್ರರು ಉನ್ನತಿಗೆ ಹೊಂದಿದರೆ ದಲಿತರು ಪಾತಳಕ್ಕೆ ಕುಸಿದರು. ಹಿಂದಿನ ಕೆಲವು ನೂರಾರು ವರ್ಷಗಳಿಂದ ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಶೋಷಕರಾಗಿದ್ದು ದುಡಿಯುವ ಶೂದ್ರರು ಶೋಷಿತರಾಗಿದ್ದರು. ಅದರೆ ಇಂದು ಶೂದ್ರರು ಶೋಷಕರಾಗಿದ್ದು ದಲಿತರು ಶೋಷಿತರಾಗಿದ್ದಾರೆ. ಶೂದ್ರರು ತಮ್ಮ ಉನ್ನತಿ ಜಾತಿ ಅಡ್ಡಿಯಾಗುತ್ತಿದೆ ಎಂದು ಭಾವಿಸಿ ಜಾತಿಯತೆ ವಿರುದ್ಧ ಬಂಡಾಯ ಹೂಡಿದರು ಇದರ ಫಲವಾಗಿ ಶೂದ್ರರು ಪ್ರಾರಂಭಿಸಿದ ಬ್ರಾಹ್ಮಣ್ಯ ವಿರೋಧಿ ಚಳುವಳಿಗೆ ಮಣಿದು ಬಾಹ್ಮಣರು ಶೂದ್ರರಿಗೆ ಅಧಿಕಾರಕೊಟ್ಟರು. ಆದರೆ ದಲಿತರು ಜಾತಿ ವಿರೋಧಿ ಚಳುವಳಿಗಳು ಮಾಡಿದರು ಕೂಡ ಶೂದ್ರರು ದಲಿತರಿಗೆ ರಾಜಕೀಯ ಸಾಂಸ್ಕೃತಿಗೆ ಸಮಾಜಿಕ ಅಧಿಕಾರ ಕೊಡದೇ ದಲಿತರನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ಶೋಷಣೆ ಮಾಡುತ್ತಿದ್ದಾರೆ.**

ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ (NCRB) ನೀಡಿರುವ ಅಂಕಿಅಂಶಗಳ ಪ್ರಕಾರ ಪ್ರತಿದಿನ ಮೂರು ದಲಿತ ಮಹಿಳೆ ಮೇಲೆ ಅತ್ಯಾಚಾರ ನಡೆಯುತ್ತದೆ. ಇಬ್ಬರು ದಲಿತರನ್ನು ಕೊಲ್ಲಲಾಗುತ್ತದೆ. ದಲಿತರ ಎರಡು ಮನೆಗಳಿಗೆ ಬೆಂಕಿಹಚ್ಚಲಾಗುತ್ತದೆ, ಪ್ರತಿದಿನವು ಇಬ್ಬರು ದಲಿತರ ಹತ್ಯೆಯು ಆಗುತ್ತದೆ. ಪ್ರತಿ ಹದಿನೆಂಟು ನಿಮಿಷಕ್ಕೆ ಒಂದು ದಲಿತರ ಮೇಲೆ ಹಲ್ಲೆ ನಡೆಯುತ್ತವೆ. ಇದು ದೇಶದ ಒಟ್ಟಾರೆ ಜನಸಂಖ್ಯೆ 17 ಕೋಟಿ ಜನಸಂಖ್ಯೆಯಿರುವ ಅತಿ ಹೆಚ್ಚಿನ ಬಡವರು, ನಿರ್ಗತಿಕರು, ಭಿಕ್ಷುಕರು, ಹಸಿವುನಿಂದ ನರಳುತ್ತಿರುವವರು, ಅನಕ್ಷರಸ್ಥರು, ಇರುವ ದಲಿತರ ಪಾಡು ಇದು. ಎರಡು ಸಾವಿರ ವರ್ಷ ಕೆಳಗೆ ಮನು ದಲಿತರಿಗೆ ಯಾವ ರೀತಿ ಶಿಕ್ಷೆ ಕೊಡಬೇಕೆಂದು ತನ್ನ ಮನುಸ್ಮೃತಿಯಲ್ಲಿ ಹೇಳಿರುವ ನೀತಿಗಳನ್ನು ಬ್ರಾಹ್ಮಣ್ಯ ಮನಸ್ಥಿತಿವುಳ್ಳ ಶೂದ್ರರು ಸಾಮೂಹಿಕವಾದ, ಪೂರ್ವಯೋಜಿತವಾದ, ಬರ್ಬರ-ವಿಕೃತವಾದ ದೌರ್ಜನ್ಯಗಳನ್ನು ದಲಿತರ ಮೇಲೆ ನಡೆಸುತ್ತಾರೆ. ಕೆಳಜಾತಿ ಜನರು ಸ್ವಾತಂತ್ರ್ಯ, ಸ್ವಾಭಿಮಾನ, ಪ್ರದರ್ಶಿಸಿದರೆ, ಶೋಷಣೆ ವಿರುದ್ಧ ಪ್ರಶ್ನೆ ಮಾಡಿದ ಮರುಕ್ಷಣವೇ ದಲಿತರ ಮೇಲೆ ದಾಳಿಗಳು ನಡೆಯುತ್ತವೆ.

ಒಟ್ಟಾರೆ ಕೆಳಜಾತಿಗಳು ತಮ್ಮ ಪ್ರತಿರೋಧವನ್ನು ವ್ಯಕ್ತ ಪಡಿಸಿದಾಗಲೇ ಅವರ ಮೇಲೆ ದೌರ್ಜನ್ಯಗಳು ನಡೆಯುತ್ತವೆ. ಈ ಘಟನೆಗಳಿಂದ ಭಾರತದ ಜಾತಿ ಪದ್ಧತಿಯ "ಮಡಗಿದಂತೆ ಇರು, ಹಾಕಿದ ಗಡಿ ದಾಟಿದರೆ ಹುಶಾರು" ಎಂಬ ಮನುಕುಲದ ನಿಯಮವನ್ನು ಒತ್ತಿ ಹೇಳುತ್ತದೆ ಅಥವಾ ನೆನಪಿಸುತ್ತದೆ. ಇಂದು ದೇಶದಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಲ್ಲಿ ಡಾ॥ ಬಿ.ಆರ್ ಅಂಬೇಡ್ಕರ್ ಮಾರ್ಗದರ್ಶನದಲ್ಲಿ ರಚಿತವಾದ ಎಂಬ ಕಾರಣಕ್ಕೆ ದಲಿತರು ಬಹಳ ಅಭಿಮಾನ-ಗೌರವದಿಂದ ಕಾಣುವ ಸಂವಿಧಾನದಿಂದ ನಿರ್ದೇಶಿತವಾದ "ಪ್ರಭುತ್ವ" ಕೂಡ ಶಾಮಿಲುವಾಗಿರುವುದು ದೊಡ್ಡ ದುರಂತ. ಭಾರತದಲ್ಲಿ ದಲಿತರು ರಾಜಕೀಯ, ಆರ್ಥಿಕ, ಸಾಮಾಜಿಕವಾಗಿ ಅಸಮಾನತೆಯಿಂದ ನರಳುತ್ತಿದ್ದಾರೆ. ಆದರೂ ಕೂಡ ಯಾವ ರಾಜಕೀಯ ಪಕ್ಷಗಳಿಗೂ ಹಾಗು ದಲಿತ ಸಂಘಟನೆಗಳಿಗೂ ಇದರ ಬಗ್ಗೆ ಚಿಂತೆ ಇಲ್ಲ.

ದಲಿತರ ಮೇಲೆ ಪ್ರಭುತ್ವದ ದೌರ್ಜನ್ಯಗಳು:-

1990ರಿಂದ ಜಾಗತೀಕರಣದ ನಂತರ ಬಂಡವಾಳ-ಭೂಮಾಲಿಕ ವರ್ಗಗಳು ಜಾರಿಗೆ ತಂದ ಆರ್ಥಿಕ ಅಭಿವೃದ್ಧಿಗಳಿಂದ ಭಾರತದಲ್ಲಿ ಶೂದ್ರರು ಉನ್ನತಿಗೆ ಹೊಂದಿದರೆ ದಲಿತರು ಪಾತಳಕ್ಕೆ ಕುಸಿದರು. ಹಿಂದಿನ ಕೆಲವು ನೂರಾರು ವರ್ಷಗಳಿಂದ ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಶೋಷಕರಾಗಿದ್ದು ದುಡಿಯುವ ಶೂದ್ರರು ಶೋಷಿತರಾಗಿದ್ದರು. ಅದರೆ ಇಂದು ಶೂದ್ರರು ಶೋಷಕರಾಗಿದ್ದು ದಲಿತರು ಶೋಷಿತರಾಗಿದ್ದಾರೆ. ಶೂದ್ರರು ತಮ್ಮ ಉನ್ನತಿ ಜಾತಿ ಅಡ್ಡಿಯಾಗುತ್ತಿದೆ ಎಂದು ಭಾವಿಸಿ ಜಾತಿಯತೆ ವಿರುದ್ಧ ಬಂಡಾಯ ಹೂಡಿದರು ಇದರ ಫಲವಾಗಿ ಶೂದ್ರರು ಪ್ರಾರಂಭಿಸಿದ ಬ್ರಾಹ್ಮಣ್ಯ ವಿರೋಧಿ ಚಳುವಳಿಗೆ ಮಣಿದು ಬಾಹ್ಮಣರು ಶೂದ್ರರಿಗೆ ಅಧಿಕಾರಕೊಟ್ಟರು. ಆದರೆ ದಲಿತರು ಜಾತಿ ವಿರೋಧಿ ಚಳುವಳಿಗಳು ಮಾಡಿದರು ಕೂಡ ಶೂದ್ರರು ದಲಿತರಿಗೆ ರಾಜಕೀಯ ಸಾಂಸ್ಕೃತಿಗೆ ಸಮಾಜಿಕ ಅಧಿಕಾರ ಕೊಡದೇ ದಲಿತರನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಂಡು ಶೋಷಣೆ ಮಾಡುತ್ತಿದ್ದಾರೆ. ಇಂದು ಭೂಹೀನ ಕಾರ್ಮಿಕರಾದ ದಲಿತರು ತಮ್ಮ ಜೀವನಕ್ಕಾಗಿ ಭೂಮಿಯನ್ನು ಹೊಂದಿರುವ ಮೇಲ್ಜಾತಿಯವರನ್ನು ನಂಬಿಕೊಂಡಿದ್ದಾರೆ.

ಭೂಮಿಹೊಂದಿರುವ ಜಾತಿಗಳೇ ಇಂದು ದಲಿತರ ಮೇಲೆ ದೌರ್ಜನ್ಯಗಳನ್ನು ನಡೆಸುತ್ತಿದ್ದಾರೆ. ಶೂದ್ರರು ಬ್ರಾಹ್ಮಣರಷ್ಟು ಸಾಂಸ್ಕೃತಿಕವಾಗಿ ಶ್ರೀಮಂತರಲ್ಲ. ಆದುದರಿಂದ ಬ್ರಾಹ್ಮಣರು ಶೂದ್ರರಿಗೆ ಬ್ರಾಹ್ಮಣ್ಯ ಮನಸ್ಥಿತಿ ಭಾವನೆ ಬೆಳಸಿ ದಲಿತರ ಮೇಲೆ ದೌರ್ಜನ್ಯ ನಡೆಸುತ್ತಿದೆ. ಅಂದರೆ ಬ್ರಾಹ್ಮಣರು ಕೂಡ ಜಾತಿ ದೌರ್ಜನ್ಯಗಳು ನಡೆಯುವುದಕ್ಕೆ ಪರೋಕ್ಷವಾಗಿ ಕಾರಣರಾಗಿದ್ದಾರೆ. ಹಾಗು ಪ್ರಭುತ್ವ ಕೂಡ ದಲಿತರ ಮೇಲೆ ದೌರ್ಜನ್ಯ ನಡೆಸಿದವರನ್ನು ರಕ್ಷಿಸುತ್ತ ಜಾತಿ ದೌರ್ಜನ್ಯಗಳಿಗೆ ಪರೋಕ್ಷ ಬೆಂಬಲಕೊಡುತ್ತದೆ. ಕಾನೂನು ಕಾಪಾಡುವ ಪ್ರಭುತ್ವವೇ ದಲಿತರನ್ನು ಕಾಪಾಡುವಲ್ಲಿ ವಿಫಲವಾದಗ ದಲಿತರ ಮೇಲೆ ಹಲ್ಲೆಗಳು ತಡೆಯುವುದು ಹೇಗೆ..?

ನಮ್ಮ ದೇಶದ ಸಂವಿಧಾನವು ದಲಿತ-ಆದಿವಾಸಿಗಳನ್ನು ವಿಶೇಷವಾಗಿ ಗುರುತಿಸಿ ಅವರಿಗೆ ವಿಶೇಷ ಸವಲತ್ತು ಮತ್ತು ರಕ್ಷಣೆ ನೀಡಿದೆ. ಒಬ್ಬ ವ್ಯಕ್ತಿಯಿಂದ ದಲಿತರ ಮೇಲೆ ಸಣ್ಣದಾದ ದೌರ್ಜನ್ಯ ನಡೆದಾಗ ಅದನ್ನು ಶಿಕ್ಷರ್ಹ ಅಪರಾಧವೆಂದು ಪರಿಗಣಿಸಬೇಕೆಂದು ಸಂವಿಧಾನವೇ ಹೇಳುತ್ತದೆ

ಆದರೆ ಪ್ರಭುತ್ವವೇ ಸಂವಿಧಾನವನ್ನು ಉಲ್ಲಂಘಿಸಿ ದಲಿತರ ಮೇಲೆ ಹಲ್ಲೆಗಳನ್ನು ನಡೆಸುತ್ತದೆ ಇದರರ್ಥ ದಮನಿತ ಮತ್ತು ಶೋಷಿತ ಜಾತಿಗಳ ಬಗ್ಗೆ ಪ್ರಭುತ್ವಕ್ಕೆಯಿರುವ ಜಾತಿ ಪೂರ್ವಗ್ರಹ ಹಾಗು ಜಾತಿ ದ್ವೇಷ ಕಾರಣವೆನಿಸುತ್ತದೆ ಏಕೆಂದರೆ ಖೈರ್ಲಾಂಜಿ, ಕಂಬಾಲಪಲ್ಲಿ, ಝೂಜ್ಜರು ಬಿಹಾರದಲ್ಲಿ ರಣವೀರ ಸೇನೆ 33 ದಾಳಿಗಳು ಮಾಡಿ 280 ದಲಿತರನ್ನು ಕಗ್ಗೊಲೆ ಮಾಡಿದರೂ ಈ ಮೇಲಿನ ಯಾವ ಪ್ರಕರಣದಲ್ಲಿ ಕೂಡ ಪ್ರಭುತ್ವವು ದಲಿತರ ಪರ ನಿಂತು ಕೊಂಡಿಲ್ಲ.

ಹಾಗು ದಲಿತರ ಮೇಲೆ ದೌರ್ಜನ್ಯ ನಡೆಸಿದವರನ್ನು ಸರಕಾರ ಬಂಧಿಸಿ ಅವುದರಲ್ಲಿ ವಿಫಲವಾಗಿದೆ ಇದಕ್ಕೆ ಮುಖ್ಯವಾದ ಕಾರಣ ಪೋಲಿಸ್ ಇಲಾಖೆ ಕೂಡ ಜಾತಿ ಪೂರ್ವಗ್ರಹದಿಂದ ಕೂಡಿದೆ. ಆದುದರಿಂದ ಪೋಲಿಸರು ದೌರ್ಜನ್ಯ ನಡೆಸಿದವರನ್ನು ಬಂಧಿಸುವ ಬದಲು ದೂರು ಕೊಡುವುದಕ್ಕೆ ಹೋದ ದಲಿತರ ವಿರುದ್ಧ ದೂರು ದಾಖಲಿಸಿಕೊಂಡು ದಲಿತರ, ಮುಸ್ಲಿಂ, ಆದಿವಾಸಿಗಳನ್ನು ದೈಹಿಕವಾಗಿ ಚಿತ್ರಹಿಂಸೆ ನೀಡುತ್ತಿದ್ದಾರೆ.

ಕಂಬಾಲಪಲ್ಲಿ, ಕಾರಂ ಚೇಡು, ಝೂಜ್ಜರು, ಖೈರ್ಲಾಂಜಿಗಳ ದಲಿತರ ನರಮೇದ ನಡೆದಾಗ ಅವುಗಳನ್ನು ಖಂಡಿಸಿ ದಲಿತರು ಪ್ರತಿಭಟನೆ ನಡೆಸಿದಾಗ ಅವರ ಚಳುವಳಿಗಳನ್ನು ಪ್ರಭುತ್ವ ದಮನಿಸುವ ರೀತಿ ಖೈರ್ಲಾಂಜಿ, ಕಂಬಾಲಪಲ್ಲಿಗಳಲ್ಲಿ ನಡೆದ ದುಷ್ಕೃತ್ಯಗಳಿಗಿಂತ ಕಡಿಮೇ ಏನು ಇಲ್ಲ, ಮೇಲು ಜಾತಿಯವರು ದಲಿತರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾಗ ಪೋಲಿಸರು ಮೂಕ ಪ್ರೇಕ್ಷಕರಾಗಿರುತ್ತಾರೆ. ನಂತರ ಜಾತಿ ದೌರ್ಜನ್ಯಗಳನ್ನು ನಡೆಸಿದ ಮೇಲು ಜಾತಿಯವರನ್ನು ಪ್ರಭುತ್ವವೇ ಮುಂದೆ ಬಿದ್ದು ರಕ್ಷಿಸುತ್ತದೆ. ಇಂತಹ ಸಂದರ್ಭದಲ್ಲಿ ಪ್ರಭುತ್ವದಲ್ಲಿ ಉನ್ನತ ಅಧಿಕಾರ ಸ್ಥಾನದಲ್ಲಿ ದಲಿತ ಅಧಿಕಾರಿಗಳು ಇದ್ದರೂ ಕೂಡ ದಲಿತರಿಗೆ ಅನೂಕೂಲವಾಗುತ್ತಿಲ್ಲ, ಏಕೆಂದರೆ ಸುಶಿಕ್ಷಿತ ದಲಿತರು ತನ್ನ ಸಮುದಾಯದ ಹಿತಸಕ್ತಿಯನ್ನು ನಿರ್ಲಕ್ಷಿಸಿ ತನ್ನ ಸಮುದಾಯದ ಜೊತೆಗೆ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಂಡು ತನ್ನ ವರ್ಗ ಹಿತಸಕ್ತಿಯನ್ನು ಕಾಪಾಡಿಕೊಳ್ಳುತ್ತಾನೆ.

ಉದಾಹರಣೆ: ಕಂಬಾಲಪಲ್ಲಿ ಘಟನೆ ನಡೆದಾಗ ಗೃಹಮಂತ್ರಿ, ಡಿಜಿಪಿ, ಎಸ್‌ಪಿ, ತಹಸಿಲ್ದಾರು, ಇನ್ಸ್‌ಪೆಕ್ಟರ್ ಹಾಗು ನ್ಯಾಯಾಲಯದ ನ್ಯಾಯಧೀಶರು ಕೂಡ ದಲಿತರು ಇದ್ದರೂ ಕೂಡ ದಲಿತರಿಗೆ ನ್ಯಾಯ ಸಿಗಲಿಲ್ಲ.

ಇಂದು ದೇಶದಲ್ಲಿ ಪ್ರಭುತ್ವ ಅಭಿವೃದ್ಧಿಗೆಂದು ಶತಮಾನಗಳಿಂದ ಭೂಹೀನರಾಗಿರುವ ಅಲ್ಪಸ್ವಲ್ಪ ಭೂಮಿಯನ್ನು ಹೊಂದಿರುವ ದಲಿತರ ಭೂಮಿಯನ್ನು ವಶಪಡಿಸಿಕೊಂಡು ದಲಿತರನ್ನು ಬೀದಿಪಾಲು ಮಾಡಿದೆ. ಬಾಕ್ರ ನಂಗಲ್, ಹಿರಾಕುಡ್ ಅಣೆಕಟ್ಟುಗಳು, ಬಿಲಾಯಿ, ರೊರ್‍ಕೆಲ, ಕಾರ್ಖಾನೆಗಳಾಗಾಗಿ ಒಕ್ಕಲೆಬ್ಬಿಸಿದ ಜನರಲ್ಲಿ ಬಹುಪಾಲು ದಲಿತ, ಮತ್ತು ಆದಿವಾಸಿಗಳೇ ಜಾಸ್ತಿಯಿದ್ದಾರೆ. ಬಂಡವಾಳ ಶಾಹಿಗಳ ಪರವಾಗಿ ಪ್ರಭುತ್ವವು ಭೂಮಿಯನ್ನು ವಶಪಡಿಸಿಕೊಳ್ಳುವುದಕ್ಕೆ ಮುಂದಾದಾಗ ಇದರ ವಿರುದ್ಧ ಪ್ರತಿಭಟಿಸಿದಾಗ ಆ ಚಳುವಳಿಗಳನ್ನು ಪ್ರಭುತ್ವ ದಮನಮಾಡಿದಾಗ ಹೆಚ್ಚಾಗಿ ಹಲ್ಲೆಗೆ ಒಳಗಾಗುವವರು ದಲಿತರು ಮತ್ತು ಆದಿವಾಸಿಗಳು.

ಉದಾಹರಣೆ: ನಂದಿಗ್ರಾಮ, ಸಿಂಗೂರು, ಒರಿಸ್ಸಾದ ಜಗದಿಶಪುರ, ಕಾಳಿಂಗನಗರ (ಕಾಶಿಪುರ) ಹಾಗು ಗುರುಗಾಂವ್ ಹಾಗು ನಕ್ಸಲ್ಸ್ ಚಳುವಳಿಯಲ್ಲಿ ಹೆಚ್ಚಾಗಿ ದಲಿತರು ಮತ್ತು ಆದಿವಾಸಿಗಳು ಇರುವುದರಿಂದ ಪ್ರಭುತ್ವ ತನ್ನ ಎಲ್ಲಾ ಶಕ್ತಿಯನ್ನು ಉಪಯೋಗಿಸಿಕೊಂಡು ದಮನ ಮಾಡುತ್ತಿದೆ ಹಾಗಾಗಿ ನಂದಿಗ್ರಾಮ ಸಿಂಗೂರುಗಳಲ್ಲಿ ಪ್ರಭುತ್ವದ ದಾಳಿಗಳಿಂದ ಹೆಚ್ಚಾಗಿ ದಲಿತರು ಮತ್ತು ಆದಿವಾಸಿಗಳು ಹೆಚ್ಚಾಗಿ ಸತ್ತು ಹೋಗಿದ್ದಾರೆ, ಮತ್ತು ನಕ್ಸಲೀಯರ ನೆಪದಲ್ಲಿ ಕಪಟ ಎನ್‌ಕೌಂಟರುಗಳಲ್ಲಿ ಕೊಲೆಯಾದವರು ಬಹುಪಾಲು ದಲಿತ ಮತ್ತು ಆದಿವಾಸಿಗಳೇ ಆಗಿದ್ದಾರೆ. ಪ್ರಭುತ್ವವು ಇನ್ನು ಹಲವಾರು ರೀತಿಗಳಲ್ಲಿ ದಲಿತರ ಮೇಲೆ ದೌರ್ಜನ್ಯಗಳನ್ನು ನಡೆಸುತ್ತ ದಲಿತರ ಹಕ್ಕುಗಳನ್ನು ಕಸಿದು ಕೊಳ್ಳುತ್ತಿದೆ. ಡಾ||ಬಿ.ಆರ್ ಅಂಬೇಡ್ಕರರು ಬರೆದಿರುವ ಸಂವಿಧಾನಕ್ಕೆ ಅನುಗುಣವಾಗಿ ಪ್ರಭುತ್ವ ನಡೆಯುತ್ತದೆ ಎಂದು ನಂಬಿದ್ದ ದಲಿತರ ಕನಸು ನುಚ್ಚು ನೂರಾಗಿದೆ.

1991ರ ಜಾಗತೀಕರಣದ ನಂತರ ಗ್ರಾಮೀಣ ಭಾರತದಲ್ಲಿ ಕೃಷಿ ಬಿಕ್ಕಟ್ಟು ಉಂಟಾಗಿ ರೈತರು ಆತ್ಮಹತ್ಯೆಮಾಡಿಕೊಂಡರು. ಕಾರ್ಖಾನೆಗಳು ಮುಚ್ಚಿರುವುದರಿಂದ ಕಾರ್ಮಿಕರ ಬೀದಿಪಾಲಾದರು, ನಿರುದ್ಯೋಗ ಸಮಸ್ಯೆ ಜಾಸ್ತಿಯಾಯಿತು. ಕೃಷಿಯೇತರ ರಂಗಗಳಲ್ಲಿ ಉದ್ಯೋಗ ಅವಕಾಶಗಳು ಇಲ್ಲವಾದವು. ಕೃಷಿ ಬಿಕ್ಕಟ್ಟಿನಿಂದ ಭೂಹೀನ ಕಾರ್ಮಿಕರು ಬೀದಿಪಾಲಾದರು. ಒಟ್ಟಾರೆ1991ರ ಜಾಗತೀಕರಣದಿಂದ ದಲಿತರು ಹೆಚ್ಚು ಬಾದೆಗೊಳಗಾದರು, ಇಂತಹ ಸಂದರ್ಭದಲ್ಲಿ ಪ್ರಭುತ್ವ ಜನರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸಲಿಲ್ಲ ಬದಲಾಗಿ ನಕ್ಸಲ್ಸ್ ಭಯೋತ್ಪಾದನೆ, ಭದ್ರತೆ, ಕಡೆಗೆ ಹೆಚ್ಚು ಗಮನ ಕೊಟ್ಟಿತು. ಇಂತಹ ಸನ್ನಿವೇಶಗಳು ಜನರಲ್ಲಿ ಒಂದು ಕಡೆ ಹತಾಶೆ ಹಾಗು ಆಕ್ರೋಶ ಉಂಟುಮಾಡಿತು.

ಹತಾಶರಾದ ಜನರು ಆತ್ಮಾಹತ್ಯೆ ದಾರಿ ಹಿಡಿದರೆ ಆಕ್ರೋಶ ಶೀಲಾರದವರು ಜಾತಿ ಸಂಘರ್ಷಗಳಿಗೆ ಕಾರಣವಾದರು, ಆದುದರಿಂದ 1991ರ ನಂತರ ದೇಶದಲ್ಲಿ ಎಲ್ಲಾ ರೀತಿಯ ಅಪರಾಧಗಳು ಅಂದರೆ ಕೊಲೆ ಸುಲಿಗೆ, ಕಳ್ಳತನ ಜಾತಿ ದೌರ್ಜನ್ಯಗಳು ಹೆಚ್ಚಾಗಿವೆ. ಮತ್ತು ರೈತರ ಆತ್ಮಾಹತ್ಯ ಕೂಡ ಜಾಸ್ತಿ ಆಗಿವೆ, ಮತ್ತು 1991ರ ನಂತರ ಅಭಿವೃದ್ಧಿ ಮಾದರಿಯಿಂದ ದಲಿತರ ಹಾಗು ದಲಿತಯೇತರ ನಡುವೆ ಘರ್ಷಣೆಗಳು ಉಂಟುಮಾಡಿವೆ. ಹಾಗು ಈ ಅಭಿವೃದ್ಧಿಗಳಿಂದ ಶೂದ್ರರ ಕೈಗಾರಿಕೆ ಹಾಗು ವ್ಯಾಪರಗಳಲ್ಲಿ ತಮ್ಮನ್ನು ಜಾಸ್ತಿಯಾಗಿ ತೊಡಿಸಿಕೊಂಡು ಉನ್ನತಿ ಸ್ಥಾನಕ್ಕೇರಿದರೆ ದಲಿತರು ಕರ್ಮಚಾರಿಗಳಾಗಿ ಶೌಚಾಲಯ ಶುಚಿ ಮಾಡುವ ಕೆಲಸಗಳನ್ನು ಮಾಡುತ್ತಾರೆ.

ಜಾಗತಿಕರಣ ಜಾತಿಯನ್ನು ನಾಶಮಾಡುತ್ತದೆ ಎಂದು ಎಲ್ಲಾರು ಭಾವಿಸಿದ್ದರು. ಆದರೆ ಅದು ಸುಳ್ಳಾಗಿದೆ. ದಲಿತರು ಆರ್ಥಿಕ ಅಭಿವೃದ್ಧಿ ಹೊಂದಿದರೆ ಸಾಂಸ್ಕೃತಿಕವಾಗಿ ಉನ್ನತಿ ಪಡೆದರೆ ದಲಿತರ ಮೇಲೆ ದೌರ್ಜನ್ಯಗಳು ನಡೆಯುವುದು ನಿಲ್ಲುತ್ತದೆ ಎಂದು ಎಲ್ಲಾರು ಭಾವಿಸಿದ್ದರು. ಇದು ಕೂಡ ಸುಳ್ಳಾಗಿದೆ, ಖೈರ್ಲಾಂಜಿ, ಕಂಬಾಲಪಲ್ಲಿ ನರಮೇದಗಳು 1991ರ ಜಾಗತಿಕರಣ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ನಡೆದವು. ಈ ನರಮೇದ ನಡೆದ ಸಂದರ್ಭದಲ್ಲಿ ಭಾರತದ ಸಮಗ್ರ ಅಭಿವೃದ್ಧಿದರ(GOP) 9.2 ರಷ್ಟಿತ್ತು.

ವಿದೇಶಿ ಹೂಡಿಕೆ ದೊಡ್ಡ ಸಂಖ್ಯೆಯಲ್ಲಿ ಹರಿದು ಬರುತ್ತಿತ್ತು. ಷೇರುವಹಿವಾಟುಗಳು ಮುಗಿಲು ಮುಟ್ಟಿದವು. ಭಾರತದ ವಿದೇಶಿ ವಿನಿಮಯ ಸಂಗ್ರಹವು ಜಾಸ್ತಿಯಾಗಿತ್ತು. ಒಟ್ಟಾರೆ ಭಾರತವು ಜಾಗತಿಕರಣದ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡಿತು. ಜಾಗತಿಕರಣದಿಂದ ಭಾರತದ ಸಮಾಜದಲ್ಲಿನ ಜಾತಿ ವೈರುಧ್ಯಗಳು ಜಾಸ್ತಿಯಾದವು. ಏಕೆಂದರೆ ಭಾರತದಲ್ಲಿ ಬಂಡವಾಳಶಾಹಿ ವ್ಯವಸ್ಥೆಯು ಊಳಿಗೆಮಾನ್ಯ ವ್ಯವಸ್ಥೆಯ ಜೊತೆಗೆ ಮೈತ್ರಿ ಬೆಳಸಿತೊಡಗಿತು ಹೊರೆತು ಬಂಡವಾಳ ವ್ಯವಸ್ಥೆಯು ಯೂರೊಪಿನಲ್ಲಿ ಊಳಿಗೆಮಾನ್ಯ

ಜಾಗತಿಕರಣ ಜಾತಿಯನ್ನು ನಾಶಮಾಡುತ್ತದೆ ಎಂದು ಎಲ್ಲಾರು ಭಾವಿಸಿದ್ದರು. ಆದರೆ ಅದು ಸುಳ್ಳಾಗಿದೆ. ದಲಿತರು ಆರ್ಥಿಕ ಅಭಿವೃದ್ಧಿ ಹೊಂದಿದರೆ ಸಾಂಸ್ಕೃತಿಕವಾಗಿ ಉನ್ನತಿ ಪಡೆದರೆ ದಲಿತರ ಮೇಲೆ ದೌರ್ಜನ್ಯಗಳು ನಡೆಯುವುದು ನಿಲ್ಲುತ್ತದೆ ಎಂದು ಎಲ್ಲಾರು ಭಾವಿಸಿದ್ದರು. ಇದು ಕೂಡ ಸುಳ್ಳಾಗಿದೆ, ಖೈರ್ಲಾಂಜಿ, ಕಂಬಾಲಪಲ್ಲಿ ನರಮೇದಗಳು 1991ರ ಜಾಗತಿಕರಣ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ನಡೆದವು. ಈ ನರಮೇದ ನಡೆದ ಸಂದರ್ಭದಲ್ಲಿ ಭಾರತದ ಸಮಗ್ರ ಅಭಿವೃದ್ಧಿ ದರ(GOP) 9.2 ರಷ್ಟಿತ್ತು. ವಿದೇಶಿ ಹೂಡಿಕೆ ದೊಡ್ಡ ಸಂಖ್ಯೆಯಲ್ಲಿ ಹರಿದು ಬರುತ್ತಿತ್ತು. ಷೇರುವಹಿವಾಟುಗಳು ಮುಗಿಲು ಮುಟ್ಟಿದವು.

ವ್ಯವಸ್ಥೆಯ ಸೊಂಟ ಮುರಿತಂತೆ ಭಾರತದಲ್ಲಿ ಊಳಿಗ ಮಾನ್ಯರ ವ್ಯವಸ್ಥೆಯ ಸೊಂಟ ಮುರಿಯಲಿಲ್ಲ. ಬಂಡವಾಳ ಶಾಹಿಯು ಊಳಿಗಮಾನ್ಯ ವ್ಯವಸ್ಥೆಯನ್ನು ಪರಿಪೂರ್ಣ ವಾಗಿ ನಾಶಮಾಡಲಿಲ್ಲ. ಆದುದರಿಂದ ಸಮಾಜದಲ್ಲಿ ಜಾಗತೀಕರಣ ಪ್ರಭಾವದಿಂದ ಜಾತಿವಾದ, ಕೋಮುವಾದ ಜನಾಂಗಿಯವಾದ ಮತಿಯವಾದಗಳು ಇನ್ನಷ್ಟು ಬೆಳೆದವು.

ಹಾಗು 1991ರ ಜಾಗತಿಕರಣ ನಂತರ ಭಾರತದಲ್ಲಿ ನಡೆಯುತ್ತಿರುವ ದಲಿತರ ಮೇಲಿನ ಎಲ್ಲಾ ರೀತಿಯ ದೌರ್ಜನ್ಯಗಳು ಹೆಚ್ಚಾಗಿವೆ. ನ್ಯಾಷನಲ್ ಕ್ರೈಮ್ ರಿಕಾರ್ಡ್ ಬ್ಯೂರೋ (NCRB) ವರದಿಪ್ರಕಾರ 1981-1990ರಲ್ಲಿ 21877.8 ಹಾಗು 1991-2000ರಲ್ಲಿ 28041.0 ಮತ್ತು 2001-2005ರಲ್ಲಿ 2925.8 ದೌರ್ಜನ್ಯಗಳು ದಲಿತರ ಮೇಲೆ ನಡೆದಿವೆ. ಅಂದರೆ ವರ್ಷದಿಂದ ವರ್ಷಕ್ಕೆ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಲೆ ಇವೆ.

ದಲಿತರು ಆರ್ಥಿಕವಾಗಿ-ಸಾಂಸ್ಕೃತಿಕವಾಗಿ ಶೈಕ್ಷಣಿ ಕವಾಗಿ ಅಭಿವೃದ್ಧಿ ಹೊಂದಿರುವುದರಿಂದ ಇದನ್ನು ಶೂದ್ರ ಜಾತಿಗಳಿಗೆ ಸಹಿಸಲು ಆಗುತ್ತಿಲ್ಲ. ಆದುದರಿಂದ ಅವರ ಕೋಪವನ್ನು ಆಕ್ರೋಶ ಅಸಹನೆಯನ್ನು ದಲಿತರ ಮೇಲೆ ದೌರ್ಜನ್ಯಗಳು ನಡೆಸುವುದರ ಮುಖಾಂತರ ಹೊರಹಾಕುತ್ತಾರೆ. ಇಂದು ದೇಶದಲ್ಲಿ ಬಹುತೇಕ ಎಲ್ಲಾ ಪ್ರದೇಶಗಳು ಬ್ರಾಹ್ಮಣಿಯ ಸಾಮಾಜಿಕ ವ್ಯವಸ್ಥೆ ಇಲ್ಲದಿದ್ದರೂ ಸಹ ಗ್ರಾಮೀಣ ಪ್ರದೇಶದಲ್ಲಿ ಜಾತಿಯನ್ನು ಹಾಗು ಅಸಮಾನತೆಯನ್ನು ಬ್ರಾಹ್ಮಣ ವ್ಯವಸ್ಥೆ ಬಿಟ್ಟುಕೊಟ್ಟಿಲ್ಲ ಅಂದರೆ ಹಳೆಯ ಮಡಿ-ಮೈಲಿಗೆಗಳ ಪದ್ಧತಿಗಳು ಹೆಚ್ಚು-ಕಡಿಮೆ ಮಾಯವಾಗಿದ್ದರೂ ಸಹ ದಲಿತರ ಬಗ್ಗೆ ಮೇಲ್ಜಾತಿಗಳ ಜಾತಿ ಪೂರ್ವಗ್ರಹ ಉಳಿದುಕೊಂಡಿದೆ.

ದಲಿತರ ಮೇಲೆ ದೌರ್ಜನ್ಯಗಳು ನಡೆದಾಗ ಜಾತಿ ಪ್ರಜ್ಞೆಯ ವಿರುದ್ಧ ಹೋರಾಡಲು ನಾಗರಿಕ ಸಮಾಜವಾಗಲಿ, ಸರಕಾರವಾಗಲಿ ವಿಶೇಶ ಪ್ರಯತ್ನಗಳು ಮಾಡಲಿಲ್ಲ. ಹಾಗು ದೇಶದ ಪ್ರಗತಿಪರರು, ಬುದ್ಧಿಜೀವಿಗಳು ಕೋಮುವಾದ, ಸಾಮ್ರಾಜ್ಯವಾದ, ಲಿಂಗತಾರತಮ್ಯ ಅಭಿವೃದ್ಧಿ, ಪರಿಸರ, ಕಾರ್ಮಿಕ ಮತ್ತು ರೈತರ ಹಿತಸಕ್ತಿಯಂತ ಸಾಮಾಜಿಕ ವಿಷಯಗಳನ್ನು ಕೈಗೆತ್ತುಕೊಂಡು ಹೋರಾಡಿದಂತೆ ಹಾಗು ಮುಸ್ಲಿಂ-ಕ್ರಿಶ್ಚಿಯನರ ಮೇಲೆ ದಾಳಿ ನಡೆದಾಗ ಧ್ವನಿ ಎತ್ತುವ ಬುದ್ಧಿಜೀವಿಗಳು ದಲಿತರ ಮೇಲೆ ಮೇಲ್ಜಾತಿಯವರು ದೌರ್ಜನ್ಯಗಳು ನಡೆಸಿದಾಗ ಧ್ವನಿ ಎತ್ತುತ್ತಿಲ್ಲ ಏಕೆ....? ಇದೆಲ್ಲವನ್ನು ಗಮನಿಸಿದರೆ ಪ್ರಗತಿಪರರು, ಬುದ್ಧಿಜೀವಿಗಳು ಜಾತಿ ಪೂರ್ವಗ್ರಹದಿಂದ ಇನ್ನು ಹೊರಬಂದಿಲ್ಲ ಎನಿಸುತ್ತದೆ ಕಂಬಾಲಪಲ್ಲಿ.

ಖೈರ್ಲಾಂಜಿ ನರಮೇ ದಗಳು ನಡೆದಾಗ ಇವುಗಳ ಕುರಿತು ವಿಚಾರಸಂಕೀರ್ಣ, ಸಂವಾದ, ಪ್ರದರ್ಶನ ಮಾಧ್ಯಮಗಳ ಪ್ರಚಾರ ಇವುಗಳು ನಡೆದಿರುವುದು ಬಹಳ ಕಡಿಮೆ. ದಲಿತರ ಪರವಾಗಿ ಧ್ವನಿ ಎತ್ತುವ ಸಂಘಟನೆಗಳು, ಪ್ರಗತಿಪರರು, ಬುದ್ಧಿಜೀವಿಗಳು ಬಹಳ ಅಪರೂಪ, ದಲಿತರ ಬಗ್ಗೆ ನಾಗರಿಕ ಸಮಾಜ ಯಾಕೆ ಇಷ್ಟು ಅನಾಗರಿಕವಾಗುತ್ತದೆ. ಒಟ್ಟಾರೆ ಭಾರತೀಯ ನಾಗರಿಕ ಸಮಾಜ ದಲಿತ ಪರವಾದ ಸಹನಭೂತಿಯನ್ನು ಹೊಂದಿಲ್ಲ. ಇದಕ್ಕೆ ಮಾಧ್ಯಮಗಳು ಕೂಡ ಹೊರತ್ತಾಗಿಲ್ಲ.

ಮಾಧ್ಯಮಗಳು ಕೂಡ ದಲಿತರಿಗೆ ಬಹಿಷ್ಕಾರ ಹಾಕಿವೆ:-

ಅಸ್ಪೃಶ್ಯರಿಗೆ ಪತ್ರಿಕೆಯೊಂದಿಲ್ಲ ಎಂದು 1946ರಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಹೇಳಿದ್ದಾರೆ. ಪ್ರಜಾಪ್ರಭುತ್ವದ ನಾಲ್ಕನೇಯ ಸ್ತಂಭವಾದ ಮಾಧ್ಯಮಗಳನ್ನು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಒಂದು ನಿರ್ಣಯಕವಾದ ಕ್ಷೇತ್ರವೆಂದು ಪರಿಗಣಿಸಲಾಗುತ್ತದೆ. ಈ ಮಾಧ್ಯಮ ಕ್ಷೇತ್ರದಲ್ಲಿ ಶೇ. 79 ರಷ್ಟು ಮೇಲ್ಜಾತಿಯವರು ಶೇ. 4ರಷ್ಟು ಹಿಂದುಳಿದ ವರ್ಗದವರು ಶೇ.3 ರಷ್ಟು ಮುಸ್ಲಿಂರು ಇದ್ದಾರೆ. ಆದರೆ ಭಾರತದ ಜನಸಂಖ್ಯೆಯಲ್ಲಿ ಒಟ್ಟು ಜನಸಂಖ್ಯೆಗೆ 24ರಷ್ಟಿರುವ ದಲಿತರ ಮತ್ತು ಆದಿವಾಸಿಗಳು ಮಾಧ್ಯಮ ಕ್ಷೇತ್ರದಲ್ಲಿ ಬೆರಳೆಣಿಕೆಯಷ್ಟು ಜನ ಇದ್ದಾರೆ. ಮಾಧ್ಯಮಗಳಲ್ಲಿ ಮೇಲ್ಜಾತಿಯವರೇ ಜಾಸ್ತಿಯಿರುವುದರಿಂದ ದಲಿತರ ಮೇಲೆ ಖೈರ್ಲಾಂಜಿ ಕಂಬಾಲಪಲ್ಲಿ, ಕಾರಂಚೇಡು, ಬೆಲ್ಚಿನಂತಹ ನರಮೇದಗಳು ನಡೆದಾಗ ಮಾಧ್ಯಮಗಳು ಜಾತಿಪೂರ್ವಗ್ರಹದಿಂದ ವರದಿ ಮಾಡುತ್ತಾರೆ.

ದಲಿತರು ಆರ್ಥಿಕವಾಗಿ-ಸಾಂಸ್ಕೃತಿಕವಾಗಿ ಶೈಕ್ಷಣಿ ಕವಾಗಿ ಅಭಿವೃದ್ಧಿ ಹೊಂದಿರುವುದರಿಂದ ಇದನ್ನು ಶೂದ್ರ ಜಾತಿಗಳಿಗೆ ಸಹಿಸಲು ಆಗುತ್ತಿಲ್ಲ. ಆದುದರಿಂದ ಅವರ ಕೋಪವನ್ನು ಆಕ್ರೋಶ ಅಸಹನೆಯನ್ನು ದಲಿತರ ಮೇಲೆ ದೌರ್ಜನ್ಯಗಳು ನಡೆಸುವುದರ ಮುಖಾಂತರ ಹೊರಹಾಕುತ್ತಾರೆ. ಇಂದು ದೇಶದಲ್ಲಿ ಬಹುತೇಕ ಎಲ್ಲಾ ಪ್ರದೇಶಗಳು ಬ್ರಾಹ್ಮಣಿಯ ಸಾಮಾಜಿಕ ವ್ಯವಸ್ಥೆ ಇಲ್ಲದಿದ್ದರೂ ಸಹ ಗ್ರಾಮೀಣ ಪ್ರದೇಶದಲ್ಲಿ ಜಾತಿಯನ್ನು ಹಾಗು ಅಸಮಾನತೆಯನ್ನು ಬ್ರಾಹ್ಮಣ ವ್ಯವಸ್ಥೆ ಬಿಟ್ಟುಕೊಟ್ಟಿಲ್ಲ ಅಂದರೆ ಹಳೆಯ ಮಡಿ-ಮೈಲಿಗೆಗಳ ಪದ್ಧತಿಗಳು ಹೆಚ್ಚು-ಕಡಿಮೆ ಮಾಯವಾಗಿದ್ದರೂ ಸಹ ದಲಿತರ ಬಗ್ಗೆ ಮೇಲ್ಜಾತಿಗಳ ಜಾತಿ ಪೂರ್ವಗ್ರಹ ಉಳಿದುಕೊಂಡಿದೆ. ದಲಿತರ ಮೇಲೆ ದೌರ್ಜನ್ಯಗಳು ನಡೆದಾಗ ಜಾತಿ ಪ್ರಜ್ಞೆಯ ವಿರುದ್ಧ ಹೋರಾಡಲು ನಾಗರಿಕ ಸಮಾಜವಾಗಲಿ, ಸರಕಾರವಾಗಲಿ ವಿಶೇಶ ಪ್ರಯತ್ನಗಳು ಮಾಡಲಿಲ್ಲ.

ಮಾಧ್ಯಮವನ್ನು ನವ ಉದಾರವಾದಿ ಆರ್ಥಿಕತೆಯು ಒಂದು ದೊಡ್ಡ ಉದ್ಯಮವನ್ನಾಗಿ ಪರಿವರ್ತಿಸಿಬಿಟ್ಟಿದೆ. ಆದುದರಿಂದ ಮಾಧ್ಯಮಗಳು ಸಾಮಾಜಿಕ ಬದ್ಧತೆ ಬಗ್ಗೆ ಜವಾಬ್ದಾರಿ ಇಲ್ಲ. ಮಾಧ್ಯಮಗಳು ಮಾರುಕಟ್ಟೆ ಪರ ಮನೋಭಾವನೆಯಿರುವುದರಿಂದ ಮತ್ತು ಮಾಧ್ಯಮಗಳಲ್ಲಿ ಕೆಲಸ ಮಾಡುವವರು ಜಾತಿ ಪೂರ್ವಗ್ರಹಗಳನ್ನು ಹೊಂದಿರುವವರು ಜಾಸ್ತಿ ಇರುವುದರಿಂದ ದಲಿತರ ಮೇಲೆ ದೌರ್ಜನ್ಯಗಳನ್ನು ಜಾತಿ ದೌರ್ಜನ್ಯಗಳ್ನು ಸಾಮಾಜಿಕ ಬಹಿಷ್ಕಾರಗಳನ್ನು ವರದಿ ಮಾಡದೇ ಮಾಧ್ಯಮಗಳು ಕೂಡ ದಲಿತ ವಿರೋಧಿ ಪ್ರಜಾತಂತ್ರ ವಿರೋಧಿ ಕೆಲಸಗಳನ್ನು ಮಾಡುತ್ತವೆ.

ದುರ್ಗ ಪೂಜೆ, ಗಣೇಶ ಹಬ್ಬ, ಶಿವರಾತ್ರಿ, ಹಬ್ಬಗಳ ಬಗ್ಗೆ ವರದಿ ಮಾಡುವ ಮಾಧ್ಯಮಗಳು ಖೈರ್ಲಾಂಜಿ, ಕಂಬಾಲಪಲ್ಲಿ, ನಂದಿಗ್ರಾಮ(ಹೆಚ್ಚಾಗಿ ದಲಿತರು ಸತ್ತಿದ್ದಾರೆ) ನಿಥಾರಿ, ರಣವೀರ ಸೇನೆಯ ಕಗ್ಗೊಲೆಗಳ ಬಗ್ಗೆ ಪ್ರಚಾರ ಮಾಡಲಿಲ್ಲ. ಹಾಗು ಜಾತಿ ದೌರ್ಜನ್ಯಗಳನ್ನು ಹೇಗೆ ತಡೆಯುವುದು ಎಂಬ ವಿಷಯವನ್ನು ಚರ್ಚೆ ಮಾಡಲಿಲ್ಲ. ಹಾಗು ಜಸ್ಸಿಕಲಾಲ್, ಪ್ರಿಯದರ್ಶಿನಿ ಮಟ್ಟುಕೊಲೆಗಳ ವಿಷಯದಲ್ಲಿ ಮಾಧ್ಯಮಗಳು ಮಾಡಿದಷ್ಟು ಪ್ರಚಾರಂದೋಲನ ಕಂಬಾಲಪಲ್ಲಿ, ಖೈರ್ಲಾಂಜಿ ಘಟನೆಗಳ ಬಗ್ಗೆ ಪ್ರಚಾರ ಮಾಡಲಿಲ್ಲ. ಇದಕ್ಕೆ ಬಹಳ ಮುಖ್ಯವಾದ ಕಾರಣ ಮಾಧ್ಯಮ ಕ್ಷೇತ್ರದಲ್ಲಿ ಜಾತಿ ಪೂರ್ವಗ್ರಹವುಳ್ಳವರು ಜಾಸ್ತಿಯಿರುವುದು ಮತ್ತು ಈ ಕ್ಷೇತ್ರದಲ್ಲಿ ದಲಿತರು ಹೆಚ್ಚಾಗಿ ಇಲ್ಲದೆ ಇರುವುದು. ಒಟ್ಟಾರೆ ಶೂದ್ರ ಮೇಲ್ಜಾತಿಯವರು ದಲಿತರಿಗೆ ಬಹಿಷ್ಕಾರ ಹಾಕಿದಂತೆ ಮಾಧ್ಯಮಗಳು ದಲಿತರಿಗೆ ಬಹಿಷ್ಕಾರ ಹಾಕಿವೆ. ಇದು ವಿಶ್ವದಲ್ಲೇ ಪ್ರಜಾಪ್ರಭುತ್ವ ದೇಶಕ್ಕೆ ನಾಚಿಗೇಡಿನ ಸಂಗತಿ.

ದಲಿತರು ಮತ್ತು ಆದಿವಾಸಿಗಳು ಈ ಸಮಾಜದಲ್ಲಿ ವಿಭಿನ್ನ ಬಗೆಯ ತಾರತಮ್ಯ ಮತ್ತು ಪೂರ್ವಗ್ರಹಗಳಿಗೆ ತುತ್ತಾಗಿದ್ದಾರೆ, ಜಾತಿ ದೌಜನ್ಯಗಳು ನಡೆಯುವುದಕ್ಕೆ ಮುಖ್ಯವಾದ ಕಾರಣ ರಾಜಕೀಯ, ಆರ್ಥಿಕತೆ, ಸಾಮಾಜಿಕ ಮತ್ತು ಐತಿಹಾಸಿಕ ಹಿನ್ನಲೆ, ನೀತಿ ರಹಿತ ಸಮಾಜ, ಪ್ರಭುತ್ವ ಮತ್ತು ಮಾಧ್ಯಮಗಳು, ನ್ಯಾಯಂಗ ಪ್ರಕ್ರಿಯೇಗಳು ಇವೆಲ್ಲವು ಒಟ್ಟು ಸೇರಿ ಜಾತಿ ದೌರ್ಜನ್ಯ ನಡೆಸಬಹುದಾದ ಸಂದರ್ಭವನ್ನು ಸೃಷ್ಟಿಸುತ್ತವೆ. ಆದುದರಿಂದ ಜಾತಿ ದೌರ್ಜನ್ಯಗಳು ಜಾಸ್ತಿ ನಡೆಯುತ್ತವೆ.

ಇದಕ್ಕೆ ಉತ್ತಮ ಪರಿಹಾರ ಎಂದರೆ ಸಮಾಜದಲ್ಲಿನ ಜಾತಿ ಪ್ರಜ್ಞೆಯನ್ನು ಹಾಗು ಜಾತಿ ದ್ವೇಷವನ್ನು ನಾಶಮಾಡಬೇಕು, ಮತ್ತು ದಲಿತರು-ಶೂದ್ರರಲ್ಲಿ ವರ್ಗ ಪ್ರಜ್ಞೆಯನ್ನು ರೂಪಿಸಬೇಕು. ಜಾತಿ ಮತ್ತು ವರ್ಗಗಳ ಬೆಸುಗೆಯಾಗಬೇಕು, ಆಗ ಮಾತ್ರ ಜಾತಿವಿನಾಶವಾಗಲು ಸಾಧ್ಯ. ಏಕೆಂದರೆ ವರ್ಗ ಸಂಘರ್ಷವು ಜಾತಿಯನ್ನು ವಿನಾಶಗೊಳಿಸುತ್ತ ಒಂದು ಕ್ರಾಂತಿಕಾರಿ ಮಾರ್ಪಡುತರುತ್ತದೆ. ಆದುದರಿಂದ ಜಾತಿಯನ್ನು ವರ್ಗದ ಪ್ರಮುಖ ಭಾಗವೆಂದು ಪರಿಗಣಿಸಬೇಕು. ಮತ್ತು ವರ್ಗ ಆದಾರದ ಮೆಲೆ ವೃತ್ತಿಗಳು ನಡೆಯಬೇಕು. ಮತ್ತು ಜಾತಿವಿನಾಶ ಚಳುವಳಿಗೆ ವರ್ಗ ಮತ್ತು ಜಾತಿಗಳ ಹೊಸ ಮೈತ್ರಿಬೇಕು. ಅದು ಎಡ ಶಕ್ತಿಗಳು ದಲಿತರು ಹಾಗು ಅಲ್ಪಸಂಖ್ಯಾತರ ನಡುವೆಯಿರಬೇಕು, ಹಾಗು ದಲಿತರು-ಶೂದ್ರರು ಜಾತಿ ಸೀಮೆಗಳನ್ನು ಮೀರಿ ಐಕ್ಯತೆಯಾಗಬೇಕು ಆಗ ಮಾತ್ರ ದಲಿತರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಗಟ್ಟಬಹುದು ಮತ್ತು ದಲಿತರ ಮೇಲೆ ನಡೆಯುವ ಹತ್ಯೆ, ದೌರ್ಜನ್ಯಗಳ ದಮನ, ಬಹಿಷ್ಕಾರಗಳ ನೆಲೆಗಳನ್ನು ಅರ್ಥಮಾಡಿಕೊಳ್ಳಲು ಅವುಗಳ ನಡೆದ ಸಮಾಜಿಕ ಮತ್ತು ಐತಿಹಾಸಿಕ ಸಂದರ್ಭದಲ್ಲಿ ಪ್ರತಿಯೊಬ್ಬರ ವಿಶ್ಲೇಷಣೆ ಮಾಡಿದಾಗ ಮಾತ್ರ ಪರಿಹಾರ ಕಂಡುಕೊಳ್ಳಲು ಸಾಧ್ಯ.

ದಲಿತರ ಮೇಲೆ ದೌರ್ಜನ್ಯಗಳು ನಡೆಸುವುದಕ್ಕೆ ಸಮಾಜಿಕ ಅವ್ಯವಸ್ಥೆಗಳನ್ನು ಹುಟ್ಟುಹಾಕುತ್ತಿ ರುವ ವ್ಯವಸ್ಥೆ ಬದಲಾದಗ ಮಾತ್ರ ದಲಿತರ ಮೇಲೆ ನಡೆ ಯುವ ಜಾತಿ ದೌರ್ಜನ್ಯಗಳನ್ನು ತಡೆಗಟ್ಟಬಹುದು ಹಾಗು ಕಂಬಾಲಪಲ್ಲಿಗಳಿಗೆ-ಖೈರ್ಲಾಂಜಿಗಳಿಗೆ ನಿಜವಾದ ನ್ಯಾಯ ಸಿಗುತ್ತದೆ. (ಈ ಲೇಖನದ ಪರಿಪೂರ್ಣ ಎಲ್ಲಾ ಅಂಶಗಳು ಖೈರ್ಲಾಂಜಿ(ಮೂಲ ಆನಂದ್ ತೇಲ್‌ತುಂಬ್ಡೆ ಕನ್ನಡಕ್ಕೆ ಶಿವಸುಂದರ್)ಪುಸ್ತಕ ಆದಾರವಾಗಿದೆ. □

ವಿಜಾಪುರ ಜಿಲ್ಲೆ: ಅಭಿವೃದ್ಧಿಯ ಕಥೆ; ದುಸ್ಥಿತಿಯ ವ್ಯಥೆ!



ಡಾ. ಟಿ.ಆರ್. ಚಂದ್ರಶೇಖರ್

ಇಂದಿನ ವಿಜಾಪುರ ಜಿಲ್ಲೆಯ ಅಭಿವೃದ್ಧಿ-ದುಸ್ಥಿತಿ ವಿಷಚಕ್ರವನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಾವು ಅದರ ಚರಿತ್ರೆಯನ್ನು ನೋಡಬೇಕಾಗುತ್ತದೆ. ಆ ಚರಿತ್ರೆಯು ಜನರಲ್ಲಿ ಉಂಟು ಮಾಡಿರುವ ಮಾನಸಿಕ ಅಸ್ವಸ್ಥತತೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇಂದಿಗೂ ಅಲ್ಲಿ ಸರ್ಕಾರಿ ಅಧಿಕಾರಿಗಳ ಕೋಣೆಯನ್ನು ಕೆಳಹಂತದ ಕಾರಕೂನರು ಪ್ರವೇಶಿಸಬೇಕಾದರೆ ಪಾದರಕ್ಷೆಗಳನ್ನು ಹೊರಗೆ ಬಿಡಬೇಕಾಗುತ್ತದೆ. ಇದು ಏನನ್ನು ಸೂಚಿಸುತ್ತದೆ? ಇಲ್ಲಿನ ಜನರು ದಬ್ಬಾಳಿಕೆಯ, ಶೋಷಣಾತ್ಮಕ ಮೌಲ್ಯಗಳನ್ನು ಅಂತರ್ಗತ ಮಾಡಿಕೊಂಡಿದ್ದಾರೆ. ಈ ದಾಸ್ಯದ ಮೌಲ್ಯವು ರಕ್ತದಲ್ಲಿ ಒಂದಾಗಿ ಬಿಟ್ಟಿದೆ. ಅದರ ಪ್ರತಿಫಲವೇ ಇಂದಿನ ಬಡತನ, ದುಸ್ಥಿತಿ, ಅನಕ್ಷರತೆ, ಅನಾರೋಗ್ಯ.

ಪ್ರಸ್ತಾವನೆ

ಕರ್ನಾಟಕದಲ್ಲಿ ಬರಕ್ಕೆ ಸಂಬಂಧಿಸಿದಂತೆ ವಿಶೇಷ ಸ್ಥಾನ ವನ್ನು ಬಿಜಾಪುರ ಜಿಲ್ಲೆಯು ಪಡೆದುಕೊಂಡಿದೆ. ಅದರದು ಬರದ ಚರಿತ್ರೆ, ವಸಾಹತುಶಾಹಿ ಕಾಲಾವಧಿಯಲ್ಲಿ ಅದು ಬಾಂಬೆ ಪ್ರಾಂತದ ಭಾಗವಾಗಿತ್ತು. ರಾಜ್ಯ ಪುರ್ನರಚನೆಯಾದ 1956ರಲ್ಲಿ ಅದು ಕರ್ನಾಟಕದಲ್ಲಿ ವಿಲೀನಗೊಂಡಿತು. ಸುಮಾರು 200 ವರ್ಷಗಳ ಕಾಲ ಅದು ಭಾಷಾ ತಬ್ಬಲಿತನವನ್ನು ಅನುಭವಿಸಿತು. ಈ ಪ್ರದೇಶವು 1818ರಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟಿತು. ಈ ಪ್ರದೇಶವು ಸರಿ ಸುಮಾರು 200 ವರ್ಷಗಳ ಕಾಲ ಒಂದಲ್ಲ ಒಂದು ಯುದ್ಧದ, ದಂಗೆಯ, ದರೋಡೆಯ, ಪ್ಲೇಗಿನ, ಕ್ಷಾಮದ ನೆಲೆಯಾಗಿತ್ತು. ಈ ಬಗೆಯ 200 ವರ್ಷಗಳ ಕಾಲ(1750–1950) ಅದು ರಾಜಕೀಯ ಅರಾಜಕತೆಯನ್ನು, ಸಾಮಾಜಿಕ ಅಭದ್ರತೆ ಯನ್ನು, ಆರ್ಥಿಕ ಸಂಕಷ್ಟವನ್ನು, ಸಾಂಸ್ಕೃತಿಕ ಅನಾಥತನವನ್ನು ಎದುರಿಸಬೇಕಾಯಿತು. ಈ ಪ್ರದೇಶವು ಸುಮಾರು 200 ವರ್ಷಗಳ ಕಾಲ ರಣಭೂಮಿಯಾಗಿತ್ತು. ಒಂದು ಕಡೆ ಮರಾಠ ಪೇಶ್ವೆಯರು, ಮತ್ತೊಂದು ಕಡೆ ಹೈದರಾಬಾದ್ ನಿಜಾಮ, ಸ್ಥಳೀಯ ಪಾಳೇಗಾ ರರು, ಜಮೀನುದಾರರು, ಜಹಗೀರಿದಾರರು ಮತ್ತು ಬ್ರಿಟಿಶರು-ಹೀಗೆ ಹಲವರು ವಿಜಾಪುರ ಪ್ರದೇಶವನ್ನು ತಮ್ಮ ಸಂಘರ್ಷದ ನೆಲೆಯನ್ನಾಗಿ ಮಾಡಿಕೊಂಡಿದ್ದರು. ವಿಜಾಪುರ ಗೆಜೆಟಿಯರ್‌ನಲ್ಲಿ ಇದನ್ನು ಹೀಗೆ ಹಿಡಿದಿಡಲಾಗಿದೆ.

'ವಿಜಾಪುರ ಪ್ರದೇಶವು ಸುಮಾರು 200 ವರ್ಷಗಳ ಕಾಲ ಮರಾಠರ ಆಕ್ರಮಣ, ಜಹಗೀರ್‌ದಾರರ ದರೋಡೆ, ರೆವಿನ್ಯೂ ಅಧಿಕಾರಿಗಳ ದೌರ್ಜನ್ಯ, ಕಳ್ಳ-ಕಾಕರ ಲೂಟಿ ಮತ್ತು ಪೇಶ್ವೆಗಳ ದಬ್ಬಾಳಿಕೆಗಳ ಕೇಂದ್ರವಾಗಿತ್ತು'.

ಇಂದಿನ ವಿಜಾಪುರ ಜಿಲ್ಲೆಯ ಅಭಿವೃದ್ಧಿ-ದುಸ್ಥಿತಿ ವಿಷಚಕ್ರ ವನ್ನು ಅರ್ಥ ಮಾಡಿಕೊಳ್ಳಬೇಕಾದರೆ ನಾವು ಅದರ ಚರಿತ್ರೆಯನ್ನು ನೋಡಬೇಕಾಗುತ್ತದೆ. ಆ ಚರಿತ್ರೆಯು ಜನರಲ್ಲಿ ಉಂಟು ಮಾಡಿ ರುವ ಮಾನಸಿಕ ಅಸ್ವಸ್ಥತತೆಯನ್ನು ನಾವು ಅರ್ಥ ಮಾಡಿಕೊಳ್ಳ ಬೇಕಾಗಿದೆ. ಇಂದಿಗೂ ಅಲ್ಲಿ ಸರ್ಕಾರಿ ಅಧಿಕಾರಿಗಳ ಕೋಣೆಯನ್ನು ಕೆಳಹಂತದ ಕಾರಕೂನರು ಪ್ರವೇಶಿಸಬೇಕಾದರೆ ಪಾದರಕ್ಷೆಗಳನ್ನು ಹೊರಗೆ ಬಿಡಬೇಕಾಗುತ್ತದೆ. ಇದು ಏನನ್ನು ಸೂಚಿಸುತ್ತದೆ? ಇಲ್ಲಿನ ಜನರು ದಬ್ಬಾಳಿಕೆಯ, ಶೋಷ ಣಾತ್ಮಕ ಮೌಲ್ಯಗಳನ್ನು ಅಂತ ರ್ಗತ ಮಾಡಿಕೊಂಡಿದ್ದಾರೆ. ಈ ದಾಸ್ಯದ ಮೌಲ್ಯವು ರಕ್ತ ದಲ್ಲಿ ಒಂದಾಗಿ ಬಿಟ್ಟಿದೆ. ಅದರ ಪ್ರತಿಫಲವೇ ಇಂದಿನ ಬಡತನ, ದುಸ್ಥಿತಿ, ಅನಕ್ಷರತೆ, ಅನಾ ರೋಗ್ಯ..

ಈ 200 ವರ್ಷಗಳಿ ಗಿಂತ ಹಿಂದೆ ಹೋದರೆ ಅಲ್ಲಿ ಬಹುಮನಿ ಅರಸರ ಆಡಳಿತದ ಚರಿತ್ರೆ ದೊರೆಯುತ್ತದೆ. ಅದಕ್ಕೂ ಹಿಂದೆ ಹೋದರೆ ನಮಗೆ ವಚನಕಾರರ ಚರಿತ್ರೆ ದೊರೆಯು ತ್ತದೆ. ಬಸವಣ್ಣ ಹುಟ್ಟಿದ ಬಾಗೇವಾಡಿಯು ಬಿಜಾಪುರದ ಸನಿಹದಲ್ಲಿದೆ. ಅವನು ಶಿಕ್ಷಣ ಪಡೆದ ಮತ್ತು ಅವನು ಲಿಂಗೈಕ್ಯವಾದ ಕೂಡಲಸಂಗ ಮವೂ ಅದೇ ಜಿಲ್ಲೆಯಲ್ಲಿದೆ. ಅದಕ್ಕೂ ಹಿಂದೆ ಹೋದರೆ ನಮಗೆ ಚಾಲುಕ್ಯರ ಚರಿತ್ರೆಯು ದೊರೆಯುತ್ತದೆ. ಅದರ ಗುರುತುಗಳು ಇಂದಿಗೂ ಬದಾಮಿ, ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲಿ ನೋಡಲು ದೊರೆಯುತ್ತದೆ. ಅಲ್ಲಿನ ಗುಡಿ ಗುಡಾರಗಳನ್ನು, ಸಾಂಸ್ಕೃತಿಕ ಸ್ಥಳಗ ಳನ್ನು ಬಿಟ್ಟರೆ ವಚನಕಾರರು ಬಿತ್ತಿದ್ದ ಮೌಲ್ಯಗಳು ಅಲ್ಲೇನು ನಮಗೆ ಎದ್ದು ಕಾಣುವುದಿಲ್ಲ!. ಆದರೆ ಅಲ್ಲಿನ ಸಂಕರ ಸಂಸ್ಕೃತಿಯು ಮಾತ್ರ ಬೆರಗುಟ್ಟಿಸುವಂತಿದೆ.

ಮುಸ್ಲಿಮರು, ಲಿಂಗಾಯತರು, ಬ್ರಾಹ್ಮಣರು, ಕುರುಬರು, ಹಿಂದುಳಿದ ವರ್ಗಗಳು, ಪರಿಶಿಷ್ಟರು ಎಲ್ಲರೂ ಇಲ್ಲಿ ಸೌಹಾರ್ದತೆ ಮತ್ತು ಸಂಘರ್ಷಗಳ ಸಂಬಂಧದಲ್ಲಿ ಬದುಕುತ್ತಿದ್ದಾರೆ. ಸಮಾಜದಲ್ಲಿ ಸಂಘರ್ಷವಿರುತ್ತದೆ. ಆದರೆ ಜನರು ಶಾಂತಿ-ಸೌಹಾರ್ದತೆಯಿಂದ ಕೂಡಿದ ಬದುಕನ್ನು ಅಲ್ಲಿ ಕಟ್ಟಿಕೊಂಡಿದ್ದಾರೆ. ಈ ಜಿಲ್ಲೆಯು 1818 ರಿಂದ 1956ರವರೆಗೆ ಮುಂಬೈ ಪ್ರಾಂತದ ಭಾಗವಾಗಿತ್ತು. ಇದರ ಜೊತೆಗೆ ಧಾರವಾಡ, ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳೂ ಮುಂಬೈ ಪ್ರಾಂತದ ಭಾಗವಾಗಿದ್ದವು. ಈಗಲೂ ಕರ್ನಾಟಕದ ಧಾರವಾಡ,(ಹಾವೇರಿ ಮತ್ತು ಗದಗಗಳನ್ನು ಸೇರಿಸಿಕೊಂಡು)ಬೆಳಗಾವಿ, ಉತ್ತರ ಕನ್ನಡ ಮತ್ತು ವಿಜಾಪುರ(ಬಾಗಲಕೋಟೆಯನ್ನು ಸೇರಿಸಿಕೊಂಡು) ಜಿಲ್ಲೆಗಳನ್ನು ಮುಂಬೈ ಕರ್ನಾಟಕವೆಂದು ಕರೆಯಲಾಗುತ್ತದೆ. ಈ ನಾಲ್ಕು ಜಿಲ್ಲೆಗಳ ಪೈಕಿ ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಇಂದು ರಾಜ್ಯದ ಮುಂದುವರಿದ ಜಿಲ್ಲೆಗಳ ಸಾಲಿನಲ್ಲಿ ನಿಂತಿದ್ದರೆ ವಿಜಾಪುರ ಮಾತ್ರ ಹಿಂದುಳಿದ ಜಿಲ್ಲೆಯ ಸ್ಥಾನದಲ್ಲೇ ಮುಂದುವರಿದಿದೆ.

ವಾಸ್ತವವಾಗಿ ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (2001) ರಾಜ್ಯದ 27 ಜಿಲ್ಲೆಗಳ ಪೈಕಿ ಕ್ರಮವಾಗಿ 7 ನೆಯ ಮತ್ತು 8 ನೆಯ ಸ್ಥಾನಗಳಲ್ಲಿವೆ. ಅವುಗಳ ಅಭಿವೃದ್ಧಿ ಮಟ್ಟವು ದಕ್ಷಿಣ ಕರ್ನಾಟಕ ಪ್ರದೇಶದ ಹಾಸನ(11), ಚಿಕ್ಕಮಗಳೂರು(9), ಮೈಸೂರು(14) ಜಿಲ್ಲೆಗಳಿಗಿಂತ ಉತ್ತಮವಾಗಿದೆ. ಆದರೆ ವಿಜಾಪುರ ಜಿಲ್ಲೆಯ ಸ್ಥಾನ ಮಾತ್ರ 1991 ರಲ್ಲಿ 21 ರಲ್ಲಿದ್ದರೆ 2001ರಲ್ಲಿ ಅದರ ಸ್ಥಾನವು 23ರಲ್ಲಿದೆ. ಇದು ಅತ್ಯಂತ ಕುತೂಹಲಕಾರಿಯಾದ ಮತ್ತು ಕಳವಳಕಾರಿಯದ ಸಂಗತಿಯಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ವಿಜಾಪುರ ಜಿಲ್ಲೆಯ ಅಭಿವೃದ್ಧಿಯ ಸ್ಥಿತಿಗತಿಯನ್ನು ಕುರಿತಂತೆ ಚರ್ಚೆ ಮಾಡಲಾಗಿದೆ. ಈ ಜಿಲ್ಲೆಯಲ್ಲಿ ಅಭಿವೃದ್ಧಿ ಪ್ರಕ್ರಿಯೆಯು ಇಂದು ಗಂಭೀರವಾದ ಬಿಕ್ಕಟ್ಟನ್ನು ಎದುರಿಸುತ್ತದೆ. ಅದು ಅಭಿವೃದ್ಧಿಯ ಜೊತೆಯಲ್ಲಿ ದುಸ್ಥಿತಿಯನ್ನು ಅನುಭವಿಸುತ್ತಿದೆ. ಅಭಿವೃದ್ಧಿಯ ಲಾಭ ಯಾರಿಗೆ ಸಿಗುತ್ತಿದೆ ಮತ್ತು ದುಸ್ಥಿತಿಯ ನೋವನ್ನು ಯಾರು ಅನುಭವಿಸುತ್ತಿದ್ದಾರೆ ಎಂಬುದು ಚರ್ಚಿಸಬೇಕಾಗಿರುವ ಅತಿ ಮುಖ್ಯ ಸಂಗತಿಯಾಗಿದೆ.

ಹಿಂದುಳಿದಿರುವಿಕೆಯ ಎರಡು ನೆಲೆಗಳು

ಅಭಿವೃದ್ಧಿಯನ್ನು ಮತ್ತು ದುಸ್ಥಿತಿಯನ್ನು ಇಂದು ಎರಡು ಸೈದ್ಧಾಂತಿಕ ಧಾರೆಗಳಲ್ಲಿ ಪರಿಭಾವಿಸಿಕೊಳ್ಳಬಹುದಾಗಿದೆ. ರಾಜ್ಯದ/ಜಿಲ್ಲೆಯ ವರಮಾನದಲ್ಲುಂಟಾಗುವ ಏರಿಕೆಯಿಂದ ಅಭಿವೃದ್ಧಿಯನ್ನು ಮಾಪನ ಮಾಡುವ ಕ್ರಮ ರೂಢಿಯಲ್ಲಿದೆ. ಇದನ್ನು ಆರ್ಥಿಕ ಅಭಿವೃದ್ಧಿಯೆಂದು ಕರೆಯಲಾಗುತ್ತದೆ. ಆದರೆ ಇಂದು ವರಮಾನದಲ್ಲಿನ ವರ್ಧನೆಯೇ ಅಭಿವೃದ್ಧಿಯಲ್ಲ ಎಂಬುದು ದೃಢಪಟ್ಟಿದೆ. ಅದನ್ನು ಸಾಕ್ಷರತೆ, ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ, ಲಿಂಗ ಸಮಾನತೆ ಮುಂತಾದ ಸಂಗತಿಗಳನ್ನು ಒಳಗೊಂಡ ಸಂಯುಕ್ತ ಪ್ರಕ್ರಿಯೆಯಾಗಿ ನೋಡುವ ಅಗತ್ಯವನ್ನು ತಜ್ಞರು ಒತ್ತಾಯಿಸುತ್ತಿದ್ದಾರೆ. ಈ ಬಗೆಯ ಅಭಿವೃದ್ಧಿಯ ಸೈದ್ಧಾಂತಿಕ ಧಾರೆಯನ್ನು ಮತ್ತು ಅದರ ಸಂಯುಕ್ತ ಮಾಪನ ಕ್ರಮವನ್ನು ಮಾನವ ಅಭಿವೃದ್ಧಿಯೆಂದು ಕರೆಯಲಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ವಿಜಾಪುರದ ಪ್ರಗತಿಯನ್ನು ಅಭಿವೃದ್ಧಿ-ದುಸ್ಥಿತಿಗಳ ವಿಷಚಕ್ರದಲ್ಲಿ ಸಿಲುಕಿರುವ ಒಂದು ಜಿಲ್ಲೆಯನ್ನಾಗಿ ಪರಿಭಾವಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಅದು ಅಭಿವೃದ್ಧಿಯ ದಾರಿಯಲ್ಲಿ ನಡೆದಿದೆ. ಅದರ ಬಗ್ಗೆ ಅನುಮಾನವಿಲ್ಲ. ಆದರೆ ಅಲ್ಲಿ ದುಸ್ಥಿತಿಯೂ ಇದೆ. ಇವೆರಡೂ ಏಕಕಾಲದಲ್ಲಿ ಜಿಲ್ಲೆಯಲ್ಲಿ ನಡೆಯುತ್ತಿವೆ. ಈ ಬಗೆಯ ಪ್ರಕ್ರಿಯೆ ಎಲ್ಲ ರಾಜ್ಯ-ಜಿಲ್ಲೆಗಳಲ್ಲೂ ಕಾಣಬಹುದೆಂದು ಯಾರಾದರೂ ಪ್ರಶ್ನೆಯನ್ನು ಕೇಳಬಹುದು. ಆದರೆ ವಿಜಾಪುರದ ಅನುಭವವೆಂದರೆ ಅಲ್ಲಿ ದುಸ್ಥಿತಿಯ ಗತಿ ಮತ್ತು ಪ್ರಮಾಣವು ಅಭಿವೃದ್ಧಿಯ ಗತಿ ಮತ್ತು ಪ್ರಮಾಣಕ್ಕಿಂತ ಅಧಿಕವಾಗಿದೆ. ಅಲ್ಲಿನ ದುಸ್ಥಿತಿಯ ಸ್ವರೂಪವು ಅತ್ಯಂತ ಸಂಕೀರ್ಣವಾಗಿದೆ. ಅದು ಬಹುರೂಪಿ ಪ್ರಕ್ರಿಯೆಯಾಗಿದೆ.

ವಿಜಾಪುರ ಜಿಲ್ಲೆಯ ಅಭಿವೃದ್ಧಿಯ ವ್ಯಥೆಯ ಭಾಗ ವಾವುದೆಂದರೆ ಅದು ವರಮಾನ ಸಂಬಂಧಿ-ಆರ್ಥಿಕ ಅಭಿವೃದ್ಧಿಯಲ್ಲಿ ಮತ್ತು ಜನರನ್ನು ಒಳಗೊಂಡ ಮಾನವ ಅಭಿವೃದ್ಧಿ- ಎರಡು ಮಾನದಂಡಗಳಲ್ಲಿಯೂ ಹಿಂದುಳಿದಿರುವುದು ಕಂಡು ಬರುತ್ತದೆ. ಅದರ ಮಾನವ ಅಭಿವೃದ್ಧಿ ಸೂಚ್ಯಂಕವು 1991ರಲ್ಲಿ 0.504 ರಷ್ಟಿತ್ತು. ಅದು 2001ರಲ್ಲಿ 0.589ರಷ್ಟಾಗಿದೆ. ಒಟ್ಟು ಮೊತ್ತದಲ್ಲಿ ಅದು ಏರಿಕೆಯಾಗಿದೆ. ಆದರೆ ಅದರ ಸಾಪೇಕ್ಷ ಸ್ಥಾನಮಾನ ಮಾತ್ರ ಕುಸಿದಿದೆ. ಈಗಾಗಲೆ ತಿಳಿಸಿರುವಂತೆ ಅದರ ಮಾನವ ಅಭಿವೃದ್ಧಿ ಸೂಚ್ಯಂಕದ ಸ್ಥಾನ 1991ರಲ್ಲಿ 21 ರಲ್ಲಿದ್ದುದು 2001 ರಲ್ಲಿ 23ಕ್ಕೆ ಇಳಿದಿದೆ. ಅಂದರೆ ಅದರ ಸ್ಥಾನವು ಕಳೆದ ದಶಕದಲ್ಲಿ ಕುಸಿದಿದೆ. ರಾಜ್ಯದ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಸದರಿ ಜಿಲ್ಲೆಯ ಅಭಿವೃದ್ಧಿ ಪಾಲು 1991 ರಲ್ಲಿ ಶೇ 93.16 ರಷ್ಟಾಗಿದ್ದರೆ 2001 ರಲ್ಲಿ ಅದರ ಪಾಲು ಶೇ 90.61 ರಷ್ಟಾಗಿದೆ. ಅಂದರೆ ಕಳೆದ ದಶಕದಲ್ಲಿ ಅದರ ಸ್ಥಾನವು ಶೇ2.55 ಅಂಶಗಳಷ್ಟು ಕಡಿಮೆಯಾಗಿದೆ. ಇದು ಒಂದು ಮುಖವಾಯಿತು. ಅದರ ಇನ್ನೊಂದು ಮುಖವು ಇನ್ನೂ ಅತಂಕಕಾರಿಯಾಗಿದೆ.

ಅದರ ಒಟ್ಟು ಜಿಲ್ಲಾ ಆಂತರಿಕ ಉತ್ಪನ್ನವು(ಜಿಲ್ಲಾ ವರಮಾನ)1999-2000ದಲ್ಲಿ ರೂ2645.63 ಕೋಟಿಯಷ್ಟಿದ್ದುದು 2006-07ರಲ್ಲಿ ರೂ 4327.36 ಕೋಟಿಗೇರಿದೆ (ಚಾಲ್ತಿ ಬೆಲೆಗಳಲ್ಲಿ). ಕಳೆದ ಎಂಟು ವರ್ಷಗಳಲ್ಲಿ ಜಿಲ್ಲಾ ವರಮಾನವು ಶೇ 63.57ರಷ್ಟು ಏರಿಕೆಯಾಗಿದೆ. ಇಲ್ಲಿ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ 7.9 ರಷ್ಟಾಗುತ್ತದೆ.

ಅಭಿವೃದ್ಧಿಯನ್ನು ಮತ್ತು ದುಸ್ಥಿತಿಯನ್ನು ಇಂದು ಎರಡು ಸೈದ್ಧಾಂತಿಕ ಧಾರೆಗಳಲ್ಲಿ ಪರಿಭಾವಿಸಿಕೊಳ್ಳಬಹುದಾಗಿದೆ. ರಾಜ್ಯದ/ ಜಿಲ್ಲೆಯ ವರಮಾನದಲ್ಲುಂಟಾಗುವ ಏರಿಕೆಯಿಂದ ಅಭಿವೃದ್ಧಿಯನ್ನು ಮಾಪನ ಮಾಡುವ ಕ್ರಮ ರೂಢಿಯಲ್ಲಿದೆ. ಇದನ್ನು ಆರ್ಥಿಕ ಅಭಿವೃದ್ಧಿಯೆಂದು ಕರೆಯಲಾಗುತ್ತದೆ. ಆದರೆ ಇಂದು ವರಮಾನದಲ್ಲಿನ ವರ್ಧನೆಯೇ ಅಭಿವೃದ್ಧಿಯಲ್ಲ ಎಂಬುದು ದೃಢಪಟ್ಟಿದೆ. ಅದನ್ನು ಸಾಕ್ಷರತೆ, ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ, ಲಿಂಗ ಸಮಾನತೆ ಮುಂತಾದ ಸಂಗತಿಗಳನ್ನು ಒಳಗೊಂಡ ಸಂಯುಕ್ತ ಪ್ರಕ್ರಿಯೆಯಾಗಿ ನೋಡುವ ಅಗತ್ಯವನ್ನು ತಜ್ಞರು ಒತ್ತಾಯಿಸುತ್ತಿದ್ದಾರೆ. ಈ ಬಗೆಯ ಅಭಿವೃದ್ಧಿಯ ಸೈದ್ಧಾಂತಿಕ ಧಾರೆಯನ್ನು ಮತ್ತು ಅದರ ಸಂಯುಕ್ತ ಮಾಪನ ಕ್ರಮವನ್ನು ಮಾನವ ಅಭಿವೃದ್ಧಿಯೆಂದು ಕರೆಯಲಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ವಿಜಾಪುರದ ಪ್ರಗತಿಯನ್ನು ಅಭಿವೃದ್ಧಿ-ದುಸ್ಥಿತಿಗಳ ವಿಷ ಚಕ್ರದಲ್ಲಿ ಸಿಲುಕಿರುವ ಒಂದು ಜಿಲ್ಲೆಯನ್ನಾಗಿ ಪರಿಭಾವಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಆದರೆ ಇದೇ ಅವಧಿಯಲ್ಲಿ ರಾಜ್ಯದ ವರಮಾನದಲ್ಲಿ (1999-00ರಲ್ಲಿ ರೂ96178.60 ಕೋಟಿ,2006-07ರಲ್ಲಿ ರೂ 200922.35 ಕೋಟಿ) ಶೇ108.95 ರಷ್ಟು ಏರಿಕೆಯಾಗಿದ್ದರೆ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ 13.63 ರಷ್ಟಾಗಿದೆ. ವಿಜಾಪುರ ಜಿಲ್ಲೆಯ 1999-00ರಲ್ಲಿನ ವರಮಾ ನವು ರಾಜ್ಯ ವರಮಾನದ ಶೇ2.75ರಷ್ಟಿದ್ದುದು 2006-07ರಲ್ಲಿ ಅದರ ಪ್ರಮಾಣ ಶೇ 2.15ಕ್ಕೆ ಕುಸಿದಿದೆ.

ರಾಜ್ಯಮಟ್ಟದಲ್ಲಿ ನಡೆಯುತ್ತಿರುವ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ವಿಜಾಪುರವು ತನ್ನ ಪಾಲನ್ನು ಪೂರ್ಣವಾಗಿ ಪಡೆದುಕೊಳ್ಳುತ್ತಿಲ್ಲ. ಉದಾಹರಣೆಗೆ ಈ ಜಿಲ್ಲೆಯು ರಾಜ್ಯ ಜನಸಂಖ್ಯೆಯಲ್ಲಿ (2001)ಪಡೆದಿರುವ ಪಾಲು ಶೇ 3.42. ಆದರೆ ಅದು ರಾಜ್ಯದ ವರಮಾನದಲ್ಲಿ ಪಡೆದಿರುವ ಪಾಲು 1999-00 ರಲ್ಲಿ ಶೇ 2.75 ರಷ್ಟಿದ್ದುದು 2006-07ರಲ್ಲಿ ಶೇ2.15ಕ್ಕಿಳಿದಿದೆ. ಈ ಜಿಲ್ಲೆಯು ರಾಜ್ಯದ ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದೆಯೋ ಅಷ್ಟೇ ಪಾಲನ್ನು ರಾಜ್ಯದ ವರಮಾನದಲ್ಲೂ ಪಡೆಯಬೇಕಾದುದು ನ್ಯಾಯ. ಆದರೆ ಇಲ್ಲಿ ಸ್ಥಿತಿಯು ಕಳವಳಕಾರಿಯಾಗಿದೆ. ಮೊದಲನೆಯದಾಗಿ ಅದರ ಪಾಲು ಕಡಿಮೆ ಮತ್ತು ಎರಡನೆಯದಾಗಿ ಅದರ ಪಾಲು ಕುಸಿಯುತ್ತಿದೆ.

ಈ ವಿಷಯವನ್ನು ನಾವು ತಲಾ ವರಮಾನದ ದೃಷ್ಟಿಯಿಂದಲೂ ನೋಡಬಹುದಾಗಿದೆ. ಈ ಜಿಲ್ಲೆಯ ತಲಾ ವರಮಾನವು 1999-2000 ದಲ್ಲಿ ರೂ 14485 ರಷ್ಟಿದ್ದುದೂ 2006-07ರಲ್ಲಿ ರೂ 22344 ಕ್ಕೇರಿದೆ(ಚಾಲ್ತಿ ಬೆಲೆಗಳಲ್ಲಿ). ಒಟ್ಟು ಮೊತ್ತದಲ್ಲಿ ಏರಿಕೆಯಾಗಿದೆ. ಆದರೆ ಸಾಪೇಕ್ಷವಾಗಿ ನೋಡಿದಾಗ ಅದರ ಸ್ಥಿತಿಯು ಆತಂಕಕಾರಿಯಾಗಿರುವುದು ತಿಳಿಯುತ್ತದೆ. ಇಲ್ಲಿ ತಲಾ ವರಮಾನದಲ್ಲಿನ ವಾರ್ಷಿಕ ಏರಿಕೆಯು ಶೇ 6.8 ರಷ್ಟಾದರೆ ರಾಜ್ಯಮಟ್ಟದಲ್ಲಿ ತಲಾ ವರಮಾನದ ವಾರ್ಷಿಕ ಏರಿಕೆಯು ಶೇ 11.39 ರಷ್ಟಾಗಿದೆ. ಈ ಜಿಲ್ಲೆಯ ತಲಾ ವರಮಾನವು 1999-00 ರಲ್ಲಿ ರಾಜ್ಯ ವರಮಾನದ ಶೇ. 78.04 ರಷ್ಟಿದ್ದುದು 2006-07 ರಲ್ಲಿ ಅದು ಶೇ 63 ರಷ್ಟಾಗಿದೆ. ಜಿಲ್ಲೆಯ ತಲಾ ವರಮಾನದಲ್ಲಿ ವಿಜಾಪುರದ ಸ್ಥಾನ 2006-07ರಲ್ಲಿ 22 ನೆಯದಾಗಿದೆ. ಆದರೆ ತಲಾ ವರಮಾನದಲ್ಲಿ ಅದರ ಸ್ಥಾನ 1999-00ರಲ್ಲಿ 15 ರಲ್ಲಿತ್ತು. ಅಂದರೆ ಅದರ ಸ್ಥಾನವು 15 ರಿಂದ 22ಕ್ಕೆ ಕುಸಿದಿದೆ. ಇಲ್ಲಿ ನಾನು ನೀಡಿರುವ ಅಂಕಿ ಅಂಶಗಳನ್ನು ಅರಗಿಸಿಕೊಳ್ಳುವುದು ಸಾಧ್ಯವಾಗದಿದ್ದರೆ ಕೆಳಗೆ ನೀಡಿರುವ ಸಂಗತಿಗಳನ್ನು ಮನದಟ್ಟು ಮಾಡಿಕೊಂಡರೆ ಸಾಕು.

1. ಆರೋಗ್ಯ ಸೂಚ್ಯಂಕ, ಶೈಕ್ಷಣಿಕ ಸಾಧನೆ ಸೂಚ್ಯಂಕ ಮತ್ತು ತಲಾ ವರಮಾನ ಸೂಚ್ಯಂಕಗಳನ್ನು ಒಳಗೊಂಡಿರುವ

ಮಾನವ ಅಭಿವೃದ್ಧಿ ಸಂಯುಕ್ತ ಸೂಚ್ಯಂಕದಲ್ಲಿ ವಿಜಾಪುರ ಜಿಲ್ಲೆಯ ಸ್ಥಾನ ರಾಜ್ಯದ 27 ಜಿಲ್ಲೆಗಳ ಪೈಕಿ 1999-2000ದಿಂದ 2006-07ರ ಅವಧಿಯಲ್ಲಿ ತೀವ್ರ ಕುಸಿದಿದೆ.

2. ಅದರ ಸ್ಥಾನವು ತಲಾ ವರಮಾನಕ್ಕೆ ಸಂಬಂಧಿಸಿದಂತೆಯೂ 1999-2000ದಿಂದ 2006-07ರ ಅವಧಿಯಲ್ಲಿ ಕುಸಿಯುತ್ತ ನಡೆದಿದೆ.

3. ಜಿಲ್ಲೆಯ ಒಟ್ಟು ವರಮಾನವು ಸಾಪೇಕ್ಷವಾಗಿ ಮೇಲೆ ತಿಳಿಸಿರುವ ಅವಧಿಯಲ್ಲಿ ಹಿಂಜರಿಯುತ್ತಾ ನಡೆದಿದೆ.

ಇದು ಜಿಲ್ಲೆಯ ಅಭಿವೃದ್ಧಿಯ ದೃಷ್ಟಿಯಿಂದ ಆತಂಕಕಾರಿಯೂ ಮತ್ತು ಗಂಭೀರವಾಗಿ ಚಿಂತಿಸಬೇಕಾಗಿರುವ ಸಂಗತಿಯೂ ಆಗಿದೆ. ಆದರೆ ಈ ಜಿಲ್ಲೆಯ ಅಭಿವೃದ್ಧಿಯ ಚುಕ್ಕಾಣಿ ಹಿಡಿದಿರುವ ಮಂದಿ ಇದರ ಬಗ್ಗೆ ಚಿಂತಿಸುತ್ತಿರುವುದು ಕಂಡು ಬರುವುದಿಲ್ಲ. ಈ ಜಿಲ್ಲೆಯ ಅಭಿವೃದ್ಧಿ-ದುಸ್ಥಿತಿ ವಿಷಚಕ್ರದ ವಿಷಯ ಚಿಂತಾಜನಕವಾಗಿದೆಯೆಂಬುದು ಅವರಿಗೆ ತಿಳಿದಿದೆ ಎಂಬುದರ ಬಗ್ಗೆ ನನಗೆ ಅನುಮಾನವಿದೆ. ಏಕೆಂದರೆ ಜಿಲ್ಲೆಯ ಯಾವುದೆ ಜನ ಪ್ರತಿನಿಧಿಗಳು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವೇದಿಕೆಗಳಲ್ಲಿ ಇದರ ಬಗ್ಗೆ ಚರ್ಚೆ ಮಾಡುತ್ತಿಲ್ಲ.

ಸಾಕ್ಷರತೆಯಲ್ಲಿ ಜಿಲ್ಲೆಯ ಸ್ಥಾನ ಕುಸಿಯುತ್ತಿದೆ.

ಬಹಳ ಖೇದದ ಸಂಗತಿಯೆಂದರೆ ವಿಜಾಪುರ ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣವು 1991 ರಿಂದ 2001 ರ ಅವಧಿಯಲ್ಲಿ ಏರಿಕೆಯೇ ಆಗಿಲ್ಲ. ಅದರ ಜಿಲ್ಲಾ ಒಟ್ಟು ಸಾಕ್ಷರತಾ ಪ್ರಮಾಣವು 1991 ರಲ್ಲಿ ಶೇ. 56.55 ರಷ್ಟಿದ್ದುದು 2001 ರಲ್ಲಿ ಅದು ಶೇ 57.01 ರಷ್ಟಾಗಿದೆ. ರಾಜ್ಯ ಮಟ್ಟದಲ್ಲಿ 1991 ರಿಂದ 2001ರ ಅವಧಿಯಲ್ಲಿ ಸಾಕ್ಷರತೆಯು ಶೇ 10.6(19991 ಶೇ56.04, 2001 ಶೇ 66.64) ಅಂಶಗಳಷ್ಟು ಏರಿಕೆಯಾಗಿದ್ದರೆ ವಿಜಾಪುರ ಜಿಲ್ಲೆಯಲ್ಲಿ ಅದು ಕೇವಲ ಶೇ 0.46 ಅಂಶಗಳಷ್ಟು ಏರಿಕೆಯಾಗಿದೆ. ಬಹಳ ಗಂಭೀರವಾಗಿ ಪರಿಗಣಿಸ ಬೇಕಾಗಿರುವ

ಸಂಗತಿಯೆಂದರೆ 1991 ರಿಂದ 2001 ರ ಅವಧಿಯಲ್ಲಿ ಈ ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶದ ಸಾಕ್ಷರತಾ ಪ್ರಮಾಣವು ಶೇ 53.08 ರಿಂದ ಶೇ 51.97 ಕ್ಕೆ ಇಳಿದಿದೆ. ಮತ್ತೊಂದು ದುಸ್ಥಿತಿಯ ಸಂಗತಿಯೆಂದರೆ ಜಿಲ್ಲೆಯಲ್ಲಿ ಲಿಂಗ ಸಂಬಂಧಿ ಸಾಕ್ಷರತಾ ಅಂತರವು 1991ರಲ್ಲಿ ಶೇ 18.64 ರಷ್ಟಿದ್ದುದು 2001ರಲ್ಲಿ ಶೇ 22.61 ಕ್ಕೇರಿದೆ. ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಜಿಲ್ಲೆಯ ಅಕ್ಷರಸ್ಥರ ಪ್ರಮಾಣವು 1991ರಲ್ಲಿ ಶೇ 2.93 ರಷ್ಟಿದ್ದುದು 2001ರಲ್ಲಿ ಅದು ಶೇ 2.85 ಕ್ಕೆ ಇಳಿದಿದೆ.

ಅಕ್ಷರ ಸಂಸ್ಕೃತಿಯತ್ತ ಸಾಗಬೇಕಾದ ಜಿಲ್ಲೆಯು ಅದನ್ನು ಗಳಿಸಿಕೊಳ್ಳುವ ದಿಶೆಯಲ್ಲಿ ಅದು ವೈಫಲ್ಯವನ್ನು ಅನುಭವಿಸುತ್ತಿದೆ. ಈ ಜಿಲ್ಲೆಯಲ್ಲಿ 2003ರಲ್ಲಿ ಸರ್ಕಾರವು ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ. ಅದೊಂದು ಶ್ಲಾಘನೀಯ ಕಾರ್ಯವೆಂದು ಪರಿಗಣಿಸಿದರೂ ಉಳಿಯುವ ಪ್ರಶ್ನೆಯೆಂದರೆ ಅಲ್ಲಿನ ಜಿಲ್ಲಾ ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣ 1991ರಲ್ಲಿ ಶೇ. 35.29ರಷ್ಟಿದ್ದುದು 2001ರಲ್ಲಿ ಶೇ. 37.32 ರಷ್ಟಕ್ಕೇರಿದೆ. ಅಲ್ಲಿನ ಗ್ರಾಮೀಣ ಪರಿಶಿಷ್ಟ(ಪ.ಜಾ+ಪ.ಪಂ) ಮಹಿಳೆಯರ ಸಾಕ್ಷರತಾ ಪ್ರಮಾಣ 2001ರಲ್ಲಿ ಶೇ. 29.07. ಇಲ್ಲಿ ನಾನು ಏನನ್ನು ಹೇಳಲು ಪ್ರಯತ್ನಿಸುತ್ತಿದ್ದೇನೆಂದರೆ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿರುವ ಮಹಿಳಾ ವಿಶ್ವವಿದ್ಯಾಲಯದ ಫಲವನ್ನು ಜಿಲ್ಲೆಯ 4.20 ಲಕ್ಷ ಅನಕ್ಷರಸ್ಥ ಮಹಿಳೆಯರು (ಪುರುಷ ಅನಕ್ಷರಸ್ಥರ ಸಂಖ್ಯೆ 2.33 ಲಕ್ಷ)ಅನುಭವಿಸಲು ಸಾಧ್ಯವಿಲ್ಲವಾಗಿದೆ. ಇಲ್ಲೂ ಇರುವ ದುರಂತವನ್ನು ನಾವು ಗಮನಿಸಬೇಕು.

ಜಿಲ್ಲೆಯ ಒಟ್ಟು ಅನಕ್ಷರಸ್ಥರ ಸಂಖ್ಯೆಯಲ್ಲಿ (6.54 ಲಕ್ಷ) ಮಹಿಳೆಯರ ಪ್ರಮಾಣ ಶೇ. 64.22. ಆದರೆ ಜಿಲ್ಲೆಯ ಒಟ್ಟು ಅಕ್ಷರಸ್ಥರ ಸಂಖ್ಯೆಯಲ್ಲಿ(8.66ಲಕ್ಷ) ಮಹಿಳೆಯರ ಪ್ರಮಾಣ ಕೇವಲ ಶೇ. 37.24. ಇಲ್ಲಿ ಸ್ಥಾಪನೆಯಾಗಿರುವ ಮಹಿಳಾ ವಿಶ್ವವಿದ್ಯಾಲಯದಲ್ಲಿನ ವಿದ್ವಾಂಸರಿಗೆ ಜಿಲ್ಲೆಯಲ್ಲಿನ ಮಹಿಳಾ ಸಾಕ್ಷರತೆಗೆ ಸಂಬಂಧಿಸಿದ ದುಸ್ಥಿತಿಯ ಬಗ್ಗೆ ತಿಳಿದಿದೆಯೆಂದು ನಾನು ಭಾವಿಸಿದ್ದೇನೆ. ಆದರೆ ಅದು ಕಳೆದ ಐದು ವರ್ಷಗಳಲ್ಲಿ ಜಿಲ್ಲೆಯ ಮಹಿಳಾ ಸಮುದಾಯದಲ್ಲಿ ಸಾಕ್ಷರತೆ ಬಗ್ಗೆ, ಲಿಂಗ ಸಮಾನತೆ, ಮಹಿಳಾ ಸಶಕ್ತೀಕರಣದ ಬಗ್ಗೆ ಜಾಗೃತಿ ಮೂಡಿಸುವ ಕುರಿತಂತೆ ಅದು ಏನು ಮಾಡುತ್ತಿದೆ ಎಂಬುದು ತಿಳಿಯುತ್ತಿಲ್ಲ. ಅದು ಇಂತಹ ಕೆಲಸವನ್ನು ಇನ್ನೂ ಶುರು ಮಾಡದಿದ್ದರೆ ಈಗಲೂ ಕಾಲ ಮಿಂಚಿಲ್ಲ. ಅದು ಅಂತಹ ವಿಸ್ತರಣಾ ಕಾರ್ಯವನ್ನು ಆರಂಭಿಸಬಹುದಾಗಿದೆ. ಅಲ್ಲಿನ ವಿದ್ವಾಂಸರು ಅದರ ಬಗ್ಗೆ ಗಂಭೀರವಾಗಿ ಯೋಚಿಸುವುದು ಲೇಸು. ಏಕೆಂದರೆ ಜಿಲ್ಲೆಯಲ್ಲಿ ಲಿಂಗ ಸಂಬಂಧಗಳು ಮಹಿಳೆಯರಿಗೆ ಅತ್ಯಂತ ಪ್ರತಿಕೂಲವಾಗಿವೆ.

ಈ ಹಿನ್ನೆಲೆಯಲ್ಲಿ ಅಲ್ಲಿನ ಮಹಿಳಾ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಜವಾಬುದಾರಿಯಿದೆ. ಸ್ನಾತಕ ಪದವಿ, ಸ್ನಾತಕೋತ್ತರ ಪದವಿಗಳನ್ನು ಮತ್ತು ಶಿಕ್ಷಣವನ್ನು ನೀಡುವುದೇ ವಿಶ್ವವಿದ್ಯಾಲಯದ ಕೆಲಸವಾಗಿ ಬಿಡಬಾರದು. ಅದು ಮುಖ್ಯ. ಅದರ ಜೊತೆಗೆ ವಿಶ್ವವಿದ್ಯಾಲಯಕ್ಕೆ ಸಾಮಾಜಿಕವಾದ ಮತ್ತು ಪ್ರದೇಶ ನಿರ್ದಿಷ್ಟವಾದ ಜವಾಬುದಾರಿಯಿರುತ್ತದೆ. ಅದು ನೆಲೆಗೊಂಡಿರುವ ಪ್ರದೇಶದ ಜನರ, ಅದರಲ್ಲೂ ಮಹಿಳೆಯರ ಅಭಿವೃದ್ಧಿ ಬಗ್ಗೆ ಜಾಗೃತಿ ಮೂಡಿಸುವ, ತರಬೇತಿ ನೀಡುವ, ಅವರನ್ನು ಸಂಘಟಿಸುವ ಕೆಲಸವನ್ನು ಅದು ಮಾಡಬೇಕು.

ಕಂಗಾಲಾಗಿರುವ ಕೃಷಿಕರು

ವಿಜಾಪುರವು ಹೇಳಿಕೇಳಿ ಬರದ ಜಿಲ್ಲೆ. ಬರವನ್ನು ಕುರಿತಂತೆ ಇಲ್ಲಿ ದೊರೆಯುವಷ್ಟು ಜಾನಪದ ಗೀತೆಗಳು ಕರ್ನಾಟಕದ ಮತ್ತಾವ ಪ್ರದೇಶದಲ್ಲೂ ದೊರೆಯುವುದಿಲ್ಲ. ಬರವೆನ್ನುವುದು ಇಲ್ಲಿ ಜನರ ಜೀವನದ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ. ಬರವನ್ನು ಇಲ್ಲಿ ಜನರು ಬದುಕುತ್ತಿದ್ದಾರೆ. ಬರದ ಮತ್ತು ಬರ ನಿವಾರಣೆಯ ಚರಿತ್ರೆಯಲ್ಲಿ ವಿಜಾಪುರಕ್ಕೆ ವಿಶಿಷ್ಟವಾದ ಸ್ಥಾನವಿದೆ. ಬರ ನಿವಾರಣೆಗಾಗಿ ಕಳೆದ ಶತಮಾನದ 30-40ರ ದಶಕದಲ್ಲಿ ಬ್ರಿಟಿಷ್ ಸರ್ಕಾರವು ಇಲ್ಲಿ ನಡೆಸಿದ ಬರ ಪರಿಹಾರ ಕಾಮಗಾರಿಯನ್ನು ನಮ್ಮ ಜನಪದರು ತಮ್ಮ ಹಾಡುಗಳಲ್ಲಿ ಹಾಡಿದ್ದಾರೆ. ಸರ್ಕಾರದಿಂದ ಬರ ಪರಿಹಾರವನ್ನು ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲದ ಜಿಲ್ಲೆಯ ಸ್ವಾಭಿಮಾನಿ ಜನರು ಮುಂದೆ ಅದನ್ನು ಒಪ್ಪಿಕೊಳ್ಳುವ ಮತ್ತು ಅದನ್ನು ಹಾಡಿ-ಹೊಗಳುವ ಸ್ಥಿತಿಗೆ ಬರುವ ಚರಿತ್ರೆಯನ್ನು ನಾವು ಇಲ್ಲಿ ನೋಡಬಹುದಾಗಿದೆ. ಈ ಬಗೆಯ ಸಾಮಾಜಿಕ ಬದಲಾವಣೆಯ ಗತಿಶೀಲತೆಯನ್ನು ಸಮಾಜವಿಜ್ಞಾನಿಗಳು ಗುರುತಿಸಿದ್ದಾರೆ. ಈ ಪ್ರದೇಶವು ಬರ ಪೀಡಿತವೆಂದು ಘೋಷಿತವಾಗಿ ಒಂದು ಶತಮಾನವಾಗಿರುವಂತೆ ಕಾಣುತ್ತದೆ. ಇಂದಿಗೂ ಅದಕ್ಕೆ ಬರದಿಂದ ಮುಕ್ತಿ ದೊರೆತಿಲ್ಲ. ಕರ್ನಾಟಕದಲ್ಲಿ ಈ ವರ್ಷ (2009-01ರಲ್ಲಿ) ಬರದ ತೀವ್ರ ಬವಣೆಯಲ್ಲಿ ಸಿಲುಕಿರುವ ಮೊದಲ ಜಿಲ್ಲೆಯೆಂದರೆ ವಿಜಾಪುರ.

ಮಳೆಯಿರಲಿ ಅಥವಾ ಮಳೆ ಇಲ್ಲದೇ ಹೋಗಲಿ, ಬೆಂಗಳೂರಿನಲ್ಲಿ ಬರವು ಬರಲು ಸಾಧ್ಯವಿಲ್ಲ. ನಮ್ಮ ರಾಜ್ಯದಲ್ಲಿ ಬರ ಬರುವುದು ವಿಜಾಪುರಕ್ಕೆ, ಕೊಪ್ಪಳಕ್ಕೆ, ರಾಯಚೂರಿಗೆ , ಗುಲಬರ್ಗಾಕ್ಕೆ ಮುಂತಾದ ಜಿಲ್ಲೆಗಳಿಗೆ. ಬರ, ಅದನ್ನು ಜನರು ಹೇಗೆ ಎದುರಿಸುತ್ತಾರೆ, ಅದು ಯಾವ ಬಗೆಯ ಸಾಮಾಜಿಕ ಬದಲಾವಣೆಯನ್ನು ತರುತ್ತದೆ, ಅದರ ಸಂದರ್ಭದಲ್ಲಿ ಯಾರು ಲಾಭ ಮಾಡಿಕೊಳ್ಳುತ್ತಾರೆ, ಯಾರು ಹಾನಿಗೊಳಗಾಗುತ್ತಾರೆ ಎಂಬುದೆನ್ನು ಕುರಿತ ಅಧ್ಯಯನ ನಡೆಸುವುದಕ್ಕೆ ವಿಜಾಪುರವು ಫಲವತ್ತಾದ ಕ್ಷೇತ್ರವಾಗಿದೆ. ದುರಂತವೆಂದರೆ ಅಲ್ಲಿ ಬರದಿಂದ ಜನರಿಗೆ ಬಿಡುಗಡೆಯೇ ದೊರೆಯುತ್ತಿಲ್ಲ.

> **ಅಮರ್ತ್ಯಸೇನ್ 'ಸ್ವಾತಂತ್ರ್ಯವಾಗಿ ಅಭಿವೃದ್ಧಿ'ಯೆಂದು (1999) ಅಭಿವೃದ್ಧಿಯನ್ನು ನಿರ್ವಚಿಸಿದಾಗ ಅವನು ಅದನ್ನು ಜನರಿಗೆ ಹಸಿವಿನಿಂದ, ಬಡತನದಿಂದ, ಬರದಿಂದ, ಅನಕ್ಷರತೆಯಿಂದ, ಅನಾರೋಗ್ಯದಿಂದ, ಆಹಾರ ಅಭದ್ರತೆಯಿಂದ ಬಿಡುಗಡೆ-ಸ್ವಾತಂತ್ರ್ಯ ದೊರೆತಿದೆಯೇ ಎನ್ನುವ ಅರ್ಥದಲ್ಲಿ ಬಳಸಿದ್ದಾನೆ. ಈ ಬಗೆಯ ದುಸ್ಥಿತಿಗಳಿಂದ ಸ್ವಾತಂತ್ರ್ಯ ಪಡೆಯಲು ಸಾಧ್ಯವಿಲ್ಲದ ಸ್ಥಿತಿಯನ್ನೇ ಬಡತನ, ಅನಭಿವೃದ್ಧಿ, ಹಿಂದುಳಿದಿರುವಿಕೆಯೆಂದು ಕರೆಯುತ್ತಾನೆ. ಈ ದೃಷ್ಟಿಯಿಂದ ನೋಡಿದಾಗ ವಿಜಾಪುರ ಜಿಲ್ಲೆಯ ಜನರು ತೀವ್ರ ಅಸ್ವಾತಂತ್ರ್ಯದಿಂದ ನರಳುತ್ತಿರುವುದು ತಿಳಿಯುತ್ತದೆ. ರಾಜಕೀಯ ಸ್ವಾತಂತ್ರ್ಯವೇನೋ ದೊರೆತಿದೆ. ಆದರೆ ಡಾ.ಬಿ.ಆರ್.ಅಂಬೇಡ್ಕರ್ ಹೇಳುವ ಸಾಮಾಜಿಕ-ಆರ್ಥಿಕ ಅಸ್ವಾತಂತ್ರ್ಯಗಳಿಂದ ಬಿಡುಗಡೆ ಅಲ್ಲಿ ಜನರಿಗೆ ದೊರೆತಿಲ್ಲ.**

ಅಮರ್ತ್ಯಸೇನ್ 'ಸ್ವಾತಂತ್ರ್ಯವಾಗಿ ಅಭಿವೃದ್ಧಿ'ಯೆಂದು (1999) ಅಭಿವೃದ್ಧಿಯನ್ನು ನಿರ್ವಚಿಸಿದಾಗ ಅವನು ಅದನ್ನು ಜನರಿಗೆ ಹಸಿವಿನಿಂದ, ಬಡತನದಿಂದ, ಬರದಿಂದ, ಅನಕ್ಷರತೆಯಿಂದ, ಅನಾರೋಗ್ಯದಿಂದ, ಆಹಾರ ಅಭದ್ರತೆಯಿಂದ ಬಿಡುಗಡೆ-ಸ್ವಾತಂತ್ರ್ಯ ದೊರೆತಿದೆಯೇ ಎನ್ನುವ ಅರ್ಥದಲ್ಲಿ ಬಳಸಿದ್ದಾನೆ. ಈ ಬಗೆಯ ದುಸ್ಥಿತಿಗಳಿಂದ ಸ್ವಾತಂತ್ರ್ಯ ಪಡೆಯಲು ಸಾಧ್ಯವಿಲ್ಲದ ಸ್ಥಿತಿಯನ್ನೇ ಬಡತನ, ಅನಭಿವೃದ್ಧಿ, ಹಿಂದುಳಿದಿರುವಿಕೆಯೆಂದು ಕರೆಯುತ್ತಾನೆ. ಈ ದೃಷ್ಟಿಯಿಂದ ನೋಡಿದಾಗ ವಿಜಾಪುರ ಜಿಲ್ಲೆಯ ಜನರು ತೀವ್ರ ಅಸ್ವಾತಂತ್ರ್ಯದಿಂದ ನರಳುತ್ತಿರುವುದು ತಿಳಿಯುತ್ತದೆ. ರಾಜಕೀಯ ಸ್ವಾತಂತ್ರ್ಯವೇನೋ ದೊರೆತಿದೆ. ಆದರೆ ಡಾ.ಬಿ.ಆರ್.ಅಂಬೇಡ್ಕರ್ ಹೇಳುವ ಸಾಮಾಜಿಕ-ಆರ್ಥಿಕ ಅಸ್ವಾತಂತ್ರ್ಯಗಳಿಂದ ಬಿಡುಗಡೆ ಅಲ್ಲಿ ಜನರಿಗೆ ದೊರೆತಿಲ್ಲ.

ಕುಸಿಯುತ್ತಿರುವ ಕೃಷಿ ಸಂಸ್ಕೃತಿ

ಈ ಜಿಲ್ಲೆಯ ಆರ್ಥಿಕತೆಯು ಮೂಲಭೂತವಾಗಿ ಕೃಷಿ ಪ್ರಧಾನ ಮತ್ತು ಗ್ರಾಮೀಣ ಸ್ವರೂಪದ್ದಾಗಿದೆ. ಅಲ್ಲಿ ಕೃಷಿಯ ಅವಲಂಬನೆ ಶೇ 70.14. ಅದರ ಕೆಲವು ತಾಲ್ಲೂಕುಗಳಲ್ಲಿ ಇದು ಶೇ 80 ರವರೆಗಿದೆ. ಸಿಂದಗಿ, ಇಂಡಿ ಮತ್ತು ಬಾಗೇವಾಡಿ ತಾಲ್ಲೂಕುಗಳಲ್ಲಿ ಇದು ಶೇ75 ಕ್ಕಿಂತ ಅಧಿಕವಾಗಿದೆ. ಅದರಲ್ಲೂ ಕೃಷಿ ಕೂಲಿಕಾರರ ಪ್ರಮಾಣವು ಶೇ 40 ರಷ್ಟಿದೆ. ರಾಜ್ಯಮಟ್ಟದಲ್ಲಿ ಅವರ ಪ್ರಮಾಣವು ಕೇವಲ ಶೇ26.45 ರಷ್ಟಿದೆ. ಬಾಗೇವಾಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಇದು ಶೇ. 45ಕ್ಕಿಂತಲೂ ಅಧಿಕವಾಗಿದೆ. ಈ ಜಿಲ್ಲೆಯಲ್ಲಿ ಗ್ರಾಮೀಣದ ಪ್ರಮಾಣ ಶೇ78.08 ರಷ್ಟಿದೆ. ಇದು ಅತ್ಯಂತ ಅಧಿಕ ಪ್ರಮಾಣವಾಗಿದೆ. ರಾಜ್ಯಮಟ್ಟದಲ್ಲಿ ಗ್ರಾಮೀಣ ವಾಸಿಗಳ ಪ್ರಮಾಣ ಶೇ 66.01. ಬಾಗೇವಾಡಿ, ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಗ್ರಾಮೀಣ ವಾಸಿಗಳ ಪ್ರಮಾಣ ಶೇ. 90 ಕ್ಕಿಂತ ಅಧಿಕವಾಗಿದೆ. ನಗರೀಕರಣ, ಕೈಗಾರಿಕೀಕರಣ ಮತ್ತು ಆಧುನೀಕರಣಗಳು ಜಿಲ್ಲೆಯನ್ನು ಈಗ ಪ್ರವೇಶಿಸುತ್ತಿರುವಂತೆ ಕಾಣುತ್ತಿದೆ. ಅಂದರೆ ರಾಜ್ಯದಲ್ಲಿ ವಿಜಾಪುರವು ಅನೇಕ ದಶಕಗಳ ಕಾಲ ಅನೇಕ ವಿಷಯಗಳಲ್ಲಿ ಹಿಂದೆ ಬಿದ್ದಿದೆ.

ಕೃಷಿಯ ಸಂಸ್ಕೃತಿಯು ಕುಸಿಯುತ್ತಿರುವುದರಿಂದ ಅದು ಜಿಲ್ಲೆಯ ಒಟ್ಟು ವರಮಾನಕ್ಕೆ ನೀಡುತಿರುವ ಕಾಣಿಕೆಯು ಕಡಿಮೆಯಾಗುತ್ತಿದೆ. ಜಿಲ್ಲೆಯ ವರಮಾನಕ್ಕೆ ಅದರ ಕೊಡುಗೆಯು 1999-00ದಲ್ಲಿ ಶೇ41.04 ರಷ್ಟಿದ್ದುದು 2003-04ರಲ್ಲಿ ಶೇ 25.56ಕ್ಕೆ ಇಳಿದಿದೆ. ಇದರಿಂದಾಗಿ ಕೃಷಿಯ ತಲಾ ವರಮಾನವು 1999-00ರಲ್ಲಿ ರೂ 601ರಷ್ಟಿದ್ದರೆ ಕೃಷಿಯೇತರ ವಲಯದ ತಲಾ ವರಮಾನವು ರೂ 863 ರಷ್ಟಿತ್ತು. ಆದರೆ 2003-04ರಲ್ಲಿ ಅವುಗಳ ಪ್ರಮಾಣ ಕ್ರಮವಾಗಿ ರೂ 379 ಮತ್ತು ರೂ 1103 ರಷ್ಟಿತ್ತು. ಕೃಷಿ ಮತ್ತು ಕೃಷಿಯೇತರ ವಲಯಗಳ ನಡುವಿನ ಅಂತರವನ್ನು ಅದು ತೋರಿಸುತ್ತದೆ. ಕೃಷಿಯೇ

ತರ ವಲಯದಲ್ಲಿ ತಲಾ ವರಮಾನದ ಪ್ರಮಾಣವು ಕೃಷಿಯಲ್ಲಿನ ತಲಾ ವರಮಾನದ ಪ್ರಮಾಣಕ್ಕಿಂತ ಅಧಿಕವಾಗಿದೆ. ಜಿಲ್ಲೆಯಲ್ಲಿ ನಡೆದಿರುವ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳು ಬಡವರಿಗೆ ಅನುಕೂಲಕರವಾಗಿಲ್ಲ. ಈ ಬದಲಾವಣೆಯು ಹೆಚ್ಚು ಹೆಚ್ಚು ಅನುಕೂಲಗಳನ್ನು ಉನ್ನತ ವರ್ಗಕ್ಕೆ ಒದಗಿಸುತ್ತಿದೆ.

– ಕೃಷಿ ಕ್ಷೇತ್ರದಲ್ಲಿ ತಲಾ ವರಮಾನದ ಪ್ರಮಾಣ ಕಡಿಮೆ.

– ಈ ವಲಯದಿಂದ ಜಿಲ್ಲೆಯ ಒಟ್ಟು ವರಮಾನಕ್ಕೆ ಪ್ರಾಪ್ತವಾಗುತ್ತಿರುವ ಪ್ರಮಾಣವು ಕಡಿಮೆಯಾಗುತ್ತಿದೆ.

– ಆದರೆ ಅದನ್ನು ಅವಲಂಬಿಸಿಕೊಂಡಿರುವ ಕೂಲಿಕಾರರ ಪ್ರಮಾಣ ಮಾತ್ರ ಅಗಾಧವಾಗಿದೆ.

– ಇಂದು ಅಲ್ಲಿ ಕೃಷಿಯನ್ನು ಮಾಡುವವರೆ ಇಲ್ಲದಂತಾಗಿದೆ.

– ವಲಸೆಯು ಇಲ್ಲಿ ಬದುಕಿನ ಒಂದು ದಾರಿಯಾಗಿ ಬಿಟ್ಟಿದೆ.

ವಲಸೆಯಲ್ಲಿ ಕಂಡುಕೊಂಡ ಬದುಕು

ವಲಸೆಯು ಯಾವ ಪ್ರಮಾಣದಲ್ಲಿ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ವಿಜಾಪುರ ಜಿಲ್ಲೆಗೆ ಬರಬೇಕು. ರಾಜ್ಯದಲ್ಲಿ 2007ರಲ್ಲಿ ನಡೆದ ಚುನಾವಣೆ ಸಂದರ್ಭದಲ್ಲಿ ಇಲ್ಲಿನ ಮತದಾರರ ಪಟ್ಟಿಯ ಪರಿಷ್ಕಾರಕ್ಕೆ ಬಂದಿದ್ದ ಓರ್ವ ರಾಜ್ಯ ಹಿರಿಯ ಐಎಎಸ್ ಅಧಿಕಾರಿ 'ನನಗೆ ತಿಳಿದಂತೆ ಭಾರತದಲ್ಲಿ ಅಥವಾ ಪ್ರಪಂಚದ ಮತ್ತಾವ ಭಾಗದಲ್ಲೂ ಈ ಪ್ರಮಾಣದಲ್ಲಿ ಜನರು ವಲಸೆ ಹೋಗುವುದನ್ನು ನಾನು ಕಂಡಿಲ್ಲ ಮತ್ತು ಕೇಳಿಲ್ಲ'ವೆಂದು ಉದ್ಗಾರ ತೆಗೆದಿದ್ದಾರೆ(ನೋಡಿ: ಡೆಕ್ಕನ್ ಹೆರಾಲ್ಡ್, 17-12-07). ಈ ಜಿಲ್ಲೆಯಲ್ಲಿ ಬರ ಮತ್ತು ವಲಸೆ ಎರಡೂ ಒಂದೇ ನಾಣ್ಯದ ಎರಡು ಮುಖಗಳಾಗಿ ಬಿಟ್ಟಿವೆ. ಈ ಜಿಲ್ಲೆಯಲ್ಲಿ ಊರಿಗೆ ಊರೇ ದೀಪಾವಳಿ ನಂತರ ಪ್ರತಿ ವರ್ಷ ಖಾಲಿಯಾಗಿ ಬಿಡುತ್ತವೆ. ಬಡತನವನ್ನು, ಬರವನ್ನು, ದುಸ್ಥಿತಿಯನ್ನು, ಹಸಿವನ್ನು ಜನರು ಎದುರಿಸಲು ಕಂಡುಕೊಂಡಿರುವ ಪರಿಹಾರವೆಂದರೆ ವಲಸೆ. ಒಂದು ಕಾಲಕ್ಕೆ ಪುರುಷರು ಮಾತ್ರ ವಲಸೆ ಹೋಗುತ್ತಿದ್ದರು. ಆದರೆ ಇಂದು ಕುಟುಂಬ ಕುಟುಂಬಗಳೇ ವಲಸೆ ಹೋಗುತ್ತವೆ.

ವಲಸೆಯು ಯಾವ ಪ್ರಮಾಣದಲ್ಲಿ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಲು ವಿಜಾಪುರ ಜಿಲ್ಲೆಗೆ ಬರಬೇಕು. ರಾಜ್ಯದಲ್ಲಿ 2007ರಲ್ಲಿ ನಡೆದ ಚುನಾವಣೆ ಸಂದರ್ಭದಲ್ಲಿ ಇಲ್ಲಿನ ಮತದಾರರ ಪಟ್ಟಿಯ ಪರಿಷ್ಕಾರಕ್ಕೆ ಬಂದಿದ್ದ ಓರ್ವ ರಾಜ್ಯ ಹಿರಿಯ ಐಎಎಸ್ ಅಧಿಕಾರಿ 'ನನಗೆ ತಿಳಿದಂತೆ ಭಾರತದಲ್ಲಿ ಅಥವಾ ಪ್ರಪಂಚದ ಮತ್ತಾವ ಭಾಗದಲ್ಲೂ ಈ ಪ್ರಮಾಣದಲ್ಲಿ ಜನರು ವಲಸೆ ಹೋಗುವುದನ್ನು ನಾನು ಕಂಡಿಲ್ಲ ಮತ್ತು ಕೇಳಿಲ್ಲ'ವೆಂದು ಉದ್ಗಾರ ತೆಗೆದಿದ್ದಾರೆ. ಈ ಜಿಲ್ಲೆಯಲ್ಲಿ ಬರ ಮತ್ತು ವಲಸೆ ಎರಡೂ ಒಂದೇ ನಾಣ್ಯದ ಎರಡು ಮುಖಗಳಾಗಿ ಬಿಟ್ಟಿವೆ. ಈ ಜಿಲ್ಲೆಯಲ್ಲಿ ಊರಿಗೆ ಊರೇ ದೀಪಾವಳಿ ನಂತರ ಪ್ರತಿ ವರ್ಷ ಖಾಲಿಯಾಗಿ ಬಿಡುತ್ತವೆ. ಬಡತನವನ್ನು, ಬರವನ್ನು, ದುಸ್ಥಿತಿಯನ್ನು, ಹಸಿವನ್ನು ಜನರು ಎದುರಿಸಲು ಕಂಡುಕೊಂಡಿರುವ ಪರಿಹಾರವೆಂದರೆ ವಲಸೆ. ಒಂದು ಕಾಲಕ್ಕೆ ಪುರುಷರು ಮಾತ್ರ ವಲಸೆ ಹೋಗುತ್ತಿದ್ದರು. ಆದರೆ ಇಂದು ಕುಟುಂಬ ಕುಟುಂಬಗಳೇ ವಲಸೆ ಹೋಗುತ್ತವೆ.

ಒಂದು ರೀತಿ ಅಲ್ಲಿ ವಲಸೆ ಸಂಸ್ಕೃತಿಯೇ ರೂಪುಗೊಂಡಿದೆ. ಜನರು ಅದಕ್ಕೆ ಎಷ್ಟು ಹೊಂದಿಕೊಂಡಿದ್ದಾರೆಂದರೆ ಅವರು ಈಗ ಊರಿನಲ್ಲಿ ಕೆಲಸ ಕೊಟ್ಟರೂ ಮಾಡಲು ಸಿದ್ದರಿಲ್ಲ. ಎನ್‌ಆರ್‌ಈಜಿಎಯ ವೈಫಲ್ಯದ ಬಗ್ಗೆ ಮಾತನಾಡುವವರು ಇದನ್ನು ಪರಿಗಣಿಸಬೇಕು. ಈ ಜಿಲ್ಲೆಯಲ್ಲಿ ಕೃಷಿಯನ್ನು ಯಾರು ರಕ್ಷಿಸುವುದೂ ಸಾಧ್ಯವಿಲ್ಲವೆನ್ನುವ ತೀರ್ಮಾನಕ್ಕೆ ಜಿಲ್ಲೆಯಲ್ಲಿನ ಜನರು ಬಂದಿರುವಂತೆ ಕಾಣುತ್ತದೆ. ಜನರು ಜಿಲ್ಲೆಯಲ್ಲಿ ಕೃಷಿಯನ್ನು ಮಾಡಲು ಸಿದ್ದರಿಲ್ಲ ಅಥವಾ ಮಾಡಲು ಸಾಧ್ಯವಿಲ್ಲ.

ಲಿಂಗ ಅನುಪಾತ

ಈಗಾಗಲೆ ತಿಳಿಸಿರುವಂತೆ ಈ ಜಿಲ್ಲೆಯಲ್ಲಿ ಮಹಿಳೆಯರು ಸಾಪೇಕ್ಷವಾಗಿ ತೀವ್ರ ಅಸಮಾನತೆಯನ್ನು ಅನುಭವಿಸುತ್ತಿದ್ದಾರೆ. ಈ ಜಿಲ್ಲೆಯ ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕ 2001ರಲ್ಲಿ 0.572. ಅದರ ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ (0.589)ಇದನ್ನು ಹೋಲಿಸಿದರೆ ಅಲ್ಲಿನ ಲಿಂಗ ಸಂಬಂಧಿ ಅಭಿವೃದ್ಧಿ ಅಸಮಾನತೆಯ ಪ್ರಮಾಣ 0.017. ಇದು ರಾಜ್ಯಮಟ್ಟದ ಲಿಂಗ ಸಂಬಂಧಿ ಅಸಮಾನತೆಯ(0.013) ಪ್ರಮಾಣಕ್ಕಿಂತ ಅಧಿಕವಾಗಿದೆ. ಈ ಜಿಲ್ಲೆಯಲ್ಲಿ ಲಿಂಗ ಅನುಪಾತವು 2001ರಲ್ಲಿ 950. ಇಂಡಿ ತಾಲ್ಲೂಕಿನಲ್ಲಿ ಇದು 928. ರಾಜ್ಯಮಟ್ಟದಲ್ಲಿ ಇದು 965 ರಷ್ಟಿದೆ. ಇಲ್ಲಿನ ಜನಸಂಖ್ಯೆಯಲ್ಲಿ ಮಹಿಳೆಯರ ಕೊರತೆಯಿದೆ. ಇದನ್ನು ಅಮರ್ತ್ಯಸೇನ್ 'ಕಾಣೆಯಾದ ಮಹಿಳೆಯರು' ಎಂದು ಕರೆಯುತ್ತಾನೆ. ವಾಸ್ತವವಾಗಿ ನಮ್ಮಲ್ಲಿ ಲಿಂಗ ಸಮಾನತೆಯೆಂಬುದೇನಾದರೂ ಇದ್ದರೆ ಲಿಂಗ ಅನುಪಾತವು ಸಾವಿರಕ್ಕಿಂತ ಅಧಿಕವಾಗಿರಬೇಕು. ಆದರೆ ಅದು ಈಗ ಕಡಿಮೆಯಿದೆ.

ಒಟ್ಟು ಮಹಿಳೆಯರ ಸಂಖ್ಯೆಯಲ್ಲಿ ಕಾಣೆಯಾದ ಮಹಿಳೆಯರ ಪ್ರಮಾಣ ರಾಜ್ಯಮಟ್ಟದಲ್ಲಿ ಶೇ3.65 ರಷ್ಟಿದ್ದರೆ ವಿಜಾಪುರದಲ್ಲಿ ಅದರ ಪ್ರಮಾಣ ಶೇ5.22. ಈ ವ್ಯತ್ಯಾಸವು ಜಿಲ್ಲೆಯಲ್ಲಿರುವ ಲಿಂಗ ಸಂಬಂಧಿ ಅಸಮಾನತೆಯ ಪ್ರಮಾಣವನ್ನು ತೋರಿಸುತ್ತದೆ. ಈ ಜಿಲ್ಲೆಯಲ್ಲಿನ ಸಂತಾನೋತ್ಪತ್ತಿ ಪ್ರಮಾಣವು ಅಧಿಕವಾಗಿದೆ. ಇದು ಮಹಿಳೆಯರಿಗೆ ಪ್ರತಿಕೂಲವಾಗಿ ಪರಿಣಮಿಸಿದೆ. ರಾಜ್ಯಮಟ್ಟದಲ್ಲಿ ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣ ಶೇ31.98 ರಷ್ಟಿದ್ದರೆ ವಿಜಾಪುರ ಜಿಲ್ಲೆಯಲ್ಲಿ ಅದರ ಪ್ರಮಾಣ ಕೇವಲ ಶೇ. 28.46. ಒಟ್ಟಾರೆ ಇಲ್ಲಿ ಮಹಿಳೆಯರು ಸಾಪೇಕ್ಷವಾಗಿ ಹೆಚ್ಚಿನ ಹಿಂಸೆ ಮತ್ತು ದಬ್ಬಾಳಿಕೆಯನ್ನು ಅನುಭವಿಸುತ್ತಿದ್ದಾರೆ. ಅಪೌಷ್ಟಿಕತೆ, ಅಭದ್ರತೆ, ಅನಾರೋಗ್ಯ, ಅನಕ್ಷರತೆ, ಅಸಮಾನತೆ ಮುಂತಾದ ಸಂಗತಿಗಳಲ್ಲಿ ಜಿಲ್ಲೆಯ ಮಹಿಳೆಯರು ಅನುಭವಿಸುತ್ತಿರುವ ದುಸ್ಥಿತಿಯ ಪ್ರಮಾಣವು ಪುರುಷ ವರ್ಗವು ಅನುಭವಿಸುತ್ತಿರುವ ಪ್ರಮಾಣಕ್ಕಿಂತ ದುಪ್ಪಟ್ಟಾಗಿದೆ.

ಮುಂದಿನ ದಾರಿ ಯಾವುದು?

ಹಾಗಾದರೆ ಈ ಜಿಲ್ಲೆಯ ಮಂದಿಗೆ ಮುಂದಿನ ದಾರಿ ಯಾವುದು? ಈ ದುಸ್ಥಿತಿಗೆ ಅಂತ್ಯವಿಲ್ಲವೆ? ಇದಕ್ಕೆ ಅಂತ್ಯ ಹಾಡಲು ನಾವು ಏನು ಮಾಡಬೇಕು? ಅಭಿವೃದ್ಧಿಯೆಂಬುದು, ಬಡತನ ನಿವಾರಣೆಯೆಂಬುದು, ಲಿಂಗ ಸಮಾನತೆಯೆಂಬುದು ಕೇವಲ ಬಂಡವಾಳದ ಪ್ರಶ್ನೆಯೇ? ಅಭಿವೃದ್ಧಿಯ ಜವಾಬುದಾರಿಯನ್ನು ಜಾಗತೀಕರಣದ ಹಿನ್ನೆಲೆಯಲ್ಲಿ ಮಾರುಕಟ್ಟೆ ಶಕ್ತಿಗಳಿಗೆ ವಹಿಸಿಕೊಟ್ಟು ಬಿಟ್ಟರೆ ಎಲ್ಲವು ಸರಿಹೋಗುತ್ತದೆಯೇ? ಇವು ನಮ್ಮ ಮುಂದಿರುವ ಪ್ರಶ್ನೆಗಳು ಮತ್ತು ಜಟಿಲವಾದ ಸವಾಲುಗಳು. ಅಭಿವೃದ್ಧಿಯಿಂದ ವಂಚಿತರಾದ ಜನರನ್ನು, ಮಹಿಳೆಯರನ್ನು, ಕೂಲಿಕಾರರನ್ನು ರಾಜಕೀಯವಾಗಿ ಸಂಘಟಿಸಬೇಕಾಗುತ್ತದೆ. ಬಡತನ, ಹಸಿವು, ದುಸ್ಥಿತಿ, ಅನಕ್ಷರತೆ, ಅನಾರೋಗ್ಯ, ಆಹಾರ ಅಭದ್ರತೆ, ಲಿಂಗ ಅಸಮಾನತೆ ಮುಂತಾದವು ರಾಜಕೀಯ ಸಂಗತಿಗಳು. ಅವು ಶಾಪಗಳಲ್ಲ. ಅಥವಾ ಪಾಪದ ಫಲಗಳಲ್ಲ. ಅವು ಅಸ್ವಾತಂತ್ರ್ಯಗಳು. ಸಾಮಾಜಿಕವಾಗಿ ಉಂಟಾಗಿರುವ ಸಮಸ್ಯೆಗಳು. ಅವುಗಳನ್ನು ಮನುಷ್ಯ ಪ್ರಯತ್ನದಿಂದ ನಿವಾರಿಸಬಹುದು. ಅದಕ್ಕೆ ಸಂಘಟನೆಯ ಅಗತ್ಯವಿದೆ. ಇದು ಕೇವಲ ಬಂಡವಾಳದ ಪ್ರಶ್ನೆಯಲ್ಲ.

ಈ ಸಂಗತಿಗಳು ರಾಜಕೀಯವಾಗಿ ಆದ್ಯತೆಯ ಸಂಗತಿಗಳಾಗಬೇಕು. ನಮ್ಮ ರಾಜಕಾರಣದ ಸ್ವರೂಪವನ್ನು ಬದಲಾಯಿಸಬೇಕಾಗಿದೆ. ಈಗ ಜಿಲ್ಲೆಯಲ್ಲಿ ಇಂದು ನಡೆದಿರುವ ಹಂಗಿನ ಅಭಿವೃದ್ಧಿಗೆ ಪ್ರತಿಯಾಗಿ ಹಕ್ಕಿನ ಅಭಿವೃದ್ಧಿಯನ್ನು ಕಾರ್ಯರೂಪಕ್ಕೆ ತರುವ ಅಗತ್ಯವಿದೆ. ಅಭಿವೃದ್ಧಿಯೆನ್ನುವುದು ದತ್ತಿಯಲ್ಲ ಅಥವಾ ದಾನವಲ್ಲ. ಅದು ಜನರ ಹಕ್ಕು. ಅದರ ಮೇಲೆ ಜನರಿಗೆ ಹಕ್ಕುದಾರಿಕೆಯಿದೆ. ಥಳ ಥಳ ಹೊಳೆಯುವ ರಸ್ತೆಗಳೇ ಅಭಿವೃದ್ಧಿಯಲ್ಲ. ಜಿಲ್ಲಾ ಕೇಂದ್ರದಲ್ಲಿ ವಿಮಾನ ನಿಲ್ದಾಣವನ್ನು ಕಟ್ಟುವುದೇ ಅಭಿವೃದ್ಧಿಯಲ್ಲ. ಕಾಲೇಜುಗಳನ್ನು ಸ್ಥಾಪಿಸುವುದೇ ಅಭಿವೃದ್ಧಿಯಲ್ಲ. ಅಭಿವೃದ್ಧಿಗೆ ಇವೆಲ್ಲಾ ಬೇಕು. ಆದರೆ ಅವೇ ಅಭಿವೃದ್ಧಿಯಲ್ಲ. ಜನರು ಅಕ್ಷರಸ್ಥರಾಗಬೇಕು. ಅದು ಆದ್ಯತೆಯ ಸಂಗತಿಯಾಗಬೇಕು. ಲಿಂಗ ಸಮಾನತೆಯು ಅಭಿವೃದ್ಧಿಯ ಗುರಿಯಾಗಬೇಕು.

ಜನರಿಗೆ ಆಹಾರ ಭದ್ರತೆಯನ್ನು ಒದಗಿಸುವುದು ಆದ್ಯತೆಯಾಗಬೇಕು. ಈ ಬಗೆಯ ರಾಜಕಾರಣವನ್ನು ಜಿಲ್ಲೆಯಲ್ಲಿ ಕಟ್ಟಬೇಕು. ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದೇ ಅಭಿವೃದ್ಧಿಯಲ್ಲ. ಅವರ ಸಾಕ್ಷರತೆಯನ್ನು(ಶೇ 43.47)ಹೆಚ್ಚಿಸುವುದು ಅಭಿವೃದ್ಧಿ. ಈ ದಿಶೆಯಲ್ಲಿ ಜಿಲ್ಲೆಯ ಕೂಲಿಕಾರರನ್ನು, ಅಭಿವೃದ್ಧಿಯಿಂದ ವಂಚಿತರನ್ನು, ಮಹಿಳೆಯರನ್ನು ಅಭಿವೃದ್ಧಿ ರಾಜಕಾರಣದ ಚೌಕಟ್ಟಿನಲ್ಲಿ ಸಂಘಟಿಸುವ ಕಾರ್ಯ ನಡೆಯಬೇಕು. ಮೊದಲು ಕುಸಿಯುತ್ತಿರುವ ವಿಜಾಪುರ ಜಿಲ್ಲೆಯ ಜನರ ಬದುಕನ್ನು ರಕ್ಷಿಸಬೇಕು. ನಂತರ ಅದನ್ನು ಸರಿಪಡಿಸುವ ಬಗ್ಗೆ ಗಂಭೀರವಾಗಿ ಚಿಂತಿಸಬೇಕು. ಇದು ಈ ಜಿಲ್ಲೆಯಲ್ಲಿ ಜರೂರಾಗಿ ನಡೆಯಬೇಕಾಗಿರುವ ಕಾರ್ಯವಾಗಿದೆ. ಈ ಜಿಲ್ಲೆಯ ಜನರಿಗೆ ಈ ನಮ್ಮ ಕರೆ ಕೇಳುತ್ತಿದೆಯೆಂದು ನಾನು ಭಾವಿಸಿದ್ದೇನೆ. □

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ಮಹಾ ಪ್ರಮಾದ

ಉತ್ತರ ಭಾರತದ ರಾಜಕೀಯ ವ್ಯಾಕರಣವನ್ನೇ ಬದಲಾಯಿಸಿದವರು ಕಾನ್ಷಿರಾಂ. ಮೂಲತಃ ವಿಜ್ಞಾನದ ವಿದ್ಯಾರ್ಥಿಯಾದ ಕಾನ್ಷಿರಾಂ ಕೇಂದ್ರ ಸರ್ಕಾರದ ಉದ್ಯೋಗವನ್ನು ತ್ಯಜಿಸದೇ ಹೋಗಿದ್ದರೆ ದೇಶದ ಅತ್ಯುನ್ನತ ವಿಜ್ಞಾನಿಯಾಗಿ ನಿವೃತ್ತರಾಗುತ್ತಿದ್ದರು. ಈ ಉದ್ಯೋಗ ಅವರಿಗೆ ಮಧ್ಯಮ ವರ್ಗದ ಉತ್ತಮ ಜೀವನ ಶೈಲಿಯನ್ನು ಖಂಡಿತ ಒದಗಿಸುತ್ತಿತ್ತು. ಆದರೆ ಇವೆಲ್ಲವನ್ನು ತ್ಯಾಗ ಮಾಡಿದ ಇವರು ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡು ಲಕ್ಷಾಂತರ ಮಂದಿ ಶೋಷಿತರಿಗೆ ಗೌರವ ತಂದುಕೊಟ್ಟರು. ತಾವು ಕಟ್ಟಿದ ಪಕ್ಷ ಶ್ರೀಮಂತವಾದಾಗಲೂ ಸಹ ಒಂದು ನಯಾ ಪೈಸೆಯನ್ನು ತಮ್ಮ ಕುಟುಂಬದವರಿಗಾಗಿ ಖರ್ಚು ಮಾಡಲಿಲ್ಲ. ಹಣಕಾಸಿನ ಸಹಾಯಕ್ಕಾಗಿ ತಮ್ಮ ಬಳಿ ಬರುತ್ತಿದ್ದ ಸಂಬಂಧಿಕರಿಗೆ "ಇದು ಸಾರ್ವಜನಿಕರ ಹಣ. ಬಹುಜನರ ಕಲ್ಯಾಣಕ್ಕಾಗಿ ಮೀಸಲು" ಎಂದು ಹೇಳಿ ಕಳುಹಿಸುತ್ತಿದ್ದರು.

ಥಾಮಸ್ ಜೆಫ್ಫರ್‌ಸನ್ ನಿಧನ ಹೊಂದಿ ಸುಮಾರು 200 ವರ್ಷಗಳಾದ ಮೇಲೂ ಇಂದಿಗೂ ಅಮೆರಿಕಾದಲ್ಲಿ ಪ್ರಖ್ಯಾತ ಅಮೆರಿಕಾದ ಸ್ವಾತಂತ್ರ್ಯದ ಘೋಷಣೆ ಬರೆದ ಜೆಫ್ಫರ್‌ಸನ್, ನಂತರ ದೇಶದ ಮೂರನೆಯ ಅಧ್ಯಕ್ಷ ಕೂಡ ಆದ. "ಎಲ್ಲ ಮನುಷ್ಯರೂ ಹುಟ್ಟನಿಂದ ಸಮಾನರು" ಎಂಬ ಮಹಾನ್ ವಿಚಾರವನ್ನು (ಪ್ರತಿಪಾದಿಸಿದ ಜೆಫ್ಫರ್‌ಸನ್ ಅಮೆರಿಕಾ ಸಮಾಜಕ್ಕೆ ಸೂಕ್ತ ದಾರಿ ತೋರಿಸಿದ. ಇಂದು ಜಾತಿ-ಮತ ಭೇದವಿಲ್ಲದೆ ಎಲ್ಲರೂ ಜೆಫ್ಫರ್‌ಸನ್‌ರನ್ನು ಆರಾಧಿಸುತ್ತಾರೆ.

ಅದೇ ರೀತಿ ಡಾ.ಬಿ.ಆರ್.ಅಂಬೇಡ್ಕರ್ ಹಾಕಿಕೊಟ್ಟ "ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ"ದ ಅಡಿಪಾಯದ ಮೇಲೆ ಭಾರತ ಅಭಿವೃದ್ಧಿಯತ್ತ ಸಾಗಿದೆ. ಭಾರತದ ಸಂವಿಧಾನ ಜಗತ್ತಿನ ಅತ್ಯುತ್ತಮ ಸಂವಿಧಾನಗಳಲ್ಲೊಂದು. ಆದರೆ ದೇಶಕ್ಕೆ ಇಂತಹ ಅತ್ಯುತ್ತಮ ಸಂವಿಧಾನ ನೀಡಿದ ಅಂಬೇಡ್ಕರ್ ನಂತರ ನಡೆದ ಎರಡು ಲೋಕಸಭಾ ಚುನಾವಣೆಗಳಲ್ಲಿ ಪರಾಭವರಾದರು. ನಾವು ಜೀವಿಸುತ್ತಿರುವುದು ಇಂತಹ ದೇಶದಲ್ಲಿ!

ದಯೆ ಮತ್ತು ಶಾಂತಿಯ ಅದ್ವಿತೀಯ ಪ್ರತೀಕನಾದ ಬುದ್ಧ ಜಗತ್ತಿನಾದ್ಯಂತ ಕೋಟ್ಯಾಂತರ ಜನರಿಗೆ ಪ್ರೇರಕಶಕ್ತಿಯಾಗಿದ್ದಾನೆ. ಬುದ್ಧನ ವಿಗ್ರಹಗಳು ವಿಶ್ವದಾದ್ಯಂತ ಕಾಣಿಸುತ್ತವೆ. ಆದರೆ ಡಾ. ಅಂಬೇಡ್ಕರರು ಬೌದ್ಧ ಧರ್ಮಕ್ಕೆ ಪುನರ್ ಕಾಯಕಲ್ಪ ನೀಡುವ ಮುನ್ನ ಬುದ್ಧನನ್ನು ಭಾರತೀಯ ಮುಖ್ಯವಾಹಿನಿ ಮರೆತೇ ಬಿಟ್ಟಿತು.

ಉತ್ತರ ಭಾರತದ ರಾಜಕೀಯ ವ್ಯಾಕರಣವನ್ನೇ ಬದಲಾಯಿಸಿದವರು ಕಾನ್ಷಿರಾಂ. ಮೂಲತಃ ವಿಜ್ಞಾನದ ವಿದ್ಯಾರ್ಥಿಯಾದ ಕಾನ್ಷಿರಾಂ ಕೇಂದ್ರ ಸರ್ಕಾರದ ಉದ್ಯೋಗವನ್ನು ತ್ಯಜಿಸದೇ ಹೋಗಿದ್ದರೆ ದೇಶದ ಅತ್ಯುನ್ನತ ವಿಜ್ಞಾನಿಯಾಗಿ ನಿವೃತ್ತರಾಗುತ್ತಿದ್ದರು. ಈ ಉದ್ಯೋಗ ಅವರಿಗೆ ಮಧ್ಯಮ ವರ್ಗದ ಉತ್ತಮ ಜೀವನ ಶೈಲಿಯನ್ನು ಖಂಡಿತ ಒದಗಿಸುತ್ತಿತ್ತು. ಆದರೆ ಇವೆಲ್ಲವನ್ನು ತ್ಯಾಗ ಮಾಡಿದ ಕಾನ್ಷಿರಾಂ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡು ಲಕ್ಷಾಂತರ ಮಂದಿ ಶೋಷಿತರಿಗೆ ಗೌರವ ತಂದುಕೊಟ್ಟರು. ತಾವು ಕಟ್ಟಿದ ಪಕ್ಷ ಶ್ರೀಮಂತವಾದಾಗಲೂ ಸಹ ಒಂದು ನಯಾ ಪೈಸೆಯನ್ನು ತಮ್ಮ ಕುಟುಂಬದವರಿಗಾಗಿ ಖರ್ಚು ಮಾಡಲಿಲ್ಲ. ಹಣಕಾಸಿನ ಸಹಾಯಕ್ಕಾಗಿ ತಮ್ಮ ಬಳಿ ಬರುತ್ತಿದ್ದ ಸಂಬಂಧಿಕರಿಗೆ "ಇದು ಸಾರ್ವಜನಿಕರ ಹಣ. ಬಹುಜನರ ಕಲ್ಯಾಣಕ್ಕಾಗಿ ಮೀಸಲು" ಎಂದು ಹೇಳಿ ಕಳುಹಿಸುತ್ತಿದ್ದರು.

ಸಾರ್ವಜನಿಕ ಸೇವೆಯಲ್ಲಿ ತ್ಯಾಗ ಮತ್ತು ಬದ್ಧತೆಯ ವಿಚಾರ ಬಂದಾಗ ಕಾನ್ಷಿರಾಂ ಅವರಿಗೆ ಸರಿಸಮಾನರಾದ ಸಮಕಾಲೀನ ರಾಜಕಾರಣಿಗಳು ತೀರ ಕಡಿಮೆ. ಭಾರತದಂತಹ ಭ್ರಷ್ಟ ದೇಶಕ್ಕೆ ಕಾನ್ಷಿರಾಂ ಮಾದರಿ ರಾಜಕಾರಣಿಯೇ ಸರಿ. ಆದರೆ ಡಾ. ಅಂಬೇಡ್ಕರ್, ಭಗವಾನ್ ಬುದ್ಧ ಮತ್ತು ಕಾನ್ಷಿರಾಂ ಅವರ ಗೌರವಾರ್ಥ ಸಮಾಜದ ಮುಖ್ಯವಾಹಿನಿ ಹಣ ಸಂಗ್ರಹಿಸಿ ಸ್ಮಾರಕಗಳನ್ನು ನಿರ್ಮಿಸಿದ ನಿದರ್ಶನಗಳಲ್ಲಿ ಮಹಾತ್ಮ ಫುಲೆ . ಅವರಿಗೆ ಗೌರವ ಸಲ್ಲಿಸಲು ಮಾಯಾವತಿ ಬರಬೇಕಾಯಿತೇ?

ಮಹಾತ್ಮಾ ಗಾಂಧಿಗಿಂತ ಮಹಾತ್ಮ ಫುಲೆ ಅವರ ಸಾಧನೆ ದೊಡ್ಡದಲ್ಲವೇ? ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡುವುದಕ್ಕಿಂತ ಬ್ರಿಟಿಷ್ ವಸಾಹತುಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡುವುದು ಸುಲಭ ಅಲ್ಲವೇ?

ಮಾಯಾವತಿ ಅವರ ವಿಗ್ರಹ ನಿರ್ಮಾಣ ಪ್ರಕ್ರಿಯೆ ಈಗ ಎಲ್ಲರ ಕೆಂಗಣ್ಣಿಗೆ ಗುರಿಯಾಗಿದೆ. ವಿಗ್ರಹಗಳಿಗಾಗಿ ದೊಡ್ಡ ಪ್ರಮಾಣದಲ್ಲಿ ಹಣ ಪೋಲು ಮಾಡಲಾಗುತ್ತಿದೆ ಎಂದು ರಾಷ್ಟ್ರೀಯ ಮಾಧ್ಯಮ ಬಿಂಬಿಸುತ್ತಿದೆ. ಹೌದು, ಸಾಕಷ್ಟು ಹಣ ಖರ್ಚು ಮಾಡಲಾಗುತ್ತಿದೆ. ವಿಶ್ವದಾದ್ಯಂತ ವಿವಿಧ ದೇಶಗಳು ತಮ್ಮ ನಾಯಕರಿಗೆ ಗೌರವ ಸಲ್ಲಿಸಲು ಸ್ಮಾರಕಗಳು ಮತ್ತು ಪುತ್ಥಳಿಗಳನ್ನು ನಿರ್ಮಿಸುವುದು ಹೊಸದೇನಲ್ಲ. ಈ ಕಾರ್ಯವನ್ನು ಉತ್ತರ ಪ್ರದೇಶ ಸರ್ಕಾರವೊಂದೇ ಮಾತ್ರ ಮಾಡುತ್ತಿಲ್ಲ. ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳು ಕೋಟ್ಯಾಂತರ ರೂ. ಹಣ ಖರ್ಚು ಮಾಡಿ ಪುತ್ಥಳಿಗಳನ್ನು ನಿರ್ಮಿಸಿಯೇ ಇಲ್ಲವೇ? ಕಾಂಗ್ರೆಸ್ ನಿರ್ಮಿಸಿರುವ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯೋಜನೆ, ಮಧ್ಯಾಹ್ನದ ಊಟದಂತಹ (ಪುತ್ಥಳಿಗಳು) ಯೋಜನೆಗಳಿಗಾಗಿ ವಾರ್ಷಿಕ 65,000 ಕೋಟಿ ರೂ. ಹಣ ಖರ್ಚು ಮಾಡಲಾಗುತ್ತಿದ್ದು, ಎಲ್ಲ ಹಣ ಮಧ್ಯವರ್ತಿಗಳ ಪಾಲಾಗುತ್ತಿದೆ. ಮಾಧ್ಯಮಗಳು ಈ ಬಗ್ಗೆ ಯಾಕೆ ಮೌನ ವಹಿಸಿವೆ?

ಮಾಯಾವತಿ ಅವರ ನಿದರ್ಶನವನ್ನೇ ತೆಗೆದುಕೊಳ್ಳಿ ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್ ವಿಶ್ವಸಂಸ್ಥೆಯ ವೇದಿಕೆಯಲ್ಲಿ ಮಾಯಾವತಿ ಅವರನ್ನು "ಭಾರತೀಯ ಪ್ರಜಾತಂತ್ರ ವ್ಯವಸ್ಥೆಯ ಅದ್ಭುತ" ಎಂದು ಬಣ್ಣಿಸಿದ್ದರು. ಕನಿಷ್ಠ ಎರಡು ಸಂದರ್ಭದಲ್ಲಿ-2001ರಲ್ಲಿ ಎನ್‌ಡಿಎ ಮತ್ತು ಯುಪಿಎ ಈ ವರ್ಷದಲ್ಲಿ -ಭಾರತದಲ್ಲಿ ಜಾತಿಯ ಪ್ರಭಾವ ಕಡಿಮೆಯಾಗುತ್ತಿರುವುದಕ್ಕೆ ಮಾಯಾವತಿ ಅವರ ನಿದರ್ಶನ ನೀಡಿದೆ. ಎರಡೂ ಸಂದರ್ಭದಲ್ಲಿ ವಿಶ್ವಸಂಸ್ಥೆಯು ವೇದಿಕೆಯ ಮೇಲೆ ನಿಂತು, ಭಾರತದಲ್ಲಿ ಜಾತಿ ಆಧಾರಿತ ತಾರತಮ್ಯ ಕ್ಷೀಣಿಸುತ್ತಾ ಬಂದಿದೆ ಎಂದು ಆಯಾ ಸರ್ಕಾರಗಳು ಸಾಬೀತು ಪಡಿಸಬೇಕಿತ್ತು. ಅಮೆರಿಕಾ ಮತ್ತು ಬ್ರಿಟಿಷ್ ವಿಶ್ವವಿದ್ಯಾನಿಲಯಗಳಲ್ಲಿ ಉಪನ್ಯಾಸ ನೀಡುವ ಭಾರತೀಯ ಬುದ್ಧಿ ಜೀವಿಗಳು ಭಾರತೀಯ ಪ್ರಜಾತಂತ್ರ ವ್ಯವಸ್ಥೆಯ ಗುಣಗಾನ ಮಾಡುವಾಗ, ಮಾಯಾವತಿ ಅವರಂತಹ ಅಸ್ಪೃಶ್ಯ ಮಹಿಳೆ ದೇಶದ ಅತಿದೊಡ್ಡ ರಾಜ್ಯದ ಮುಖ್ಯಮಂತ್ರಿಯಾಗಿರುವ ನಿದರ್ಶನ ನೀಡುವ ಬಗ್ಗೆ ನನಗೆ ಅರಿವಿದೆ.

ಆದರೆ ಮಾಯಾವತಿ ಅವರ ಬಗ್ಗೆ ಭಾರತಕ್ಕೆ ಬಂದಾಗ ಏನು ಹೇಳುತ್ತಾರೆ? ಉತ್ತರ ಪ್ರದೇಶದಲ್ಲಿ ಮಾಯಾವತಿ ಅಧಿಕಾರಕ್ಕೆ ಬಂದಾಗ 2007ರ ವರ್ಷದ ವ್ಯಕ್ತಿ ಎಂದು ಯಾಕೆ ಘೋಷಿಸಲಿಲ್ಲ? ದೇಶದ ಅಭಿಪ್ರಾಯ ನಾಯಕರು ಮಾಯಾವತಿ ಅವರ ಗೆಲುವಿನಿಂದ ಸಂಭ್ರಮಿಸಿದರೇ? 2007ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಮಾಯಾವತಿ ಅವರ ಗೆಲುವು ದೇಶದ ಇತಿಹಾಸದ ಅದ್ಭುತ ಕ್ಷಣಗಳಲ್ಲಿ ಒಂದು. ಕಾಶಿಯಲ್ಲಿ ಬ್ರಾಹ್ಮಣರ ವಿರುದ್ಧ ಗುರು ರವಿದಾಸರ ಗೆಲುವು ಮತ್ತು ಭಾರತೀಯ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ಡಾ॥ಅಂಬೇಡ್ಕರ್ ಅವರ ಆಯ್ಕೆ, ಈ ಸಾಲಿಗೆ

ಮಾಯಾವತಿ ಸೇರುತ್ತಾರೆ.

ಹಾಗಾದರೆ ಮಾಯಾವತಿ ಅವರ ವಿಗ್ರಹ ನಿರ್ಮಾಣ ಪ್ರಕ್ರಿಯೆಗೆ ಎಲ್ಲಾ ಕಡೆಗಳಿಂದಲೂ ಖಂಡನೆ ವ್ಯಕ್ತವಾಗುತ್ತಿರುವುದೇಕೆ? ಸಮಾಜದ ಮುಖ್ಯವಾಹಿನಿಯ ತಾರತಮ್ಯ ನೀತಿ ಗೊತ್ತಿದ್ದರೂ, ತನ್ನದೇ ಮುತ್ಥಳಿಗಳನ್ನು ಪ್ರತಿಷ್ಠಾಪಿಸಿಕೊಳ್ಳಲು ಮಾಯಾವತಿ ಅವರಿಗೆ ಸಲಹೆ ನೀಡಿದವರ್‍ಯಾರು ಎಂಬ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ಮಾಯಾವತಿ ಅವರ ಕಲ್ಲಿನ ವಿಗ್ರಹಗಳು, ಉತ್ತರ ಪ್ರದೇಶದ ಸಮಾಜ ಅವರಿಗೆ ನೀಡಿದ ನೈತಿಕ ಗೆಲುವಿಗೆ ಚ್ಯುತಿ ಬಳಿಯುತ್ತಿವೆ. ಇದು ಮಹಾ ಪ್ರಮಾದವಲ್ಲದೇ ಇನ್ನೇನು?

ನಾಯಕತ್ವದ ಸಮಸ್ಯೆಗಳು

ಯಾವುದೇ ವಿಚಾರವಾಗಲೀ ವೈಫಲ್ಯಗಳ ಸಾಧ್ಯತೆಯಿದ್ದಾಗ ಮಾತ್ರ ಯಶಸ್ಸಿನ ಸಾಧ್ಯತೆಗಳಿರಲು ಸಾಧ್ಯ. ಪ್ರಜಾತಂತ್ರ ವ್ಯವಸ್ಥೆ ಕೂಡ ಇದಕ್ಕೆ ಹೊರತಲ್ಲ. ತಾರ್ಕಿಕವಾಗಿ ಅತ್ಯುತ್ತಮವಾದ ಪ್ರಜಾತಂತ್ರ ವ್ಯವಸ್ಥೆ ಎಲ್ಲ ಸಂದರ್ಭಗಳಲ್ಲಿಯೂ ಉತ್ತಮ ನಾಯಕತ್ವವನ್ನು ಒದಗಿಸಬೇಕಾಗಿಲ್ಲ. ಅದೇ ರೀತಿ ಪ್ರಜಾತಂತ್ರ ವ್ಯವಸ್ಥೆ ನ್ಯಾಯಯುತವಾದ ನಾಯಕತ್ವವನ್ನೂ ಒದಗಿಸಬೇಕಾಗಿಲ್ಲ.

ಪ್ರಜಾತಂತ್ರ ವ್ಯವಸ್ಥೆ ಪಾರಂಪರಿಕವಾಗಿ ಶಕ್ತಿಯುತರಾದ ನಾಯಕತ್ವವನ್ನು ಕೂಡ ಸೃಷ್ಟಿಸಬಹುದು. ಇಂಥಹ ಶಕ್ತಿಯುತ ನಾಯಕರು ಬುದ್ಧಿವಂತರಾಗಿರಬೇಕಿಲ್ಲ. ಪ್ರಜಾತಂತ್ರ ವ್ಯವಸ್ಥೆ ಬುದ್ಧಿವಂತಿಕೆಯ ಪರೀಕ್ಷೆ ನಡೆಸುವುದಿಲ್ಲ. ಕೆಲವೊಮ್ಮೆ ಬಫೂನ್‌ಗಳು ಕೂಡ ಮತದಾರರಿಗೆ ಮೋಡಿ ಮಾಡಿ ಅಧಿಕಾರಕ್ಕೆ ಬರಬಹುದು. ಆದರೆ ಈ ದಡ್ಡ ನಾಯಕರು, ಶಕ್ತಿಯುತ ನಾಯಕರು ನ್ಯಾಯಬದ್ಧರಾಗಿರದಿದ್ದರೂ, ಕೆಟ್ಟ ನಾಯಕರೂ ಆಗಿರಬೇಕಿಲ್ಲ.

ಉತ್ತಮ ನಾಯಕರು ಅಜ್ಞಾನಿಗಳಾಗಿದ್ದರೆ ಅವಕ್ಕಿಂತ ದೊಡ್ಡ ಗಂಡಾಂತರ ಬೇರೊಂದಿಲ್ಲ. ದೇಶದಲ್ಲಿ ಇದುವರೆಗೂ ಅಧಿಕಾರದಲ್ಲಿದ್ದ ಎಲ್ಲ ಪ್ರಧಾನಿಗಳೂ ನ್ಯಾಯಬದ್ಧರಾದ ಅತ್ಯುತ್ತಮ ನಾಯಕರು ಎಂದು ಇಟ್ಟುಕೊಳ್ಳೋಣ. ಭಾರತದ ಪ್ರಜಾತಂತ್ರ ವ್ಯವಸ್ಥೆಯ ಮೂಲಕ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳು ದಲಿತರ ಏಳ್ಗೆಯ ಬಗ್ಗೆ ಉತ್ತಮ ಚಿಂತನೆ ನಡೆಸಿವೆ ಎಂದು ಇಟ್ಟುಕೊಳ್ಳೋಣ. ಆದರೂ ಕೂಡ ಒಟ್ಟಾರೆ ವ್ಯವಸ್ಥೆಯ ಬಗ್ಗೆ ದಲಿತರೇಕೆ ಅಸಮಧಾನ ವ್ಯಕ್ತಪಡಿಸುತ್ತಾರೆ?

ದೆಹಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ 80 ಪದವಿಕಾಲೇಜುಗಳಲ್ಲಿ ಯಾವುದೇ ಒಂದು ಕಾಲೇಜಿಗೂ ದಲಿತ ಪ್ರಿನ್ಸಿಪಾಲ್ ಇಲ್ಲ. ದಲಿತರಿಗಾಗಿ ಮೀಸಲಿರುವ ಪ್ರಾಥಮಿಕ ಶಾಲೆಗಳ ಶಿಕ್ಷಕರ ಸ್ಥಾನಗಳು ಈಗಲೂ ಭರ್ತಿಯಾಗದೇ ಹಾಗೇ ಉಳಿದಿದೆ. ರಾಷ್ಟ್ರದ ರಾಜಧಾನಿಯಲ್ಲಿಯೇ ಈ ಪರಿಸ್ಥಿತಿಯಾದರೆ, ಬಿಹಾರ, ಪ.ಬಂಗಾಳ ಮತ್ತು ತಮಿಳುನಾಡುಗಳಂತಹ ರಾಜ್ಯಗಳಲ್ಲಿ ದಲಿತ ಹಕ್ಕುಗಳ ಪಾಡೇನಾಗಬೇಕು?

ಇನ್ನು 38 ವರ್ಷಗಳ ಒಳಗೆ ಭಾರತ ಸ್ವಾತಂತ್ರ್ಯದ ಶತಮಾನೋತ್ಸವವನ್ನು ಆಚರಿಸಲಿದೆ. ಸ್ವಾತಂತ್ರ್ಯ ಬಂದು 62 ವರ್ಷಗಳಾದ ಮೇಲೂ ದಲಿತರು ತಮ್ಮ ಹಕ್ಕುಗಳಿಗಾಗಿ ಹೆಣಗಾಡಬೇಕಾಗಿರುವ ಸ್ಥಿತಿ ಇರುವಾಗ, ಇನ್ನು 38 ವರ್ಷಗಳಲ್ಲಿ ಪರಿಸ್ಥಿತಿ ಸುಧಾರಿಸಲಿದೆಯೇ?

ಈ ದೇಶದಲ್ಲಿ ಎಲ್ಲವೂ ಸರಿಯಾಗಿಲ್ಲ. ದೇಶದ ಎಲ್ಲ ಪ್ರಧಾನಮಂತ್ರಿಗಳು, ಎಲ್ಲ ನಾಯಕರು ಮತ್ತು ಎಲ್ಲ ರಾಜಕೀಯ ಪಕ್ಷಗಳು ದಲಿತರ ವಿರುದ್ಧ ತಂತ್ರಗಳನ್ನು ಹೆಣೆಯುತ್ತಾ ರಾತ್ರಿ-ಹಗಲು ಕಳೆಯುತ್ತಾರೆ ಎಂಬ ವಾದವನ್ನು ನಾನು ಮಾಡುತ್ತಿಲ್ಲ. ಆದರೆ ಬಹುತೇಕ ಮಂದಿ ನಾಯಕರು, ದಲಿತರ ಸಮಸ್ಯೆಗಳಿಗೆ ಸ್ಪಂದಿಸುವ ಗುಣವನ್ನು ತಮ್ಮ ಪೂರ್ವಜರಿಂದ ಪಡೆದುಕೊಂಡು ಬಂದಿರುವುದಿಲ್ಲ. ಮಾನಸಿಕವಾಗಿ ದಲಿತ ವಿರೋಧಿ ಭಾವನೆಗಳನ್ನು ಬಳುವಳಿಯಾಗಿ ಪಡೆದುಕೊಂಡು ಬಂದಿರುವ ಇವರು, ನಿಜವಾದ ಅರ್ಥದಲ್ಲಿ ದಲಿತ ವಿರೋಧಿಗಳೇನಲ್ಲ.

ಮನಮೋಹನ್ ಸಿಂಗ್ ನೇತೃತ್ವದ ಎರಡನೆಯ ಯುಪಿಎ ಸರ್ಕಾರ, ಭಾರತ ಇದುವರೆಗೆ ಕಂಡ ಅತ್ಯುತ್ತಮ ಸರ್ಕಾರವೆಂದು ವಾದಕ್ಕಾದರೂ ಒಪ್ಪಿಕೊಳ್ಳಬಹುದು. ಪ್ರಸ್ತುತ ಸರ್ಕಾರದಲ್ಲಿರುವ ಬಹುತೇಕ ಮಂದಿ ಸಚಿವರು ವಿದೇಶಗಳಲ್ಲಿ ಶಿಕ್ಷಣ ಪಡೆದವರಾಗಿದ್ದು, ಹಣ ಮಾಡುವ ಭ್ರಷ್ಟ ಇರಾದೆ ಬಹಳಷ್ಟು ನಾಯಕರಿಗಿಲ್ಲ.

ಆದರೂ ಈ ಅತ್ಯುತ್ತಮ ಸರ್ಕಾರ ಕೂಡ ಹೇಗೆ ದಲಿತರ ಪಾಲಿಗೆ ಮುಳುವಾಗಿದೆ ನೋಡಿ. ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ಇತ್ತೀಚೆಗೆ ಮಂಡಿಸಿದ ಬಜೆಟ್‌ನಲ್ಲಿ ದಲಿತೋದ್ಧಾರಕ್ಕಾಗಿ ಹೊಸ ಯೋಜನೆಯೊಂದನ್ನು ಘೋಷಿಸಿದ್ದಾರೆ. ದಲಿತರ ಜನಸಂಖ್ಯೆ ಶೇ. 50ಕ್ಕಿಂತ ಅಧಿಕವಾಗಿರುವ ದೇಶದ ಸುಮಾರು 44,000 ಹಳ್ಳಿಗಳನ್ನು ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ ಅಭಿವೃದ್ಧಿ ಪಡಿಸಲಾಗುವುದು. ಈ ದಿಶೆಯಲ್ಲಿ ಈ ವರ್ಷ ಸುಮಾರು 1000 ಹಳ್ಳಿಗಳನ್ನು ಅಭಿವೃದ್ಧಿ ಪಡಿಸಲು ಪ್ರಾಯೋಗಿಕವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂದಿದ್ದಾರೆ.

ದಲಿತರ ಪರ ಸರ್ಕಾರದ ಕಾಳಜಿ ಹೇಗಿದೆ ನೋಡಿ. 2002ರ ಫೆಬ್ರವರಿ 2 ರಂದು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಸುಮಾರು 200 ಜಿಲ್ಲೆಗಳಲ್ಲಿ ಜಾರಿಗೊಳಿಸಿದಾಗ, ಯೋಜನೆಗೆ ಆಯ್ಕೆಗೊಳ್ಳುವ ಜಿಲ್ಲೆಗಳು ತೀರ ಹಿಂದುಳಿದಿರಬೇಕು ಮತ್ತು ಜಿಲ್ಲೆಗಳಲ್ಲಿ ದಲಿತರು /ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಹೆಚ್ಚಾಗಿರಬೇಕು ಎಂಬ ಷರತ್ತುಗಳಿದ್ದವು. ದಲಿತರು/ಬುಡಕಟ್ಟು ಸಮುದಾಯಗಳ ಸಮಸ್ಯೆಗಳನ್ನು ಬಗೆ ಹರಿಸುವ ನಿಟ್ಟಿನಲ್ಲಿ ಮೇಲ್ಜಾತಿ ನಾಯಕರು ಕೈಗೊಳ್ಳುವ ಚಿಂತನೆಗಳ ಸರಮಾಲೆ ಇದು. ದೇಶದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹೊರಹೊಮ್ಮಿದ ಅತ್ಯುತ್ತಮ ನಾಯಕರು ಕೂಡ ದಲಿತರ ಬೇಡಿಕೆಗಳನ್ನು ತಿರಸ್ಕರಿಸಿ, ಅವರಿಗೆ ಅನವಶ್ಯಕವಾದ ಸೌಲಭ್ಯಗ ಳನ್ನು ನೀಡುತ್ತಾ ಬಂದಿರುವುದು ಸಾಬೀತಾಗಿದೆ. ದಲಿತರೆಂದರೆ ಯಾರು? ಅವರ ಅವಶ್ಯಕತೆಗಳೇನು? ಎಂಬುದರ ಬಗ್ಗೆ ಅಧಿಕಾರದ ಗದ್ದುಗೆಯಲ್ಲಿರುವವರಿಗೆ ತಿಳವಳಿಕೆ ಇಲ್ಲವೆನಿಸುತ್ತದೆ.

ದಲಿತರ ಸ್ಥಿತಿಗತಿ ಇನ್ನೂ ಯಾಕೆ ಉತ್ತಮಗೊಂಡಿಲ್ಲ ಎನ್ನುವುದಕ್ಕೆ ಪ್ರಣಬ್ ಮುಖರ್ಜಿ ಅವರ ಈ ಯೋಜನೆಯನ್ನು ಸ್ಪಷ್ಟ ನಿದರ್ಶನವಾಗಿ ತೆಗೆದುಕೊಳ್ಳಬಹುದು. 2001ರ ಜನಗಣತಿಯ ಪ್ರಕಾರ ದೇಶದಲ್ಲಿ ಶೇ. 16.1ರಷ್ಟು ದಲಿತರು ವಾಸಿಸುತ್ತಿದ್ದಾರೆ. ಈ ಯೋಜನೆ ದಲಿತರ ಜನಸಂಖ್ಯೆ ಶೇ. 50ಕ್ಕಿಂತ ಅಧಿಕವಾಗಿರುವ 44,000 ಹಳ್ಳಿಗಳಿಗೆ ಮಾತ್ರ ಮೀಸಲಾದರೆ, ಶೇ. 10-20 ರಷ್ಟು ಜನಸಂಖ್ಯೆ ಹೊಂದಿರುವ ಸಾವಿರಾರು ಹಳ್ಳಿಗಳಲ್ಲಿರುವ ದಲಿತರ ಗತಿ ಏನಾಗಬೇಕು?

ಎಲ್ಲೆಲ್ಲಿ ದಲಿತರ ಜನಸಂಖ್ಯೆ ಹೆಚ್ಚಾಗಿದೆಯೋ ಅಲ್ಲಿ ಸರ್ಕಾರಿ ಅಧಿಕಾರಿಗಳೊಂದಿಗೆ ಹೋರಾಟ ಮಾಡಿ ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ದಲಿತರು ಸಶಕ್ತರಾಗಿರುತ್ತಾರೆ. ಆದರೆ ದಲಿತರ ಜನಸಂಖ್ಯೆ ಕಡಿಮೆ ಇರುವ ಹಳ್ಳಿಗಳಲ್ಲಿ ದಲಿತರು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ತಮ್ಮ ಗ್ರಾಮದ ಮೇಲ್ಜಾತಿ ಜನರು ಮತ್ತು ಸರ್ಕಾರಿ ಅಧಿಕಾರಿಗಳ ಮರ್ಜಿಗೆ ಒಳಪಟ್ಟಿರುತ್ತಾರೆ.

ದಲಿತರ ಪರ ಸರ್ಕಾರದ ಕಾಳಜಿ ಹೇಗಿದೆ ನೋಡಿ. 2002ರ ಫೆಬ್ರವರಿ 2ರಂದು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಸುಮಾರು 200 ಜಿಲ್ಲೆಗಳಲ್ಲಿ ಜಾರಿಗೊಳಿಸಿದಾಗ, ಯೋಜನೆಗೆ ಆಯ್ಕೆಗೊಳ್ಳುವ ಜಿಲ್ಲೆಗಳು ತೀರ ಹಿಂದುಳಿದಿರಬೇಕು ಮತ್ತು ಜಿಲ್ಲೆಗಳಲ್ಲಿ ದಲಿತರು/ ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಹೆಚ್ಚಾಗಿರಬೇಕು ಎಂಬ ಷರತ್ತುಗಳಿದ್ದವು.

ದಲಿತರು/ಬುಡಕಟ್ಟು ಸಮುದಾಯಗಳ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಮೇಲ್ಜಾತಿ ನಾಯಕರು ಕೈಗೊಳ್ಳುವ ಚಿಂತನೆಗಳ ಸರಮಾಲೆ ಇದು. ದೇಶದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹೊರಹೊಮ್ಮಿದ ಅತ್ಯುತ್ತಮ ನಾಯಕರು ಕೂಡ ದಲಿತರ ಬೇಡಿಕೆಗಳನ್ನು ತಿರಸ್ಕರಿಸಿ, ಅವರಿಗೆ ಅನವಶ್ಯಕವಾದ ಸೌಲಭ್ಯಗಳನ್ನು ನೀಡುತ್ತಾ ಬಂದಿರುವುದು ಸಾಬೀತಾಗಿದೆ. ದಲಿತರೆಂದರೆ ಯಾರು? ಅವರ ಅವಶ್ಯಕತೆಗಳೇನು? ಎಂಬುದರ ಬಗ್ಗೆ ಅಧಿಕಾರದ ಗದ್ದುಗೆಯಲ್ಲಿರುವವರಿಗೆ ತಿಳವಳಿಕೆ ಇಲ್ಲವೆನಿಸುತ್ತದೆ. ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳಲು ನಮ್ಮ ನಾಯಕರು ನಿರಂತರವಾಗಿ ವಿಫಲರಾಗುತ್ತಿರುವಾಗ ಭಾರತದ ಪ್ರಜಾತಂತ್ರ ವ್ಯವಸ್ಥೆ ಎಂತಹ ನಾಯಕತ್ವವನ್ನು ಸೃಷ್ಟಿಸುತ್ತಾ ಬಂದಿದೆ ಎಂಬ ಪ್ರಶ್ನೆ ಕಾಡದೆ ಬಿಡದು.

ಅನಾರೋಗ್ಯಕರ ಯೋಜನೆಗಳು

2006ರ ಏಪ್ರಿಲ್ ತಿಂಗಳಲ್ಲಿ ಭಾರತ ವಿಶ್ವದೆಲ್ಲೆಡೆ ಸುದ್ದಿಯಲ್ಲಿತ್ತು."ಅಪೌಷ್ಟಿಕ ಆಹಾರ ಸೇವಿಸುವ ವಿಶ್ವದ 146 ದಶಲಕ್ಷ ಮಕ್ಕಳಲ್ಲಿ ಸು. 57 ದಶಲಕ್ಷ ಮಕ್ಕಳು ಭಾರತದಲ್ಲಿದ್ದಾರೆ. ಈ ವಿಷಯದಲ್ಲಿ ಭಾರತದ ಅಪೌಷ್ಟಿಕತೆಯ ಸರಾಸರಿ ಇಥಿಯೋಪಿಯಾ (ಶೇ.47), ನೇಪಾಳ ಮತ್ತು ಬಾಂಗ್ಲಾದೇಶ (ಶೇ.48) ಇವುಗಳಷ್ಟೇ ಇದೆ. ಆದರೆ ಚೀನಾ (ಶೇ.8), ಥಾಯ್ಲೆಂಡ್ (ಶೇ.18) ಮತ್ತು ಆಫ್ಘಾನಿಸ್ಥಾನ(ಶೇ.39) ಕೂಡ ಭಾರತಕ್ಕಿಂತ ಮುಂದಿದೆ" ಎಂದು ವಿಶ್ವಸಂಸ್ಥೆಯ ವರದಿಯೊಂದರಲ್ಲಿ ಉಲ್ಲೇಖಿಸಲಾಗಿದೆ.

ವಿಶ್ವಸಂಸ್ಥೆಯ ವರದಿಯಿಂದ ತಬ್ಬಿಬ್ಬಾದ ಬಹುತೇಕ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಆರೋಗ್ಯ ಸಂಬಂಧಿ ಸಂಸ್ಥೆಗಳು ಒಂದೆಡೆ ಸೇರಿ ಚರ್ಚೆ ನಡೆಸಿದವು. 2006ರಲ್ಲಿ ವರದಿ ಬಿಡುಗಡೆಯಾದಾಗಿನಿಂದ ಅಭಿವೃದ್ಧಿ ಸೂಚಕಗಳ

[illegible] ಬಂದಾಗ ಭಾರತವನ್ನು ಪಶ್ಚಿಮ ಆಫ್ರಿಕಾದ ದೇಶಗಳಿಗೆ ಹೋಲಿಕೆ ಮಾಡಲಾಗುತ್ತಿದೆ. ಐದು ವರ್ಷದೊಳಗಿನ ಸು. 46,000 ಮಕ್ಕಳನ್ನು ಒಳಗೊಂಡ ಬೃಹತ್ ಸಮೀಕ್ಷೆಯೊಂದನ್ನು ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ರಾಷ್ಟ್ರೀಯ ಕೌಟುಂಬಿಕ ಆರೋಗ್ಯ ಸಮೀಕ್ಷಾ ಸಂಸ್ಥೆ (ಎನ್‌ಎಫ್‌ಎಚ್‌ಎಸ್) ಕೈಗೊಂಡಿತ್ತು. ಕರಾರುವಕ್ಕಾದ ವೈಜ್ಞಾನಿಕ ಸಂಶೋಧನೆಗೆ ಹೆಸರಾದ ಎನ್‌ಎಫ್‌ಎಚ್‌ಎಸ್ ಕೂಡ 2007ರಲ್ಲಿ ಆತಂಕಕಾರಿ ಅಂಕಿ ಅಂಶಗಳೊಂದಿಗೆ ವರದಿ ನೀಡಿತು.

ಸಮೀಕ್ಷೆಯ ಪ್ರಕಾರ ದೇಶದ ಶೇ. 42.5ರಷ್ಟು ಮಕ್ಕಳು ಪೌಷ್ಠಿಕ ಆಹಾರದಿಂದ ವಂಚಿತರಾಗಿದ್ದಾರೆ. ದೇಶದಲ್ಲಿ ವಾಸಿಸುತ್ತಿರುವ ಶೇ. 20ರಷ್ಟಿರುವ ಕಡುಬಡವರ ಮಕ್ಕಳಲ್ಲಿ ಶೇ. 56.6ರಷ್ಟು ಮಕ್ಕಳು ಆಹಾರವಂಚಿತರು. ದೇಶದ ನಾಗರಿಕರ ಆರೋಗ್ಯದ ಸ್ಥಿತಿಗತಿ ಅರಿತುಕೊಳ್ಳುವ ನಿಟ್ಟಿನಲ್ಲಿ ಎನ್‌ಎಫ್‌ಎಚ್‌ಎಸ್, ವಿಶ್ವಸಂಸ್ಥೆ ಮತ್ತಿತರ ಸಂಸ್ಥೆಗಳು ಜಾಗತಿಕವಾಗಿ ಮಾನ್ಯತೆ ಹೊಂದಿರುವ ವೈಜ್ಞಾನಿಕ ವಿಧಾನವನ್ನು ಬಳಸುತ್ತವೆ. ಇಂತಹ ವರದಿಗಳು, ಮುಖ್ಯವಾಗಿ ಎನ್‌ಎಫ್‌ಎಚ್‌ಎಸ್‌ನ ವರದಿಯನ್ನು ಆಧಾರವಾಗಿರಿಸಿಕೊಂಡು ಸರ್ಕಾರ ಆರೋಗ್ಯ ಸಂಬಂಧಿ ಯೋಜನೆಗಳನ್ನು ರೂಪಿಸುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಅಪೌಷ್ಠಿಕತೆಯ ಸಮಸ್ಯೆಯ ನಿವಾರಣೆ, ಸರ್ಕಾರಗಳ ಪ್ರಮುಖ ಅಜೆಂಡಾಗಳಲ್ಲಿ ಒಂದಾಗಿದೆ. ಅಂತರಾಷ್ಟ್ರೀಯ ಮಟ್ಟದಲ್ಲಾದ ಅವಮಾನವನ್ನು ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ಬಡವರ ಹಸಿವು ನೀಗಿಸಲು ಬೃಹತ್ ಯೋಜನೆಯನ್ನು ರೂಪಿಸಿತು. ಅಪೌಷ್ಠಿಕ ಆಹಾರ ಸೇವನೆಗೆ ಬಡತನ ಮತ್ತು ಆಹಾರದ ಕೊರತೆ ಪ್ರಮುಖ ಕಾರಣವಾಗಿದೆ ಎಂದು ನಿರ್ಧರಿಸಿದ ಸರ್ಕಾರ, ಇದೇ ಮಾನದಂಡದ ಮೇಲೆ ಯೋಜನೆ ರೂಪಿಸಿತು.

ಈ ಹಿನ್ನೆಲೆಯಲ್ಲಿ ಮಧ್ಯಾಹ್ನದ ಊಟದ ಯೋಜನೆ ಸರ್ಕಾರದ ಪ್ರಮುಖ ಯೋಜನೆಯಾಗಿ ಹೊರಹೊಮ್ಮಿತು. ದೇಶಾದ್ಯಂತ ಸರ್ಕಾರಿ ಶಾಲೆಗಳನ್ನು ಆರೋಗ್ಯ ಕೇಂದ್ರಗಳಾಗಿ ಪರಿವರ್ತಿಸಲಾಯಿತು. ಹೀಗಾಗಿ ಸರ್ಕಾರಿ ಶಾಲೆಗಳಲ್ಲಿ ಸ್ಲೇಟ್‌ಗಳ ಸ್ಥಳದಲ್ಲಿ ಈಗ ಪ್ಲೇಟ್‌ಗಳು ಬಂದಿವೆ. ಮಕ್ಕಳ ಆರೋಗ್ಯಕ್ಕಿಂತ ಪ್ರಮುಖವಾದ ವಿಚಾರ ಬೇರೊಂದಿಲ್ಲ ಎಂದು ಕೇಂದ್ರ ಸರ್ಕಾರ ಸ್ವಯಂ ಪ್ರಶಂಸೆಯಲ್ಲಿ ತೊಡಗಿದೆ. ಉತ್ತಮ ಆರೋಗ್ಯವನ್ನು ಕಾಪಾಡಿಕೊಂಡು ಬೆಳೆಯುವುದು, ಹಸಿವಿನಿಂದ ಅಕ್ಷರ ಕಲಿಯುವುದಕ್ಕಿಂತ ಉತ್ತಮವಾದುದು ಎಂಬುದರ ಬಗ್ಗೆ ಯಾರ ತಕರಾರೂ ಇಲ್ಲ. ಆದರೆ ಮಧ್ಯಾಹ್ನದ ಊಟದ ಪೌಷ್ಠಿಕತೆಯ ಬಗ್ಗೆ ಪ್ರಶ್ನೆಗಳು ಯಾವಾಗಲೂ ಇದ್ದೇ ಇರುತ್ತದೆ.

ಎನ್‌ಎಫ್‌ಎಚ್‌ಎಸ್ ಸಮೀಕ್ಷೆಯಲ್ಲಿ ಇನ್ನೂ ಹತ್ತು ಹಲವಾರು ಆತಂಕಕಾರಿ ಅಂಶಗಳಿವೆ. ಸಮೀಕ್ಷೆಯ ಪ್ರಕಾರ, ಹಳ್ಳಿಗಳಲ್ಲಿ ವಾಸಿಸುವ, ಶೇ. 20ರಷ್ಟು ಜನಸಂಖ್ಯೆ ಹೊಂದಿರುವ ಶ್ರೀಮಂತರ ಮಕ್ಕಳು ಶೇ. 26.5ರಷ್ಟಿದ್ದು ಪೌಷ್ಠಿಕ ಆಹಾರದಿಂದ ವಂಚಿತರಾಗಿದ್ದಾರೆ. ಅಂದರೆ ಆಹಾರದ ಲಭ್ಯತೆ ಇದ್ದರೂ ಕೂಡ ಪೌಷ್ಠಿಕತೆಯ ಸಮಸ್ಯೆಯನ್ನು ಈ ಮಕ್ಕಳು ಅನುಭವಿಸುತ್ತಿದ್ದಾರೆ.

ಹೆಚ್ಚುವರಿ ಆಹಾರವನ್ನು ಹೊಂದಿರುವ ಕುಟುಂಬಗಳಲ್ಲಿ ಕಂಡುಬರುವ ಅಪೌಷ್ಠಿಕತೆಯ ಸಮಸ್ಯೆಯನ್ನು ಸರ್ಕಾರ ಹೇಗೆ ಬಗೆಹರಿಸುತ್ತದೆ ಎಂಬ ನೈತಿಕ ಪ್ರಶ್ನೆ

ಸಮೀಕ್ಷೆಯ ಪ್ರಕಾರ ದೇಶದ ಶೇ. 42.5 ರಷ್ಟು ಮಕ್ಕಳು ಪೌಷ್ಠಿಕ ಆಹಾರದಿಂದ ವಂಚಿತರಾಗಿದ್ದಾರೆ. ದೇಶದಲ್ಲಿ ವಾಸಿಸುತ್ತಿರುವ ಶೇ. 20ರಷ್ಟಿರುವ ಕಡುಬಡವರ ಮಕ್ಕಳಲ್ಲಿ ಶೇ. 56.6ರಷ್ಟು ಮಕ್ಕಳು ಆಹಾರವಂಚಿತರು. ದೇಶದ ನಾಗರಿಕರ ಆರೋಗ್ಯದ ಸ್ಥಿತಿಗತಿ ಅರಿತುಕೊಳ್ಳುವ ನಿಟ್ಟಿನಲ್ಲಿ ಎನ್‌ಎಫ್‌ಎಚ್‌ಎಸ್, ವಿಶ್ವ ಸಂಸ್ಥೆ ಮತ್ತಿತರ ಸಂಸ್ಥೆಗಳು ಜಾಗತಿಕವಾಗಿ ಮಾನ್ಯತೆ ಹೊಂದಿರುವ ವೈಜ್ಞಾನಿಕ ವಿಧಾನವನ್ನು ಬಳಸುತ್ತವೆ. ಇಂತಹ ವರದಿಗಳು, ಮುಖ್ಯವಾಗಿ ಎನ್‌ಎಫ್‌ಎಚ್‌ಎಸ್‌ನ ವರದಿಯನ್ನು ಆಧಾರವಾಗಿರಿಸಿಕೊಂಡು ಸರ್ಕಾರ ಆರೋಗ್ಯ ಸಂಬಂಧಿ ಯೋಜನೆಗಳನ್ನು ರೂಪಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಅಪೌಷ್ಠಿಕತೆಯ ಸಮಸ್ಯೆಯ ನಿವಾರಣೆ, ಸರ್ಕಾರಗಳ ಪ್ರಮುಖ ಅಜೆಂಡಾಗಳಲ್ಲಿ ಒಂದಾಗಿದೆ.

ಯನ್ನು ಕೇಳಬೇಕಾಗಿದೆ. ಬಡವರನ್ನು ಮರೆತುಬಿಡಿ. ಹೆಚ್ಚುವರಿ ಆಹಾರನ್ನು ಹೊಂದಿರುವವರಿಗೆ ಸರ್ಕಾರ ಮತ್ತೆ ಪೌಷ್ಠಿಕ ಆಹಾರವನ್ನು ಒದಗಿಸುವುದೇ? ಹೆಚ್ಚುವರಿ ಆಹಾರವನ್ನು ಹೊಂದಿರುವ ಕುಟುಂಬಗಳಲ್ಲಿ ಶೇ. 26.5ರಷ್ಟು ಮಕ್ಕಳು ಬಡತನ ಮತ್ತು ಆಹಾರದ ಕೊರತೆಯಲ್ಲದೆ ಇತರ ಕಾರಣಗಳಿಗಾಗಿ ಪೌಷ್ಠಿಕ ಆಹಾರದ ಕೊರತೆ ಅನುಭವಿಸುತ್ತಿದ್ದರೆ, ಇದೇ ರೀತಿಯ ಕಾರಣಗಳು ಬಡವರಿಗೂ ಅನ್ವಯಿಸಬಹುದಲ್ಲವೇ?

ಎನ್‌ಎಫ್‌ಎಚ್‌ಎಸ್‌ನಂತಹ ಸಂಸ್ಥೆಗಳು ವೈಜ್ಞಾನಿಕವಾಗಿ ಅಪೌಷ್ಠಿಕತೆಯ ಸಮಸ್ಯೆಯನ್ನು ಮನದಟ್ಟು ಮಾಡಿಸಿವೆ. ಈ ಹಿನ್ನೆಲೆಯಲ್ಲಿ ಬಡತನ ನಿರ್ಮೂಲನೆಯ ಚಿಂತಕರು ತಮ್ಮ ಮನಃಸಾಕ್ಷಿಗೆ ಓಗೊಟ್ಟು ಸಮಸ್ಯೆಗೆ ಪರಿಹಾರ ಹುಡುಕಬೇಕಿದೆ. ದೆಹಲಿಯಂತಹ ನಗರದಲ್ಲಿ ಲಕ್ಸುರಿ ಕಾರುಗಳನ್ನು ಹೊಂದಿರುವ ಕೆಲವು ಕುಟುಂಬಗಳಲ್ಲಿ ಪೌಷ್ಠಿಕ ಆಹಾರ ಸೇವಿಸದ ಮಹಿಳೆಯರಿದ್ದಾರೆ. ಇಂತಹ ಸಮಸ್ಯೆಗಳನ್ನು ಪರಿಹರಿಸುವುದು ಹೇಗೆ? ಕೆಲವು ಕುಟುಂಬಗಳಲ್ಲಿ ಒಂದು ಮಗು ದಢೂತಿಯಾಗಿದ್ದರೆ, ಮತ್ತೊಂದು ಮಗು ಆಹಾರ ಸೇವಿಸುವುದೇ ಇಲ್ಲ. ಇಂತಹ ವಿಚಿತ್ರ ಸಮಸ್ಯೆಗಳಿಗೆ ಪರಿಹಾರವೇನು?

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸ್ಥೂಲಕಾಯದ ಸಮಸ್ಯೆಯಿದ್ದರೆ, ಅಭಿವೃದ್ಧಿ ಹೊಂದಿರದ ದೇಶಗಳಲ್ಲಿ ಪೌಷ್ಠಿಕ ಆಹಾರದ ಸಮಸ್ಯೆ ಇದೆ. ಅಲ್ಲಿನ ದೇಶಗಳ ಯೋಜನೆಯ ರೂವಾರಿಗಳು ತಮ್ಮ ದೇಶದ ಆಹಾರದ ಸಮಸ್ಯೆಗೆ ಮೂಲ ಕಾರಣ ಜನರ ಆಹಾರಪದ್ಧತಿ ಎಂಬ ಅಂಶವನ್ನು ಕಂಡುಕೊಂಡಿದ್ದಾರೆ. ಆದರೆ ಅದಕ್ಕಾಗಿ ಅವರು ಸ್ಥೂಲಕಾಯಕ್ಕೆ ಕಾರಣವಾದ ಇಂತಹ ತಿಂಡಿ ತಿನಿಸುಗಳ ತಯಾರಿಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿಲ್ಲ.

ಆದರೆ ನಮ್ಮ ದೇಶದಲ್ಲಿ ಅಪೌಷ್ಠಿಕತೆಗೆ ಮೂಲ ಕಾರಣ ಆಹಾರದ ಕೊರತೆ ಎಂದು ಹಿಂದೆ ಮುಂದೆ ನೋಡದೆ ಘೋಷಿಸಲಾಗಿದೆ. ಭಾರತೀಯರ ಆಹಾರ ಪದ್ಧತಿಯ ಬಗ್ಗೆ ಕೊಂಚ ಕೂಡ ಯೋಚಿಸಲಿಲ್ಲ. ಉತ್ತರ ಪ್ರದೇಶ ರಾಜ್ಯದಲ್ಲಿ ಈ ಸಲ 1.35 ದಶಲಕ್ಷ ಮಕ್ಕಳು ನಪಾಸಾಗಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ನೀಡದಿರುವುದು ಇದಕ್ಕೆ ಪ್ರಮುಖ ಕಾರಣ. ಈ ಯೋಜನೆಯ ರೂವಾರಿಗಳು ದೇಶವನ್ನು ಎಲ್ಲಿಗೆ ತಂದು ನಿಲ್ಲಿಸುತ್ತಾರೋ?

* * * *

ಮಾತು ಮತ್ತು ಬರವಣಿಗೆ ಯಾವಾಗಲೂ ಸಂದರ್ಭೋಚಿತ ಅರ್ಥ ಹೊಂದಿರುತ್ತದೆ. ದಲಿತರ ಬಗ್ಗೆ ನಾನು ಅರಿತುಕೊಂಡಿರುವ ಮತ್ತು ಪ್ರತಿಪಾದಿಸುತ್ತಿರುವ ವಿಚಾರಗಳು ಕೂಡ ಸಾಂದರ್ಭಿಕವೇ.

ನನ್ನ ವಾದವನ್ನು ಸರಳಗೊಳಿಸಲು ಅಮೆರಿಕಾದ ನಿದರ್ಶನವನ್ನು ಇಲ್ಲಿ ಉಲ್ಲೇಖಿಸುತ್ತೇನೆ. ಇಂಗ್ಲಿಷ್ ಭಾಷೆಯ ಪದಪುಂಜದಲ್ಲಿ 'ಲಿಂಚಿಂಗ್' ಎಂಬ ಪದಕ್ಕೆ ವಿಶೇಷ ಅರ್ಥ ಮತ್ತು ಆಯಾಮಗಳಿವೆ. ಅಮೆರಿಕಾದ ಇತಿಹಾಸದಲ್ಲಿ "Lynching" ಎಂದರೆ ನ್ಯಾಯಾಂಗದಾಚೆಗಿನ ಕರಿಯರ ಸಾಮೂಹಿಕ ಹತ್ಯೆ. 1862ರ ಸ್ವಾತಂತ್ರ್ಯದ ಘೋಷಣೆಯ ನಂತರ ಅಮೆರಿಕಾದಲ್ಲಿ ಈ ಪದದ ಬಳಕೆ ಹೆಚ್ಚಾಗುತ್ತಾ ಬಂತು. ಅಬ್ರಹಾಂ ಲಿಂಕನ್ ಜೀತಪದ್ಧತಿಯನ್ನು ನಿರ್ಮೂಲನೆ ಮಾಡಿ ಸಾಂವಿಧಾನಿಕವಾಗಿ ಕರಿಯರಿಗೆ ಸ್ವಾತಂತ್ರ್ಯ ನೀಡಿದ. ಆದರೆ ಪರಿಸ್ಥಿತಿಯೇನೂ ಸುಧಾರಿಸಲಿಲ್ಲ.

1862ರ ನಂತರ ಕರಿಯರ ಹತ್ಯೆ ಸಾಮೂಹಿಕ ಆಯಾಮ ಪಡೆದುಕೊಳ್ಳುತ್ತಾ ಬಂತು. 1900ರ ಹೊತ್ತಿಗೆ ಬಿಳಿಯರು ಸುಮಾರು 2,858 ಕರಿಯರನ್ನು "ಬಿಲಿಂಬ್" ಮಾಡಿದ್ದಾರೆ. ಅದೇ ರೀತಿ ಕರಿಯರ ಪರವಾಗಿದ್ದ ಸುಮಾರು 1,096 ಮಂದಿ ಬಿಳಿಯರನ್ನು ಕೂಡ ಹತ್ಯೆ ಮಾಡಿದ್ದಾರೆ. ಜೀತಪದ್ಧತಿಯ ಕಾಲದಲ್ಲಿ ಕರಿಯರು ಬಿಳಿಯರ ಅಡಿಯಾಳುಗಳಾಗಿದ್ದು, ಆರ್ಥಿಕ ಅವಶ್ಯಕತೆಯಾಗಿದ್ದರು. ಆದರೆ ಕರಿಯರು ಯಾವಾಗ ಸ್ವತಂತ್ರರಾದರೋ ಬಿಳಿಯರಿಗೆ ಆತಂಕ ಶುರುವಾಗಿ ಕರಿಯರ ಮೇಲೆ ಹಿಂಸಾತ್ಮಕ ದಾಳಿ ನಡೆಸುತ್ತಾ ಬಂದರು. ಅದೇ ರೀತಿ ಜೀತಪದ್ಧತಿಯ ಕಾಲದಲ್ಲಿ ಕಪ್ಪು ಮಹಿಳೆಯರ ಮೇಲಿನ ಅತ್ಯಾಚಾರ ಕೂಡ ಸಾಮಾನ್ಯವಾಗಿತ್ತು. ಜೀತಪದ್ಧತಿಯ ಕಥನದಲ್ಲಿ ಈ ಅಂಶ ಈಗಲೂ ಪ್ರಮುಖ ಸ್ಥಾನ ಪಡೆದುಕೊಂಡಿದೆ.

ಇನ್ನು ದಲಿತರ ವಿಷಯಕ್ಕೆ ಬರುವುದಾದರೆ, 50–60ರ ದಶಕದಲ್ಲಿ ದಲಿತರ ಮೇಲಿನ ದೌರ್ಜನ್ಯ, ದಲಿತರ ಹತ್ಯೆ ತೀರ ಕಡಿಮೆ ಇತ್ತು. ಯಾಕೆಂದರೆ, ದಲಿತರ ಸಾಮಾಜಿಕ ನಡವಳಿಕೆಯನ್ನು ಜಾತಿಯಾಧಾರಿತ ಸಮಾಜ ನಿಯಂತ್ರಿಸುತ್ತಿತ್ತು. ದಲಿತರು ಎಲ್ಲಿಯವರೆಗೆ ಜಾತಿಯಾಧಾರಿತ ಸಮಾಜದ ಅಡಿಯಾಳುಗಳಾಗಿದ್ದರೋ ಅಲ್ಲಿಯವರೆಗೆ ಕೊಲೆ ಬೆದರಿಕೆಗಳು ಅಥವಾ ಕೊಲೆ ನಡೆಯುತ್ತಿರಲಿಲ್ಲ.

ಮೇಲ್ಜಾತಿಯ ಮಾಲೀಕರು ವಿಧೇಯರಾದ ದಲಿತರಿಗೆ ಹೆಚ್ಚು ಕೂಲಿ ನೀಡುವ ಅಗತ್ಯವಿರಲಿಲ್ಲ. ಯಾವಾಗ ದಲಿತರು ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡಲಾ

ಕಾಂಗ್ರೆಸ್‌ನ ನೈತಿಕ ವೈಫಲ್ಯ

ರಂಭಿಸಿದರೋ ಆಗ ಕೊಲೆ ಬೆದರಿಕೆಗಳನ್ನೊಡ್ಡುವುದು ಮೇಲ್ಜಾತಿಗಳಿಗೆ ಅವಶ್ಯಕವಾಗತೊಡಗಿತು. ಜೀತಪದ್ಧತಿಯ ಆ ಸಂದರ್ಭದಲ್ಲಿ ಮೇಲ್ಜಾತಿಯ ಗಂಡಸರು ದಲಿತ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವುದು ತೀರ ಸಾಮಾನ್ಯವಾಗಿತ್ತು.

ಐತಿಹಾಸಿಕವಾಗಿ ಅತ್ಯಾಚಾರದ ಸಾಮಾಜಿಕ ಆಯಾಮವನ್ನು ಅಧ್ಯಯನಕ್ಕೆ ಒಳಪಡಿಸಿದರೆ, ದಲಿತೇತರರು ಅತ್ಯಾಚಾರಕ್ಕೆ ಒಳಗಾಗಿರುವ ಮತ್ತು ದಲಿತರು ಅತ್ಯಾಚಾರವೆಸಗಿರುವ ಪ್ರಕರಣಗಳು ತೀರ ವಿರಳ ಅಥವಾ ಇಲ್ಲವೇ ಇಲ್ಲ. ದಲಿತ ಗಂಡು ಮತ್ತು ದಲಿತೇತರ ಹೆಣ್ಣಿನ ನಡುವಿನ ಒಪ್ಪಿತವಾದ ಸೆಕ್ಸ್ ಕೂಡ ನಿಷೇಧಕ್ಕೆ ಒಳಪಟ್ಟಿತ್ತು. ಎಲ್ಲ ದಲಿತೇತರರನ್ನು ನಾನು ಅತ್ಯಾಚಾರಿಗಳು ಎಂದು ಹೇಳುತ್ತಿಲ್ಲ. ಆದರೆ ಸಮಾಜದ ಬಹುತೇಕ ಅತ್ಯಾಚಾರಿಗಳು ದಲಿತೇತರರೇ ಆಗಿರುತ್ತಾರೆ. ದಲಿತ ಸಮಾಜದಲ್ಲಿ ಅತ್ಯಾಚಾರದ ಪ್ರಕರಣಗಳು ತೀರ ವಿರಳ.

ಹೀಗಾಗಿ ಮಾಯಾವತಿ ಅವರ ವಿರುದ್ಧ ರೀಟಾ ಬಹುಗುಣ ಜೋಷಿಯವರು ನೀಡಿದ ಹೇಳಿಕೆಯನ್ನು ಈ ಹಿನ್ನೆಲೆಯಲ್ಲಿ ನೋಡಬೇಕಿದೆ. ಹುಟ್ಟಿನಿಂದ ರೀಟಾ ಬಹುಗುಣ ಅವರು ಗಂಡಸರು ತಾರ್ಕಿಕವಾಗಿ ಅತ್ಯಾಚಾರಿಗಳಾಗಿರುವ ಸಮಾಜದ ಮೇಲುಸ್ತರದಲ್ಲಿರುವ ಜಾತಿಗೆ ಸೇರಿದ್ದರೆ, ಮಾಯಾವತಿ ಅವರು ಬಲಿಪಶುಗಳ ಜಾತಿಗೆ ಸೇರಿದವರಾಗಿದ್ದಾರೆ. ಮಾಯಾವತಿ ವಿರುದ್ಧ ಬಹುಗುಣ ಅವರು ತುಚ್ಛ ಹೇಳಿಕೆಯನ್ನು ನೀಡಿದಾಗ, ಎಲ್ಲ ದಲಿತ ಚಿಂತಕರು ತಮ್ಮ ಸಾಮಾಜಿಕ ಹಿನ್ನೆಲೆಗಳನ್ನು ಸ್ಮರಿಸಿಕೊಳ್ಳುವ ಹಾಗಾಯಿತು.

ದಲಿತರು ಕಣ್ಣೀರು, ನೋವು, ಹತಾಷೆಗಳನ್ನು ಬಳುವಳಿಯಾಗಿ ಪಡೆದುಕೊಂಡು ಬಂದವರು. ಹೀಗಾಗಿ ಬಹುಗುಣ ಜೋಷಿ ಅವರ ಹೇಳಿಕೆ ಇಂದಿನ ದಲಿತರಿಗೆ ಅವಮಾನ ಮಾಡಿದ್ದು ಮಾತ್ರವಲ್ಲದೆ, ದಲಿತ ಮಹಿಳೆಯರು ಮೇಲ್ಜಾತಿಯ ಗಂಡಸರಿಂದ ಅತ್ಯಾಚಾರಕ್ಕೊಳಗಾಗುತ್ತಿದ್ದ ಹಿಂದಿನ ಸಾಮಾಜಿಕ ಸ್ಥಿತಿಗತಿಯನ್ನು ನೆನಪಿಸಿತು. ಓರ್ವ ದಲಿತ ಮಹಿಳೆಯ ಅತ್ಯಾಚಾರವಾದಾಗಲೆಲ್ಲ, ದಲಿತ ಗಂಡಸು ಕೂಡ ನೋವನ್ನು ಅನುಭವಿಸುತ್ತಾನೆ. ತಮ್ಮ ಆತ್ಮಗೌರವದ ರಕ್ಷಣೆಗಾಗಿ ದಲಿತರು ಹೆಚ್ಚಿನ ಆಸಕ್ತಿ ವಹಿಸಿರುವುದು ದಲಿತರ ಇತ್ತೀಚೆಗಿನ ಇತಿಹಾಸ ನೋಡಿದರೆ ತಿಳಿದುಬರುತ್ತದೆ. ಬಹುಗುಣ ಜೋಷಿ ತುಚ್ಛವಾದ ಹೇಳಿಕೆ ನೀಡಿದ ನಂತರ ಕಾಂಗ್ರೆಸ್ ಯಾಕೆ ಈ ರೀತಿ ನಡೆದುಕೊಂಡಿತು. ಭಾರತದ ಇತಿಹಾಸ ಬಗ್ಗೆ ಯಾವುದೇ ತಿಳವಳಿಕೆ ಇಲ್ಲದಿರುವುದರಿಂದಲೇ? ಅಥವಾ ಜಾತಿಯಾಧಾರಿತ ಸಮಾಜದ ಬಗ್ಗೆ ಕಾಂಗ್ರೆಸ್‌ಗೆ ಕಿಂಚಿತ್ತೂ ಗೊತ್ತಿಲ್ಲದಿರುವುದರಿಂದಲೇ? ಅಥವಾ ಕಾಂಗ್ರೆಸ್ ಸಾಮಾಜಿಕವಾಗಿ ಸಂವೇದನೆ ಕಳೆದುಕೊಂಡಿರುವುದರಿಂದಲೇ? ನನಗಂತೂ ಗೊತ್ತಿಲ್ಲ.

ನಾನೇನಾದರೂ ಸೋನಿಯಾಗಾಂಧಿ ಅವರ ಸ್ಥಾನದಲ್ಲಿದ್ದರೆ, ಬಹುಗುಣ ಜೋಷಿ ಅವರನ್ನು ಪಕ್ಷದ ಅಧ್ಯಕ್ಷ ಪದವಿಯಿಂದ ತಕ್ಷಣವೇ ಹೊರಹಾಕುತ್ತಿದ್ದೆ. ಕಾಂಗ್ರೆಸ್ ಸೇವಾದಳದ ಕಾರ್ಯಕರ್ತರಿಗೆ ಹೇಳಿ ಬಹುಗುಣ ಜೋಷಿ ಅವರನ್ನು ಹೆಲಿಕಾಪ್ಟರ್‌ನಲ್ಲಿ ಕರೆದೊಯ್ದು ಅರಬ್ಬಿ ಸಮುದ್ರಕ್ಕೆ ಬಿಸಾಡಿಸುತ್ತಿದ್ದೆ. ಬಹುಗುಣ ಜೋಷಿ ಕೇವಲ ಮಾಯಾವತಿ ಅವರಿಗೆ ಅವಮಾನ ಮಾಡಲಿಲ್ಲ; ಇಡೀ ದಲಿತ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ.

ಬಹುಗುಣ ಜೋಷಿ ಅವರನ್ನು ಪದವಿಯಿಂದ ಕಿತ್ತೊಗೆಯದೆ ಕಾಂಗ್ರೆಸ್ ನೈತಿಕವಾಗಿ ಸೋತಿದೆ. ಕಾಂಗ್ರೆಸ್‌ನ ನೈತಿಕ ಸೋಲುಗಳನ್ನು ಇತಿಹಾಸ ಮರೆಯುವುದಿಲ್ಲ. ಸ್ವತಃ ಮಾಯಾವತಿ ಅವರೇ ಉತ್ತರ ಪ್ರದೇಶವನ್ನು ಕಾಂಗ್ರೆಸ್‌ಗೆ ನೀಡುತ್ತಿರುವಾಗ, ರಾಜ್ಯವನ್ನು ಗೆಲ್ಲಲು ಬಹುಗುಣ ಜೋಷಿ ಯಾಕೆ ಬೇಕು?

ದಲಿತ ಉದಾರವಾದ

ತಮ್ಮ ಸೆಲ್‌ಫೋನ್‌ಗಳಲ್ಲಿ ಹಾಡು ಕೇಳುತ್ತಿದ್ದ ಮೂವರು ದಲಿತ ಯುವಕರನ್ನು ಬಿಹಾರ್ ರಾಜ್ಯದಲ್ಲಿ ಮೇಲ್ಜಾತಿಯ ಯುವಕರು ಥಳಿಸಿದ ಸುದ್ದಿ ಜುಲೈ 24 ರಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಇದು ದಲಿತರ ಇಂದಿನ ಸ್ಥಿತಿಯಾದರೆ, ಮೂರು ದಶಕಗಳ ಹಿಂದೆ ದಲಿತರು ಸಾರ್ವಜನಿಕ ಸ್ಥಳಗಳಲ್ಲಿ ನಗುತ್ತಿದ್ದರೂ ಹೊಡೆಸಿಕೊಳ್ಳುತ್ತಿದ್ದರು.

ಶತಮಾನಗಳಿಂದ ದೌರ್ಜನ್ಯ, ಅನ್ಯಾಯಕ್ಕೊಳಗಾದ ದಲಿತರು ಇಂತಹ ಅನ್ಯಾಯವನ್ನು ಪ್ರತಿಪಾದಿಸುವ ಹಿಂದೂ ಧರ್ಮ ಮತ್ತು ಜಾತಿ ವ್ಯವಸ್ಥೆಯನ್ನು ಧಿಕ್ಕರಿಸುವ ಎಲ್ಲ ಹಕ್ಕುಗಳನ್ನು ಹೊಂದಿದ್ದಾರೆ. ಜಾತಿವ್ಯವಸ್ಥೆಯ ವಿರುದ್ಧ ಹೋರಾಡುವ ಅವಕಾಶ ಸಿಕ್ಕಾಗಲೆಲ್ಲ ದಲಿತರು ಆ ಕೆಲಸವನ್ನು ಮಾಡಿದ್ದಾರೆ. ಹಿಂದೂ ಧರ್ಮ ಮತ್ತು ಜಾತಿವ್ಯವಸ್ಥೆಯನ್ನು ದಲಿತರು ತಿರಸ್ಕರಿಸಿರುವುದು ಸಹಜವಾದ ಮತ್ತು ಸ್ಪಷ್ಟವಾದ ಪ್ರಕ್ರಿಯೆ.

ದೆಹಲಿಯಲ್ಲಿ ಈ ಹಿಂದೆ ನಡೆದ ದಲಿತ ವೈಚಾರಿಕತೆಯ ಅದ್ಭುತ ನಿದರ್ಶನವನ್ನು ಇಲ್ಲಿ ದಾಖಲಿಸುತ್ತೇನೆ. ಮೂರು ದಶಕಗಳ ಹಿಂದೆ ದಲಿತ ಸರ್ಕಾರಿ ಅಧಿಕಾರಿಗಳು ಗೃಹನಿರ್ಮಾಣ ಸಹಕಾರ ಸಂಘ ಆರಂಭಿಸಲು ನಿರ್ಧರಿಸಿದರು. ಆ ಸಂದರ್ಭದಲ್ಲಿ ಈ ರೀತಿಯ ನೂರಾರು ಅಪಾರ್ಟ್‌ಮೆಂಟ್‌ಗಳು ನಿರ್ಮಾಣವಾಗುತ್ತಿದ್ದವು. ಆದರೆ ದಲಿತರು ತಮ್ಮದೇ ಆದ "ದಲಿತ ಮನೆಗಳ ಸಂಕೀರ್ಣ"ವನ್ನು ಹೊಂದಲು ಬಯಸಿದರು.

ವೈಚಾರಿಕತೆಯಿಂದ ಬಹಳಷ್ಟು ಪ್ರಯೋಜನಗಳಿದ್ದರೂ, ಇದಕ್ಕೆ ಹಲವು ಮಿತಿಗಳು ಕೂಡ ಇರುತ್ತವೆ. ಬಹುತೇಕ ಎಲ್ಲ ವೈಚಾರಿಕತೆ ಕೂಡ ವಿಫಲವಾಗುತ್ತದೆ. ಹೀಗಾಗಿ "ದಲಿತ ಮನೆಗಳ ಸಂಕೀರ್ಣ"ದಲ್ಲಿ ವಾಸವಾಗಿದ್ದ ಸುಮಾರು ಶೇ. 25ರಷ್ಟು ಮಂದಿ ತಮ್ಮ ಮನೆಗಳನ್ನು ಮಾರಾಟ ಮಾಡಿ ಮುಖ್ಯವಾಹಿನಿಯ ಅಪಾರ್ಟ್‌ಮೆಂಟ್‌ಗಳಿಗೆ ಹೋಗಿದ್ದಾರೆ.

ಹೀಗಾಗಿ "ದಲಿತ ಮನೆಗಳ ಸಂಕೀರ್ಣ"ದಲ್ಲಿ ಈಗ ಬಹಳಷ್ಟು ದಲಿತೇತರರು ವಾಸವಾಗಿದ್ದಾರೆ. ದಲಿತೇತರರು ದಲಿತರ ಅಪಾರ್ಟ್‌ಮೆಂಟ್‌ಗಳಿಗೆ ಬರುತ್ತಿರುವುದು ಕೇವಲ ಮಾರುಕಟ್ಟೆಯ ಕಾರಣಗಳಿಗಾಗಿ. ಬಡಾವಣೆಯ ಇತರ ಅಪಾರ್ಟ್‌ಮೆಂಟ್‌ಗಳಿಗೆ ಹೋಲಿಸಿದರೆ ದಲಿತರ ಈ ಅಪಾರ್ಟ್‌ಮೆಂಟ್ ಹಸಿರಿನಿಂದ ಕಂಗೊಳಿಸುತ್ತಿದ್ದು, ಸ್ವಚ್ಛವಾಗಿದ್ದರೂ, ಇವುಗಳು ಮಾರುಕಟ್ಟೆ ದರಕ್ಕಿಂತ ಶೇ. 10–15ರಷ್ಟು ಕಡಿಮೆ ಬೆಲೆಗೆ ಸಿಗುತ್ತವೆ.

ದಲಿತ ವೈಚಾರಿಕತೆಯ ಸಮಸ್ಯೆ ನೋಡಿ. "ದಲಿತ ಮನೆಗಳ ಸಂಕೀರ್ಣ"ವನ್ನು ಆರಂಭಿಸಿದವರು ಮೊದಲ ಪೀಳಿಗೆಯ ದಲಿತ ಅಧಿಕಾರಿಗಳು. ನಂತರದ ಪೀಳಿಗೆಯ ದಲಿತ ಅಧಿಕಾರಿಗಳು ಹೊಸ ರೀತಿ ಚಿಂತಿಸಲಾರಂಭಿಸಿದರು. ಬಹುತೇಕ ಎಲ್ಲ ಹಳ್ಳಿಗಳಲ್ಲಿ ದಲಿತರು ಪ್ರತ್ಯೇಕವಾಗಿ ವಾಸಿಸುತ್ತಾರೆ. ಸಾಮಾನ್ಯವಾಗಿ ಹಳ್ಳಿಯ ಹೊರವಲಯದಲ್ಲಿ ವಾಸಿಸುವ ದಲಿತರು ಸಾಮಾಜಿಕವಾಗಿ ತುಳಿತಕ್ಕೊಳಗಾಗುತ್ತಾ ಬಂದವರು. ದಲಿತರು ಯಾವಾಗಲೂ ಪ್ರತ್ಯೇಕ ವಾಸಸ್ಥಳ ಕೇಳಿದವರಲ್ಲ. "ಮನುಧರ್ಮ"ದ ವಿಚಾರಗಳು ದಲಿತರ ಈ ರೀತಿಯ ಪ್ರತ್ಯೇಕವಾಸಕ್ಕೆ ಮೂಲ ಕಾರಣವಾಯಿತು.

ಆದರೆ ದೆಹಲಿಯಲ್ಲಿ ನಿರ್ಮಾಣವಾದ "ದಲಿತ ಮನೆಗಳ ಸಂಕೀರ್ಣ"ದ ವಿಚಾರದಲ್ಲಿ ದಲಿತ ವೈಚಾರಿಕತೆಯೇ ದಲಿತರ ಪ್ರತ್ಯೇಕತೆಗೆ ಕಾರಣವಾಯಿತು. ಐತಿಹಾಸಿಕವಾಗಿ ಜಾತಿವ್ಯವಸ್ಥೆಯ ಮೂಲಕ ಬಲವಂತವಾಗಿ ದಲಿತ

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸ್ಥೂಲ ಕಾಯದ ಸಮಸ್ಯೆಯಿದ್ದರೆ, ಅಭಿವೃದ್ಧಿ ಹೊಂದಿರದ ದೇಶಗಳಲ್ಲಿ ಪೌಷ್ಠಿಕ ಆಹಾರದ ಸಮಸ್ಯೆ ಇದೆ. ಅಲ್ಲಿನ ದೇಶಗಳ ಯೋಜನೆಯ ರೂವಾರಿಗಳು ತಮ್ಮ ದೇಶದ ಆಹಾರದ ಸಮಸ್ಯೆಗೆ ಮೂಲ ಕಾರಣ ಜನರ ಆಹಾರಪದ್ಧತಿ ಎಂಬ ಅಂಶವನ್ನು ಕಂಡುಕೊಂಡಿದ್ದಾರೆ. ಆದರೆ ಅದಕ್ಕಾಗಿ ಅವರು ಸ್ಥೂಲಕಾಯಕ್ಕೆ ಕಾರಣವಾದ ಇಂತಹ ತಿಂಡಿ ತಿನಿಸುಗಳ ತಯಾರಿಕೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿಲ್ಲ. ಆದರೆ ನಮ್ಮ ದೇಶದಲ್ಲಿ ಅಪೌಷ್ಠಿಕತೆಗೆ ಮೂಲ ಕಾರಣ ಆಹಾರದ ಕೊರತೆ ಎಂದು ಹಿಂದೆ ಮುಂದೆ ನೋಡದೆ ಘೋಷಿಸಲಾಗಿದೆ. ಭಾರತೀಯರ ಆಹಾರ ಪದ್ಧತಿಯ ಬಗ್ಗೆ ಕೊಂಚ ಕೂಡ ಯೋಚಿಸಲಿಲ್ಲ. ಉತ್ತರ ಪ್ರದೇಶ ರಾಜ್ಯದಲ್ಲಿ ಈ ಸಲ 1.35 ದಶಲಕ್ಷ ಮಕ್ಕಳು ನಪಾಸಾಗಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ನೀಡದಿರುವುದು ಇದಕ್ಕೆ ಪ್ರಮುಖ ಕಾರಣ. ಈ ಯೋಜನೆಯ ರೂವಾರಿಗಳು ದೇಶವನ್ನು ಎಲ್ಲಿಗೆ ತಂದು ನಿಲ್ಲಿಸುತ್ತಾರೋ?

ರನ್ನು ಪ್ರತ್ಯೇಕವಾಗಿರಿಸುತ್ತಾ ಬಂದ ಕಾರಣ, ತಾರ್ಕಿಕವಾಗಿ ಮುಖ್ಯವಾಹಿನಿಯ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸ ಮಾಡುವ ಮೂಲಕ ದಲಿತರು ಜಾತಿವ್ಯವಸ್ಥೆಗೆ ಸೆಡ್ಡುಹೊಡೆಯಬೇಕಿತ್ತು. ಜಾತಿವ್ಯವಸ್ಥೆ ದಲಿತರನ್ನು ದೂರ ಇಡಲು ಬಯಸಿದರೆ, ಜಾತಿ ವಿರೋಧಿ ಚಳವಳಿಯ ಮೂಲಕ ದಲಿತರು ಮುಖ್ಯವಾಹಿನಿಯಲ್ಲಿ ಬೆರೆತುಹೋಗಬೇಕು.

ಆದರೆ ಮುಖ್ಯವಾಹಿನಿ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸಬೇಕಾದರೆ ಅದಕ್ಕೆ ತಕ್ಕ ಬೆಲೆ ತೆರಲೇಬೇಕಾಗುತ್ತದೆ. ಉತ್ತರ ಭಾರತದಲ್ಲಿ ಹೋಳಿ, ದೀಪಾವಳಿ, ದಸರಾ ಮತ್ತಿತರ ಹಿಂದೂ ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ದಲಿತರು ಏನು ಮಾಡಬೇಕು? ದಲಿತರಿಗೆ ಎಂತಹಾ ಕಷ್ಟ ನೋಡಿ. ಸಬಲರಾದ ದಲಿತರು ಪ್ರತ್ಯೇಕವಾಗಿ ವಾಸಿಸಲು ಆರಂಭಿಸಿದರೆ, ಸಾಂಪ್ರದಾಯಿಕವಾದ ಜಾತಿವ್ಯವಸ್ಥೆಗೆ ಇಂಬುಕೊಟ್ಟಂತಾಗುತ್ತದೆ. ಜಾತಿವ್ಯವಸ್ಥೆ ಬಯಸುವುದು ಕೂಡ ಇದನ್ನೇ.

ಒಂದು ವೇಳೆ ದಲಿತರು ಮುಖ್ಯವಾಹಿನಿಯ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸಲು ಆರಂಭಿಸಿ, ತಮ್ಮ ವೈಚಾರಿಕ ನಿಲುವನ್ನು ಉಳಿಸಿಕೊಂಡರೆ, ತಮ್ಮ ಪೂರ್ವಾಪರ ಬಹಿರಂಗವಾಗಿ ಇಲ್ಲಿ ಕೂಡ "ಇತರ ಸಾಮಾಜಿಕ ವರ್ಗ"ವಾಗಿ ಪ್ರತ್ಯೇಕವಾಗಿ ಬದುಕಬೇಕಾಗುತ್ತದೆ.

ತಮ್ಮದು ಉತ್ತಮವಾದ ಧಾರ್ಮಿಕ ವ್ಯವಸ್ಥೆ, ಸಾಂಸ್ಕೃತಿಕವಾಗಿ ಮತ್ತು ನೈತಿಕವಾಗಿ ಶ್ರೀಮಂತವಾದ ಪರಂಪರೆ ಎಂದು ದಲಿತರು ಸಾಬೀತುಪಡಿಸಿದರು ಕೂಡ "ಇತರ ಸಾಮಾಜಿಕ ವರ್ಗ"ವಾಗಿ ಪರಿಗಣಿಸಲ್ಪಡುತ್ತಾರೆ. ಹಿಂದೂ ಬಹುಸಂಖ್ಯಾತರ ನಿಯಂತ್ರಣದಲ್ಲಿರುವ ದೇಶದ ಒಟ್ಟಾರೆ ಸಾರ್ವಜನಿಕ ಚಿಂತನೆಯನ್ನು ದಲಿತರು ಹೇಗೆ ಎದುರಿಸಲು ಸಾಧ್ಯ? ಆಳವಾಗಿ ಬೇರೂರಿರುವ ಜಾತಿ ವ್ಯವಸ್ಥೆಯನ್ನು ನೆಲಸಮ ಮಾಡುವುದಾದರೂ ಹೇಗೆ?

ಇನ್ನೂ ಆರಂಭಿಕ ಹಂತದಲ್ಲಿರುವ ದಲಿತ ಉದಾರವಾದ ಈ ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲದು. ಈ ನಿಟ್ಟಿನಲ್ಲಿ ಕೆಲವು ಅಂಶಗಳು ಹೀಗಿವೆ:

– ದಲಿತರು ಇತರ ಭಾರತೀಯರ ಜೊತೆ ಬೆರೆಯಬೇಕು. ಭಾರತ ಬೃಹತ್ ಪ್ರಮಾಣದಲ್ಲಿ ಕೈಗಾರಿಕೀರಣಗೊಂಡು, ನಗರೀಕರಣ ಪ್ರಕ್ರಿಯೆಗೆ ಒಳಪಡುವವರೆಗೆ, ಜಾತಿವ್ಯವಸ್ಥೆಯಿಂದ ಮುಕ್ತಿಯಿಲ್ಲ.

– ದಲಿತರು ಮಾರುಕಟ್ಟೆ ಆರ್ಥಿಕತೆಯಂತಹ ಜಾಗತಿಕ ವಿಚಾರಗಳಿಗೆ ತೆರೆದುಕೊಳ್ಳಬೇಕು. ಆಧುನಿಕತೆಯ ವಾರಸುದಾರರು ಎಂದು ಬೀಗುವವರಿಗಿಂತ ಹೆಚ್ಚಿನ ಆಧುನಿಕ ಚಿಂತನೆ ಮತ್ತು ಆಚರಣೆಯನ್ನು ದಲಿತರು ರೂಢಿಸಿಕೊಳ್ಳಬೇಕು.

– ದಲಿತರು ಹಿಂದೂ ಧರ್ಮ ತೊರೆದು, ಬೌದ್ಧ ಧರ್ಮ ಅಥವಾ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಬೇಕು.

– ದಲಿತರು ಮೇಲ್ಜಾತಿ ಹಿಂದೂಗಳ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸಲು ಆರಂಭಿಸಬೇಕು. ಮೇಲ್ಜಾತಿ ಜನರೊಂದಿಗೆ ವಿವಾಹ ಸಂಬಂಧ ಬೆಳೆಸುವ ಮೂಲಕ ಅವರ ಮನೆಗಳನ್ನು ಪ್ರವೇಶಿಸಬೇಕು.

– ದಲಿತರು ಹೋರಾಟಗಾರರ ವ್ಯಕ್ತಿತ್ವವನ್ನು ಎಲ್ಲ ಸಂದರ್ಭದಲ್ಲಿಯೂ ತೋರಿಸಿಕೊಳ್ಳದೆ, ಜಾತಿವ್ಯವಸ್ಥೆ ನಿರಾಕರಿಸಿರುವ ಶಿಕ್ಷಣ, ಹಣ ಮತ್ತು ನಾಯಕತ್ವದಂತಹ ಹಕ್ಕುಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಬೇಕು. □

ಒಡೆದ ಗುಮ್ಮಟದ ತುಂಬಾ

ಕಾವ್ಯ



೧

ನೀಲಿಯಾಕಾಶದ ತುಂಬ
ಕಪ್ಪನೆಯ ಮೋಡಗಳು
ಕೊರೆಯುವ ಛಳಿಯಲ್ಲಿ
ಸುರಿವ ಮಳೆ!

೨

ಒಂದು ಕಾಲವಿತ್ತು,
ಈ ನೆಲದ ಮೇಲೆ
ಆ ದೇವನ ಪ್ರೀತಿ
ಹನಿ ಹನಿಯಾಗಿ
ಜಿನುಗಿತ್ತು

ಆಗಿನ್ನು ಅವನಿಗೆ ಹೆಸರಿರಲಿಲ್ಲ!

ಅದೊಂದು ಬದುಕಾಗಿತ್ತು
ಮಾತಿನಲಿ
ಮೌನದಲಿ
ಮನಸು ಕನ್ನಡಿಯಾಗಿತ್ತು
ಕಣ್ಮುಚ್ಚಿದರೂ ಚಿತ್ರ ಸ್ಪಷ್ಟವಿತ್ತು
ಒಲವ ಬೆಸುಗೆ ಬಲವಾಗಿತ್ತು!

೩

ನಿನ್ನೆ ಕತ್ತಲಾಗಿತ್ತು
ಒಡೆದ ಗುಮ್ಮಟದ ತುಂಬಾ
'ರಾಮಾ'
ರಗುತ ಕೆಂಪೋ ಕೆಂಪು
ಹೆಜ್ಜೆ ಇಟ್ಟಲ್ಲೆಲ್ಲಾ ಕಾಣುವ
ಕಪ್ಪು ಗುರುತು!

ಬೆಳಕು ಹರಿಯುವ ಮೊದಲೇ
ಸಿಡಿದ ಸೂರ್ಯ
ಬಿಕ್ಕಿ ಬಿಕ್ಕಿ ಅತ್ತದ್ದು
ಯಾರ ಮಡಿಲಿನಲಿ?

ತಬ್ಬಲಿ ಕಂದನ
ಅಳುವ ಕಣ್ಣಹನಿ ಕೇಳಿತು–
'ಇಲ್ಲಿ ಹುಟ್ಟಿದ ನಾನು
ಹುಟ್ಟಿದ್ದರೆ 'ಅಲ್ಲಿ'...?
ಕೂಗುತಿರಲಿಲ್ಲವೆ ನೀವೂ 'ಬಾ ಬಾ'
ಬಾರೋsssss ಎಂದು?

ಆದರೇನಂತೆ ಹೆಸರು
'ಹಿಂದು – ಮುಂದು'
ಅರಿಯದಿದ್ದರೆ ಮನಸುಗಳು
ಒಂದನೊಂದು?

○ ವಿ.ಹರಿನಾಥ ಬಾಬು ಸಿರುಗಪ್ಪ

(29ನೇ ಪುಟದಿಂದ)

ಮೈಲಿಗೆ ಬಾವಿ



ಪ್ರಶ್ನೆ ಕೇಳಿದ.

"ಈ ಊರಾಗೆ ಒಂದು ಹಳೇ ಮೈದಾನ ಅದ ಏನ್ರೀ?"

"ಮೈದಾನ?"

"ಹೌಂದ್ರೀ...ಸುತ್ತ ಮರಗಳು, ದೊಡ್ಡ ಮೈದಾನ....ಅದರ ನಡುದಾಗೊಂದು ನೆಲಬಾಂವಿ, ಕುಡಿಯೋ ನೀರಿನ ಬಾಂವಿ ಅದಾ ಏನು?"

ಅವನ ಈ ಪ್ರಶ್ನೆ ನನ್ನನ್ನು ಮತ್ತೂ ಗೊಂದಲದಲ್ಲಿ ಕೆಡವಿತು. ಆದರೆ ಆತ ಮೈದಾನ ಬಾವಿ ಅನ್ನುವಾಗ ಊರ ನಡುವೆ, ಸಾಕಷ್ಟು ದೊಡ್ಡದಾಗಿರುವ, ಈ ಊರಿಗೆ ಕರಿ ಬೊಟ್ಟು ಅನ್ನುವ ಹಾಗೆ ಇದ್ದ ಒಂದು ಮೈದಾನ, ಅದರ ನಡುವೆ ಇದ್ದ ಒಂದು ಹಾಳು ಬಾವಿ ನನ್ನ ನೆನಪಿಗೆ ಬಂದಿತು. ಆ ಮೈದಾನದಲ್ಲಿ ಯಾವ ಮಕ್ಕಳೂ ಆಡುತ್ತಿರಲಿಲ್ಲ, ಆ ಬಾವಿಯಿಂದ ಯಾರೂ ನೀರನ್ನ ಸೇದುತ್ತಿರಲಿಲ್ಲ. ಇದರ ಜೊತೆಗೆ ಆ ಬಾವಿಯ ಬಗ್ಗೆ ಜನರಲ್ಲಿ ಏನೋ ಭೀತಿ ಮನೆ ಮಾಡಿತ್ತು. ಆ ಬಾವಿಯನ್ನ ಊರಿನ ಜನ ಮೈಲಿಗೆ ಬಾವಿ ಎಂದು ಕೂಡ ಕರೆಯುತ್ತಿದ್ದರು.

ನಾನು ಸಹಜವಾಗಿ=

"ಎರಡೂ ಇದೆ ಯಜಮಾನ, ಆದರೆ ಇವು ನಿನಗೆ ಯಾಕೆ...ಇದಕ್ಕೂ ನಿನಗೂ ಇರೋ ಸಂಬಂಧ ಏನು?"

ಎಂದು ಕೇಳಿದೆ.

"ಆ ಜಾಗ ನನಗ ತೋರ್ಸರೀ ಸಾಹೇಬ್ರ...."

ಆತ ಕುಳಿತವ ಸಟ್ಟನೆ ಎದ್ದ. ಅಂಗಳ ದಾಟಿ ರಸ್ತೆಗೆ ಬಂದ. ನನಗೂ ತಡೆಯಲಾ ಗಲಿಲ್ಲ. ನಡೀ ಹೋಗುವ ಎಂದು ಅವನನ್ನ ಕರೆದು ಕೊಂಡು ನಾನು ಹೊರಟೆ. ಆ ಜಾಗ ನಮ್ಮ ಮನೆಯಿಂದ ತುಸು ದೂರ ಇದ್ದುದರಿಂದ ಅಲ್ಲಿ ಹೋಗಿ ತಲುಪುವಷ್ಟರಲ್ಲಿ ಆತ ಹೇಳಬೇಕಾದುದನ್ನ ಹೇಳಿ ಮುಗಿಸಿದ್ದ.

ಈಗ ನಲವತ್ತು ವರ್ಷಗಳ ಹಿಂದೆ ಆತ ತನ್ನ ಕುರಿಗಳನ್ನ ಹೊಡೆದು ಕೊಂಡು ಇಲ್ಲಿಗೆ ಬಂದಿದ್ದ. ಅವನ ಜೊತೆಯಲ್ಲಿ ಅವನ ಕುಟುಂಬವೂ ಇತ್ತು. ಸುಮಾರು ಇಪ್ಪತ್ತು ವರ್ಷದ ಅವನ ಮಗಳೂ ಇದ್ದಳು. ಕೆಳಗಿನ ಬನದಳ್ಳಿಗೆ ಹತ್ತಿರದಲ್ಲಿಯೇ ಒಂದು ಹೊಲದಲ್ಲಿ ಅವರು ವಸತಿ ಮಾಡಿದ್ದರು.

ಉಳಿದು ಕೊಂಡ ಹೊಲದಲ್ಲಿಯೇ ಅಡಿಗೆ ಮಾಡಿ ಕೊಂಡು ಎರಡು ಮೂರು ರಾತ್ರಿ ಅಕ್ಕಪಕ್ಕದ ಹೊಲಗಳಲ್ಲಿ ಕುರಿ ಬಿಟ್ಟು ದುಡುಮೆ ಮಾಡುವುದು ಅವರ ಕಾಯಕ.

ಒಂದು ದಿನ ಬೆಳಿಗ್ಗೆ ಅವನ ಮಗಳು ಸಂತಸದಿಂದ ಉಲ್ಲಾಸದಿಂದ ಈ ಬದಿಯ ಹೊಲದಲ್ಲಿ ತಿರುಗಾಡಿಕೊಂಡು ಬಂದಿದ್ದಾಳೆ. ಹೊಲದ ಬದುವಿನ ಮೇಲಿನ ಹುಲ್ಲಿನಲ್ಲಿ ಕೆಲ ಹೂವುಗಳು ಅರಳಿವೆ, ಅಲ್ಲಲ್ಲಿ ಕೆಲ ಹಕ್ಕಿಗಳು ಹಾರುತ್ತಿವೆ, ಇಬ್ಬನಿ ತೆಳುವಾಗಿ ಎಲ್ಲ ಕಡೆ ಬೀಳುತ್ತಿದೆ. ಹುಡುಗಿ ಹುರುಪಿನಿಂದ ಉಲ್ಲಸಿತಳಾಗಿ ಬರುವಾಗ ಮಡಿವಂತರಾದ ಕೆಲ ಜನ ಎದುರಿನಿಂದ ಬಂದಿದ್ದಾರೆ. ಇವಳ ಉಡುಗೆ ತೊಡುಗೆ ಬಣ್ಣ ನೋಡಿದ್ದೇ ಅವರು ತಾಳ್ಮೆ ಕಳೆದು ಕೊಂಡಿದ್ದಾರೆ, ಉಗ್ರರಾಗಿದ್ದಾರೆ=

"ಏಯ್ ಕರಿ ಮುಖ ದೋಳೆ, ಎದ್ದ ಕೂಡಲೆ ನಿನ್ನ ಮುಖ ತೋರಿಸಲಿಕ್ಕೆ ಬಂದ್ಯೇನು....ತೊಲಗು ದೂರ"

"ಹಾಳಾದ ನಿನ್ನ ಮುಖ ನೋಡಿದರೆ ನಮಗೆ ಇವತ್ತಿನ ಊಟ ಸಿಗೂದಿಲ್ಲ, ಹೋಗಾಚೆಗೆ....."

"ದರಿದ್ರದೋಳು ಇಲ್ಲಿ ಎಲ್ಲಿ ಬಂದಳಪ್ಪ...ಬೆಳಗಿನ ಹೊತ್ತು ಎದ್ದ ತಕ್ಷಣ...ಗೂಬೆ ಬಂದ ಹಾಗೆ"

"ಹೋಗು ಆಚೆ ಹೋಗು... ಶನಿ... ಅಪಶಕುನದವಳು...."

"ಸ್ನಾನ ಮುಗಿಸಿ ಕೊಂಡು ದೇವರ ದರ್ಶನಕ್ಕ ಹೊರಟರೆ ದೆವ್ವದ ದರ್ಶನ ಆತಲ್ಲ?"

"ನಮ್ಮಂತೋರು ಬಂದಾಗ ಅವರ ಕಣ್ಣಿಗೆ ಬೀಳದೆ ಪಕ್ಕಕ್ಕೆ ಸರಿದು ಹೋಗ ಬೇಕು ಅಂತ ಗೊತ್ತಿಲ್ವಾ?"

ಅವರು ತಮ್ಮ ಬಿಳಿ ಉಡುಪನ್ನ ಸರಿಪಡಿಸಿ ಕೊಂಡು, ಕೈಲಿದ್ದ ಪೂಜಾ ಪಾತ್ರೆಗಳನ್ನ ಹೊಂದಿಸಿ ಕೊಂಡು ಇವಳ ಮೇಲೆ ಸಿಡಿಮಿಡಿ ಗೊಂಡು ಆಕೆಯನ್ನು ಬೈಯ್ದಿದ್ದಾರೆ. ಆ ಹುಡುಗಿ ಬೆದರಿ ಗಾಬರಿಯಾಗಿ, ತಾನು ಏನೋ ಒಂದು ಅಪರಾಧವನ್ನ ಮಾಡಿದ್ದೇನೆ ಅನ್ನುವ ಭಾವನೆಯಲ್ಲಿ ತೊಳಲಾಡುತ್ತ, ಮುಂದೆ ತಾನು ಎಲ್ಲಿಗೆ ಹೋಗಲಿ, ಏನು ಮಾಡಲಿ ಎಂಬುದು ಅರಿಯದೆ ಹತ್ತಿರದ ಮರ ಪೊದೆಗಳ ಹಿಂದೆ ಅಡಗಿ ಕೊಳ್ಳಲು, ಮರೆಯಾಗಲು ಹುಲಿ ಅಟ್ಟಿಸಿ ಕೊಂಡು ಬಂದ ಹುಲ್ಲೆಯಂತೆ ಒಂದು ಬೈಲನ್ನ ಹೊಕ್ಕಿದ್ದಾಳೆ...ಅಲ್ಲಿ...ಅಲ್ಲಿ....

ನಾವು ಮಾತನಾಡುತ್ತ ಆ ಮೈದಾನದ ನಡುವಣ ಬಯಲಿಗೆ ಬಂದು ಮುಟ್ಟಿದ್ದೇವೆ ಅನ್ನುವಾಗ ಆ ಯಜಮಾನ ಸುತ್ತಲಿನ ಮರಗಳನ್ನ ಒಂದು ಬಾರಿ ನೋಡಿ, ಮೈದಾನದ ನಡುವಣ ಬಾವಿಯನ್ನ ನೋಡಿ, ಅದರ ಪರಿಚಯ ತನಗೆ ಚೆನ್ನಾಗಿದೆ ಅನ್ನುವಂತೆ ಅದರ ಬಳ ಹೋಗಿ ನಿಂತವ ತನ್ನ ಕಣ್ಣೊರೆಸಿ ಕೊಳ್ಳುತ್ತಿದ್ದ.

"ಬಾಂವಿ ತುಂಬಾ ನೀರಿತ್ತು ರಾಯರಾ. ಜನ ಏನೋ ಬಂದ್ರು, ಆದರ ಬಂದ ಜನ "ನೀರು ಕುಡೀದೆ ಇರೋ ಹಾಂಗ ಮಾಡಿದ್ರಿ" ಅಂತ ನನ್ನ ನನ್ನ ಹೆಂಡತೀನ ಬೈಯ್ದರು. ಮಗಾನ ಉಳಿಸಿ, ಹೊರ ತಗೀರಿ ಅಂತ ಯಾರ ಯಾರದ್ದೋ ಕೈ ಕಾಲು ಹಿಡಕೊಂಡು ಕೇಳಿದ್ವೀ, ಬೇಡಿದ್ವೀ...ಆದರ ಯಾರೂ ನಮ್ಮ ಸಾಯಕ್ಕ ಬರಲಿಲ್ಲ. ಬಾಂವಿ ಆಳವಾಗಿತ್ತು ರಾಯರ. ಮೂರು ದಿನ ಆದರೂ ಶವ ಮೇಲೆ ಬರಲಿಲ್ಲರೀ...ನಾವು ಎದಿ ಹೊತ ಕೊಂಡು ನಮ್ಮ ಮಗಳನ್ನ ಇಲ್ಲೇ ಬಿಟ್ಟು ಹೋದ್ವಿ...ಮಗಳು.....ಇಲ್ಲೇ...ಈ ಕೆಳಗಿನ ಬನದಳ್ಳಿಯೊಳಗ ಉಳದ್ಲು...ಇದೇ ಕೊರಗಿನಾಗ ನನ್ ಹೆಂಡತಿ ಕೂಡ ಹೋದ್ಲು...ನಾನು ನಲವತ್ತು ವರ್ಷ ಆದ ಮ್ಯಾಲ ನೋಡಲಿಕ್ಕ ಬಂದೀನಿ..." ಎದಿಯಾಗ ಮಡು ಗಟ್ಟಿರೋ ನೋವನ್ನ ನುಂಗಿ ಕೊಂಡು....."

ಆತ ಅಲ್ಲಿ ನಿಂತು ಬಿಕ್ಕಿದ. ನಿಧಾನವಾಗಿ ಅವನ ನೋವು ನನ್ನನ್ನೂ ಬಂದು ಆವರಿಸಿ ಕೊಂಡಿತು.

ಆ ಹಳೆಯ ಬಾವಿಯೊಳಗಿನಿಂದ ಸುಳಿದು ಸುತ್ತಿ ಬಂದ ಗಾಳಿ ನನ್ನನ್ನು ಅಲುಗಾಡಿಸಿತು.

ಕಳೆದ ಹಲವಾರು ವರ್ಷಗಳಿಂದ ನನ್ನೂರಿನ ಈ ಮೈಲಿಗೆ ಬಾವಿ ಅನ್ನುವ ನಿಗೂಢತೆಯ ಹಿಂದಿನ ಈ ಕತೆ ತಿಳಿದು ಬಂದು ನಾನು ಘಾಸಿ ಗೊಂಡೆ. □

ಬುದ್ಧಾಯಣ ೦ ೩೮

ವಾಚಾಳಿಯ ಬಾಯನ್ನು ಹೀಗೆ ಮುಚ್ಚಲಾಯಿತು !

ಸಿ. ಎಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತವನದಲ್ಲಿ ತಂಗಿದ್ದರು. ಆಗ ವಾರಾಣಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಆತನ ಆಸ್ತಾನದಲ್ಲಿ ರಾಜ ಪುರೋಹಿತನಾಗಿ ಒಬ್ಬ ಬ್ರಾಹ್ಮಣ ನೇಮಕಗೊಂಡಿದ್ದ. ಆತ ಪ್ರಚಂಡ ವಾಚಾಳಿಯಾಗಿದ್ದ. ಯಾವುದಾದರೂ ಸಣ್ಣ ವಿಷಯ ಸಿಕ್ಕಿದರೂ ಅದನ್ನೇ ಪರ್ವತ ಗಾತ್ರ ಮಾಡಿ ಮಾತನಾಡುತ್ತಿದ್ದ. ಆತ ಎಂದಿಗೂ ಸ್ವಯಂ ಜ್ಞಾನಿಯಲ್ಲದಿದ್ದರೂ ಸಕಲವನ್ನು ಬಲ್ಲ ಪಾರಂಗತನೆಂದು ತನ್ನ ಗುಣಗಾನವನ್ನು ತಾನೇ ಮಾಡಿಕೊಳ್ಳುತ್ತಿದ್ದ. ಕಾಣದನ್ನು ಕಂಡದ್ದಕ್ಕಿಂತ ಮಿಗಿಲಾಗಿ ವರ್ಣಿಸುತ್ತಿದ್ದ. ಯಾರಾದರೂ ಒಂದು ಸಣ್ಣ ರಹಸ್ಯವನ್ನು ಹೇಳಿದರೂ ಅದನ್ನು ಊರಿಗೆಲ್ಲ ಸಾರಿಬಿಡುತ್ತಿದ್ದ.

ರಹಸ್ಯವನ್ನು ಹೇಳಿದವರನ್ನೂ, ಕೃತ್ಯವನ್ನು ಎಸೆಗಿದವರನ್ನೂ ಆ ಮೂಲಕ ನಿರಂತರ ಶೋಷಿಸುತ್ತಿದ್ದ. ಯಾರಾದರೂ ಯಾವುದಾದರೂ ಒಂದು ಸಣ್ಣ ವಿಷಯವನ್ನೋ, ಸತ್ಯವನ್ನೋ ಅಥವಾ ಜ್ಞಾನವನ್ನೋ ಹೇಳಿದರೆ ಅದನ್ನು ತಕ್ಷಣವೇ ಸೂಕ್ಷ್ಮವಾಗಿ ಗ್ರಹಿಸಿ ಮರುಕ್ಷಣವೇ ಹೇಳಿಕೊಟ್ಟವನೇ ಬೆಚ್ಚಿಬೀಳುವಂತೆ ಅದೇ ವಿಷಯಕ್ಕೆ ಉಪ್ಪುಖಾರ ಸೇರಿಸಿ ಅತಿ ರಂಜಿತವಾಗಿ ವರ್ಣಿಸುತ್ತಿದ್ದ. ರಾಜಸೇವಕರು ಯಾವುದಾದರೂ ಕೆಲಸವನ್ನು ಕಷ್ಟಪಟ್ಟು ಮಾಡಿದ್ದಾದರೆ ಅವರಿಗಿಂತ ಮೊದಲೇ ರಾಜನ ಎದುರಿಗೆ ಹೋಗಿ ಆ ಕೆಲಸವನ್ನು ನಾನೇ ಅತಿ ಸಾಹಸದಿಂದ ಮಾಡಿದೆ ಎಂದು ವರ್ಣಿಸಿ ರಾಜನಿಂದ ಮೆಚ್ಚಗೆ ಪಡೆಯುತ್ತಿದ್ದ.

ತನ್ನ ವಿರೋಧಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬೇಕು ಎಂದಾದರೆ, ಆತನ ವಿರೋಧಿಗಳನ್ನು ಹುಡುಕಿಕೊಂಡು ಹೋಗುತ್ತಿದ್ದ ಅವರನ್ನು ನಯವಿನಯದಿಂದ ಮಾತನಾಡಿಸಿ ಅವರ ಮುಖಸ್ತುತಿ ಮಾಡುತ್ತಿದ್ದ. ಆಗ ಅವರು ಹೊಗಳಿಕೆಗೆ ಉಬ್ಬಿ ಹೋಗಿ ಆತನ ವಿರೋಧಿಗಳ ರಹಸ್ಯವನ್ನು ಒಂದೊಂದಾಗಿ ಬಯಲು ಮಾಡುತ್ತಿದ್ದರು. ಹೀಗೆ ಆತ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯುವ ಕುಟೀಲ ನೀತಿಯನ್ನು ಅನುಸರಿಸುವಲ್ಲಿ ಅದ್ವಿತಿಯ ನಾಗಿದ್ದ.

ಆ ರಾಜಪುರೋಹಿತ ಎಲ್ಲಿಯೂ, ಎಂದಿಗೂ ಶ್ರಮಪಡುತ್ತಿರಲಿಲ್ಲ. ಆದರೆ ಸದಾ ಕಾಲ ಸರಿಯಾದ ಜಾಗದಲ್ಲಿ ಎಲ್ಲರಿಗಿಂತ ಮೊದಲು ತನ್ನ ಕುತಂತ್ರದ ಬಲೆಯನ್ನು ಹರಡಿ ಕೂರುತ್ತಿದ್ದ. ನಾಲ್ಕು ದಿಕ್ಕುಗಳಲ್ಲಿ ಯಾರೋ ಬೇಟೆಗಾರ ಹೊಡೆದ ಬಾಣಕ್ಕೆ ಬಲಿಯಾಗಿ ಬಿದ್ದ ಮಿಕಗಳನ್ನು ತನ್ನದೆಂದೆ ವಾದಿಸಿ ಪಡೆಯುತ್ತಿದ್ದ. ಇಂಥಹ ಚಾಣಿಕ್ಯ ಕುಟೀಲ ನೀತಿಯ ಆ ಬ್ರಾಹ್ಮಣ ಕೇವಲ ಪ್ರಜೆಗಳ ಪಾಲಿಗಷ್ಟೇ ಕಂಟಕ ಪ್ರಾಯನಾಗಿರಲಿಲ್ಲ. ರಾಜನ ಪಾಲಿಗೂ ನುಂಗಲಾರದ ಮತ್ತು ಉಗುಳಲಾರದ ತುತ್ತಾಗಿ ಸಂಭವಿಸಿದ. ಆದುದರಿಂದ ರಾಜ ಕೂಡ ಹೀಗೆ ಚಿಂತಿಸುತ್ತಿದ್ದ :

ಇಂತಹ ಪ್ರಚಂಡ ವಾಚಾಳಿಯ ಬಾಯನ್ನು ಹೇಗೆ ಮುಚ್ಚಿಸುವುದು? ಯಾರಾದರೂ ಇವನ ಬಾಯನ್ನು ಮುಚ್ಚಿಸಬಲ್ಲ ಮಹಾನ್ ಪಂಡಿತ ಸಿಗಬಲ್ಲನೇ? ಎಂದು ನಿರಂತರ ಹುಡುಕುತ್ತಿದ್ದ.

ಆ ದಿನಗಳಲ್ಲಿ ಅದೇ ವಾರಾಣಸಿಯಲ್ಲಿ ಒಬ್ಬ ಗೂನನಿದ್ದ. ವಕ್ರ ದೇಹಿಯಾಗಿದ್ದ ಆ ಗೂನ ಯುವಕನು ತನ್ನ ವಾರಿಗೆಯವರಂತೆ ಬಲಶಾಲಿಯಾಗಿರಲಿಲ್ಲ. ಆತನಿಗೆ ಇತರರಂತೆ ನೆಡೆದಾಡಲು ಮತ್ತು ಓಡಲು ಆಗುತ್ತಿರಲಿಲ್ಲ. ಆದರೆ ಆತ ಸಣ್ಣ ಸಣ್ಣ ಕಲ್ಲುಗಳನ್ನು ಎಸೆಯುವ ಕಲೆಯಲ್ಲಿ ಪಾರಂಗತನಾಗಿದ್ದ. ನಗರ ದ್ವಾರದ ಗುಡ್ಡದ ಬಳಿ ಮನೆ ಮಾಡಿಕೊಂಡಿದ್ದ. ಆ ಗೂನನನ್ನು ಆತನ ಸ್ನೇಹಿತರು ಎಳೆದು ತಂದು ಆಸಂಖ್ಯ ಕೊಂಬೆಗಳಿಂದ್ದ ಕೂಡಿದ್ದ ನ್ಯಗೋಧ ವೃಕ್ಷದ ಕೆಳಗೆ ನಿಲ್ಲಿಸು



"ಎಲೈ ಗೂನನೇ, ನನ್ನ ಆಸ್ಥಾನದಲ್ಲಿ ಒಬ್ಬ ಬ್ರಾಹ್ಮಣ ಪುರೋಹಿತನಿದ್ದಾನೆ. ಆತ ಅತಿ ಮಾತುಗಾರ. ಆತನ ಕಾಟವನ್ನು ನಾನಾಗಲೀ, ಪ್ರಜೆಗಳಾಗಲೀ ತಡೆಯಲು ಸಾಧ್ಯವಾಗಿಲ್ಲ. ನೀನು ಅವನ ಮಾತುಗಾರಿಕೆಯನ್ನು ನಿಲ್ಲಿಸಿ ಅವನ ಬಾಯನ್ನು ನಿಶ್ಯಬ್ಧಗೊಳಿಸಬಲ್ಲೆಯಾ?" "ಪ್ರಭು, ನನಗೆ ಒಂದು ಗೊಟ್ಟದ ತುಂಬ ಕುರಿಯ ಪಿಚಿಕೆಯನ್ನು ಕೊಟ್ಟರೆ, ಕ್ಷಣಾರ್ಧದಲ್ಲಿ ಆ ಪಂಡಿತನ ಬಾಯನ್ನು ಶಾಶ್ವತವಾಗಿ ನಿಶ್ಯಬ್ಧಗೊಳಿಸಬಲ್ಲೆ!" "ಹಾಗೇನು? ಹಾಗಾದರೆ ರಥವೇರಿ ನನ್ನೊಂದಿಗೆ ಅರಮನೆಗೆ ಬಾ!" ಎಂದು ಆತನನ್ನು ಕರೆದ್ಯೊಯ್ದು. ಬಳಿಕ ಗೂನನ್ನನು ಒಂದು ಮರೆಯಾದ ಜಾಗದಲ್ಲಿ ಕೂರಿಸಿ ವಾಚಾಳಿ ಬ್ರಾಹ್ಮಣನನ್ನು ಕರೆಸಿದ.

ತ್ತಿದ್ದರು. ಅವನ ಮುಂದೆ ಸಣ್ಣ ಸಣ್ಣ ಕಲ್ಲುಗಳು ಅಥವಾ ಕವಡೆಯನ್ನು ರಾಶಿ ಹಾಕಿ:

"ಎಲೈ ಗೂನನೇ, ಆ ಎಲೆಗಳ ಮೇಲೆ ಆನೆಯ ರೂಪವನ್ನು ಮೂಡಿಸು. ಕುದುರೆಯ ರೂಪವನ್ನು ಮೂಡಿಸು ಅಥವಾ ಇಂತಹ ಪಕ್ಷಿಯ ರೂಪವನ್ನು ಮೂಡಿಸು !" ಎಂದು ದುಂಬಾಲು ಬೀಳುತ್ತಿದ್ದರು. ಆತ ಯಾರಿಗೂ ಇಲ್ಲ ಎನ್ನದೆ ತನ್ನೆದುರಿದ್ದ ಕಲ್ಲುಗಳನ್ನು ಕೈಗೆತ್ತಿಕೊಂಡು ಶರವೇಗದಲ್ಲಿ ಎಲೆಗಳತ್ತ ತೂರುತ್ತಿದ್ದ ಆ ಕಲ್ಲುಗಳು ನೋಡುಗರ ಕಣ್ಣಿಗೂ ಕಾಣಿಸದಷ್ಟು ವೇಗದಲ್ಲಿ ಪೋಣಿಸಿದ ಹಾರದಂತೆ ಒಂದರ ಹಿಂದೆ ಒಂದರಂತೆ ಚಲಿಸಿ ಬೇಕಾದ ಆಕೃತಿಯು ಎಲೆಗಳಲ್ಲಿ ಮೂಡುತ್ತಿತ್ತು. ಹೀಗೆ ತಮಗೆ ಬೇಕಾದ ಚಿತ್ರಗಳು ರೂಪ ತಾಳುತ್ತಿದ್ದಂತೆಯೇ ಆ ಹುಡುಗ ಹುಡುಗಿಯರು ಹರ್ಷದಿಂದ ಚಪ್ಪಾಳೆ ತಟ್ಟಿ: "ಭಲೇ... ಭಲೇ...!" ಎಂದು ಗೂನನ್ನು ಹೊಗಳುತ್ತಿದ್ದರು.

ಅದೇ ಸಮಯದಲ್ಲಿ ಬ್ರಹ್ಮದತ್ತ ರಾಜನು ರಥವೇರಿ ವಾಯು ವಿಹಾರಕ್ಕಾಗಿ ಆತ ಬರುತ್ತಿದ್ದನು. ಅದನ್ನು ಕಂಡ ಹುಡುಗರು ಭಯ ಭೀತಿಯಿಂದ ಎದ್ದು ಬಿದ್ದು ಓಡಿ ಗಿಡ ಮರಗಳ ಸಂಧಿಯಲ್ಲಿ ಅವಿತುಕೊಂಡರು. ಆದರೆ ಆ ಗೂನ ಓಡಲಾರದೆ ಒಂದು ಗುಂಡಿಗೆ ಬಿದ್ದ. ರಾಜ ತನ್ನ ಸಾರಥಿಗೆ ರಥವನ್ನು ನ್ಯಗ್ರೋಧ ಮರದಡಿ ನಿಲ್ಲಿಸಲು ಹೇಳಿದ. ಆತ ಹಾಗೆಯೆ ಮಾಡಲು, ರಾಜನು ಛಿದ್ರಗೊಂಡಿದ್ದ ಎಲೆಗಳನ್ನು ಕಂಡ. ಜರಡಿ ಆಕಾರಕ್ಕೆ ತೂರು ಬಿದ್ದಿದ್ದ ಎಲೆಗಳ ನಡುವಿನಿಂದ ಬಿಸಿಲು ತೂರಿ ಬರುತ್ತಿರುವುದನ್ನು ಕಂಡ ರಾಜನಿಗೆ ಏನೋ ಅಲ್ಲಿ ವಿಚಿತ್ರವಿದೆ ಎಂಬುದನ್ನು ಅರಿತ. ಮರುಕ್ಷಣವೆ ತನ್ನ ಗಮನವನ್ನು ಸೂಕ್ಷ್ಮವಾಗಿ ಆ ಎಲೆಗಳತ್ತ ಹರಿಸಿದಾಗ, ಅಲ್ಲಿ ಆನೆ, ಕುದುರೆ ಮುಂತಾದ ಪ್ರಾಣಿ-ಪಕ್ಷಿಗಳ ಚಿತ್ರಗಳನ್ನು ಗುರುತಿಸಿದ. ಕುಂಚದಲ್ಲಿ ಕಲೆಯನ್ನು ಇಷ್ಟು ಸುಂದರವಾಗಿ ಮೂಡಿಸಲಾಗುವುದಿಲ್ಲ. ಹಾಗಿರುವಾಗ ಈ ಮರದ ಎಲೆಗಳಲ್ಲಿ ಕಲೆಯನ್ನು ಮೂಡಿಸುವವರು ನಿಜಕ್ಕೂ ಅಸಾಮಾನ್ಯ ಕಲೆಗಾರನೇ ಇರಬೇಕೆಂದು ರಾಜ ಠೀವಿಯಲ್ಲಿ:

"ಹೀಗೆ ಮಾಡಿದವರು ಯಾರು?" ಎನ್ನಲು, ಅಲ್ಲಿ ಇಲ್ಲಿ ಮರೆಯಲ್ಲಿ ಅವಿತ ಹುಡುಗರು ಹೊರ ಬಂದು ರಾಜನಿಗೆ ವಂದಿಸುತ್ತಾ:

"ಪ್ರಭು, ಗೂನ !" ಎಂದರು. ಆಗ ರಾಜನು:

"ಆ ಗೂನ ಎಲ್ಲಿದ್ದಾನೆ? ಆತನನ್ನು ನನ್ನೆದುರು ಎಳೆದು ತನ್ನಿ!" ಎನ್ನಲು ಸಮೀಪದ ಸಣ್ಣ ಗುಂಡಿಯಲ್ಲಿ ಬಿದ್ದಿದ್ದ ಗೂನನನ್ನು ಆ ಹುಡುಗರು ಎಳೆದು ಹೊತ್ತು ತಂದು ರಾಜನೆದುರು ನಿಲ್ಲಿಸಿದರು. ರಾಜ ಆತನನ್ನು ಮೇಲಿಂದ ಕೆಳಗೆ ಸೂಕ್ಷ್ಮವಾಗಿ ಗಮನಿಸುತ್ತಾ:

"ಆ ಕಲೆಗಾರ ನೀನೇ ಏನು?"

"ಹೌದು, ಮಹಾಪ್ರಭು!"

"ಹಾಗಾದರೆ ಮತ್ತೊಮ್ಮೆ ನಿನ್ನ ಕಲಾನೈಪುಣ್ಯವನ್ನು ನನ್ನೆದುರು ಪ್ರದರ್ಶಿಸು?"

"ಅಗತ್ಯವಾಗಿ ಪ್ರಭು!' ಎನ್ನುತ್ತಾ ಆ ಗೂನನು ಅಕ್ಕ ಪಕ್ಕ ಬಿದ್ದಿದ್ದ ಕಲ್ಲುಗಳನ್ನು ಆಯ್ದು ರಾಶಿ ಮಾಡಿ ಪಕ್ಕದ ಮತ್ತೊಂದು ಮರದ ಎಲೆಗಳ ಮೇಲೆ ಕಲ್ಲಿನ ಸರಮಾಲೆ ತೂರಿ ಕ್ಷಣಾರ್ಧದಲ್ಲಿ ನಾನಾ ಬಗೆಯ ಚಿತ್ರ ವಿಚಿತ್ರಗಳನ್ನು ಮೂಡಿಸಿದ, ರಾಜನು ಆತನ ಕಲಾನೈಪುಣ್ಯಕ್ಕೆ ಬೆರಗಾಗುತ್ತಿದ್ದಂತೆಯೇ ಆತನ ಮನದಲ್ಲಿ:

'ಇವನೇ ಸರಿಯಾದ ಕಲೆಗಾರ ಆ ಬ್ರಾಹ್ಮಣನ

ಆತ ಎಂದಿನಂತೆ ತನ್ನ ವಾಕ್ ಝುರಿಯನ್ನು ನಿರಂತರ ಮುಂದುವರೆಸಿದ. ಗೂನನು ಇದೇ ಸರಿಯಾದ ಸಮಯವೆಂದು ಬಗೆದು ಕುರಿಯ ಹಿಕ್ಕೆಯನ್ನು ಒಂದೊಂದಾಗಿ ಬೀರತೊಡಗಿದ. ಅದು ಶರವೇಗದಲ್ಲಿ ರಂಧ್ರದಿಂದ ತೂರಿ ಸರಿಯಾಗಿ ಬ್ರಾಹ್ಮಣನ ನಾಲಿಗೆ ಒಳಗೆ ಸೇರುತ್ತಿತ್ತು. ಮಾತಿನಲ್ಲಿ ಮೈ ಮರೆತ ಆತ ನಳಿಕೆಯಲ್ಲಿ ಸುರಿದ ಜೇನುತುಪ್ಪದಂತೆ ಈ ಹಿಕ್ಕೆಗಳನ್ನೆಲ್ಲ ಸರಸರನೆ ನುಂಗಿ ಮತ್ತೆ ಮಾತಿಗೆ ತೊಡಗುತ್ತಿದ್ದ.

ಬಾಯಿ ಮುಚ್ಚಿಸಲು!" ಎಂದು ನಿರ್ಧರಿಸಿದ. ಬಳಿಕ ಅಕ್ಕ ಪಕ್ಕ ನಿಂತವರನ್ನು ದೂರ ಸರಿಸಿ:

"ಎಲೈ ಗೂನನೇ, ನನ್ನ ಆಸ್ಥಾನದಲ್ಲಿ ಒಬ್ಬ ಬ್ರಾಹ್ಮಣ ಪುರೋಹಿತನಿದ್ದಾನೆ. ಆತ ಅತಿ ಮಾತುಗಾರ. ಆತನ ಕಾಟವನ್ನು ನಾನಾಗಲೀ, ಪ್ರಜೆಗಳಾಗಲೀ ತಡೆಯಲು ಸಾಧ್ಯವಾಗಿಲ್ಲ. ನೀನು ಅವನ ಮಾತುಗಾರಿಕೆಯನ್ನು ನಿಲ್ಲಿಸಿ ಅವನ ಬಾಯನ್ನು ನಿಶ್ಯಬ್ದಗೊಳಿಸಬಲ್ಲೆಯಾ?"

"ಪ್ರಭು, ನನಗೆ ಒಂದು ಗೊಟ್ಟದ ತುಂಬ ಕುರಿಯ ಪಿಚಿಕೆಯನ್ನು ಕೊಟ್ಟರೆ, ಕ್ಷಣಾರ್ಧದಲ್ಲಿ ಆ ಪಂಡಿತನ ಬಾಯನ್ನು ಶಾಶ್ವತವಾಗಿ ನಿಶ್ಯಬ್ದಗೊಳಿಸಬಲ್ಲೆ!"

"ಹಾಗೇನು? ಹಾಗಾದರೆ ರಥವೇರಿ ನನ್ನೊಂದಿಗೆ ಅರಮನೆಗೆ ಬಾ!" ಎಂದು ಆತನನ್ನು ಕರೆದೊಯ್ಯು. ಬಳಿಕ ಗೂನನನ್ನು ಒಂದು ಮರೆಯಾದ ಜಾಗದಲ್ಲಿ ಕೂರಿಸಿ ವಾಚಾಳಿ ಬ್ರಾಹ್ಮಣನನ್ನು ಕರೆಸಿದ. ಆತ ಎಂದಿನಂತೆ ತನ್ನ ನಿರರ್ಗಳ ಮಾತುಗಾರಿಕೆಯನ್ನು ಮುಂದುವರೆಸಿದ. ಆಗ ಈ ಗೂನನು ಆತನ ಬಾಯಿಯ ಚಲನವಲನವನ್ನು ಕಣ್ಣಲ್ಲಿ ಕಣ್ಣಿಟ್ಟು ಸೂಕ್ಷ್ಮವಾಗಿ ಗಮನಿಸಿದ. ಆ ಬ್ರಾಹ್ಮಣ ಮಾತು ಮುಗಿಸಿ ಹೋದ ನಂತರ ರಾಜನ ಬಳಿ ಬಂದು ಆತನಿಗೆ ವಂದಿಸುತ್ತಾ:

"ಪ್ರಭು, ತಾವು ನನ್ನ ಮೇಲೆ ವಿಶ್ವಾಸ ಇಟ್ಟು ಅವಕಾಶ ಕೊಡುವುದಾದರೆ ನಾಳೆಯೆ ಆತನ ಮಾತುಗಾರಿಕೆಯನ್ನು ನಿಶ್ಯಬ್ದಗೊಳಿಸ ಬಲ್ಲೆ!" ಎನ್ನಲು, ರಾಜನು ಸಂತೋಷದಿಂದ:

"ಭಲೇ, ಹಾಗೆಯೇ ಆಗಲಿ!" ಎಂದು ತನ್ನ ಒಪ್ಪಿಗೆಯನ್ನು ಕೊಟ್ಟ.

ಮರುದಿನ ಬೆಳಿಗ್ಗೆ ಎಂದಿನಂತೆ ರಾಜ ಪರಿಷತ್ತು ಪ್ರಾರಂಭವಾಯಿತು. ಮಾತುಗಾರ ಬ್ರಾಹ್ಮಣ ಕುಳಿತುಕೊಳ್ಳುವ ಪೀಠಕ್ಕೆ ಎದುರಾದ ಜಾಗದಲ್ಲಿ ಪರದೆಯೊಂದನ್ನು ಬಿಡಲಾಯಿತು. ಆ ಪರದೆಯ ಹಿಂದೆ ಗೂನನು ಸರಿಯಾಗಿ ಆ ಬ್ರಾಹ್ಮಣನಿಗೆ ಎದುರಾಗಿ ಕುಳಿತ. ಪರದೆಗೆ ಒಂದು ಚಿಕ್ಕ ರಂಧ್ರವನ್ನು ಮಾಡಿಕೊಂಡ. ರಾಜನು ತರಿಸಿ ಕೊಟ್ಟ ಕುರಿಯ ಹಿಕ್ಕೆ ತುಂಬಿದ್ದ ಗೊಟ್ಟವನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಬ್ರಾಹ್ಮಣನ ಎದುರು ಸಿದ್ಧವಾಗಿ ಕುಳಿತ. ರಾಜನು ಗೂನನಿಗೆ ಕೈಸಂಜ್ಞೆ ಮಾಡಿ ಬ್ರಾಹ್ಮಣನೊಂದಿಗೆ ಮಾತಿಗೆ ಆರಂಭಿಸಿದ.

ಆತ ಎಂದಿನಂತೆ ತನ್ನ ವಾಕ್ ಝುರಿಯನ್ನು ನಿರಂತರ ಮುಂದುವರೆಸಿದ. ಗೂನನು ಇದೇ ಸರಿಯಾದ ಸಮಯವೆಂದು ಬಗೆದು ಕುರಿಯ ಹಿಕ್ಕೆಯನ್ನು ಒಂದೊಂದಾಗಿ ಬೀರತೊಡಗಿದ. ಅದು ಶರವೇಗದಲ್ಲಿ ರಂಧ್ರದಿಂದ ತೂರಿ ಸರಿಯಾಗಿ ಬ್ರಾಹ್ಮಣನ ನಾಲಿಗೆ ಒಳಗೆ ಸೇರುತ್ತಿತ್ತು. ಮಾತಿನಲ್ಲಿ ಮೈ ಮರೆತ ಆತ ನಳಿಕೆಯಲ್ಲಿ ಸುರಿದ ಜೇನುತುಪ್ಪದಂತೆ ಈ ಹಿಕ್ಕೆಗಳನ್ನೆಲ್ಲ ಸರಸರನೆ ನುಂಗಿ ಮತ್ತೆ ಮಾತಿಗೆ ತೊಡಗುತ್ತಿದ್ದ. ಗೂನನ ಬಳಿ ಇದ್ದ ಹಿಕ್ಕೆಗಳೆಲ್ಲ ಮುಗಿಯಿತು. ಪರದೆಯ ತೂತಿನಿಂದ ನೊಣಗಳು ಹಾರಿ ಬರುವಂತೆ ಬರುತ್ತಿದ್ದ ಹಿಕ್ಕೆಯ ಸರಮಾಲೆಯು ನಿಲ್ಲಲು ರಾಜನು ಗೂನನತ್ತ ಗಮನ ಹರಿಸಿದ. ಆತ ಖಾಲಿಯಾದ ಹಿಕ್ಕೆ ತುಂಬಿದ ಗೊಟ್ಟವನ್ನು ತಲೆಗೆಳಗೆ ಮಾಡಿ ರಾಜನಿಗೆ ತೋರಿಸುತ್ತಾ: 'ತನ್ನ ಕೆಲಸ ಮುಗಿಯಿತು' ಎಂಬಂತೆ ಮರು ಸಂಜ್ಞೆ ಮಾಡಿ ವಂದಿಸಿದ.

ಹೀಗೆಯೇ ಅರ್ಧತಾಸು ಸಮಯ ಕಳೆದರೂ ಆ ಬ್ರಾಹ್ಮಣನ ವಾಕ್ ಝುರಿ ನಿಲ್ಲಲಿಲ್ಲ. ಬಳಿಕ ನಿಧಾನವಾಗಿ ಹೊಟ್ಟೆ ತೊಳೆಸಿ ವಾಕರಿಕೆ ಬರತೊಡಗಿತು. ತನ್ನ ಬಾಯಿ ಮತ್ತು ಮೂಗಿನಿಂದ ಅಸಾಧಾರಣವಾದ ಕೆಟ್ಟ ವಾಸನೆ ಹೊರ ಹೊಮ್ಮ ತೊಡಗಿತು. ನಿಧಾನವಾಗಿ ತಾನು ಎಲ್ಲಿಯೋ ಮೋಸ ಹೋದ ಬಗ್ಗೆ ಅರಿವು ಮೂಡಿತು. ಅಷ್ಟರಲ್ಲಿ ಆತ ದಾರಾಕಾರವಾಗಿ ವಾಂತಿ ಮಾಡಿಕೊಳ್ಳ ತೊಡಗಿದ. ಸಭೆಯಲ್ಲಿ ಕುಳಿತ ಎಲ್ಲರೂ ಎದ್ದು ನಿಂತು ಬ್ರಾಹ್ಮಣನ ಸ್ಥಿತಿ ಕಂಡು ಚಪ್ಪಾಳೆ ಹಾಕುತ್ತಾ ಕೇಕೆ ಹಾಕಿ ನಕ್ಕರು. ಮರುಕ್ಷಣವೇ ಆ ಕೆಟ್ಟ ವಾಸನೆಗೆ ತಲೆಸುತ್ತಿ ಬರಲು ಸಭಾಂಗಣದಿಂದ ಹೊರಗೆ ಮೂಗು ಮುಚ್ಚಿ ನಡೆದರು.

ಇಂಥಹ ಸುಸಮಯಕ್ಕಾಗಿಯೇ ಕಾಯುತ್ತಿದ್ದ ರಾಜನು ಬ್ರಾಹ್ಮಣನನ್ನು ಕುರಿತು:

"ಎಲೈ ಆಚಾರ್ಯ, ಏಕೀಗೆ ವಾಂತಿ ಮಾಡಿಕೊಳ್ಳುತ್ತಿರುವಿರಿ? ನಿಮ್ಮ ಮಾತೆಲ್ಲ ವಾಂತಿಯಾಗಿ ಪರಿವರ್ತನೆಯಾಯಿತೆ? ತಮ್ಮ ಅಹಂಕಾರ ಮತ್ತು ಅಜ್ಞಾನದಿಂದ ಇದೂವರೆಗೆ ಪ್ರಜೆಗಳಿಗೂ ಹಾಗೂ ರಾಜನಿಗೂ ಕಂಠಕಪ್ರಾಯರಾಗಿದ್ದಿರಿ. ನುಡಿದಂತೆ ನಡೆಯಲಾರದೆ ಮಾತೇ ಸರ್ವಸ್ವ ಎಂದು ನಂಬಿದ್ದಿರಿ. ಯಾರು ತಮ್ಮ ಘನತೆಯನ್ನು ಅರಿಯಲಾರರೋ. ಅವರು ಮಾತಿನಲ್ಲಿ ಇರುವ ಘನತೆಯನ್ನು ಅರಿಯಾಲಾರರು. ತಾವು ಮಾತಿನ ರಭಸದಲ್ಲಿ ಗೊಟ್ಟದಷ್ಟು ಕುರಿ ಹಿಕ್ಕೆಯನ್ನು ನುಂಗಿದ್ದರೂ ಅದನ್ನು ಅರಿಯಲಾಗಲಿಲ್ಲ ಅಲ್ಲವೆ? ಹೋಗಿ ಇನ್ನು ಇದಕ್ಕಿಂತ ಹೆಚ್ಚನದನ್ನು ಜೀರ್ಣಿಸಿಕೊಳ್ಳಲಾರಿರಿ!" - ಎಂದ.

ಅಂದಿನಿಂದ ಆ ಬ್ರಾಹ್ಮಣ ತನ್ನ ತಪ್ಪನ್ನು ಅರಿತು ಪರಿವರ್ತನೆಯಾದ. ಪಾಮರನಾದ ಗೂನನು ತನ್ನ ಕಲಾನೈಪುಣ್ಯದಿಂದ ಪ್ರಜೆಗಳಿಗೂ ಮತ್ತು ರಾಜನಿಗೂ ಕರ್ಣಸುಖವನ್ನು ಕೊಟ್ಟದ್ದಕ್ಕಾಗಿ ರಾಜನು ಅವನ ಬಗ್ಗೆ ಪ್ರಸನ್ನನಾದ. ಅದರ ಫಲವಾಗಿ ಆ ಗೂನನಿಗೆ ರಾಜ್ಯದ ನಾಲ್ಕು ದಿಕ್ಕುಗಳಲ್ಲಿ ಲಕ್ಷಾಂತರ ಆದಾಯ ಬರುವ ನಾಲ್ಕು ಹಳ್ಳಿಗಳನ್ನು ದಾನವಾಗಿ ಕೊಟ್ಟು ಸನ್ಮಾನಿಸಿದ. ಬಳಿಕ ಆ ಗೂನನನ್ನು ಸಂಧಿಸಿ ಆತನಿಗೆ ವಂದಿಸಿದ ಬ್ರಾಹ್ಮಣನು:

"ಅಯ್ಯಾ, ನೀನು ಆಕಾರದಲ್ಲಿ ಮಾತ್ರ ಗೂನ. ನಾನಾದರೋ ವ್ಯಕ್ತಿತ್ವದಲ್ಲಿಯೇ ಗೂನನಾಗಿದ್ದೆ. ನನ್ನ ಗೂನನ್ನು ನೇರ ಮಾಡಿದ ನಿನಗೆ ಅನಂತ ವಂದನೆ !!" ಎಂದು ಮುನ್ನೆಡೆದ. □

'SAMVADA' Kannada Monthly, September 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month